लोकहितार्थ सत्यनिष्ठा
Dedicated to Truth in Public Interest

सत्यमेव जयते

# ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ

# ಮಹಾನಗರ ಪಾಲಿಕೆಗಳಲ್ಲಿ ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆ (ಹಂತ–III)ರ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ

ಕರ್ನಾಟಕ ಸರ್ಕಾರ

2022ನೇ ವರ್ಷದ ವರದಿ ಸಂಖ್ಯೆ – 6

# ಭಾರತದ ಲೆಕ್ಕನಿಯಂತ್ರಕರು ಮತ್ತು
# ಮಹಾಲೆಕ್ಕಪರಿಶೋಧಕರ ವರದಿ

## ಮಹಾನಗರ ಪಾಲಿಕೆಗಳಲ್ಲಿ ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆ (ಹಂತ–III)ರ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ

**ಮಾರ್ಚ್ 2021ಕ್ಕೆ ಕೊನೆಗೊಂಡ ವರ್ಷ**

**ಕರ್ನಾಟಕ ಸರ್ಕಾರ**

**2022ನೇ ವರ್ಷದ ವರದಿ ಸಂಖ್ಯೆ: 6**

| ವಿಷಯಸೂಚಿ | | |
|---|---|---|
| ಕಂಡಿಕೆ | ವಿವರಗಳು | ಪುಟ ಸಂಖ್ಯೆ |
| | ಮುನ್ನುಡಿ | v |
| | ಕಾರ್ಯನಿರ್ವಹಣಾ ಸಾರಾಂಶ | vii |
| **ಅಧ್ಯಾಯ–I** | **ಪರಿಚಯ** | |
| 1.1 | ಪರಿಚಯ | 1 |
| 1.2 | ಸಂಘಟನಾ ರಚನೆ | 2 |
| 1.3 | ಲೆಕ್ಕಪರಿಶೋಧನಾ ಉದ್ದೇಶಗಳು | 3 |
| 1.4 | ಲೆಕ್ಕಪರಿಶೋಧನಾ ಮಾನದಂಡ | 3 |
| 1.5 | ಲೆಕ್ಕಪರಿಶೋಧನಾ ವ್ಯಾಪ್ತಿ ಮತ್ತು ವಿಧಾನ | 3 |
| 1.6 | ಕೃತಜ್ಞತೆ | 5 |
| 1.7 | ಅಧ್ಯಾಯಗಳು | 5 |
| **ಅಧ್ಯಾಯ–II** | **ಯೋಜನೆ ಮತ್ತು ಹಣಕಾಸು ನಿರ್ವಹಣೆ** | |
| 2.1 | ಸಮಗ್ರ ಯೋಜನೆ ಇಲ್ಲದಿರುವುದು | 7 |
| 2.2 | ಮೂಲ ಕ್ರಿಯಾ ಯೋಜನೆಗಳ ಪ್ರಕಾರ ಕಾಮಗಾರಿಗಳನ್ನು ಕಾರ್ಯಗತಗೊಳಿಸದಿರುವುದು | 9 |
| 2.3 | ಜಿಲ್ಲಾ ಮಟ್ಟದ ಸಮಿತಿಗಳ ಅನುಮೋದನೆ ಇಲ್ಲದೆ ಕ್ರಿಯಾ ಯೋಜನೆಗಳ ಪರಿಷ್ಕರಣೆ | 9 |
| 2.4 | ಅನುದಾನದ ಸ್ಥಿತಿ | 11 |
| 2.5 | ವರ್ಗವಾರು ಮಿತಿಗಳನ್ನು ಅನುಸರಿಸದಿರುವುದು | 12 |
| 2.6 | ಯೋಜನೆಯ ನಿಧಿಗಳ ತಿರುವು | 14 |
| 2.7 | ನಗರೋತ್ಥಾನ (ಹಂತ–III)ರ ಕಡೆಗೆ ಐತಿಹಾಸಿಕ ಮತ್ತು ಪಾರಂಪರಿಕ ಅನುದಾನ ನಿಧಿಯ ತಿರುವು | 14 |
| 2.8 | ಬ್ಯಾಂಕ್ ಗ್ಯಾರಂಟಿಯನ್ನು ನವೀಕರಿಸದಿರುವುದು | 15 |
| 2.9 | ಸಾಲ ಮತ್ತು ಮರುಪಾವತಿಯನ್ನು ಪಡೆಯುವಲ್ಲಿ ವ್ಯತ್ಯಾಸಗಳು | 15 |
| 2.10 | ಹಣಕಾಸು ನಿರ್ವಹಣೆಯಲ್ಲಿನ ಇತರ ವ್ಯತ್ಯಾಸಗಳು | 23 |
| **ಅಧ್ಯಾಯ–III** | ಒಪ್ಪಂದದ ನಿರ್ವಹಣೆ ಮತ್ತು ಕಾಮಗಾರಿಗಳ ಅನುಷ್ಠಾನ | |
| 3.1 | ವಿವರವಾದ ಯೋಜನಾ ವರದಿಗಳ ತಯಾರಿಕೆ | 28 |
| 3.2 | ರಸ್ತೆ ಇತಿಹಾಸ ವಹಿ ನಿರ್ವಹಣೆ ಮಾಡದಿರುವುದು | 28 |
| 3.3 | ದೋಷಪೂರಿತ ಅಂದಾಜುಗಳು | 29 |
| 3.4 | ರಸ್ತೆಗಳ ದೋಷಯುಕ್ತ ವಿನ್ಯಾಸ | 31 |
| 3.5 | ಯೋಜನಾ ನಿರ್ವಹಣೆ ಸಲಹೆಗಾರರಿಗೆ ಟೆಂಡರ್ ಪ್ರಕ್ರಿಯೆ | 32 |
| 3.6 | ಯೋಜನೆಯ ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆ | 38 |
| 3.7 | ಪ್ಯಾಕೇಜ್/ ಕಾಮಗಾರಿಯ ವೆಚ್ಚದ ಹಂಚಿಕೆಯಲ್ಲಿ ವಿಚಲನ | 47 |

| ಕಂಡಿಕೆ | ವಿವರಗಳು | ಪುಟ ಸಂಖ್ಯೆ |
|---|---|---|
| 3.8 | ಕಾರ್ಯಗತಗೊಳಿಸದಿರುವುದು ಮತ್ತು ಕಾಮಗಾರಿಗಳ ಅನುಷ್ಠಾನದಲ್ಲಿ ವಿಳಂಬ | 47 |
| 3.9 | ಕಾಮಗಾರಿಗಳ ಅನಿಯಮಿತ ನಿರ್ವಹಣೆ | 48 |
| 3.10 | ಕೋಡಲ್ ನಿಬಂಧನೆಗಳನ್ನು ಕಡೆಗಣಿಸಿ ಕಾಮಗಾರಿಗಳ ಕಾರ್ಯಗತಗೊಳಿಸುವಿಕೆ | 52 |
| 3.11 | ಅನುಮೋದನೆಯಿಲ್ಲದೆ ಕಾಮಗಾರಿಗಳ ಕಾರ್ಯಗತಗೊಳಿಸುವಿಕೆ | 53 |
| 3.12 | ಗುತ್ತಿಗೆದಾರರಿಗೆ ಸ್ವೀಕಾರಾರ್ಹವಲ್ಲದ ಪಾವತಿಗಳು | 54 |
| 3.13 | ಬಳಕೆಯಾಗದ ಸ್ವತ್ತುಗಳ ಮೇಲೆ ವ್ಯರ್ಥ ವೆಚ್ಚ | 55 |
| 3.14 | ಏಕರೂಪ ದರಪಟ್ಟಿಯನ್ನು ಪರಿಷ್ಕರಿಸದ ಕಾರಣ ಬೊಕ್ಕಸಕ್ಕೆ ನಷ್ಟ | 57 |
| 3.15 | ಹೆಚ್ಚುವರಿ ಐಟಂಗಳಿಗೆ ಪೂರಕ ಒಪ್ಪಂದಗಳನ್ನು ಕಾರ್ಯಗತಗೊಳಿಸದಿರುವುದು. | 58 |
| **ಅಧ್ಯಾಯ–IV** | ಮೇಲ್ವಿಚಾರಣೆ | |
| 4.1 | ಡಿಎಂಎ/ ಸರ್ಕಾರಿ ಮಟ್ಟದಲ್ಲಿ ಸಭೆಗಳು | 61 |
| 4.2 | ಜಿಲ್ಲಾ ಮಟ್ಟದ ಸಮಿತಿ ಸಭೆಗಳು | 61 |
| 4.3 | ಯೋಜನಾ ನಿರ್ವಹಣಾ ಸಲಹೆಗಾರರ ಗುಣಮಟ್ಟದ ತಪಾಸಣಾ ವರದಿಯಲ್ಲಿ ಕಂಡುಬಂದ ಕೊರತೆಗಳು | 62 |
| 4.4 | ಹಣಕಾಸಿನ ಪ್ರಗತಿ ವರದಿಗಳಲ್ಲಿನ ವ್ಯತ್ಯಾಸಗಳು | 62 |
| 4.5 | ಮಾಹಿತಿ ನಿರ್ವಹಣೆ ವ್ಯವಸ್ಥೆಯಲ್ಲಿನ ಕೊರತೆಗಳು | 65 |
| 4.6 | ಆಂತರಿಕ ನಿಯಂತ್ರಣ | 65 |
| 4.7 | ಪರಿಣಾಮದ ಮೌಲ್ಯಮಾಪನದ ಅನುಪಸ್ಥಿತಿ ಮತ್ತು ಉತ್ತಮ ಕಾರ್ಯಕ್ಷಮತೆಗಾಗಿ ಪ್ರೋತ್ಸಾಹವನ್ನು ನೀಡದಿರುವುದು | 66 |
| | ಅನುಬಂಧಗಳು | 69 |
| | ಶಬ್ದಕೋಶ | 107 |

| ಅನುಬಂಧಗಳ ಪಟ್ಟಿ | | |
|---|---|---|
| ಅನುಬಂಧ ಸಂಖ್ಯೆ | ವಿವರಗಳು | ಪುಟ ಸಂಖ್ಯೆ |
| 1.1 | ಲೆಕ್ಕಪರಿಶೋಧನೆಯ ಆಕ್ಷೇಪಣೆಗಳ ಸಾರಾಂಶ ಮತ್ತು ಹಿಂದಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಮೇಲೆ ಸಮಿತಿಯ ಶಿಫಾರಸ್ಸುಗಳು (*ನಗರೋತ್ಥಾನ* ಹಂತ–1) | 69 |
| 1.2 | ಪರೀಕ್ಷಾ–ತನಿಖೆಗೆ ಒಳಪಟ್ಟ ಕಾಮಗಾರಿಗಳ ವರ್ಗವಾರು ಮತ್ತು ಮಹಾನಗರ ಪಾಲಿಕೆವಾರು ವಿವರಗಳು | 71 |
| 2.1 | ಪರೀಕ್ಷಾ–ತನಿಖೆಗೆ ಒಳಪಟ್ಟ ಮಹಾನಗರ ಪಾಲಿಕೆಗಳಲ್ಲಿ ಕ್ರಿಯಾ ಯೋಜನೆಗಳ ಸಲ್ಲಿಕೆ ವಿವರಗಳನ್ನು ತೋರಿಸುವ ಹೇಳಿಕೆ | 73 |
| 2.2 | ಪರೀಕ್ಷಾ–ತನಿಖೆಗೆ ಒಳಪಟ್ಟ ಮ.ಪಾಗಳಲ್ಲಿ ಮೂಲ ಕ್ರಿಯಾ ಯೋಜನೆಗಳಲ್ಲಿ ಸೇರಿಸಲಾದ ಆದರೆ ತೆಗೆದುಕೊಳ್ಳಲಾಗದ ಕಾಮಗಾರಿಗಳ ವರ್ಗವಾರು ವಿವರಗಳು | 74 |
| 2.3 | ಇತರ ಯೋಜನೆಗಳು/ಕಾಮಗಾರಿಗಳಿಗಾಗಿ ಹಣವನ್ನು ತಿರುಗಿಸಲಾಗಿದೆ ಎಂದು ತೋರಿಸುವ ಹೇಳಿಕೆ | 75 |
| 2.4 | ಬಜೆಟ್ ಅಂದಾಜುಗಳು ಮತ್ತು ಸಾಲ ಮರುಪಾವತಿಗಾಗಿ ಬಿಡುಗಡೆಯಾದ ಮೊತ್ತದ ವಿವರಗಳು | 76 |
| 2.5 | ಹಂತ–III ರಿಂದ ಹಂತ–II ಕ್ಕೆ ಮೊತ್ತವನ್ನು ಮರುಪೂರಣ ಮಾಡದ ಕಾರಣ ತಪ್ಪಿಸಬಹುದಾದ ಬಡ್ಡಿ ಹೊಣೆಗಾರಿಕೆಯನ್ನು ತೋರಿಸುವ ಹೇಳಿಕೆ (ಮಾರ್ಚ್ 2021). | 77 |
| 2.6 | ಹೆಚ್ಚಿನ ಬಡ್ಡಿ ದರದಲ್ಲಿ ಪಡೆದ ಸಾಲದ ವಿವರಗಳು | 78 |
| 2.7 | ಎಸ್‌ಬಿಐ ಸಾಲದ ಕಂತುಗಳನ್ನು ಮರುಪಾವತಿ ಮಾಡುವಲ್ಲಿ ವಿಳಂಬವಾದುದರಿಂದ ತಪ್ಪಿಸಬಹುದಾದ ಬಡ್ಡಿ (ಮಾರ್ಚ್ 2021 ರಂತೆ) | 79 |
| 2.8 | ಐಸಿಐಸಿಐ ಸಾಲದ ಕಂತುಗಳನ್ನು ಮರುಪಾವತಿಮಾಡುವಲ್ಲಿ ವಿಳಂಬವಾದುದರಿಂದ ತಪ್ಪಿಸಬಹುದಾದ ಬಡ್ಡಿ (ಮಾರ್ಚ್ 2021 ರಂತೆ) | 80 |
| 2.9 | ಸಾಲ ಮರುಪಾವತಿಗಾಗಿ ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿಯಿಂದ ಹೆಚ್ಚುವರಿಯಾಗಿ ಬೇಡಿಕೆಯಿರುವ ಮೊತ್ತದ ತಿಂಗಳವಾರು ವಿವರಗಳು (ಎಸ್.ಬಿ.ಐ). | 81 |
| 2.10 | ಸಾಲ ಮರುಪಾವತಿಗಾಗಿ ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿಯಿಂದ ಹೆಚ್ಚುವರಿಯಾಗಿ ಬೇಡಿಕೆಯಿರುವ ಮೊತ್ತದ ಮಾಸಿಕ ವಿವರಗಳು (ಐಸಿಐಸಿಐ ಬ್ಯಾಂಕ್). | 83 |
| 2.11 | ಯುಡಿಡಿಯಿಂದ ಪಡೆದ ಹೆಚ್ಚುವರಿ ಮೊತ್ತವನ್ನು ಜಮಾ ಮಾಡದ ಕಾರಣ ತಪ್ಪಿಸಬಹುದಾದ ಬಡ್ಡಿ ಹೊಣೆಗಾರಿಕೆ. | 85 |
| 2.12 | 30.11.2017 ರಂದು ವಿಜಯಪುರದ ಮ.ಪಾಯವರು ಪಾವತಿಸಿದ ಭೂ ಪರಿಹಾರದ ಮೇಲಿನ ತಪ್ಪಿಸಬಹುದಾದ ಬಡ್ಡಿಯ ವಿವರಗಳು. | 86 |
| 2.13 | 13.07.2018 ಮತ್ತು 14.02.2019 ರಂದು ವಿಜಯಪುರದ ಮ.ಪಾಯವರು ಪಾವತಿಸಿದ ಭೂ ಪರಿಹಾರದ ಮೇಲಿನ ತಪ್ಪಿಸಬಹುದಾದ ಬಡ್ಡಿಯ ವಿವರಗಳು. | 88 |
| 3.1 | ಐ.ಆರ್.ಸಿಯ ಪ್ರಕಾರ ರಸ್ತೆ ಮಾರ್ಗದ ವಿನ್ಯಾಸ ಮತ್ತು ಪ್ಯಾಕೇಜ್ 19ರಲ್ಲಿ ನಿಜವಾದ ಕಾರ್ಯಗತಗೊಳಿಸುವಿಕೆ (ಬಳ್ಳಾರಿ). | 89 |
| 3.2 | ಡಿಎಂಎಯಿಂದ ಪಿ.ಎಂ.ಸಿ ಕೆಲಸಗಳಿಗೆ ತಾಂತ್ರಿಕ ಮೌಲ್ಯಮಾಪನದಲ್ಲಿನ ವ್ಯತ್ಯಾಸಗಳು. | 90 |
| 3.3 | ಮೂರಕ್ಕಿಂತ ಹೆಚ್ಚು ಪ್ಯಾಕೇಜ್‌ಗಳಲ್ಲಿ ಪಿ.ಎಂ.ಸಿ ನೇಮಕಾತಿಯನ್ನು ತೋರಿಸುವ ಹೇಳಿಕೆ. | 92 |
| 3.4 | ಪ್ರಸ್ತಾಪಿಸಲಾದ ಮತ್ತು ನಿಯೋಜಿಸಲಾದ ಪ್ರಮುಖ ವೃತ್ತಿಪರ ಸಿಬ್ಬಂದಿಗಳಲ್ಲಿನ ವ್ಯತ್ಯಾಸಗಳನ್ನು ತೋರಿಸುವ ಹೇಳಿಕೆ. | 93 |
| 3.5 | ಮೂರು ಬಿಡ್ದಾರರ ಲಭ್ಯವಿರುವ ಟೆಂಡರ್ ಸಾಮರ್ಥ್ಯದ ತಪ್ಪಾದ ಅಳವಡಿಕೆ ಮತ್ತು ಬಿಡ್‌ಗಳ ನ್ಯಾಯಸಮ್ಮತವಲ್ಲದ ನಿರಾಕರಣೆಯನ್ನು ತೋರಿಸುವ ವಿವರಗಳು | 94 |

| ಅನುಬಂಧ ಸಂಖ್ಯೆ | ವಿವರಗಳು | ಪುಟ ಸಂಖ್ಯೆ |
|---|---|---|
| 3.6 | ಬಳ್ಳಾರಿಯಲ್ಲಿ 22 ಪ್ಯಾಕೇಜ್‌ಗಳಿಗೆ ಟೆಂಡರ್ ಪ್ರೀಮಿಯಂ, ಸಂಧಾನದ ದರ ಮತ್ತು ಅಂತಿಮ ನಿಗದಿಪಡಿಸಿದ ದರದ ವಿವರಗಳು | 95 |
| 3.7 | ಶ್ರೀ ವೈ ಆರ್ ವೇಣುಗೋಪಾಲ್.ರವರ ಬಿಡ್ ಅನ್ನು ತಪ್ಪಾಗಿ ತಿರಸ್ಕರಿಸಿದ ಕಾರಣದಿಂದ ತಪ್ಪಿಸಬಹುದಾದ ವೆಚ್ಚವನ್ನು ತೋರಿಸುವ ಹೇಳಿಕೆ | 96 |
| 3.8 | ನಿಗದಿತ ಮಿತಿಗಿಂತ ಕಡಿಮೆ ವೆಚ್ಚದ ಪ್ಯಾಕೇಜ್ ಮತ್ತು ಕಾಮಗಾರಿಗಳ ವಿವರಗಳು | 97 |
| 3.9 | ಸ್ಥಳದ ಅಲಭ್ಯತೆ ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ವಿಳಂಬ ಅಥವಾ ಕಾರ್ಯಗತಗೊಳಿಸದಿರುವಲ್ಲಿ ಕಾರಣವಾಗಿರುವ ವಿವರಗಳು. | 98 |
| 3.10 | ಮೈಸೂರಿನಲ್ಲಿ ಪ್ಯಾಕೇಜ್ 3ರಲ್ಲಿ ಒಂದೇ ಸ್ಟ್ರೆಚ್‌ಗೆ ಎರಡು ಬಾರಿ (ಎಸ್‌ಜೆಹೆಚ್ ರಸ್ತೆ) ಮತ್ತು ನಾಲ್ಕು ಬಾರಿ (ಕೊಳಚೆ ರಸ್ತೆ) ಪಾವತಿ ಮಾಡಿರುವ ವಿವರಗಳು | 100 |
| 3.11 | ಪ್ರತ್ಯೇಕವಾಗಿ ಪಾವತಿಸಿದ ಐಟಂಗಳ ಮೇಲಿನ ನ್ಯಾಯಸಮ್ಮತವಲ್ಲದ ವೆಚ್ಚದ ವಿವರಗಳು | 101 |
| 3.12 | ಹೆಚ್ಚುವರಿ ಎಸ್.ಆರ್ ದರಗಳಿಂದ (ವಿದ್ಯುತ್ ವಸ್ತುಗಳು) ಸರ್ಕಾರಕ್ಕೆ ನಷ್ಟದ ವಿವರಗಳು. | 103 |
| 4.1 | ಪಿ.ಎಂ.ಸಿ ವರದಿಗಳಲ್ಲಿ ಗಮನಿಸಲಾದ ವ್ಯತ್ಯಾಸಗಳ ವಿವರಗಳು. | 105 |

## ಮುನ್ನುಡಿ

1. 31 ಮಾರ್ಚ್ 2021ಕ್ಕೆ ಕೊನೆಗೊಂಡ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಯನ್ನು ಭಾರತದ ಸಂವಿಧಾನದ 151(2)ನೇ ವಿಧಿಯಡಿಯಲ್ಲಿ ರಾಜ್ಯ ವಿಧಾನ ಮಂಡಲದಲ್ಲಿ ಮಂಡಿಸಲು ಕರ್ನಾಟಕ ಸರ್ಕಾರದ ರಾಜ್ಯಪಾಲರಿಗೆ ಸಲ್ಲಿಸುವುದಕ್ಕೆ ತಯಾರಿಸಲಾಗಿದೆ.

2. 2014–21ನ್ನು ವ್ಯಾಪಿಸುವ ಈ ವರದಿಯು ಮಹಾನಗರ ಪಾಲಿಕೆಗಳಲ್ಲಿ ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆ (ಹಂತ–III)ರ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ ಫಲಿತಾಂಶಗಳನ್ನು ಒಳಗೊಂಡಿದೆ.

3. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಜಾರಿ ಮಾಡಿರುವ ಲೆಕ್ಕಪರಿಶೋಧನಾ ಮಾನದಂಡಗಳಿಗೆ ಅನುಗುಣವಾಗಿ ಲೆಕ್ಕಪರಿಶೋಧನೆಯನ್ನು ನಡೆಸಲಾಗಿದೆ.

4. ಈ ಭಾಷಾಂತರಿಸಿದ ಆವೃತ್ತಿಯಲ್ಲಿನ ಯಾವುದೇ ಸಂದೇಹಗಳಿಗೆ ಆಂಗ್ಲ ಭಾಷಾ ಆವೃತ್ತಿಯೇ ಅಧಿಕೃತವೆಂದು ಪರಿಗಣಿಸಬೇಕು.

# ಕಾರ್ಯನಿರ್ವಹಣಾ ಸಾರಾಂಶ

ಕರ್ನಾಟಕ ಸರ್ಕಾರ (ರಾ.ಸ) ರಾಜ್ಯದ 10 ಮಹಾನಗರ ಪಾಲಿಕೆಗಳಲ್ಲಿ (ಮ.ಪಾ) ಮೂಲಸೌಕರ್ಯ ಮತ್ತು ನಾಗರಿಕ ಸೌಲಭ್ಯಗಳನ್ನು ಮೇಲ್ದರ್ಜೆಗೇರಿಸುವ ಉದ್ದೇಶದಿಂದ ₹ 1,000 ಕೋಟಿ ಅಂದಾಜು ವೆಚ್ಚದಲ್ಲಿ ಮಹಾನಗರ ಪಾಲಿಕೆಗಳಲ್ಲಿ 'ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆ (ಹಂತ–III) ಅನ್ನು ಪ್ರಾರಂಭಿಸಿದೆ. ಈ ಯೋಜನೆಯು 2014–15 ರಿಂದ 2016–17 ರ ಅವಧಿಯಲ್ಲಿ ಅನುಷ್ಠಾನಗೊಳ್ಳಬೇಕಿತ್ತು. ಪ್ರತಿ ಮ.ಪಾಗಳಿಗೆ ₹ 100 ಕೋಟಿ ಅನುದಾನ ನಿಗದಿಪಡಿಸಲಾಗಿತ್ತು ಮತ್ತು ಈ ಅನುದಾನವನ್ನು ಸರ್ಕಾರದ ವತಿಯಿಂದ 50 ಪ್ರತಿಶತ ಹಂಚಿಕೆ ಮಾಡಿದರೆ ಉಳಿದ 50 ಪ್ರತಿಶತನ್ನು ಕರ್ನಾಟಕ ನೀರು ಮತ್ತು ನೈರ್ಮಲ್ಯ ಪೂಲ್ಡ್ ಫಂಡ್ ಟ್ರಸ್ಟ್ (ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿ) ಮೂಲಕ ಎರವಲು ಸಾಲ ಪಡೆಯುವ ಮುಖಾಂತರ ಮಂಜೂರು ಮಾಡಲಾಗಿದೆ. ನಗರಾಭಿವೃದ್ಧಿ ಇಲಾಖೆ (ಯುಡಿಡಿ) ಯೋಜನೆಯ ಅನುಷ್ಠಾನಕ್ಕೆ ನೋಡಲ್ ಇಲಾಖೆಯಾಗಿತ್ತು ಮತ್ತು ಯುಡಿಡಿ ಅಡಿಯಲ್ಲಿ ಪೌರಾಡಳಿತದ ನಿರ್ದೇಶಕರು (ಡಿಎಂಎ) ಯೋಜನೆಯ ಅನುಷ್ಠಾನದ ಮೇಲ್ವಿಚಾರಣೆಯನ್ನು ಹೊಂದಿದ್ದರು.

2008–12ರ ಅವಧಿಯಲ್ಲಿ ಏಳು ಮಹಾನಗರ ಪಾಲಿಕೆಗಳಿಗೆ (ನಾಗರೋತ್ಥಾನ ಹಂತ–1) ಮುಖ್ಯಮಂತ್ರಿಗಳ ವಿಶೇಷ ಅನುದಾನದಿಂದ ತಲಾ ₹ 100 ಕೋಟಿಗಳು ಬಿಡುಗಡೆಯಾದ ಬಗ್ಗೆ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಏಪ್ರಿಲ್‌ನಿಂದ ಜುಲೈ 2012 ರ ಅವಧಿಯಲ್ಲಿ ನಡೆಸಲಾಯಿತು ಮತ್ತು ಫಲಿತಾಂಶಗಳನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಸ್ಥಳೀಯ ಸಂಸ್ಥೆಗಳು) 31 ಮಾರ್ಚ್ 2012 ಕ್ಕೆ ಕೊನೆಗೊಂಡ ವರ್ಷದ (2013 ರ ವರದಿ ಸಂಖ್ಯೆ.6) ವರದಿಯ ಕಂಡಿಕೆ 4.2 ರಲ್ಲಿ ಸೇರಿಸಲಾಗಿದೆ. ಸ್ಥಳೀಯ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯು ಆಗಸ್ಟ್ ಮತ್ತು ಸೆಪ್ಟೆಂಬರ್ 2015 ರಲ್ಲಿ ಈ ಕಾರ್ಯನಿರ್ವಹಣಾ ಲೆಕ್ಕಪರಿಶೋಧನ ವರದಿಯನ್ನು ಚರ್ಚಿಸಿದೆ. ಸಮಿತಿಯು ತನ್ನ 13ನೇ ವರದಿಯಲ್ಲಿ (ಜೂನ್ 2016), ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮವನ್ನು ಕೈಗೊಳ್ಳಲು, ಕಾರಣರಾದ ಅಧಿಕಾರಿಗಳಿಂದ ಮೊತ್ತವನ್ನು ವಸೂಲಿ ಮಾಡಲು ಮತ್ತು ಮೂರನೇ ವ್ಯಕ್ತಿಯ ಸಲಹೆಗಾಗಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲು ಶಿಫಾರಸು ಮಾಡಿದೆ. ರಾಜ್ಯ ಸರ್ಕಾರದಿಂದ ಕ್ರಮ ತೆಗೆದುಕೊಂಡ ವರದಿಯನ್ನು ನಿರೀಕ್ಷಿಸಲಾಗಿದೆ (ಮಾರ್ಚ್ 2022).

ಮಾರ್ಗಸೂಚಿಗಳಲ್ಲಿ ಸೂಚಿಸಿದಂತೆ ಯೋಜನೆಯನ್ನು ಕೈಗೊಳ್ಳಲಾಗಿದೆಯೇ, ಹಣಕಾಸು ನಿರ್ವಹಣೆಯು ಸಮರ್ಥವಾಗಿದೆಯೇ, ಕಾಮಗಾರಿಗಳ ಕಾರ್ಯಗತಗೊಳಿಸುವಿಕೆ ಮಿತವ್ಯಯವಾಗಿದೆಯೇ, ಸಮರ್ಥವಾಗಿದೆಯೇ ಹಾಗು ಪರಿಣಾಮಕಾರಿಯಾಗಿದೆಯೇ ಮತ್ತು ಮೇಲ್ವಿಚಾರಣೆ ಪರಿಣಾಮಕಾರಿಯಾಗಿದೆಯೇ ಎಂದು ನಿರ್ಣಯಿಸಲು ಪ್ರಸ್ತುತ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು 2014–15 ರಿಂದ 2020–21 ರ ಅವಧಿಯಲ್ಲಿ ನಡೆಸಲ್ಪಟ್ಟಿತು. ಲೆಕ್ಕಪರಿಶೋಧನೆಯು ನಗರಾಭಿವೃದ್ಧಿ ಇಲಾಖೆ, ಪೌರಾಡಳಿತ ನಿರ್ದೇಶನಾಲಯ, ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿ, 10 ಮಹಾನಗರ ಪಾಲಿಕೆಗಳ ಪೈಕಿ ನಾಲ್ಕು (ಬಳ್ಳಾರಿ, ಮೈಸೂರು, ತುಮಕೂರು ಮತ್ತು ವಿಜಯಪುರ) ಮತ್ತು ಜಿಲ್ಲಾ ನಗರಾಭಿವೃದ್ಧಿ ಕೋಶಗಳಲ್ಲಿನ ದಾಖಲೆಗಳ ಪರಿಶೀಲನೆಯನ್ನು ಒಳಗೊಂಡಿತ್ತು. ಲಭ್ಯವಿರುವ ಮೊತ್ತವಾದ ₹ 931.63 ಕೋಟಿಗಯಲ್ಲಿ, ₹ 922.35 ಕೋಟಿ ವೆಚ್ಚವನ್ನು (ಮಾರ್ಚ್ 2021) ಯೋಜನೆಯಡಿ ಮಾಡಲಾಗಿದೆ. ನಾಲ್ಕು ಮಹಾನಗರ ಪಾಲಿಕೆಗಳಲ್ಲಿನ 227 ಪ್ಯಾಕೇಜ್‌ಗಳಲ್ಲಿ, ಲೆಕ್ಕಪರಿಶೋಧನೆಯು ₹ 59.96 ಕೋಟಿ ವೆಚ್ಚದ 52 (ಶೇ 23) ಪ್ಯಾಕೇಜ್‌ಗಳನ್ನು ಪರೀಕ್ಷಾ ತನಿಖೆಗೆ ಒಳಪಡಿಸಿತು.

ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳನ್ನು ಮೂರು ಅಧ್ಯಾಯಗಳಾಗಿ ಆಯೋಜಿಸಲಾಗಿದೆ ಅವುಗಳೆಂದರೆ, ಯೋಜನೆ ಮತ್ತು ಹಣಕಾಸು ನಿರ್ವಹಣೆ; ಒಪ್ಪಂದದ ನಿರ್ವಹಣೆ ಮತ್ತು ಕಾಮಗಾರಿಗಳ ಕಾರ್ಯಗತಗೊಳಿಸುವಿಕೆ; ಮತ್ತು ಉಸ್ತುವಾರಿ. ಗಮನಿಸಲಾದ ಪ್ರಮುಖ ನ್ಯೂನತೆಗಳನ್ನು ಕೆಳಗೆ ವಿವರಿಸಲಾಗಿದೆ:

### ಅ) ಯೋಜನೆ ಮತ್ತು ಹಣಕಾಸು ನಿರ್ವಹಣೆ

ಯೋಜನೆಯ ಪ್ರಕಟಣೆಯ (ಜುಲೈ 2013) ಅನುಸಾರವಾಗಿ, ರಾಜ್ಯ ಸರ್ಕಾರವು (ಸೆಪ್ಟೆಂಬರ್ 2013) ಮೊದಲ ಪಟ್ಟಿಯ ಅನುಷ್ಠಾನ ಮಾರ್ಗಸೂಚಿಗಳನ್ನು ಹೊರಡಿಸಿತು. ಆದಾಗ್ಯೂ, ಈ ಸುತ್ತೋಲೆಯು ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಲು ಅಳವಡಿಸಿಕೊಳ್ಳಬೇಕಾದ ಯಾವುದೇ ಮಾನದಂಡಗಳನ್ನು ಒಳಗೊಂಡಿರಲಿಲ್ಲ. ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಲು ಸೂಚನೆಗಳನ್ನು ಒಳಗೊಂಡಿರುವ ವಿವರವಾದ ಮಾರ್ಗಸೂಚಿಗಳನ್ನು ಮೇ 2014 ರಲ್ಲಿ ನೀಡಲಾಯಿತು. ಈ ಸೂಚನೆಗಳನ್ನು ಹೊರಡಿಸುವ ಮೊದಲೇ, ಪರೀಕ್ಷಾ–ತನಿಖೆಗೆ ಒಳಪಟ್ಟ ನಾಲ್ಕು ಮಹಾನಗರ ಪಾಲಿಕೆಗಳು ತಮ್ಮ ಕ್ರಿಯಾ ಯೋಜನೆಗಳನ್ನು ಸಲ್ಲಿಸಿದ್ದವು (ನವೆಂಬರ್ 2013 ರಿಂದ ಏಪ್ರಿಲ್ 2014 ರವರೆಗೆ). ನೀಡಿರುವ ವಿವರವಾದ ಮಾರ್ಗಸೂಚಿಗಳಿಗೆ ಅನುಗುಣವಾಗಿ ಕ್ರಿಯಾ ಯೋಜನೆಗಳನ್ನು ಪರಿಷ್ಕರಿಸಲು ಸರ್ಕಾರ/ಡಿಎಂಎ ಕೂಡ ಮಹಾನಗರ ಪಾಲಿಕೆಗಳಿಗೆ ಸೂಚನೆ ನೀಡಲಿಲ್ಲ. ಹೀಗಾಗಿ, ಪರೀಕ್ಷಾ–ತನಿಖೆಗೆ ಒಳಪಟ್ಟ ಮಹಾನಗರ ಪಾಲಿಕೆಗಳಲ್ಲಿನ ಕ್ರಿಯಾ ಯೋಜನೆಗಳು ಸಮಗ್ರವಾಗಿರಲಿಲ್ಲ. ಪರೀಕ್ಷಾ–ತನಿಖೆಗೆ ಒಳಪಟ್ಟ ಮಹಾನಗರ ಪಾಲಿಕೆಗಳು ಯಾವ ಆಧಾರದ ಮೇಲೆ ಕಾಮಗಾರಿಗಳನ್ನು ಆದ್ಯತೆ ಮತ್ತು ಆಯ್ಕೆ ಮಾಡಲಾಗಿದೆಯಂದು ಸೂಚಿಸುವ ಯಾವುದೇ ದತ್ತಾಂಶ/ದಾಖಲೆಗಳನ್ನು ಒದಗಿಸಲಿಲ್ಲ. ಕ್ರಿಯಾ ಯೋಜನೆಗಳಲ್ಲಿ ಮೂಲತಃ ಒಳಗೊಂಡಿದ್ದ ಸುಮಾರು 19 ಪ್ರತಿಶತದಷ್ಟು ಕೆಲಸಗಳನ್ನು ಮಹಾನಗರ ಪಾಲಿಕೆಗಳು ಕಾರ್ಯಗತಗೊಳಿಸಲಿಲ್ಲ.

ಎಲ್ಲಾ ಪರೀಕ್ಷಾ–ತನಿಖೆಗೆ ಒಳಪಟ್ಟ ಮಹಾನಗರ ಪಾಲಿಕೆಗಳಲ್ಲಿ ಕ್ರಿಯಾ ಯೋಜನೆಗಳಿಗೆ ನಂತರದ ಪರಿಷ್ಕರಣೆಗಳು (ನಾಲ್ಕರಿಂದ ಐದು ಬಾರಿ) ಇದ್ದವು. ಸರ್ಕಾರವು ತನ್ನದೇ ಆದ ಸೂಚನೆಗಳನ್ನು ಕಡೆಗಣಿಸಿ, ಪರಿಷ್ಕೃತ ಕ್ರಿಯಾ ಯೋಜನೆಗಳಿಗೆ ಅನುಮೋದನೆಗಳನ್ನು ನೀಡಿತು ಮತ್ತು ಉಳಿದ ಕಾಮಗಾರಿಗಳ ವೆಚ್ಚಕ್ಕೆ ಹಣವನ್ನು ನಿರ್ಬಂಧಿಸಲಿಲ್ಲ. ಇದಲ್ಲದೆ, ಆಯಾ ಜಿಲ್ಲಾ ಮಟ್ಟದ ಸಮಿತಿಗಳಿಂದ (ಡಿ.ಎಲ್.ಸಿ) ಒಪ್ಪಿಗೆಯನ್ನು ಪಡೆಯದೆ ಎರಡು ಪರೀಕ್ಷಾ–ತನಿಖೆಗೆ ಒಳಪಟ್ಟ ಮಹಾನಗರ ಪಾಲಿಕೆಗಳ (ಬಳ್ಳಾರಿ ಮತ್ತು ಮೈಸೂರು) ಪರಿಷ್ಕೃತ ಕ್ರಿಯಾ ಯೋಜನೆಗಳಿಗೆ ಸರ್ಕಾರವು ಅನುಮೋದನೆಗಳನ್ನು ನೀಡಿತು.

ಬಜೆಟ್ ಅಂದಾಜಿನ ಮೇಲೆ ಉಳಿತಾಯ/ಹೆಚ್ಚುವರಿ ನಿದರ್ಶನಗಳು ಬಜೆಟ್ ನಿಯಂತ್ರಣದ ಕೊರತೆಯನ್ನು ಸೂಚಿಸಿತ್ತು. ಮೂರು ವರ್ಷಗಳ ಅವಧಿಯಲ್ಲಿ (2014–15 ರಿಂದ 2016–17) ಹಣ ಬಿಡುಗಡೆ ಮಾಡುವ ಉದ್ದೇಶಕ್ಕೆ ಬದ್ಧವಾಗಿರಲಿಲ್ಲ ಮತ್ತು ಅನುದಾನ ಬಿಡುಗಡೆಯು ಹಣದ ಅವಶ್ಯಕತೆಗೆ ಅನುಗುಣವಾಗಿರಲಿಲ್ಲ.

ಯೋಜನೆಯಡಿ ಸೂಚಿಸಲಾದ ವರ್ಗವಾರು ಮಿತಿಗಳಿಗೆ ಸಂಬಂಧಿಸಿದಂತೆ, ಪರೀಕ್ಷಾ–ತನಿಖೆಗೆ ಒಳಪಟ್ಟ ಯಾವುದೇ ಮಹಾನಗರ ಪಾಲಿಕೆಗಳು ನೀರು ಸರಬರಾಜು ಮತ್ತು ಒಳಚರಂಡಿ (ಯುಜಿಡಿ) ಕಾಮಗಾರಿಗಳಿಗೆ ಸಂಬಂಧಿಸಿದಂತೆ ನಿಗಧಿಪಡಿಸಿದ ₹ 15 ಕೋಟಿಯ ಕನಿಷ್ಠ ಹಂಚಿಕೆಯನ್ನು ಸಾಧಿಸಿರಲಿಲ್ಲ. ಪರೀಕ್ಷೆಗೆ ಒಳಗಾದ ನಾಲ್ಕು ಮಹಾನಗರ ಪಾಲಿಕೆಗಳ ಪೈಕಿ ವಿಜಯಪುರದ ಮಹಾನಗರ ಪಾಲಿಕೆಯಲ್ಲಿ ಮಾತ್ರ ಸಂಚಾರ ನಿರ್ವಹಣೆ ಕಾಮಗಾರಿ ನಡೆದಿದೆ. ಯೋಜನಾ ಮಾರ್ಗಸೂಚಿಗಳಿಗೆ ವಿರುದ್ಧವಾಗಿ, ಪರೀಕ್ಷಾ–ತನಿಖೆಗೆ ಒಳಪಟ್ಟ ಮಹಾನಗರ ಪಾಲಿಕೆಗಳು ₹ 108.75 ಕೋಟಿಗಳನ್ನು (₹ 269.28 ಕೋಟಿಯ ಒಟ್ಟು ವೆಚ್ಚದ ಶೇಕಡ 40) ಇತರ ಯೋಜನೆಗಳ ಅಡಿಯಲ್ಲಿ ತೆಗೆದುಕೊಳ್ಳಲಾದ ಕಾಮಗಾರಿಗಳಿಗೆ ತಿರುಗಿಸಿವೆ.

ನಗರೋತ್ಥಾನ ಹಂತ–II ರಿಂದ ಹಂತ–III ಕ್ಕೆ ಹೆಚ್ಚಿನ ಬಡ್ಡಿದರದಲ್ಲಿ ಪಡೆದ ಸಾಲವನ್ನು ಮರುಪಾವತಿ ಮಾಡದ ಕಾರಣ ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿ ₹5.09 ಕೋಟಿ ತಪ್ಪಿಸಬಹುದಾದ ಬಡ್ಡಿ ಹೊರೆಯನ್ನು ಉಂಟುಮಾಡಿದೆ. ನಮೂದಿಸಿದ ಬಡ್ಡಿ ದರಕ್ಕಿಂತ ಹೆಚ್ಚಿನ ದರದಲ್ಲಿ ಸಾಲ ಪಡೆದಿರುವುದು, ಕಡಿಮೆ ಬಡ್ಡಿ

ದರದಲ್ಲಿ ಲಭ್ಯವಿದ್ದ ಸಾಲ ಪಡೆಯುವ ಆಯ್ಕೆಯನ್ನು ಬಳಸಿಕೊಳ್ಳದಿರುವುದು ಮತ್ತು ಒಪ್ಪಂದಗಳಲ್ಲಿ ಸೂಚಿಸಿರುವ ವೇಳಾಪಟ್ಟಿಯಂತೆ ಸಾಲ ಮರುಪಾವತಿ ವಿಳಂಬದಿಂದಾಗಿ ₹ 4.87 ಕೋಟಿ ಹೆಚ್ಚುವರಿ ವೆಚ್ಚವಾಗಿದೆ. ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿಯ ಸಾಲ ಮರುಪಾವತಿಗಾಗಿ ಅನುದಾನದ ಬೇಡಿಕೆಯ ತಪ್ಪಾದ ಅಂದಾಜಿನಿಂದ ಯುಡಿಡಿ ಉದ್ದೇಶದ ಅಗತ್ಯಕ್ಕಿಂತ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಿತು.

ವಿಜಯಪುರದ ಮಹಾನಗರ ಪಾಲಿಕೆಯು ಕಾನೂನು ಕ್ರಮಗಳನ್ನು ಅನುಸರಿಸದಿರುವುದು ಮತ್ತು ಭೂ ಪರಿಹಾರ ಪಾವತಿಯಲ್ಲಿ ವಿಳಂಬದಿಂದಾಗಿ ಒಟ್ಟು ₹ 3.96 ಕೋಟಿ ಹೆಚ್ಚುವರಿ ಹೊರೆಗೆ ಕಾರಣವಾಯಿತು.

### ಆ) ಒಪ್ಪಂದದ ನಿರ್ವಹಣೆ ಮತ್ತು ಕಾಮಗಾರಿಗಳ ಕಾರ್ಯಗತಗೊಳಿಸುವಿಕೆ.

ಮೂರು ಮ.ಪಾಗಳಲ್ಲಿ (ಮೈಸೂರು, ತುಮಕೂರು ಮತ್ತು ವಿಜಯಪುರ) ಪರೀಕ್ಷಾ–ತನಿಖೆಗೆ ಒಳಪಟ್ಟ ಪ್ಯಾಕೇಜ್‌ಗಳ ವಿಸ್ತೃತ ಯೋಜನಾ ವರದಿಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲಾಗಿಲ್ಲ. ಮಣ್ಣಿನ ಬಲವನ್ನು ಖಚಿತಪಡಿಸಿಕೊಳ್ಳಲು ಕ್ಯಾಲಿಫೋರ್ನಿಯಾ ಬೇರಿಂಗ್ ರೇಶಿಯೊ ಮೌಲ್ಯಗಳನ್ನು ರಸ್ತೆ ಕಾಮಗಾರಿಗೆ ಅಂದಾಜುಗಳನ್ನು ಸಿದ್ಧಪಡಿಸುವಾಗ ಈ ಮೂರು ಮಹಾನಗರ ಪಾಲಿಕೆಗಳು ಉಲ್ಲೇಖಿಸಿಲ್ಲ. ಬೆಂಕೆಲ್‌ಮನ್ ಬೀಮ್ ಡಿಫ್ಲೆಕ್ಷನ್ ಪರೀಕ್ಷೆಗಳು ಮತ್ತು ಟ್ರಾಫಿಕ್ ಅಧ್ಯಯನಗಳನ್ನು ಯಾವುದೇ ಪರೀಕ್ಷಾ–ತನಿಖೆಗೆ ಒಳಪಟ್ಟ ಮಹಾನಗರ ಪಾಲಿಕೆಗಳಲ್ಲಿ ಅಂದಾಜುಗಳಿಗೆ ಲಗತ್ತಿಸಲಾಗಿಲ್ಲ. ಈ ಲೋಪಗಳು ಅವಾಸ್ತವಿಕ ಮತ್ತು ದೋಷಪೂರಿತ ಅಂದಾಜುಗಳನ್ನು ತಯಾರಿಸಲು ಕಾರಣವಾಯಿತು.

ಡಿಎಂಎಯಿಂದ ಯೋಜನಾ ನಿರ್ವಾಹಣಾ ಸಲಹೆಗಾರರು (ಪಿ.ಎಂ.ಸಿ) ಕಾಮಗಾರಿಗಳ ತಾಂತ್ರಿಕ ಮೌಲ್ಯಮಾಪನ ಮತ್ತು ಆಯ್ಕೆಯು ದೋಷಪೂರಿತವಾಗಿದೆ ಏಕೆಂದರೆ ಮೂವರು ಸಲಹೆಗಾರರಲ್ಲಿ ಹಣಕಾಸಿನ ವಹಿವಾಟು, ಅನುಭವ ಮತ್ತು ತಾಂತ್ರಿಕವಾಗಿ ಅರ್ಹರಾದ ಪ್ರಮುಖ ವೃತ್ತಿಪರರ ಲಭ್ಯತೆಯಂತಹ ಕಡ್ಡಾಯ ಮಾನದಂಡಗಳನ್ನು ಪೂರೈಸಿರಲಿಲ್ಲ ಮತ್ತು ಆದ್ದರಿಂದ, ತಾಂತ್ರಿಕವಾಗಿ ಅಸ್ಪಂದನೆಯ ಕಾರಣದಿಂದ ತಿರಸ್ಕರಿಸಬಹುದಾಗಿತ್ತು. ಮಹಾನಗರ ಪಾಲಿಕೆ, ಬಳ್ಳಾರಿ ತನ್ನ ತಾಂತ್ರಿಕ ಸಾಮರ್ಥ್ಯವನ್ನು ಸರಿಯಾಗಿ ನಿರ್ಣಯಿಸದೆ ಅನರ್ಹ ಸಲಹೆಗಾರರಿಗೆ ಪಿ.ಎಂ.ಸಿ ಕೆಲಸವನ್ನು ನೀಡಿತು.

ಮಹಾನಗರ ಪಾಲಿಕೆಗಳು ಟೆಂಡರ್‌ಗಳಿಗೆ ವ್ಯಾಪಕ ಪ್ರಚಾರವನ್ನು ನೀಡದೆ, ಬಿಡ್ದಾರರು ಸಾಕಷ್ಟು ಭಾಗವಹಿಸದ ಪ್ರಕರಣಗಳಲ್ಲಿ ಹೊಸದಾಗಿ ಟೆಂಡರ್‌ಗಳನ್ನು ಆಹ್ವಾನಿಸದೆ ಕಾಮಗಾರಿಗಳ ಅನುಷ್ಠಾನಕ್ಕೆ ಅನುಮತಿಯನ್ನು ನೀಡಿದ್ದವು. ಎರಡು ಮಹಾನಗರ ಪಾಲಿಕೆಗಳು (ಬಳ್ಳಾರಿ ಮತ್ತು ಮೈಸೂರು), 31 ಪರೀಕ್ಷಾ–ತನಿಖೆಗೆ ಒಳಪಟ್ಟ ಪ್ಯಾಕೇಜ್‌ಗಳಲ್ಲಿ 6ನ್ನು (ಶೇ 19) ಅನರ್ಹ ಗುತ್ತಿಗೆದಾರರಿಗೆ ನೀಡಲಾಗಿದೆ. ಲಭ್ಯವಿರುವ ಬಿಡ್ ಸಾಮರ್ಥ್ಯದ ಲೆಕ್ಕಾಚಾರದಲ್ಲಿ ಅಸಮಂಜಸತೆ, ನಕಲಿ ಪ್ರಮಾಣಪತ್ರಗಳ ಸಲ್ಲಿಕೆ ಬಗ್ಗೆ ತಿಳಿದಿದ್ದರೂ ತಿರಸ್ಕರಿಸದಿರುವುದು ಮತ್ತು ಟೆಂಡರ್ ದಾಖಲೆಗಳಲ್ಲಿ ನಿಗದಿಪಡಿಸಿದ ಕನಿಷ್ಠ ಅರ್ಹತೆಯ ಮಾನದಂಡಗಳನ್ನು ಅನುಸರಿಸದಿರುವುದು ಮುಂತಾದ ಟೆಂಡರ್ ಮೌಲ್ಯಮಾಪನಗಳಲ್ಲಿನ ವ್ಯತ್ಯಾಸಗಳು, ಇಂತಹ ಕ್ರಮಬದ್ಧವಲ್ಲದ ಕಾಮಗಾರಿಗಳನ್ನು ನೀಡುವಲ್ಲಿ ಪರಿಣಮಿಸಿತು. ಎರಡು ಮಹಾನಗರ ಪಾಲಿಕೆಗಳಲ್ಲಿ (ಬಳ್ಳಾರಿ ಮತ್ತು ತುಮಕೂರು) ಟೆಂಡರ್ ಸಾಮರ್ಥ್ಯಗಳ ಅಸಮರ್ಪಕ ಲೆಕ್ಕಾಚಾರ ಮತ್ತು ತಪ್ಪಾದ ವಹಿವಾಟಿನ ಅಳವಡಿಕೆಯಿಂದಾಗಿ ತಾಂತ್ರಿಕವಾಗಿ ಸ್ಪಂದಿಸುವ ಬಿಡ್‌ಗಳನ್ನು ವಿನಾಕಾರಣ ತಿರಸ್ಕರಿಸಲಾಗಿದೆ. ಇದಲ್ಲದೆ, ಡಿಎಂಎ 18 ಪ್ಯಾಕೇಜ್‌ಗಳಲ್ಲಿ 3 ಪ್ಯಾಕೇಜುಗಳನ್ನು ಮಹಾನಗರ ಪಾಲಿಕೆ, ಬಳ್ಳಾರಿಯಲ್ಲಿ ಟೆಂಡರ್ ಪ್ರೀಮಿಯಂನಲ್ಲಿ ನೀಡಿತು ಮತ್ತು ಉಳಿದ 15 ಪ್ಯಾಕೇಜ್ ಗಳಲ್ಲಿ ಅಂದಾಜು ವೆಚ್ಚಕ್ಕೆ ನಿರ್ಬಂಧಿಸಿತು, ಇದು ಟೆಂಡರ್ ಪ್ರಕ್ರಿಯೆಯಲ್ಲಿ ಸ್ಥಿರತೆಯ ಕೊರತೆಯನ್ನು ಸೂಚಿಸುತ್ತದೆ. ಮೂರು ಪರೀಕ್ಷಾ–ತನಿಖೆಗೆ ಒಳಪಟ್ಟ ಮಹಾನಗರ ಪಾಲಿಕೆಗಳು (ಬಳ್ಳಾರಿ, ಮೈಸೂರು ಮತ್ತು ತುಮಕೂರು) ಬಿಡ್ ಮಾನ್ಯತೆಯ ಅವಧಿ ಮುಗಿದ ನಂತರ, 43 ಪ್ಯಾಕೇಜ್‌ಗಳಲ್ಲಿ 18ಕ್ಕೆ (ಶೇಕಡಾ 42) ಗುತ್ತಿಗೆಗಳನ್ನು ನೀಡಿವೆ.

ಪರೀಕ್ಷಾ–ತನಿಖೆಗೆ ಒಳಪಟ್ಟ ಮಹಾನಗರ ಪಾಲಿಕೆಗಳು 227 ಪ್ಯಾಕೇಜ್‌ಗಳಲ್ಲಿ 32ನ್ನು (ಶೇ. 14) ತೆಗೆದುಕೊಂಡಿದ್ದು, ಈ ಪ್ಯಾಕೇಜುಗಳ ಅಂದಾಜು ವೆಚ್ಚ ₹ 100 ಲಕ್ಷಕ್ಕಿಂತ ಕಡಿಮೆಯಾಗಿದೆ. ಇದಲ್ಲದೆ, ಈ ಮಹಾನಗರ ಪಾಲಿಕೆಗಳಲ್ಲಿನ 643 ಕಾಮಗಾರಿಗಳ ಪೈಕಿ 452 (ಶೇ 70) ಕಾಮಗಾರಿಗಳ ವೆಚ್ಚವು ನಿಗದಿಪಡಿಸಿದ ಕನಿಷ್ಠ ₹ 50 ಲಕ್ಷದ ವೆಚ್ಚಕ್ಕಿಂತ ಕಡಿಮೆಯಾಗಿದೆ.

ಮೂರು ಮಹಾನಗರ ಪಾಲಿಕೆಗಳ (ಬಳ್ಳಾರಿ, ಮೈಸೂರು ಮತ್ತು ತುಮಕೂರು) ಏಳು ಪ್ಯಾಕೇಜ್‌ಗಳಲ್ಲಿನ 16 ಕಾಮಗಾರಿಗಳಲ್ಲಿ, 11 (ಶೇ. 69) ಕಾಮಗಾರಿಗಳು ಸ್ಥಳ ಅಲಭ್ಯತೆಯಿಂದ ಕಾರ್ಯಗತವಾಗಿಲ್ಲ. ಇದಲ್ಲದೆ, ಬಳ್ಳಾರಿ, ಮೈಸೂರು ಮತ್ತು ತುಮಕೂರು ಮಹಾನಗರ ಪಾಲಿಕೆಗಳಲ್ಲಿನ 43 ಪ್ಯಾಕೇಜ್‌ಗಳ ಪೈಕಿ ಎಂಟು (ಶೇ. 19) ಪ್ಯಾಕೇಜುಗಳನ್ನು ಪೂರ್ಣಗೊಳಿಸಲು 75 ರಿಂದ 547 ದಿನಗಳವರೆಗೆ ವಿಳಂಬವಾಗಿದೆ. ಕಾಮಗಾರಿಗಳನ್ನು ವಹಿಸಿಕೊಡುವ ಮುನ್ನ ಒಳಚರಂಡಿ ಕಾಮಗಾರಿಗಳು ಪೂರ್ಣಗೊಳ್ಳದಿರುವುದು, ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸದಿರುವುದು ಇತ್ಯಾದಿ ವಿಳಂಬಕ್ಕೆ ಕಾರಣವಾಗಿದೆ.

ಪರೀಕ್ಷಾ–ತನಿಖೆಗೆ ಒಳಪಟ್ಟ ಮಹಾನಗರ ಪಾಲಿಕೆಗಳಲ್ಲಿ ತಪ್ಪಾದ ದರಗಳ ಅಳವಡಿಕೆ, ನಿಗದಿತ ಅಳತೆಗಳನ್ನು ಕಡೆಗಣಿಸಿ ಕಾರ್ಯಗತಗೊಳಿಸಲಾದ ಐಟಂ, ಹೆಚ್ಚಿನ ದರಗಳಲ್ಲಿ ಮಣ್ಣು ಅಗೆಯುವ ಕಾಮಗಾರಿಗೆ ಪಾವತಿಸುವುದು ಇತ್ಯಾದಿಯಿಂದ ಮಾಡಲಾದ ₹ 68.95 ಲಕ್ಷ ವೆಚ್ಚವು ಸ್ವೀಕಾರಾರ್ಹವಲ್ಲ/ಕ್ರಮಬದ್ಧವಲ್ಲದ್ದಾಗಿದೆ. ಕೋಡಲ್ ನಿಬಂಧನೆಗಳಿಗೆ ವಿರುದ್ಧವಾಗಿ, ಮೂರು ಮಹಾನಗರ ಪಾಲಿಕೆಗಳ (ಮೈಸೂರು, ತುಮಕೂರು ಮತ್ತು ವಿಜಯಪುರ) 43 ಪ್ಯಾಕೇಜ್‌ಗಳಲ್ಲಿ, ಅಸ್ತಿತ್ವದಲ್ಲಿರುವ ಬಿಟುಮಿನಸ್ ಮೇಲ್ಪದರವನ್ನು ತೆಗೆಯುವಾಗ ಆಧಾರವಾಗಿರುವ ಪದರಗಳನ್ನು ತೆಗೆದುಹಾಕಿ ಮತ್ತೆ ಮರುಹಾಕಿದ್ದನ್ನು ಎಂಟು (ಶೇ.19) ಪ್ಯಾಕೇಜ್‌ಗಳಲ್ಲಿ ಗಮನಿಸಲಾಗಿದೆ. ಇದರಿಂದ ₹ 3.12 ಕೋಟಿ ವೆಚ್ಚವನ್ನು ತಪ್ಪಿಸಬಹುದಾಗಿತ್ತು. ಪರೀಕ್ಷಾ–ತನಿಖೆಗೆ ಒಳಪಟ್ಟ ಮೂರು ಮಹಾನಗರ ಪಾಲಿಕೆಗಳು (ಬಳ್ಳಾರಿ, ಮೈಸೂರು ಮತ್ತು ತುಮಕೂರು) ನಿಗದಿತ ಮಾನದಂಡಗಳನ್ನು ಕಡೆಗಣಿಸಿ ಕಾಮಗಾರಿಗಳನ್ನು ಕಾರ್ಯಗತಗೊಳಿಸಲಾಗಿದ್ದರಿಂದ 43 ಪ್ಯಾಕೇಜ್‌ಗಳಲ್ಲಿನ ಆರು (ಶೇ. 14) ಪ್ಯಾಕೇಜ್ ಗಳಲ್ಲಿ ₹ 38.23 ಲಕ್ಷ ಹೆಚ್ಚುವರಿ ವೆಚ್ಚವನ್ನು ಮಾಡಿದೆ. ಪರೀಕ್ಷಾ–ತನಿಖೆಗೆ ಒಳಪಟ್ಟ ಮೂರು ಮಹಾನಗರ ಪಾಲಿಕೆಗಳಲ್ಲಿನ (ಬಳ್ಳಾರಿ, ತುಮಕೂರು ಮತ್ತು ವಿಜಯಪುರ) 30 ಪ್ಯಾಕೇಜ್‌ಗಳಲ್ಲಿನ ಆರು ಪ್ಯಾಕೇಜ್ಗಳಲ್ಲಿ (ಶೇ. 20) ಕಮಾಗಾರಿಗಳನ್ನು ಕಾರ್ಯಗತಗೊಳಿಸದೆ ಗುತ್ತಿಗೆದಾರರಿಗೆ ₹ 104.54 ಲಕ್ಷ ಮೊತ್ತವನ್ನು ಪಾವತಿಸಿದ್ದನ್ನು ಗಮನಿಸಲಾಗಿದೆ. ಎರಡು ಮಹಾನಗರ ಪಾಲಿಕೆಗಳು (ಬಳ್ಳಾರಿ ಮತ್ತು ಮೈಸೂರು) ಡಿಎಂಎ ಅನುಮೋದನೆಯಿಲ್ಲದೆ ಹೆಚ್ಚುವರಿ ಕಾಮಗಾರಿಗಳನ್ನು ನಿರ್ವಹಿಸಲು 31 ಪ್ಯಾಕೇಜ್‌ಗಳಲ್ಲಿ, ₹ 74.69 ಲಕ್ಷ ಉಳಿತಾಯವನ್ನು ಮೂರು (ಶೇ.10) ಪ್ಯಾಕೇಜ್ ಗಳ ಮೇಲೆ ಬಳಸಿಕೊಂಡಿವೆ.

ಬಳ್ಳಾರಿ ಮಹಾನಗರ ಪಾಲಿಕೆಯಿಂದ ಬಸ್ ಟರ್ಮಿನಲ್ ನಿರ್ಮಾಣಕ್ಕೆ ನ್ಯೂನತೆಗಳಿರುವ ನಿವೇಶನದ ಆಯ್ಕೆ ಮತ್ತು ತುಮಕೂರಿನ ಮಹಾನಗರ ಪಾಲಿಕೆಯಿಂದ ಡೀಸೆಲ್ ಜನರೇಟರ್ ಸೆಟ್‌ಗಳನ್ನು ಬಳಸದೇ ಇರುವುದು, ₹ 3.78 ಕೋಟಿ ವೆಚ್ಚ ಫಲಪ್ರದವಾಗದೆ ಉಳಿಯುವಲ್ಲಿ ಪರಿಣಮಿಸಿತು. ಮಾರುಕಟ್ಟೆ ದರಗಳೊಂದಿಗೆ ಪಿ.ಡಬ್ಲ್ಯೂ.ಡಿ ಏಕರೂಪ ದರಪಟ್ಟಿಯಲ್ಲಿ ನಮೂದಿಸಲಾದ ವಿದ್ಯುತ್ ವಸ್ತುಗಳ ದರಗಳ ಹೋಲಿಕೆಯು ಚಾಲ್ತಿಯಲ್ಲಿರುವ ಮಾರುಕಟ್ಟೆ ದರಗಳಿಗಿಂತ ಏಕರೂಪ ದರಪಟ್ಟಿಯ ದರಗಳು ಹೆಚ್ಚು ಎಂದು ಸೂಚಿಸಿದೆ. ಈ ಅಸಮಂಜಸತೆಯಿಂದ ಪರೀಕ್ಷಾ–ತನಿಖೆಗೆ ಒಳಪಟ್ಟ ಮಹಾನಗರ ಪಾಲಿಕೆಗಳ ಐದು ಪ್ಯಾಕೇಜ್‌ಗಳಲ್ಲಿ (ಬಳ್ಳಾರಿ ಹೊರತುಪಡಿಸಿ) ₹ 1.29 ಕೋಟಿಗಳಷ್ಟು ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗಿದೆ.

### ಇ) ಮೇಲ್ವಿಚಾರಣೆ

2014–15 ರಿಂದ 2020–21 ರ ಅವಧಿಯಲ್ಲಿ ಡಿಎಂಎನಲ್ಲಿ ನಡೆಯಬೇಕಿದ್ದ 84 ಪರಿಶೀಲನಾ ಸಭೆಗಳ ಪೈಕಿ ಡಿಎಂಎ ಕೇವಲ 25 ಸಭೆಗಳನ್ನು ನಡೆಸಿತು. ಅಲ್ಲದೆ, ಪರೀಕ್ಷಾ–ತನಿಖೆಗೆ ಒಳಪಟ್ಟ ನಾಲ್ಕು ಮಹಾನಗರ ಪಾಲಿಕೆಗಳಲ್ಲಿನ ಜಿ.ಮ.ಸಗಳು ಯೋಜನೆಯ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡಲು ಯಾವುದೇ ಸಭೆಯನ್ನು ನಡೆಸಲಿಲ್ಲ.

ಪಿ.ಎಂ.ಸಿ ಸಲ್ಲಿಸಿದ ಗುಣಮಟ್ಟ ಪರಿಶೀಲನಾ ವರದಿಗಳಲ್ಲಿ ಅಕ್ರಮಗಳನ್ನು ಗಮನಿಸಲಾಗಿದೆ, ಉದಾಹರಣೆಗೆ ದಿನಾಂಕಗಳು / ಕಾರ್ಯಗತಗೊಳಿಸಿದ ಕಾಮಗಾರಿಗಳ ಪರಿಮಾಣದಲ್ಲಿ ವ್ಯತ್ಯಾಸ, ಪರಿಶೀಲಿಸಿದ ಕಾಮಗಾರಿಗಳ ಗುಣಮಟ್ಟವನ್ನು ಪ್ರಮಾಣೀಕರಿಸದಿರುವುದು ಇತ್ಯಾದಿ. ಅಸಮರ್ಪಕ ಲೆಕ್ಕಪತ್ರ ನಿರ್ವಹಣೆ, ದಾಖಲೆಗಳ ನಿರ್ವಹಣೆ ಮಾಡದಿರುವುದು ಮತ್ತು ವಿವಿಧ ಮೂಲದ ವೆಚ್ಚದ ತೋರುವಿಕೆಯಲ್ಲಿ ಸಮನ್ವಯದ ಕೊರತೆಯಿಂದ ಅಸಮಂಜಸತೆಗಳಂತಹ ವ್ಯತ್ಯಾಸಗಳಿಂದಾಗಿ ಹಣಕಾಸು ವರದಿಗಾರಿಕೆಯಲ್ಲಿ ಕೊರತೆಯುಂಟಾಯಿತು. ದತ್ತಾಂಶ ಅಸಂಗತತೆಗಳಿಂದಾಗಿ ಯೋಜನೆಯ ಎಂ.ಐ.ಎಸ್ ವಿಶ್ವಾಸಾರ್ಹವಾಗಿರಲಿಲ್ಲ ಪರೀಕ್ಷಾ–ತನಿಖೆಗೆ ಒಳಪಟ್ಟ ಮಹಾನಗರ ಪಾಲಿಕೆಗಳು ಮತ್ತು ಡಿಎಂಎಯಲ್ಲಿ ಆಂತರಿಕ ಲೆಕ್ಕಪರಿಶೋಧನೆಯು ಕ್ರಿಯಾತ್ಮಕವಾಗಿರಲಿಲ್ಲ.

ಯೋಜನೆಯಡಿ ಕೈಗೊಳ್ಳಲಾದ ಬಹುತೇಕ ಕಾಮಗಾರಿಗಳು ವಿಂಗಡಣೆಯಾಗಿರುವುದರಿಂದ ಮತ್ತು ನಿಗದಿತ ಹಣಕಾಸಿನ ಮಿತಿ ₹ 50 ಲಕ್ಷಕ್ಕಿಂತ ಕಡಿಮೆ ಇರುವುದರಿಂದ ನಗರ ಮೂಲಸೌಕರ್ಯದ ಸಮಗ್ರ ಅಭಿವೃದ್ಧಿಯ ಮೌಲ್ಯಮಾಪನ ಕಾರ್ಯಸಾಧ್ಯವಾಗಿರಲಿಲ್ಲ. ಅಳೆಯಬಹುದಾದ ಸೂಚ್ಯಂಕಗಳನ್ನು ಗುರುತಿಸುವ ಮೂಲಕ ಸರ್ಕಾರ/ಡಿಎಂಎ ಸಹ ಯೋಜನೆಯ ಪ್ರಭಾವದ ಮೌಲ್ಯಮಾಪನವನ್ನು ನಡೆಸಲಿಲ್ಲ. ಉತ್ತಮ ಕಾರ್ಯನಿರ್ವಹಣೆಯ ಮಹಾನಗರ ಪಾಲಿಕೆಗಳಿಗೆ ಪ್ರೋತ್ಸಾಹಧನ ವಿತರಿಸಲು ಸರ್ಕಾರ ಯಾವುದೇ ಕ್ರಮ ಕೈಗೊಳ್ಳದ ಕಾರಣ ಉತ್ತಮ ಕಾರ್ಯನಿರ್ವಹಣೆಯನ್ನು ಗುರುತಿಸುವ ಉದ್ದೇಶ ಈಡೇರಲಿಲ್ಲ.

### ನಿರ್ಣಯ

ಯೋಜನೆಯಡಿ ಕೈಗೊಳ್ಳಬೇಕಾದ ಕಾಮಗಾರಿಗಳ ವಿವರವಾದ ಕ್ರಿಯಾ ಯೋಜನೆಗಳನ್ನು ತಯಾರಿಸಲು ಮಹಾನಗರ ಪಾಲಿಕೆಗಳು ಸರ್ಕಾರದ ಮಾರ್ಗಸೂಚಿಗಳನ್ನು ಅನುಸರಿಸಿಲ್ಲ. ಯೋಜನೆ ಮತ್ತು ಕಾರ್ಯಗಳ ಆಯ್ಕೆಯಲ್ಲಿ ಅಗತ್ಯ ಆಧಾರಿತ ವಿಶ್ಲೇಷಣೆಯ ಕೊರತೆ ಕಂಡುಬಂದಿದೆ. ವಿವರವಾದ ಮಾರ್ಗಸೂಚಿಗಳನ್ನು ನೀಡುವಲ್ಲಿ ವಿಳಂಬ ಮತ್ತು ನಿಗದಿತ ಮಾನದಂಡಗಳನ್ನು ಅನುಸರಿಸದಿರುವುದರಿಂದ ಮಹಾನಗರ ಪಾಲಿಕೆಗಳು ತನ್ನ ಮೂಲಸೌಕರ್ಯ ಅಭಿವೃದ್ಧಿ ಅಗತ್ಯಗಳಿಗೆ ಆದ್ಯತೆಯ ಮತ್ತು ಸಮಗ್ರ ವಿಧಾನವನ್ನು ಅನುಸರಿಸುವ ಅವಕಾಶದಿಂದ ವಂಚಿತಗೊಂಡಿತು. ಡಿ.ಎಲ್.ಸಿಗಳ ಒಪ್ಪಿಗೆಯಿಲ್ಲದೆ ಕ್ರಿಯಾ ಯೋಜನೆಗಳ ಪರಿಷ್ಕರಣೆಯು ಯೋಜನಾ ಮಾರ್ಗಸೂಚಿಗಳಲ್ಲಿ ಸೂಚಿಸಲಾದ ಸಮುದಾಯ/ ಸಹಭಾಗಿತ್ವ ಯೋಜನೆ ಪರಿಕಲ್ಪನೆಗೆ ವಿರುದ್ಧವಾಗಿದೆ.

ವಿವಿಧ ವರ್ಗಗಳ ಕಾಮಗಾರಿಗಳಿಗೆ ಯೋಜನಾ ಮಾರ್ಗಸೂಚಿಗಳಲ್ಲಿ ಸೂಚಿಸಲಾದ ಮಿತಿಗಳನ್ನು ಅನುಸರಿಸಲು ಮಹಾನಗರ ಪಾಲಿಕೆಗಳು ವಿಫಲವಾದ ಕಾರಣ ಸಂಚಾರ ನಿರ್ವಹಣೆ, ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳಿಗೆ ಸಂಬಂಧಿಸಿದ ಕಾಮಗಾರಿಗಳನ್ನು ಆಯ್ಕೆ ಮಾಡದೆ, ನಗರಗಳ ಒಟ್ಟಾರೆ ಮೂಲಸೌಕರ್ಯ ಅಭಿವೃದ್ಧಿಯನ್ನು ಕಡೆಗಣಿಸಲಾಗಿದೆ.

ಅನುದಾನದ ಕೊರತೆ, ಯೋಜನಾ ಅನುದಾನದ ತಿರುವು/ತಡೆಗಟ್ಟುವಿಕೆ, ಮತ್ತು ಸಾಲವನ್ನು ಪಡೆಯುವಲ್ಲಿ ಮತ್ತು ಅದರ ಮರುಪಾವತಿಯಲ್ಲಿ ಸಮನ್ವಯತೆ ಮತ್ತು ವ್ಯತ್ಯಾಸಗಳ ಕಾರಣದಿಂದ ತಪ್ಪಿಸಬಹುದಾದ ಬಡ್ಡಿ ಹೊರೆಯ ನಿದರ್ಶನಗಳು ಇರುವುದರಿಂದ ಹಣಕಾಸಿನ ನಿರ್ವಹಣೆಯು ಕೊರತೆಯಿಂದ ಕೂಡಿತ್ತು.

ಡಿಪಿಆರ್‌ಗಳು ಮತ್ತು ಆಧಾರ ದತ್ತಾಂಶಗಳ ಅನುಪಸ್ಥಿತಿಯಲ್ಲಿ, ಪಾದಚಾರಿ ವಿನ್ಯಾಸಗಳನ್ನು ಹೇಗೆ ದೃಢೀಕರಿಸಲಾಗಿದೆ ಮತ್ತು ಅಂದಾಜುಗಳಲ್ಲಿ ಮಾಡಲಾದ ನಿಬಂಧನೆಗಳು ಅಗತ್ಯಕ್ಕೆ ಅನುಗುಣವಾಗಿವೆಯೇ ಎಂಬುದನ್ನು ಪರಿಶೀಲಿಸಲು ಲೆಕ್ಕಪರಿಶೋಧನೆಗೆ ಸಾಧ್ಯವಾಗಲಿಲ್ಲ. ಇದು ಕಾರ್ಯಗತಗೊಳಿಸುವ ಸಮಯದಲ್ಲಿ ವ್ಯತ್ಯಾಸಗಳು/ವೆಚ್ಚದ ಹೆಚ್ಚಳಕ್ಕೆ ಕಾರಣವಾಯಿತು.

ಡಿಎಂಎಯಿಂದ ತಪ್ಪಾದ ತಾಂತ್ರಿಕ ಮೌಲ್ಯಮಾಪನವು ಅನರ್ಹ ಸಲಹೆಗಾರರಿಗೆ ಒಟ್ಟು ₹ 14.63 ಕೋಟಿ ಮೊತ್ತದ ಪಿ.ಎಂ.ಸಿ ಕಾಮಗಾರಿಗಳನ್ನು ನೀಡಲು ಕಾರಣವಾಯಿತು. ಏಕ ಬಿಡ್‌ಗಳ ಸ್ವೀಕಾರ, ತಾಂತ್ರಿಕವಾಗಿ ಸ್ಪಂದಿಸದ ಟೆಂಡರ್‌ದಾರರಿಗೆ ಕಾಮಗಾರಿಗಳ ಕ್ರಮಬದ್ಧವಲ್ಲದ ಅನುಷ್ಠಾನ, ಬಿಡ್‌ಗಳನ್ನು ಅಸಮರ್ಥನೀಯವಾಗಿ ತಿರಸ್ಕರಿಸುವುದು ಮತ್ತು ಬಿಡ್ ಸಿಂಧುತ್ವದ ಅವಧಿ ಮುಗಿದ ನಂತರ ಕಾಮಗಾರಿಗಳನ್ನು ನೀಡಿರುವುದರಿಂದ ಪರೀಕ್ಷಾ–ತನಿಖೆಗೆ ಒಳಪಟ್ಟ ಮಹಾನಗರ ಪಾಲಿಕೆಗಳಲ್ಲಿ ಮತ್ತು ಡಿಎಂಎಯಲ್ಲಿನ ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆಯ ಪಾರದರ್ಶಕತೆ ಮತ್ತು ನ್ಯಾಯೋಚಿತತೆಯ ಕೊರತೆಯನ್ನು ತೋರಿಸುತ್ತದೆ.

ಬಹುತೇಕ ಕಾಮಗಾರಿಗಳ ವೆಚ್ಚವು ನಿಗದಿತ ₹ 50 ಲಕ್ಷಕ್ಕಿಂತ ಕಡಿಮೆಯಿದ್ದಿದ್ದರಿಂದ ನಿಖರವಾದ ಆಸ್ತಿಗಳನ್ನು ರಚಿಸಲು ಮಹಾನಗರ ಪಾಲಿಕೆಗಳು ವಿಫಲವಾಗಿವೆ. ಕಾಮಗಾರಿಗಳನ್ನು ಒಪ್ಪಿಸುವ ಮೊದಲು ಮಹಾನಗರ ಪಾಲಿಕೆಗಳು ಸ್ಥಳಗಳ ಲಭ್ಯತೆಯನ್ನು ಖಾತ್ರಿಪಡಿಸಕೊಳ್ಳಲಿಲ್ಲ ಮತ್ತು ಇದರ ಪರಿಣಾಮವಾಗಿ ಕಾಮಗಾರಿಗಳ ವಿಳಂಬ ಮತ್ತು ಕಾರ್ಯಗತಗೊಳಿಸದಿರುವುದರಲ್ಲಿ ಪರಿಣಮಿಸಿತು. ನಿಗದಿತ ಮಾನದಂಡಗಳು ಮತ್ತು ಅಳತೆಗಳನ್ನು ನಿರ್ಲಕ್ಷಿಸಿ ಕಾಮಗಾರಿಗಳ ಕಾರ್ಯಗತಗೊಳಿಸುವಿಕೆಯು ಕ್ರಮಭದ್ಧವಲ್ಲದ, ತಪ್ಪಿಸಬಹುದಾದ ಮತ್ತು ಹೆಚ್ಚುವರಿ ವೆಚ್ಚಗಳಿಗೆ ಕಾರಣವಾಯಿತು ಮತ್ತು ಇದರ ಪರಿಣಾಮವಾಗಿ ಗುತ್ತಿಗೆದಾರರಿಗೆ ಅನಗತ್ಯ ಲಾಭವಾಯಿತು. ಅಸಮರ್ಪಕ ಯೋಜನೆ ಮತ್ತು ಕಾರ್ಯಗತಗೊಳಿಸುವಿಕೆಯಿಂದಾಗಿ, ಯೋಜನೆಯಡಿಯಲ್ಲಿ ರಚಿಸಲಾದ ಸ್ವತ್ತುಗಳು ಬಳಕೆಯಾಗದೆ ಉಳಿದಿರುವ ಉದಾಹರಣೆಗಳೂ ಇವೆ.

ಡಿ.ಎಲ್.ಸಿಗಳು ಮತ್ತು ಡಿಎಂಎ/ಸರ್ಕಾರಿ ಮಟ್ಟದಲ್ಲಿ ನಡೆಸಬೇಕಾದ ನಿಗದಿತ ಪರಿಶೀಲನಾ ಸಭೆಯಗಳ ಕೊರತೆಯಿಂದ ಮೇಲ್ವಿಚಾರಣೆ ಪರಿಣಾಮಕಾರಿಯಾಗಿಲ್ಲ. ಪಿ.ಎಂ.ಸಿಗಳು ಸಲ್ಲಿಸಿದ ಆರ್ಥಿಕ ಪ್ರಗತಿ ವರದಿಗಳು ಮತ್ತು ಗುಣಮಟ್ಟ ತಪಾಸಣೆ ವರದಿಗಳಲ್ಲಿನ ವ್ಯತ್ಯಾಸಗಳು, ಅವುಗಳನ್ನು ವಿಶ್ವಾಸಾರ್ಹವಲ್ಲದಂತೆ ಮಾಡಿವೆ. ಸರ್ಕಾರ/ಡಿಎಂಎ ಅಳೆಯಬಹುದಾದ ಸೂಚ್ಯಂಕಗಳನ್ನು ಗುರುತಿಸುವ ಮೂಲಕ ಯೋಜನೆಯ ಪ್ರಭಾವದ ಮೌಲ್ಯಮಾಪನವನ್ನು ನಡೆಸಲಿಲ್ಲ ಮತ್ತು ಉತ್ತಮ ಕಾರ್ಯಕ್ಷಮತೆಯ ಮಹಾನಗರ ಪಾಲಿಕೆಗಳನ್ನು ಪ್ರೋತ್ಸಾಹಿಸಲಿಲ್ಲ.

### ಶಿಫಾರಸುಗಳು

- ***ನಗರಗಳ ಮೂಲಸೌಕರ್ಯಗಳ ಸಮಗ್ರ ಅಭಿವೃದ್ಧಿಗೆ ಸಹಾಯ ಮಾಡಲು ಮೂಲಸೌಕರ್ಯ ಅಭಿವೃದ್ಧಿಯ ಯೋಜನೆ ಅಗತ್ಯ ವಿಶ್ಲೇಷಣೆಯ ನಂತರ ಮತ್ತು ಪಾಲುದಾರರೊಂದಿಗೆ ಸಮಾಲೋಚಿಸಿದ ನಂತರ ಮಾತ್ರ ಕೈಗೊಳ್ಳಬೇಕು.***

- *ಸಾಲಗಳನ್ನು ಪಡೆಯುವುದು ಮತ್ತು ಅವುಗಳ ಸೇವೆಯನ್ನು ಕಾರ್ಯತತ್ಪರತೆಯಿಂದ ನಿರ್ವಹಿಸಬೇಕಾಗುತ್ತದೆ ಮತ್ತು ಸರ್ಕಾರಕ್ಕೆ ಹೆಚ್ಚುವರಿ ಹೊರೆಗಳ ಅಪಾಯವನ್ನು ತಡೆಗಟ್ಟಲು ಸಾಲದ ಖಾತೆಗಳನ್ನು ನಿಯತಕಾಲಿಕವಾಗಿ ಸಮನ್ವಯಗೊಳಿಸಬೇಕು.*

- *ಅನರ್ಹ ಬಿಡ್ಡರ್‌ಗಳ ಆಯ್ಕೆಗೆ ಕಾರಣವಾಗುವ ಟೆಂಡರ್ ಪ್ರಕ್ರಿಯೆಯಲ್ಲಿನ ಅಕ್ರಮಗಳಿಗೆ ಜವಾಬ್ದಾರಿಯನ್ನು ನಿಗದಿಪಡಿಸಬೇಕಾಗಿದೆ.*

- *ತಪ್ಪಿತಸ್ಥ ಅಧಿಕಾರಿಗಳ ಮೇಲೆ ಹೊಣೆಗಾರಿಕೆಯನ್ನು ನಿಗದಿಪಡಿಸುವುದರೊಂದಿಗೆ ಕಾಮಗಾರಿಗಳ ಅನುಷ್ಠಾನದಲ್ಲಿ ಉಂಟಾಗುವ ತಪ್ಪಿಸಬಹುದಾದ/ಹೆಚ್ಚುವರಿ ವೆಚ್ಚವನ್ನು ವಸೂಲಿ ಮಾಡಲು ಕ್ರಮ ಕೈಗೊಳ್ಳಬಹುದು.*

- *ಗುಣಮಟ್ಟದ ತಪಾಸಣಾ ವರದಿಗಳ ಮೂಲಕ ದೃಢವಾದ ವರದಿಯನ್ನು ಸ್ಥಾಪಿಸುವುದು, ವಿಶ್ವಾಸಾರ್ಹ ಎಂ.ಐ.ಎಸ್ ಅನ್ನು ಸ್ಥಾಪಿಸುವುದು, ಆಂತರಿಕ ಲೆಕ್ಕಪರಿಶೋಧನೆಯನ್ನು ರಚಿಸುವುದು ಮತ್ತು ವಿವಿಧ ಹಂತಗಳಲ್ಲಿ ನಿಗದಿತ ಪರಿಶೀಲನಾ ಸಭೆಗಳನ್ನು ನಡೆಸುವ ಮೂಲಕ ಮೇಲ್ವಿಚಾರಣಾ ಕಾರ್ಯವಿಧಾನವನ್ನು ಬಲಪಡಿಸಬೇಕು.*

- *ಮಹಾನಗರ ಪಾಲಿಕೆಗಳ ಕಾರ್ಯಕ್ಷಮತೆಯನ್ನು ನಿರ್ಣಯಿಸಲು ಸರ್ಕಾರವು ಅಳೆಯಬಹುದಾದ ಸೂಚ್ಯಂಕಗಳನ್ನು ಗುರುತಿಸಬೇಕು ಮತ್ತು ಯೋಜನೆಯ ಪ್ರಭಾವದ ಮೌಲ್ಯಮಾಪನವನ್ನು ನಡೆಸಬೇಕು.*

# ಅಧ್ಯಾಯ–I

## ಪರಿಚಯ

### 1.1 ಪರಿಚಯ

ಅಸ್ತಿತ್ವದಲ್ಲಿರುವ ಏಳು ಮಹಾನಗರ ಪಾಲಿಕೆಗಳಲ್ಲಿ (ಬಳ್ಳಾರಿ, ಬೆಳಗಾವಿ, ದಾವಣಗೆರೆ, ಹುಬ್ಬಳ್ಳಿ–ಧಾರವಾಡ, ಕಲ್ಬುರ್ಗಿ, ಮಂಗಳೂರು ಮತ್ತು ಮೈಸೂರು) ಮತ್ತು ಹೊಸದಾಗಿ ಮೇಲ್ದರ್ಜೆಗೇರಿದ[1] ಮೂರು ಮಹಾನಗರ ಪಾಲಿಕೆಗಳ (ಶಿವಮೊಗ್ಗ, ತುಮಕೂರು ಮತ್ತು ವಿಜಯಪುರ) ಮೂಲಸೌಕರ್ಯ ಮತ್ತು ನಾಗರಿಕ ಸೌಲಭ್ಯಗಳನ್ನು ಮೇಲ್ದರ್ಜೆಗೇರಿಸುವ ಉದ್ದೇಶದಿಂದ ₹ 1,000 ಕೋಟಿ ಅಂದಾಜು ವೆಚ್ಚದಲ್ಲಿ ಮಹಾನಗರ ಪಾಲಿಕೆಗಳಿಗೆ 'ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆ (ಹಂತ–III)[2] ಯನ್ನು' (ಇನ್ನು ಮುಂದೆ ಯೋಜನೆ ಎಂದು ಉಲ್ಲೇಖಿಸಲಾಗಿದೆ) ಘೋಷಿಸಲಾಗಿದೆ (ಜುಲೈ 2013).

ರಾಜ್ಯ ಸರ್ಕಾರವು ಯೋಜನೆಯನ್ನು ಅನುಷ್ಠಾನಗೊಳಿಸಲು ಮಾರ್ಗದರ್ಶಿ ಸೂತ್ರಗಳನ್ನು ಸೂಚಿಸಿತು (ಸೆಪ್ಟೆಂಬರ್ 2013) ಮತ್ತು ಈ 10 ಮಹಾನಗರ ಪಾಲಿಕೆಗಳಿಗೆ (ಮ.ಪಾ) ತಲಾ ₹ 100 ಕೋಟಿಗಳನ್ನು ನಿಗದಿಪಡಿಸಿತು. 2014–15 ನೇ ಸಾಲಿನಿಂದ ಪ್ರಾರಂಭವಾಗುವ ಮೂರು ಆರ್ಥಿಕ ವರ್ಷಗಳಲ್ಲಿ ಹಣವನ್ನು ಬಿಡುಗಡೆ ಮಾಡಬೇಕಿತ್ತು. ರಾಜ್ಯ ಸರ್ಕಾರವು ವಿವರವಾದ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದ್ದು (ಮೇ 2014), ಯೋಜನೆಗೆ ಸರ್ಕಾರದ ವತಿಯಿಂದ 50 ಪ್ರತಿಶತ ಅನುದಾನ ಹಂಚಿಕೆ ಮಾಡಿದರೆ ಉಳಿದ 50 ಪ್ರತಿಶತವನ್ನು ಕರ್ನಾಟಕ ನೀರು ಮತ್ತು ನೈರ್ಮಲ್ಯ ಪೂಲ್ಡ್ ಫಂಡ್ ಟ್ರಸ್ಟ್ (ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿ)[3] ಮೂಲಕ ಎರವಲು ಸಾಲ ಪಡೆಯುವ ಮುಖಾಂತರ ಯೋಜನೆಗೆ ಒದಗಿಸಲಾಗಿದೆ. ಸಾಲದ ಮೊತ್ತವನ್ನು ಆಯಾ ಮಹಾನಗರ ಪಾಲಿಕೆಗಳ ಭವಿಷ್ಯದ ರಾಜ್ಯ ಹಣಕಾಸು ಆಯೋಗದ (ಎಸ್.ಎಫ್.ಸಿ) ಅನುದಾನಕ್ಕೆ ಅನುಗುಣವಾಗಿ ಸರಿಹೊಂದಿಸಬೇಕಾಗಿತ್ತು.

ಯೋಜನೆಯಡಿಯಲ್ಲಿ ಸ್ವೀಕಾರಾರ್ಹವಾದ ವರ್ಗಾವಾರು ಕಾಮಗಾರಿಗಳು:

i) ರಸ್ತೆಗಳು, ರಸ್ತೆ ಬದಿಯ ಚರಂಡಿಗಳು, ಕಾಲುದಾರಿಗಳು, ಪಾದಚಾರಿ ಅಂಡರ್‌ಪಾಸ್/ಸುರಂಗಮಾರ್ಗಗಳು;

ii) ನೀರು ಸರಬರಾಜು ವಿತರಣಾ ಜಾಲದ ನವೀಕರಣ/ವರ್ಧನೆ, ಓವರ್‌ಹೆಡ್ ಟ್ಯಾಂಕ್‌ಗಳು, ನೀರಿನ ಜಲಾಶಯಗಳು ಮತ್ತು ಇತರ ರೀತಿಯ ನೀರು ಸರಬರಾಜು ಕಾಮಗಾರಿಗಳು;

iii)ಭೂಗತ ಒಳಚರಂಡಿ ವಿತರಣಾ ಜಾಲ / ಲ್ಯಾಟರಲ್ಸ್ ಕಾಮಗಾರಿಗಳು;

1 20 ಡಿಸೆಂಬರ್ 2013 ರಿಂದ ಜಾರಿಗೆ ಬರುವಂತೆ ಮಹಾನಗರ ಪಾಲಿಕೆಗಳಾಗಿ ಮೇಲ್ದರ್ಜೆಗೇರಿಸಲಾಗಿದೆ.

2 ನಗರೋತ್ಥಾನ (ಹಂತ–I) ಮತ್ತು ನಗರೋತ್ಥಾನ (ಹಂತ–II) ಯೋಜನೆಗಳನ್ನು ಏಳು ಮಹಾನಗರ ಪಾಲಿಕೆಗಳಲ್ಲಿ ಕ್ರಮವಾಗಿ 2008–09 ರಿಂದ 2009–10 ಮತ್ತು 2011–12 ರಿಂದ 2013–14 ರ ಅವಧಿಯಲ್ಲಿ ಜಾರಿಗೊಳಿಸಲಾಗಿದೆ.

3 ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿಯನ್ನು (ಸೆಪ್ಟೆಂಬರ್ 2003) ರಾಜ್ಯ ಸರ್ಕಾರವು ಭಾರತೀಯ ಟ್ರಸ್ಟ್ ಆಕ್ಟ್, 1882 ರ ಅಡಿಯಲ್ಲಿ ಸಂಪೂರ್ಣ ಸ್ವಾಮ್ಯದ ಟ್ರಸ್ಟ್ ಆಗಿ ಸ್ಥಾಪಿಸಿದೆ ಮತ್ತು ಇದನ್ನು ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ (ಕೆ.ಯು.ಐ.ಡಿ.ಎಫ್.ಸಿ) ನಿರ್ವಹಿಸುತ್ತದೆ. ಇದನ್ನು ಮುಖ್ಯವಾಗಿ ರಾಜ್ಯದಲ್ಲಿ ನಗರ ಮೂಲಸೌಕರ್ಯ ಅಭಿವೃದ್ಧಿಗೆ ಹಣಕಾಸಿನ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಉದ್ದೇಶಕ್ಕಾಗಿ ಸ್ಥಾಪಿಸಲಾಯಿತು.

iv) ಟ್ರಾಫಿಕ್ ನಿರ್ವಹಣಾ ಸುಧಾರಣೆ ಕಾರ್ಯಗಳಾದ ವೆಹಿಕಲ್ ಆಕ್ಚುಯೇಟೆಡ್ ಸಿಗ್ನಲ್ (ಸೋಲಾರ್/ಯುಪಿಎಸ್) ಕಣ್ಗಾವಲು ಜಾರಿ ಕ್ಯಾಮೆರಾಗಳೊಂದಿಗೆ ಸಂಯೋಜನೆ; ಮತ್ತು

v) ನೀರಿನ ಚರಂಡಿಗಳು, ಬೀದಿದೀಪಗಳು, ಬಹು ಹಂತದ ಪಾರ್ಕಿಂಗ್ ಸಂಕೀರ್ಣ, ಶಾಪಿಂಗ್ ಸಂಕೀರ್ಣ, ಇಂಧನ ಉಳಿತಾಯ ಕಾಮಗಾರಿಗಳು ಮತ್ತು ಇತರ ಮೂಲಸೌಕರ್ಯ ಕಾಮಗಾರಿಗಳು.

2008–12ರ ಅವಧಿಯಲ್ಲಿ ಏಳು ಮಹಾನಗರ ಪಾಲಿಕೆಗಳಿಗೆ (ನಾಗರೋತ್ಥಾನ ಹಂತ–1) ಮುಖ್ಯಮಂತ್ರಿಗಳ ವಿಶೇಷ ಅನುದಾನದಿಂದ ತಲಾ ₹ 100 ಕೋಟಿಗಳು ಬಿಡುಗಡೆಯಾದ ಬಗ್ಗೆ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಏಪ್ರಿಲ್‌ನಿಂದ ಜುಲೈ 2012 ರ ಅವಧಿಯಲ್ಲಿ ನಡೆಸಲಾಯಿತು ಮತ್ತು ಫಲಿತಾಂಶಗಳನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಸ್ಥಳೀಯ ಸಂಸ್ಥೆಗಳು) 31 ಮಾರ್ಚ್ 2012 ಕ್ಕೆ ಕೊನೆಗೊಂಡ ವರ್ಷದ (2013 ರ ವರದಿ ಸಂಖ್ಯೆ.6) ವರದಿಯ ಕಂಡಿಕೆ 4.2 ರಲ್ಲಿ ಸೇರಿಸಲಾಗಿದೆ.

ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯು ಆಗಸ್ಟ್ ಮತ್ತು ಸೆಪ್ಟೆಂಬರ್ 2015 ರಲ್ಲಿ ಈ ಕಾರ್ಯನಿರ್ವಹಣಾ ಲೆಕ್ಕಪರಿಶೋಧನ ವರದಿಯನ್ನು ಚರ್ಚಿಸಿದೆ. ಸಮಿತಿಯು ತನ್ನ 13ನೇ ವರದಿಯಲ್ಲಿ (ಜೂನ್ 2016), ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮವನ್ನು[4] ಕೈಗೊಳ್ಳಲು, ಕಾರಣರಾದ ಅಧಿಕಾರಿಗಳಿಂದ ಮೊತ್ತವನ್ನು ವಸೂಲಿ ಮಾಡಲು (ಕಂಡಿಕೆ 4.2.21.6 ಮತ್ತು 4.2.24) ಮತ್ತು ಮೂರನೇ ವ್ಯಕ್ತಿಯ ಸಲಹಾ ಸಂಸ್ಥೆಯನ್ನು ಆಯ್ಕೆ ಮಾಡಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳಲು (ಕಂಡಿಕೆ 4.2.22.1 ಮತ್ತು 4.2.22.2) ಶಿಫಾರಸು ಮಾಡಿದೆ. ಸಮಿತಿಯ ಶಿಫಾರಸುಗಳ ಸಂಕ್ಷಿಪ್ತ ಮತ್ತು ಸಾರಾಂಶದಲ್ಲಿ ಆಕ್ಷೇಪಣೆಗಳನ್ನು **ಅನುಬಂಧ 1.1** ರಲ್ಲಿ ವಿವರಿಸಲಾಗಿದೆ.

ರಾಜ್ಯ ಸರ್ಕಾರದಿಂದ (ಮಾರ್ಚ್ 2022) ಕ್ರಮ ತೆಗೆದುಕೊಂಡ ವರದಿಯನ್ನು ನಿರೀಕ್ಷಿಸಲಾಗಿದೆ.

### 1.2 ಸಂಘಟನಾ ರಚನೆ

ನಗರಾಭಿವೃದ್ಧಿ ಇಲಾಖೆ (ಯುಡಿಡಿ) ಯೋಜನೆಯ ಅನುಷ್ಠಾನಕ್ಕೆ ನೋಡಲ್ ಇಲಾಖೆಯಾಗಿತ್ತು. ಯುಡಿಡಿ ಅಡಿಯಲ್ಲಿ ಪೌರಾಡಳಿತ ನಿರ್ದೇಶನಾಲಯ (ಡಿಎಂಎ) ಯೋಜನಾ ನಿರ್ದೇಶಕರ (ಪಿಡಿ) ನೇತೃತ್ವದ ಜಿಲ್ಲಾ ನಗರಾಭಿವೃದ್ಧಿ ಕೋಶಗಳ (ಡಿಯುಡಿಸಿ) ಜಾಲದ ಮೂಲಕ ಯೋಜನೆಯ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡುತ್ತದೆ ಮತ್ತು ಅವರು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ (ಡಿಸಿ) ವರದಿ ಮಾಡುತ್ತಾರೆ. ಮಹಾನಗರ ಪಾಲಿಕೆಯ ಕಾರ್ಯನಿರ್ವಾಹಕ ಮುಖ್ಯಸ್ಥರು ಕಮಿಷನರ್ ಆಗಿದ್ದು, ಅವರಿಗೆ ಮುಖ್ಯ ಇಂಜಿನಿಯರ್ (ಸಿ.ಇ), ಸೂಪರಿಂಟೆಂಡಿಂಗ್ ಇಂಜಿನಿಯರ್ (ಎಸ್.ಇ), ಕಾರ್ಯನಿರ್ವಾಹಕ ಇಂಜಿನಿಯರ್‌ಗಳು (ಇ.ಇ) ಮತ್ತು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್‌ಗಳು (ಎಇಇ) ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವಲ್ಲಿ ಸಹಾಯ ಮಾಡುತ್ತಾರೆ. ಯೋಜನೆಯ ಅನುಷ್ಠಾನಕ್ಕಾಗಿ ಸಾಂಸ್ಥಿಕ ರಚನೆಯನ್ನು **ಚಿತ್ರಪಟ 1.1** ರಲ್ಲಿ ವಿವರಿಸಲಾಗಿದೆ.

[4] ಕಂಡಿಕೆ 4.2.8, 4.2.11, 4.2.12, 4.2.13, 4.2.14, 4.2.15, 4.2.17, 4.2.23, 4.2.27. 4.2.28 ಮತ್ತು 4.2.29

**ಚಿತ್ರಪಟ 1.1 ಯೋಜನೆಯ ಅನುಷ್ಠಾನಕ್ಕಾಗಿ ಸಂಘಟನಾ ರಚನೆ**




## 1.3 ಲೆಕ್ಕಪರಿಶೋಧನಾ ಉದ್ದೇಶಗಳು

ಈ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಉದ್ದೇಶಗಳು, ಕೆಳಗಿನ ಅಂಶಗಳ ಬಗ್ಗೆ ನಿರ್ಣಯಿಸುವುದು/ಪರಿಶೀಲಿಸುವುದು ಆಗಿತ್ತು.

i) ಯೋಜನೆಯಲ್ಲಿ ನಿಗದಿಪಡಿಸಿದಂತೆ ಯೋಜನೆಯನ್ನು ಕೈಗೊಳ್ಳಲಾಗಿದೆಯೇ ಮತ್ತು ಹಣಕಾಸಿನ ನಿರ್ವಹಣೆಯು ಸಮರ್ಥವಾಗಿದ್ದಿತೇ;

ii) ಕಾಮಗಾರಿಗಳನ್ನು ಮಿತಿವ್ಯಯಕವಾಗಿ, ಸಮರ್ಥವಾಗಿ ಮತ್ತು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲಾಗಿದೆಯೇ; ಮತ್ತು

iii) ಯೋಜನೆಯ ಅನುಷ್ಠಾನದ ಮೇಲ್ವಿಚಾರಣೆ ಪರಿಣಾಮಕಾರಿಯಾಗಿತ್ತೇ.

## 1.4 ಲೆಕ್ಕಪರಿಶೋಧನಾ ಮಾನದಂಡ

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಮೌಲ್ಯಮಾಪನದ ಮಾನದಂಡಗಳನ್ನು ಮುಖ್ಯವಾಗಿ ಈ ಕೆಳಗಿನಿಂದ ಪಡೆಯಲಾಗಿದೆ.

i) 12 ಮೇ 2014 ರ ಸರ್ಕಾರಿ ಆದೇಶದ ಪ್ರಕಾರ ನೀಡಲಾದ ಯೋಜನಾ ಮಾರ್ಗಸೂಚಿಗಳು;

ii) ಕರ್ನಾಟಕ ಮುನ್ಸಿಪಲ್ ಲೆಕ್ಕಪತ್ರ ನಿರ್ವಹಣೆ ಮತ್ತು ಬಜೆಟ್ ನಿಯಮಗಳು (ಕೆಎಂಎಬಿಆರ್), 2006;

iii) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯಿದೆ, 1999 ಮತ್ತು ನಿಯಮಗಳು, 2000; ಮತ್ತು

iv) ಕರ್ನಾಟಕ ಲೋಕೋಪಯೋಗಿ ಇಲಾಖೆ (ಕೆಪಿಡಬ್ಲ್ಯೂಡಿ) ಕೋಡ್, 2014.

## 1.5 ಲೆಕ್ಕಪರಿಶೋಧನಾ ವ್ಯಾಪ್ತಿ ಮತ್ತು ವಿಧಾನ

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಆಗಸ್ಟ್ 2021 ರಿಂದ ಜನವರಿ 2022 ರ ಅವಧಿಯಲ್ಲಿ ನಡೆಸಲಾಯಿತು ಮತ್ತು 2014–21 ರ ಅವಧಿಯ ಯೋಜನೆಯ ಅನುಷ್ಠಾನವನ್ನು ಒಳಗೊಂಡಿದೆ. ಇದು ಯುಡಿಡಿ, ಡಿಎಂಎ, ಕೆಡಬ್ಲ್ಯೂಎಸ್‌ಪಿಎಫ್‌ಟಿ, 10 ಮಹಾನಗರ ಪಾಲಿಕೆಗಳಲ್ಲಿ ನಾಲ್ಕು (ಶೇ. 40) ಮತ್ತು ಡಿಯುಡಿಸಿಗಳಲ್ಲಿ ದಾಖಲೆಗಳ ಪರೀಕ್ಷೆಯನ್ನು ಒಳಗೊಂಡಿತ್ತು. ಬಳ್ಳಾರಿ, ಮೈಸೂರು, ತುಮಕೂರು ಮತ್ತು

ವಿಜಯಪುರ (**ಪ್ರದರ್ಶಿಕೆ 1.1**) ಈ ನಾಲ್ಕು ಮಹಾನಗರ ಪಾಲಿಕೆಗಳನ್ನು ಮಾದರಿಯಾಗಿ ಆಯ್ಕೆ ಮಾಡಲಾಯಿತ್ತು.ಈ ಆಯ್ಕೆಗೆ ಪ್ರಾಬಬಿಲಿಟಿ ಪ್ರೋಪೋರ್ಶನಲ್ ಟು ಸೈಜ್ ವಿಥೌಟ್ ರಿಪ್ಲೇಸ್ಮೆಂಟ್ (ಪಿಪಿಎಸ್‌ಡಬ್ಲ್ಯೂಒಆರ್) ವಿಧಾನದ ಸಂಭವನೀಯತೆ ಪ್ರಮಾಣಾನುಗುಣವಾಗಿ ಅಳವಡಿಸಿಕೊಳ್ಳಲಾಗಿದೆ. ಈ ನಾಲ್ಕು ಮಹಾನಗರ ಪಾಲಿಕೆಗಳಲ್ಲಿ ಶೇಕಡಾ 23 ಪ್ಯಾಕೇಜ್‌ಗಳನ್ನು ಪರೀಕ್ಷಾ–ತನಿಖೆಗೆ ಒಳಪಡಿಸಲಾಗಿದೆ. ಈ ಲೆಕ್ಕತಪಾಸಣೆಯು ಒಟ್ಟು ₹ 244.43 ಕೋಟಿ ವೆಚ್ಚದಲ್ಲಿ ₹ 59.96 ಕೋಟಿ (ಶೇ.25)ಗಳನ್ನು ಒಳಗೊಂಡಿದೆ. ಮಹಾನಗರ ಪಾಲಿಕೆ–ವಾರು ವಿವರಗಳನ್ನು **ಅನುಬಂಧ 1.2** ರಲ್ಲಿ ನೀಡಲಾಗಿದೆ.

11 ಆಗಸ್ಟ್ 2021 ರಂದು ಸರ್ಕಾರದ ಕಾರ್ಯದರ್ಶಿ, ಯುಡಿಡಿ (ಎಂ&ಯುಡಿಎ[5]) ರೊಂದಿಗೆ ಪ್ರವೇಶ ಸಭೆಯನ್ನು ನಡೆಸಲಾಯಿತು, ಇದರಲ್ಲಿ ಆಡಿಟ್ ವಿಧಾನ, ವ್ಯಾಪ್ತಿ, ಉದ್ದೇಶಗಳು ಮತ್ತು ಮಾನದಂಡಗಳನ್ನು ಚರ್ಚಿಸಲಾಯಿತು. ಲೆಕ್ಕಪರಿಶೋಧನಾ ವಿಧಾನವು ದಾಖಲೆಗಳ ವಿಶ್ಲೇಷಣೆ, ಆಡಿಟ್ ಪ್ರಶ್ನೆಗಳಿಗೆ ಪ್ರತಿಕ್ರಿಯೆಗಳು, ಪುರಸಭೆಯ ಸಿಬ್ಬಂದಿಯೊಂದಿಗೆ ಜಂಟಿ ಭೌತಿಕ ಪರಿಶೀಲನೆಗಳು (ಜೆ.ಪಿ.ವಿ) ಮತ್ತು ಅಗತ್ಯವಿರುವಲ್ಲೆಲ್ಲಾ ಛಾಯಾಚಿತ್ರದ ಸಾಕ್ಷ್ಯವನ್ನು ಸಂಗ್ರಹಿಸುತ್ತದೆ. 8 ಏಪ್ರಿಲ್ 2022 ರಂದು ನಡೆದ ನಿರ್ಗಮನ ಸಭೆಯಲ್ಲಿ ಸರ್ಕಾರದ ಕಾರ್ಯದರ್ಶಿ, ಯುಡಿಡಿ (ಎಂ&ಯುಡಿಎ)ರೊಂದಿಗೆ ಕಾರ್ಯನಿರ್ವಹಣ ಲೆಕ್ಕಪರಿಶೋಧನೆಯ ಫಲಿತಾಂಶಗಳನ್ನು ಚರ್ಚಿಸಲಾಯಿತು. 28 ಏಪ್ರಿಲ್ 2022 ಮತ್ತು 6 ಮೇ 2022 ರಂದು ರಾಜ್ಯ ಸರ್ಕಾರದ ಉತ್ತರಗಳನ್ನು ವರದಿಯಲ್ಲಿ ಸೂಕ್ತವಾಗಿ ಅಳವಡಿಸಲಾಗಿದೆ.

**(ಪ್ರದರ್ಶಿಕೆ 1.1)**

**ಮಾದರಿ ಆಯ್ಕೆಯ ಭೌಗೋಳಿಕ ಪ್ರಸ್ತುತಿ (10 ಮ.ಪಾಗಳಲ್ಲಿ 4)**




[5] ಪುರಸಭೆಗಳು ಮತ್ತು ನಗರಾಭಿವೃದ್ಧಿ ಪ್ರಾಧಿಕಾರಗಳು.

## 1.6 ಕೃತಜ್ಞತೆ

ಯುಡಿಡಿ, ಡಿಎಂಎ, ಕೆಡಬ್ಲ್ಯೂ ಎಸ್ ಪಿ ಎಫ್.ಟಿ, ಮಹಾನಗರ ಪಾಲಿಕೆ ಮತ್ತು ಡಿಯುಡಿಸಿಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಕಾರ್ಯನಿರ್ವಹಣ ಲೆಕ್ಕಪರಿಶೋಧನೆಯನ್ನು ನಡೆಸುವಲ್ಲಿ ನೀಡಿದ ಸಹಕಾರ ಮತ್ತು ಸಹಾಯವನ್ನು ಆಡಿಟ್ ಸ್ಮರಿಸುತ್ತದೆ.

## 1.7 ಅಧ್ಯಾಯಗಳು

ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳನ್ನು ಮೂರು ಅಧ್ಯಾಯಗಳಾಗಿ ಆಯೋಜಿಸಲಾಗಿದೆ:

- ಯೋಜನೆ ಮತ್ತು ಹಣಕಾಸು ನಿರ್ವಹಣೆ
- ಒಪ್ಪಂದದ ನಿರ್ವಹಣೆ ಮತ್ತು ಕಾಮಗಾರಿಗಳ ಜಾರಿಗೊಳಿಸುವಿಕೆ
- ಮೇಲ್ವಿಚಾರಣೆ.

# ಅಧ್ಯಾಯ–II

## ಯೋಜನೆ ಮತ್ತು ಹಣಕಾಸು ನಿರ್ವಹಣೆ

### ಯೋಜನೆ

ಮಹಾನಗರ ಪಾಲಿಕೆಗಳು 2014–17ರ ಅವಧಿಯಲ್ಲಿ ಯೋಜನೆಯಡಿ ಕೈಗೊಳ್ಳಬೇಕಾದ ಕಾಮಗಾರಿಗಳ ವಿವರವಾದ ಏಕಕಾಲಿಕ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಬೇಕಾಗಿತ್ತು. ಆಯ್ಕೆ ಮಾಡಿದ ಕಾಮಗಾರಿಗಳು ನಗರ ಮೂಲಸೌಕರ್ಯದ ವಿವಿಧ ಘಟಕಗಳನ್ನು ಒಳಗೊಂಡಿರುವ ನಗರದ ಸಮಗ್ರ ಅಭಿವೃದ್ಧಿಗೆ ಸಹಾಯ ಮಾಡಬೇಕಿತ್ತು. ಹೀಗೆ ಸಿದ್ಧಪಡಿಸಿದ ಕ್ರಿಯಾ ಯೋಜನೆಗಳನ್ನು ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದ ಜಿಲ್ಲಾ ಮಟ್ಟದ ಸಮಿತಿಯ (ಡಿಎಲ್‌ಸಿ)[6] ಮುಂದೆ ಇಡಬೇಕಿತ್ತು. ನಗರದ ನಿರ್ದಿಷ್ಟ ಅವಶ್ಯಕತೆಗಳ ಆಧಾರದ ಮೇಲೆ ಯೋಜನೆಗಳನ್ನು ಪರಿಶೀಲಿಸಲು ಮತ್ತು ಅದನ್ನು ಪರಿಷ್ಕರಿಸಲು ಡಿಎಲ್‌ಸಿಗೆ ಅಧಿಕಾರ ನೀಡಲಾಗಿತ್ತು. ಡಿಎಲ್‌ಸಿಯ ಅನುಮೋದನೆಯ ನಂತರ, ಡಿಎಂಎ ಮೂಲಕ ಸರ್ಕಾರದ ಅನುಮೋದನೆಗಾಗಿ ಕ್ರಿಯಾ ಯೋಜನೆಗಳನ್ನು ಸಲ್ಲಿಸಲಾಯಿತು. ಯೋಜನೆಯ ಯೋಜನಾ ಪ್ರಕ್ರಿಯೆಯಲ್ಲಿ ಈ ಕೆಳಗಿನ ನ್ಯೂನತೆಗಳನ್ನು ಲೆಕ್ಕಪರಿಶೋಧನೆ ಗಮನಿಸಿತು:

### 2.1 ಸಮಗ್ರ ಯೋಜನೆ ಇಲ್ಲದಿರುವುದು

ಬಜೆಟ್‌ನಲ್ಲಿನ ಯೋಜನೆಯ ಘೋಷಣೆಗೆ (ಜುಲೈ 2013) ಅನುಸಾರವಾಗಿ, ರಾಜ್ಯ ಸರ್ಕಾರವು ಮೊದಲನೆಯ ಪಟ್ಟಿ ಅನುಷ್ಠಾನ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿತು (ಸೆಪ್ಟೆಂಬರ್ 2013) ಮತ್ತು ಈ 10 ಮ.ಪಾಗಳಿಗೆ ತಲಾ ₹ 100 ಕೋಟಿ ಮಂಜೂರು ಮಾಡಿತು. ಅದರಂತೆ, ಡಿಎಂಎ ಎಲ್ಲಾ ಡಿಸಿಗಳು ಮತ್ತು ಮ.ಪಾಗಳಿಗೆ ಯೋಜನೆಯ ಅನುಷ್ಠಾನಕ್ಕಾಗಿ ಏಕಕಾಲಿಕ ಕ್ರಿಯಾ ಯೋಜನೆಯನ್ನು ಸಲ್ಲಿಸಲು ಸೂಚನೆ ನೀಡಿತು (ಸೆಪ್ಟೆಂಬರ್ 2013). ಆದಾಗ್ಯೂ, ಈ ಸುತ್ತೋಲೆಯು ಕ್ರಿಯಾ ಯೋಜನೆಗಳನ್ನು ತಯಾರಿಸಲು ಯಾವುದೇ ಮಾನದಂಡಗಳನ್ನು ಹೊಂದಿರಲಿಲ್ಲ.

ತರುವಾಯ, ಯೋಜನೆ ಅನುಷ್ಠಾನಕ್ಕೆ ಸರ್ಕಾರವು (ಮೇ 2014) ವಿವರವಾದ ಸೂಚನೆಗಳನ್ನು ನೀಡಿತು. **ಚಿತ್ರಪಟ 2.1** ರಲ್ಲಿ ವರ್ಣಿಸಲಾದ ಮಾನದಂಡಗಳ ಆಧಾರದ ಮೇಲೆ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸುವ ಸೂಚನೆಗಳನ್ನು ಈ ಆದೇಶವು ಒಳಗೊಂಡಿದೆ:

[6] ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದ ಸಮಿತಿಯು ಸ್ಥಳೀಯ ಸಂಸದರು, ಶಾಸಕರು, ಮೇಯರ್, ಉಪಮೇಯರ್, ಮ.ಪಾ ಆಯುಕ್ತರು, ಸೂಪರಿಂಟೆಂಡಿಂಗ್ ಎಂಜಿನಿಯರ್ ಮತ್ತು ಯೋಜನಾ ನಿರ್ದೇಶಕ, ಡಿಯುಡಿಸಿ ಅವರನ್ನು ಒಳಗೊಂಡಿತ್ತು.

**ಚಿತ್ರಪಟ 2.1: ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲು ಬೇಕಾಗುವ ಪೂರ್ವಾಪೇಕ್ಷಿತಗಳು**




ಆಧಾರ: ಯೋಜನೆಯ ಮಾರ್ಗಸೂಚಿಗಳ ಕಂಡಿಕೆ 4

ನಾಲ್ಕು ಪರೀಕ್ಷಾ- ತನಿಖೆಗೆ ಒಳಪಟ್ಟ ಮ.ಪಾಗಳು ನವೆಂಬರ್ 2013 ರಿಂದ ಏಪ್ರಿಲ್ 2014 ರ ಅವಧಿಯಲ್ಲಿ ಅಂದರೆ ವಿವರವಾದ ಸೂಚನೆಗಳನ್ನು ನೀಡುವ ಮೊದಲು (**ಅನುಬಂಧ 2.1** ರಲ್ಲಿ ವಿವರಿಸಿದಂತೆ) ಡಿಎಂಎಗೆ ತಮ್ಮ ಏಕಕಾಲಿಕ ಕ್ರಿಯಾ ಯೋಜನೆಗಳನ್ನು ಸಲ್ಲಿಸಿರುವುದನ್ನು ಲೆಕ್ಕಪರಿಶೋಧನೆ ಗಮನಿಸಿದೆ (ಆಗಸ್ಟ್ ನಿಂದ ಡಿಸೆಂಬರ್ 2021). ಆದಾಗ್ಯೂ, ನೀಡಿದ ವಿವರವಾದ ಮಾರ್ಗಸೂಚಿಗಳಿಗೆ ಅನುಗುಣವಾಗಿ ಕ್ರಿಯಾ ಯೋಜನೆಗಳನ್ನು ಪರಿಷ್ಕರಿಸಲು ಸರ್ಕಾರ/ಡಿಎಂಎ ಯಾವುದೇ ಸೂಚನೆಗಳನ್ನು ಮ.ಪಾಗಳಿಗೆ ನೀಡಲಿಲ್ಲ.

ಹೀಗಾಗಿ, ನೀಡಲಾದ ಮಾರ್ಗಸೂಚಿಗಳಿಗೆ ಅನುಗುಣವಾಗಿ ಕ್ರಿಯಾ ಯೋಜನೆಗಳನ್ನು ಪರಿಷ್ಕರಿಸಲು ಮ.ಪಾಗಳಿಗೆ ಅವಕಾಶವನ್ನು ನೀಡಲಾಗಿಲ್ಲ. ಇದರ ಪರಿಣಾಮವಾಗಿ ಅವುಗಳ ತಯಾರಿಕೆಯಲ್ಲಿ ಈ ಕೆಳಗಿನ ನ್ಯೂನತೆಗಳಿವೆ:

i) ಪರೀಕ್ಷಾ- ತನಿಖೆಗೆ ಒಳಪಟ್ಟ ನಾಲ್ಕು ಮ.ಪಾಗಳಲ್ಲಿ ಯಾವುದೂ ನಗರದ ಸಿಡಿಪಿ/ಮಾಸ್ಟರ್ ಪ್ಲಾನ್ ಆಧರಿಸಿ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಿಲ್ಲ;

ii) ಕಾಮಗಾರಿಗಳಿಗೆ ಆದ್ಯತೆ ನೀಡಲು ಬಳಸಲಾದ ಯಾವುದೇ ದತ್ತಾಂಶ/ದಾಖಲೆಯನ್ನು ಮ.ಪಾಗಳು ಒದಗಿಸಿಲ್ಲ; ಮತ್ತು

iii) ಹಂತ-I ಮತ್ತು ಹಂತ-II ಗಳಲ್ಲಿ ಯಾವುದೇ ಪ್ರಭಾವದ ಮೌಲ್ಯಮಾಪನ ಅಥವಾ ಮೌಲ್ಯಮಾಪನ ಅಧ್ಯಯನವನ್ನು ನಡೆಸಲಾಗಿಲ್ಲ ಮತ್ತು ಹಿಂದಿನ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅನೇಕ ಆಡಿಟ್ ಆಕ್ಷೇಪಣೆಗಳಾದ, ಯೋಜನೆಯ ಕೊರತೆ, ಅಂದಾಜು ತಯಾರಿಕೆಯಲ್ಲಿನ ಕೊರತೆಗಳು, ಟೆಂಡರ್ ಮೌಲ್ಯಮಾಪನದಲ್ಲಿ ಪಾರದರ್ಶಕತೆಯ ಕೊರತೆ, ನಿಷ್ಪರಿಣಾಮಕಾರಿ ಒಪ್ಪಂದ ನಿರ್ವಹಣೆ,ಮೇಲ್ವಿಚಾರಣೆಯಲ್ಲಿ ಕೊರತೆ, ಮುಂತಾದವು ಮುಂದುವರೆದಿದೆ.

ಇವುಗಳ ಅನುಪಸ್ಥಿತಿಯಲ್ಲಿ, ಮ.ಪಾಗಳಲ್ಲಿ ಕಾಮಗಾರಿಗಳ ಯೋಜನೆ ಮತ್ತು ಆಯ್ಕೆಯು, ಹೆಚ್ಚಿನ ಪ್ರಮಾಣದಲ್ಲಿ, ಅಗತ್ಯ-ಆಧಾರಿತ ವಿಶ್ಲೇಷಣೆಗಿಂತ ಹೆಚ್ಚಾಗಿ ನಿಧಿಯ ಲಭ್ಯತೆಯ ಆಧಾರದ ಮೇಲೆ ನಡೆಸಲ್ಪಡುತ್ತದೆ. ವಿವರವಾದ ಮಾರ್ಗಸೂಚಿಗಳನ್ನು ನೀಡುವಲ್ಲಿ ವಿಳಂಬ ಮತ್ತು ನಿಗದಿತ

ಮಾನದಂಡಗಳನ್ನು ಅನುಸರಿಸದಿರುವುದು, ಮ.ಪಾಗಳು ತನ್ನ ಮೂಲಸೌಕರ್ಯ ಅಭಿವೃದ್ಧಿ ಅಗತ್ಯಗಳಿಗೆ ಆದ್ಯತೆಯ ಮತ್ತು ಸಮಗ್ರ ವಿಧಾನವನ್ನು ಅನುಸರಿಸುವ ಅವಕಾಶವನ್ನು ವಂಚಿತಗೊಳಿಸಿತು.

ಸೆಪ್ಟೆಂಬರ್ 2013 ರಲ್ಲಿ ಹೊರಡಿಸಲಾದ ಸುತ್ತೋಲೆ ಮತ್ತು ಮೇ 2014 ರಲ್ಲಿ ನೀಡಲಾದ ಮಾರ್ಗಸೂಚಿಗಳು ಒಂದೇ ರೀತಿಯ ಸೂಚನೆಗಳನ್ನು ಒಳಗೊಂಡಿರುವ ಕಾರಣ ಕ್ರಿಯಾ ಯೋಜನೆಗಳನ್ನು ಪರಿಷ್ಕರಿಸಲಾಗಿಲ್ಲ ಎಂದು ರಾಜ್ಯ ಸರ್ಕಾರವು ಉತ್ತರಿಸಿದೆ (ಏಪ್ರಿಲ್ 2022). ಉತ್ತರವನ್ನು ಒಪ್ಪಲಾಗದು ಏಕೆಂದರೆ ಸೆಪ್ಟೆಂಬರ್ 2013 ರಲ್ಲಿ ಹೊರಡಿಸಿದ ಸುತ್ತೋಲೆ ನಗರದ ಮಾಸ್ಟರ್ ಪ್ಲಾನ್‌ಗೆ ಬದ್ಧವಾಗಿರಲು ಅಥವಾ ಯೋಜನೆಯಡಿಯಲ್ಲಿ ಕೆಲಸಗಳ ಆಯ್ಕೆಗೆ ಆದ್ಯತೆ ನೀಡಲು ನಿರ್ದಿಷ್ಟ ಸೂಚನೆಗಳನ್ನು ಒಳಗೊಂಡಿರಲಿಲ್ಲ.

## 2.2 ಮೂಲ ಕ್ರಿಯಾ ಯೋಜನೆಗಳ ಪ್ರಕಾರ ಕಾಮಗಾರಿಗಳನ್ನು ಕಾರ್ಯಗತಗೊಳಿಸದಿರುವುದು

ಅನುಮೋದಿತ ಕ್ರಿಯಾ ಯೋಜನೆಯಲ್ಲಿ ನಂತರದ ಬದಲಾವಣೆಗಳು/ಪರಿಷ್ಕರಣೆಗಳಿಗೆ ಯಾವುದೇ ಅವಕಾಶವಿಲ್ಲ ಎಂದು ಯೋಜನಾ ಮಾರ್ಗಸೂಚಿಗಳು ಕಡ್ಡಾಯಗೊಳಿಸಿದೆ. ಒಂದು ವೇಳೆ, ಕೆಲವು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗದಿದ್ದರೆ ಅಂತಹ ಕಾಮಗಾರಿಗಳನ್ನು ಕೈಬಿಡಲಾಗಿದೆ ಎಂದು ಪರಿಗಣಿಸಲಾಗುತ್ತದೆ ಮತ್ತು ಉಳಿದ ಕಾಮಗಾರಿಗಳ ವೆಚ್ಚಕ್ಕೆ ಹಣವನ್ನು ನಿರ್ಬಂಧಿಸಲಾಗುತ್ತದೆ (ಕಂಡಿಕೆ 2.3).

ಎಲ್ಲಾ ಪರೀಕ್ಷಾ– ತನಿಖೆಗೆ ಒಳಪಟ್ಟ ಮ.ಪಾಗಳಲ್ಲಿ ಕ್ರಿಯಾ ಯೋಜನೆಗಳಿಗೆ ನಂತರದ ಪರಿಷ್ಕರಣೆಗಳು (ನಾಲ್ಕರಿಂದ ಐದು ಬಾರಿ) ಇರುವುದನ್ನು ಲೆಕ್ಕಪರಿಶೋಧನೆಯು (ಆಗಸ್ಟ್‌ನಿಂದ ಡಿಸೆಂಬರ್ 2021) ಗಮನಿಸಿದೆ. ಯೋಜನೆಯ ಮೂಲ ಕ್ರಿಯಾ ಯೋಜನೆಯಲ್ಲಿ ಒಳಗೊಂಡಿರುವ 735 ಕಾಮಗಾರಿಗಳ ಪೈಕಿ 141 ಕಾಮಗಾರಿಗಳನ್ನು (₹ 91.35 ಕೋಟಿ ವೆಚ್ಚದ) ಈ ಮ.ಪಾಗಳು ಕೈಗೆತ್ತಿಕೊಂಡಿಲ್ಲ (**ಅನುಬಂಧ 2.2**). ಉಳಿದ ಕಾಮಗಾರಿಗಳ ವೆಚ್ಚಕ್ಕೆ ಹಣವನ್ನು ನಿರ್ಬಂಧಿಸುವ ಬದಲು ಪರಿಷ್ಕೃತ ಕ್ರಿಯಾ ಯೋಜನೆಗಳಿಗೆ ಸರ್ಕಾರ ಅನುಮೋದನೆ ನೀಡಿದೆ.

ಯೋಜಿತ 735 ಕಾಮಗಾರಿಗಳ ಪೈಕಿ 141 ಕಾಮಗಾರಿಗಳನ್ನು (ಶೇ. 19) ಕಾರ್ಯಗತಗೊಳಿಸದಿರುವುದು, ಕ್ರಿಯಾ ಯೋಜನೆಗಳು ಅಗತ್ಯ ಆಧಾರಿತವಾಗಿಲ್ಲ ಮತ್ತು ಸರಿಯಾದ ಕಾರ್ಯತತ್ಪರತೆ ಇಲ್ಲದೆ ತಾತ್ಕಾಲಿಕ ಆಧಾರದ ರೀತಿಯಲ್ಲಿ ಸಿದ್ಧಪಡಿಸಲಾಗಿದೆ ಎಂದು ಸೂಚಿಸಿದೆ.

ರಾಜ್ಯ ಸರ್ಕಾರವು ತನ್ನ ಉತ್ತರದಲ್ಲಿ (ಏಪ್ರಿಲ್ 2022) ಡಿಎಲ್‌ಸಿಯ ನಿರ್ಧಾರದ ಪ್ರಕಾರ ತುರ್ತು ಸ್ವರೂಪದ ಕಾಮಗಾರಿಗಳಿಗೆ ಅವಕಾಶ ಕಲ್ಪಿಸಲು ಮತ್ತು ಮೂಲತಃ ಯೋಜಿತ ಕಾಮಗಾರಿಗಳಿಗೆ ಸ್ಥಳಗಳ ಅಲಭ್ಯತೆಯ ಕಾರಣದಿಂದಾಗಿ ಕ್ರಿಯಾ ಯೋಜನೆಗಳಿಗೆ ಪರಿಷ್ಕರಣೆ ಮಾಡಲಾಗಿದೆ ಎಂದು ಹೇಳಿದೆ. ನಗರದ ಆದ್ಯತೆಯ ಮೂಲಸೌಕರ್ಯ ಅಗತ್ಯತೆಗಳನ್ನು ಪರಿಗಣಿಸಿ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಬೇಕಾಗಿರುವುದರಿಂದ ಉತ್ತರವು ಸ್ವೀಕಾರಾರ್ಹವಲ್ಲ. ಇದಲ್ಲದೆ, ಸ್ಥಳದ ಲಭ್ಯತೆಯನ್ನು ಖಚಿತಪಡಿಸದ ಕಾಮಗಾರಿಗಳನ್ನು ಕ್ರಿಯಾ ಯೋಜನೆಯಲ್ಲಿ ಸೇರಿಸುವುದನ್ನು ಯೋಜನಾ ಮಾರ್ಗಸೂಚಿಗಳು ನಿಷೇಧಿಸಿವೆ.

## 2.3 ಜಿಲ್ಲಾ ಮಟ್ಟದ ಸಮಿತಿಗಳ ಅನುಮೋದನೆಯಿಲ್ಲದೆ ಕ್ರಿಯಾ ಯೋಜನೆಗಳ ಪರಿಷ್ಕರಣೆ.

ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದ ಡಿಎಲ್‌ಸಿಯಿಂದ ಮ.ಪಾಯ ಕ್ರಿಯಾ ಯೋಜನೆಯನ್ನು ಒಮ್ಮೆ ಅನುಮೋದಿಸಿದ ನಂತರ, ಮ.ಪಾ ಅದನ್ನು ಡಿಎಂಎಗೆ ಸಲ್ಲಿಸಬೇಕು ಎಂದು ಯೋಜನೆಯ ಮಾರ್ಗಸೂಚಿಗಳು ಷರತ್ತು ವಿಧಿಸಿವೆ. ಡಿಎಂಎ ಕ್ರಿಯಾ ಯೋಜನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಮತ್ತು ಅದರ ಶಿಫಾರಸುಗಳೊಂದಿಗೆ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸುತ್ತದೆ. ಅಂತಿಮವಾಗಿ, ಪರಿಶೀಲನೆಯ ನಂತರ ಸರ್ಕಾರವು ಯೋಜನೆಗೆ ಅನುಮೋದನೆ ನೀಡುತ್ತದೆ.

ಆಯಾ ಡಿಎಲ್‌ಸಿಗಳಿಂದ ಒಪ್ಪಿಗೆಯನ್ನು ಪಡೆಯದೆಯೇ ₹ 43.57 ಕೋಟಿ[7] ಮೊತ್ತವನ್ನು ಒಳಗೊಂಡಿರುವ ಪರಿಷ್ಕೃತ ಕ್ರಿಯಾ ಯೋಜನೆಗಳಿಗೆ ಸರ್ಕಾರವು ಅನುಮೋದನೆಯನ್ನು ನೀಡಿದೆ ಎಂದು ಎರಡು ಪರೀಕ್ಷಾ–ತನಿಖೆಗೆ ಒಳಪಟ್ಟ ಮ.ಪಾಗಳಲ್ಲಿ (ಬಳ್ಳಾರಿ ಮತ್ತು ಮೈಸೂರು) ಲೆಕ್ಕಪರಿಶೋಧನೆ ಗಮನಿಸಿದೆ (ಸೆಪ್ಟೆಂಬರ್‌ನಿಂದ ನವೆಂಬರ್ 2021). ಕ್ರಿಯಾ ಯೋಜನೆಗಳನ್ನು ಪರಿಷ್ಕರಿಸುವಾಗ ಡಿಎಲ್‌ಸಿಗಳನ್ನು ಒಳಗೊಳ್ಳದಿರುವುದು ಮಾರ್ಗಸೂಚಿಗಳಲ್ಲಿ ಸೂಚಿಸಲಾದ ಸಮುದಾಯ/ಭಾಗಿತ್ವ ಯೋಜನೆ ಪರಿಕಲ್ಪನೆಗೆ ವಿರುದ್ಧವಾಗಿದೆ.

ರಾಜ್ಯ ಸರ್ಕಾರವು ಉತ್ತರಿಸಿದ್ದು (ಏಪ್ರಿಲ್ 2022), ಸಂಬಂಧಿತ ಸರ್ಕಾರಿ ಆದೇಶದ (ಆಗಸ್ಟ್ 2017) ಆಧಾರದ ಮೇಲೆ ಬಳ್ಳಾರಿಯ ಕ್ರಿಯಾ ಯೋಜನೆಯನ್ನು ಪರಿಷ್ಕರಿಸಲಾಗಿದ್ದು ₹ 16.43 ಕೋಟಿಯನ್ನು ಅಟಲ್ ಮಿಷನ್ ಫಾರ್ ರಿಜುವೇನೇಶನ್ ಮತ್ತು ನಗರ ಪರಿವರ್ತನೆ (ಅಮೃತ್) ಯೋಜನೆಗೆ ಮ.ಪಾಗಳ ಕೊಡುಗೆಯಾಗಿ ಬಳಸಿಕೊಳ್ಳಲಾಗಿದೆ. ಮಾರ್ಗಸೂಚಿಗಳಲ್ಲಿ ಸೂಚಿಸಲಾದ ಸಮುದಾಯ ಯೋಜನಾ ಪರಿಕಲ್ಪನೆಯನ್ನು ಖಚಿತಪಡಿಸಿಕೊಳ್ಳಲು ಕ್ರಿಯಾ ಯೋಜನೆಯ ತಯಾರಿಕೆಯಲ್ಲಿ ಡಿಎಲ್‌ಸಿಯ ಪಾಲ್ಗೊಳ್ಳುವಿಕೆಯನ್ನು ಅನುಸರಿಸಬೇಕಾಗಿರುವುದರಿಂದ ಉತ್ತರವನ್ನು ಸ್ವೀಕರಿಸಲಾಗುವುದಿಲ್ಲ. ಮೈಸೂರಿನ ಪರಿಷ್ಕೃತ ಕ್ರಿಯಾ ಯೋಜನೆಯನ್ನು ಡಿಎಲ್‌ಸಿ ಅನುಮೋದಿಸಿದೆ ಎಂದು ಸಹ ಹೇಳಲಾಗಿದೆ. ಆದಾಗ್ಯೂ, ಉತ್ತರವನ್ನು ಬೆಂಬಲಿಸುವ ಯಾವುದೇ ದಾಖಲೆಯ ಸಾಕ್ಷ್ಯವನ್ನು ನೀಡಲಾಗಿಲ್ಲ.

## ಹಣಕಾಸು ನಿರ್ವಹಣೆ

ಯೋಜನೆಯ ಮಾರ್ಗಸೂಚಿಗಳ ಪ್ರಕಾರ, 2014–15 ನೇ ಸಾಲಿನಿಂದ ಪ್ರಾರಂಭವಾಗುವ ಮೂರು ಹಣಕಾಸು ವರ್ಷಗಳಲ್ಲಿ ಹಣವನ್ನು ಬಿಡುಗಡೆ ಮಾಡಬೇಕಾಗಿತ್ತು. ಈ ಯೋಜನೆಗೆ ಶೇಕಡ 50 ರಷ್ಟು ಅನುದಾನ ಮತ್ತು ಉಳಿದ ಶೇಕಡಾ 50 ರಷ್ಟು ಹಣವನ್ನು ಕರ್ನಾಟಕ ವಾಟರ್ ಅಂಡ್ ಸ್ಯಾನಿಟೇಶನ್ ಪೂಲ್ಡ್ ಫಂಡ್ ಟ್ರಸ್ಟ್ (ಕೆಡಬ್ಲ್ಯುಎಸ್‌ಪಿಎಫ್‌ಟಿ)ನಿಂದ ಎರವಲು ಸಾಲ ಪಡೆಯುವ ಮೂಲಕ ನೀಡಲಾಯಿತು. ಕರ್ನಾಟಕ ಸರ್ಕಾರವು ಅಸಲು ಮತ್ತು ಬಡ್ಡಿಯ ಸಕಾಲಿಕ ಪಾವತಿಗೆ ಬೇಷರತ್ತಾಗಿ ಮತ್ತು ಹಿಂತೆಗೆದುಕೊಳ್ಳಲಾಗದಂತೆ, ವಾರ್ಷಿಕ ಆಧಾರದ ಮೇಲೆ ಬಜೆಟ್ ಹಂಚಿಕೆಯನ್ನು ಮಾಡಲು ಬದ್ಧವಾಗಿದೆ. ಮ.ಪಾಗಳ ಭವಿಷ್ಯದ ಎಸ್‌ಎಫ್‌ಸಿ ವಿಕೇಂದ್ರೀಕರಣದಿಂದ ಇದನ್ನು ಪೂರೈಸಲಾಗುತ್ತದೆ.

ಸರ್ಕಾರ ಯುಡಿಡಿ ಮೂಲಕ ಸಂಬಂಧಿಸಿದ ಡಿಸಿಗಳಿಗೆ ಅನುದಾನ ಬಿಡುಗಡೆ ಮಾಡಿದೆ. ಮೊದಲ ವರ್ಷದ (2014–15) ಅನುದಾನವನ್ನು ಪಾವತಿದಾರರ ರಸೀದಿಯಲ್ಲಿ ತೆಗೆದುಕೊಳ್ಳಲಾಗಿದೆ ಮತ್ತು ನಂತರದ ವರ್ಷಗಳ (2015–16 ರಿಂದ) ಅನುದಾನವನ್ನು ಖಜಾನೆ ಮೂಲಕ ಬಿಡುಗಡೆ ಮಾಡಲಾಯಿತು. ಡಿಎಂಎ, ನೋಡಲ್ ಏಜೆನ್ಸಿಯಾಗಿದ್ದು, ಮ.ಪಾಗಳ ವೆಚ್ಚದ ಪ್ರಗತಿಯನ್ನು ಮೇಲ್ವಿಚಾರಣೆ ಮಾಡುವುದು ಮತ್ತು ಹೆಚ್ಚಿನ ಅನುದಾನ/ಸಾಲ ಬಿಡುಗಡೆಗಾಗಿ ಸರ್ಕಾರ/ಕೆಡಬ್ಲ್ಯುಎಸ್‌ಪಿಎಫ್‌ಟಿಗೆ ಪ್ರಸ್ತಾವನೆಗಳನ್ನು ಸಲ್ಲಿಸಬೇಕಾಗಿತ್ತು. ಕೆಡಬ್ಲ್ಯುಎಸ್‌ಪಿಎಫ್‌ಟಿ ಡಿಎಂಎಯಿಂದ ಪಡೆದ ಬೇಡಿಕೆಯ ಆಧಾರದ ಮೇಲೆ ಸಾಲದ ಕಂತುಗಳನ್ನು ಪಡೆದುಕೊಳ್ಳುವುದು ಮತ್ತು ಅದನ್ನು ಡಿಎಂಎ ಮುಖ್ಯ (ಸಾಲ) ಖಾತೆಗೆ ವರ್ಗಾಯಿಸಬೇಲಾಗಿತ್ತು. ಈ ಖಾತೆಯನ್ನು ವಿವಿಧ ಮ.ಪಾಗಳ ಹೆಸರಿನಲ್ಲಿ 10 ಉಪ ಖಾತೆಗಳಿಗೆ ಜೋಡಿಸಲಾಗಿದೆ ಮತ್ತು ಆಯಾ ಜಿಲ್ಲೆಗಳ ಡಿಸಿಗಳು ನಿರ್ವಹಿಸುತ್ತಾರೆ. ಉಪ–ಖಾತೆಗಳಲ್ಲಿ ಪಾವತಿ ವಿನಂತಿಗಳನ್ನು ಮಾಡಿದಾಗ, ಡಿಎಂಎ ಮುಖ್ಯ ಖಾತೆಯಿಂದ ಸ್ವೀಪ್–ಇನ್ ಮಾಡಲು ಈ ಉಪಖಾತೆಗಳು ಸೌಲಭ್ಯವನ್ನು ಹೊಂದಿದ್ದವು. ಉಪ–ಖಾತೆಗಳಿಂದ ಹಿಂಪಡೆಯಬೇಕಾದ ಗರಿಷ್ಠ ಮೊತ್ತವನ್ನು ಬ್ಯಾಂಕ್‌ಗಳಿಗೆ ತಿಳಿಸಲು ಡಿಎಂಎ ಜವಾಬ್ದಾರಿಯುತವಾಗಿತ್ತು (ಸಾಲ ಅಧಿಕಾರ).

[7] ಬಳ್ಳಾರಿ: ಸರ್ಕಾರದ ಆದೇಶ ದಿನಾಂಕ 18.08.2017– ₹ 16.43 ಕೋಟಿ.
ಮೈಸೂರು: ಸರ್ಕಾರದ ಆದೇಶ ದಿನಾಂಕ 06.04.2015 – ₹ 15 ಕೋಟಿ ಮತ್ತು ಸರ್ಕಾರದ ಆದೇಶ ದಿನಾಂಕ 13.08.2021 – ₹ 12.14 ಕೋಟಿ.

ಡಿಎಂಎ ಒದಗಿಸಿದ (ಜನವರಿ 2022) ಮಾಹಿತಿಯ ಪ್ರಕಾರ, ಲಭ್ಯವಿರುವ ₹ 931.63 ಕೋಟಿಗೆ ವಿರುದ್ಧವಾಗಿ ₹ 922.35 ಕೋಟಿ ವೆಚ್ಚ ಮಾಡಲಾಗಿದೆ (ಮಾರ್ಚ್ 2021). ಘಟಕವಾರು ವಿವರಗಳನ್ನು **ಕೋಷ್ಟಕ 2.1** ರಲ್ಲಿ ನೀಡಲಾಗಿದೆ:

**ಕೋಷ್ಟಕ 2.1: 31 ಮಾರ್ಚ್ 2021 ರಂತೆ ಯೋಜನೆಯಡಿಯಲ್ಲಿ ಹಣಕಾಸಿನ ಪ್ರಗತಿ**

**(₹ ಕೋಟಿಗಳಲ್ಲಿ)**

| ಕ್ರ.ಸಂ | ಮಹಾನಗರ ಪಾಲಿಕೆಗಳು | ಬಿಡುಗಡೆ | | | ವೆಚ್ಚ | | | ಶೇಕಡಾವಾರು |
|---|---|---|---|---|---|---|---|---|
| | | ಅನುದಾನ | ಸಾಲ | ಒಟ್ಟು | ಅನುದಾನ | ಸಾಲ | ಒಟ್ಟು | |
| 1. | ಬಳ್ಳಾರಿ | 40.45 | 35.85 | 76.30 | 40.45 | 35.58 | 76.03 | 99.65 |
| 2. | ಬೆಳಗಾವಿ | 50.00 | 42.96 | 92.96 | 50.00 | 41.32 | 91.32 | 98.24 |
| 3. | ದಾವಣಗೆರೆ | 50.00 | 49.77 | 99.77 | 50.00 | 49.56 | 99.56 | 99.79 |
| 4. | ಹುಬ್ಬಳ್ಳಿ-ಧಾರವಾಡ | 50.00 | 47.15 | 97.15 | 50.00 | 46.37 | 96.37 | 99.20 |
| 5. | ಕಲಬುರಗಿ | 49.50 | 43.50 | 93.00 | 49.50 | 43.50 | 93.00 | 100.00 |
| 6. | ಮಂಗಳೂರು | 50.00 | 42.40 | 92.40 | 50.00 | 40.73 | 90.73 | 98.19 |
| 7. | ಮೈಸೂರು | 48.68 | 34.47 | 83.15 | 48.68 | 34.12 | 82.80 | 99.58 |
| 8. | ಶಿವಮೊಗ್ಗ | 50.00 | 44.25 | 94.25 | 50.00 | 42.39 | 92.39 | 98.03 |
| 9. | ತುಮಕೂರು | 50.00 | 47.90 | 97.90 | 50.00 | 47.74 | 97.74 | 99.84 |
| 10. | ವಿಜಯಪುರ | 50.00 | 47.66 | 97.66 | 50.00 | 45.38 | 95.38 | 97.67 |
| | ಒಟ್ಟು | **488.63** | **435.91** | **924.54** | **488.63** | **426.69** | **915.32** | **99.00** |
| | ಆಡಳಿತಾತ್ಮಕ ವೆಚ್ಚಗಳು | 0.82 | 6.27 | 7.09 | 0.82 | 6.21 | 7.03 | 99.15 |
| | ಒಟ್ಟು ಮೊತ್ತ | **489.45** | **442.18** | **931.63** | **489.45** | **432.90** | **922.35** | **99.00** |

ಆಧಾರ: ಡಿಎಂಎ ಒದಗಿಸಿದ ಮಾಹಿತಿ.

**ಅ) <u>ಅನುದಾನ</u>**

### 2.4 ಅನುದಾನದ ಸ್ಥಿತಿ

ಕರ್ನಾಟಕ ಆಯವ್ಯಯ ಕೈಪಿಡಿಯಂತೆ, ಪ್ರತಿ ಇಲಾಖೆಯ ಮುಖ್ಯಸ್ಥರು ಪ್ರತಿ ಲೆಕ್ಕ ಖಾತೆಗೆ ಪ್ರತ್ಯೇಕವಾಗಿ ಬಜೆಟ್ ಅಂದಾಜುಗಳನ್ನು ಸಿದ್ಧಪಡಿಸಬೇಕು (ಕಂಡಿಕೆ 88). ಕೆಎಂಎಬಿಆರ್, 2006 ರ ಪ್ರಕಾರ, ಪ್ರತಿ ಮ.ಪಾ ಮುಂದಿನ ಹಣಕಾಸು ವರ್ಷಕ್ಕೆ ನಿರೀಕ್ಷಿತ ಸ್ವೀಕೃತಿಗಳು ಮತ್ತು ಪಾವತಿಗಳ ವಾರ್ಷಿಕ ಅಂದಾಜುಗಳನ್ನು ಒಳಗೊಂಡಿರುವ ವಾರ್ಷಿಕ ಬಜೆಟ್ ಅನ್ನು ಸಿದ್ಧಪಡಿಸಬೇಕು (ನಿಯಮಗಳು 131 ಮತ್ತು 132).

20:40:40 ಅನುಪಾತದಲ್ಲಿ ಮೂರು ವರ್ಷಗಳ ಅವಧಿಯಲ್ಲಿ (2014-15 ರಿಂದ 2016-17) ಹಣವನ್ನು (₹ 1,000 ಕೋಟಿ) ಬಿಡುಗಡೆ ಮಾಡಬೇಕೆಂದು ಯೋಜನೆಯ ಮಾರ್ಗಸೂಚಿಗಳು ನಿರ್ದಿಷ್ಟಪಡಿಸಿವೆ. ಆದಾಗ್ಯೂ, ಏಳು ವರ್ಷಗಳ ಅವಧಿಯಲ್ಲಿ (2014-15 ರಿಂದ 2020-21) ₹ 931.63 ಕೋಟಿ ಬಿಡುಗಡೆ ಮಾಡಿದ್ದರಿಂದ ಮಾರ್ಗಸೂಚಿಗಳು ಪಾಲನೆಯಾಗಲಿಲ್ಲ. ಇದು 2016-17 ರಿಂದ 2020-21 ರ ಅವಧಿಯಲ್ಲಿ ಪಡೆದ ಒಟ್ಟು ₹ 442.18 ಕೋಟಿ ಸಾಲಗಳನ್ನು ಒಳಗೊಂಡಿದೆ. ₹ 68.37 ಕೋಟಿ ಬಾಕಿಯನ್ನು ಇನ್ನೂ ಬಿಡುಗಡೆ ಮಾಡಬೇಕಿದೆ (ಮಾರ್ಚ್ 2021).

2015-16 ರಿಂದ 2019-20 ರ ಅವಧಿಯಲ್ಲಿ ಒಟ್ಟು ₹ 43.33 ಕೋಟಿ ಅನುದಾನವು ರದ್ದಾಗಿರುವುದರಿಂದ ಅನುದಾನ ಬಿಡುಗಡೆಯು ನಿಧಿಯ ಅಗತ್ಯಕ್ಕೆ ಅನುಗುಣವಾಗಿಲ್ಲ ಎಂದು ಪರಿಶೀಲನೆಯು ತೋರಿಸಿದೆ. ವಿವರಗಳನ್ನು **ಕೋಷ್ಟಕ 2.2** ರಲ್ಲಿ ನೀಡಲಾಗಿದೆ.

**ಕೋಷ್ಟಕ 2.2: 2020–21 ರವರೆಗಿನ ಯೋಜನಾ ನಿಧಿಯ ಬಿಡುಗಡೆಯನ್ನು ತೋರಿಸುವ ತಃಖ್ತೆ**

(₹ ಕೋಟಿಗಳಲ್ಲಿ)

| ವರ್ಷ | ಅನುದಾನ ಬಿಡುಗಡೆ | ರದ್ದಾದ ಅನುದಾನ | ನಿವ್ವಳ ಅನುದಾನ | ಸಾಲ | ಒಟ್ಟು ನಿಧಿಗಳು |
|---|---|---|---|---|---|
| 2014–15 | 33.50 | ನ | 33.50 | – | 33.50 |
| 2015–16 | 169.12 | 27.64 | 141.49 | – | 141.49 |
| 2016–17 | 124.92 | 1.59 | 123.34 | 100.60 | 223.94 |
| 2017–18 | 157.95 | 0.14 | 157.81 | 141.00 | 298.81 |
| 2018–19 | 37.10 | 8.58 | 28.52 | 98.77 | 127.29 |
| 2019–20 | 9.39 | 5.38 | 4.01 | 75.45 | 79.46 |
| 2020–21 | 0.79 | – | 0.79 | 26.36 | 27.15 |
| **ಒಟ್ಟು** | **532.78** | **43.33** | **489.45** | **442.18** | **931.63** |

ಆಧಾರ: ಡಿಎಂಎ ಒದಗಿಸಿದ ಮಾಹಿತಿ

ನ: 2014–15ನೇ ಸಾಲಿನ ಅನುದಾನವನ್ನು ಪಾವತಿದಾರರ ರಸೀದಿಯಲ್ಲಿ ಬಿಡುಗಡೆ ಮಾಡಿ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಿರುವುದರಿಂದ ಅನ್ವಯಿಸುವುದಿಲ್ಲ.

## 2.5 ವರ್ಗವಾರು ಮಿತಿಗಳನ್ನು ಅನುಸರಿಸದಿರುವುದು

ಯೋಜನೆಯ ಮಾರ್ಗಸೂಚಿಗಳ ಕಂಡಿಕೆ 5 ರ ಪ್ರಕಾರ, ಐದು ವರ್ಗಗಳ ಅಡಿಯಲ್ಲಿ ಕೆಲಸಗಳನ್ನು ಅದರಲ್ಲಿ ಉಲ್ಲೇಖಿಸಲಾದ ಮೇಲಿನ ಮತ್ತು ಕೆಳಗಿನ ಮಿತಿಗಳೊಂದಿಗೆ ತೆಗೆದುಕೊಳ್ಳಬೇಕು (**ಕೋಷ್ಟಕ 2.3**).

**ಕೋಷ್ಟಕ 2.3: ಯೋಜನೆಯಡಿಯಲ್ಲಿ ಸ್ವೀಕಾರಾರ್ಹವಾದ ಕಾಮಗಾರಿಗಳ ವರ್ಗಗಳು**

| ವರ್ಗ | ಕಾಮಗಾರಿಗಳ ವಿಧಗಳು | ಹಂಚಿಕೆಯ ಮೇಲಿನ/ಕಡಿಮೆ ಮಿತಿ |
|---|---|---|
| I | ರಸ್ತೆಗಳು, ರಸ್ತೆ ಬದಿಯ ಚರಂಡಿಗಳು, ಕಾಲುದಾರಿಗಳು, ಪಾದಚಾರಿ ಅಂಡರ್‌ಪಾಸ್/ಸುರಂಗಮಾರ್ಗಗಳು | ಗರಿಷ್ಠ ₹ 55 ಕೋಟಿ |
| II | ನೀರು ಸರಬರಾಜು ವಿತರಣಾ ಜಾಲದ ನವೀಕರಣ/ವರ್ಧನೆ, ಓವರ್‌ಹೆಡ್ ಟ್ಯಾಂಕ್‌ಗಳು (ಒ.ಎಚ್.ಟಿ), ನೆಲಮಟ್ಟದ ಶೇಖರಣಾ ಜಲಾಶಯ (ಜಿ.ಎಲ್.ಎಸ್.ಆರ್) ಮತ್ತು ಇತರ ರೀತಿಯ ನೀರು ಸರಬರಾಜು ಕಾಮಗಾರಿಗಳು | ಕನಿಷ್ಠ ₹ 15 ಕೋಟಿ |
| III | ಒಳಚರಂಡಿ (ಯು.ಜಿ.ಡಿ) ವಿತರಣಾ ಜಾಲ/ಲ್ಯಾಟರಲ್ಸ್ ಕಾಮಗಾರಿಗಳು ಮತ್ತು ಇತರ ಯು.ಜಿ.ಡಿ ಕಾಮಗಾರಿಗಳು | ಕನಿಷ್ಠ ₹ 15 ಕೋಟಿ |
| IV | ಟ್ರಾಫಿಕ್ ನಿರ್ವಹಣಾ ಸುಧಾರಣೆ ಕಾಮಗಾರಿಗಳಾದ ವೆಹಿಕಲ್ ಆಕ್ಚುಯೇಟೆಡ್ ಸಿಗ್ನಲ್ (ಸೋಲಾರ್/ಯುಪಿಎಸ್) ಕಣ್ಗಾವಲು ಜಾರಿ ಕ್ಯಾಮೆರಾಗಳೊಂದಿಗೆ ಸಂಯೋಜನೆ. | ಕನಿಷ್ಠ ₹ 5 ಕೋಟಿ |
| V | ಮಳೆ ನೀರು ಚರಂಡಿ (ಎಸ್.ಡಬ್ಲ್ಯೂ.ಡಿ), ಬೀದಿ ದೀಪಗಳು, ಬಹು ಹಂತದ ಪಾರ್ಕಿಂಗ್ ಸಂಕೀರ್ಣ, ಶಾಪಿಂಗ್ ಕಾಂಪ್ಲೆಕ್ಸ್, ಇಂಧನ ಉಳಿತಾಯ ಕಾಮಗಾರಿಗಳು ಮತ್ತು ಇತರ ಮೂಲಸೌಕರ್ಯ ಕೆಲಸಗಳು | ಗರಿಷ್ಠ ₹ 10 ಕೋಟಿ |

ಆಧಾರ: ಯೋಜನಾ ಮಾರ್ಗಸೂಚಿಗಳು

ಪರೀಕ್ಷಾ- ತನಿಖೆಗೆ ಒಳಪಟ್ಟ ನಾಲ್ಕು ಮ.ಪಾಗಳು ಒದಗಿಸಿದ ಪ್ರಗತಿ ವರದಿಗಳ ಪ್ರಕಾರ, 2015-21ರ ಅವಧಿಯಲ್ಲಿ ಐದು ವಿಭಾಗಗಳಲ್ಲಿ ಯಾವುದೇ ಮ.ಪಾಗಳ ಮೂರು ವಿಭಾಗದ (II, III ಮತ್ತು IV) ನಿಗದಿತ ಮಿತಿಗಳಿಗೆ ಬದ್ಧವಾಗಿಲ್ಲ ಎಂದು ಲೆಕ್ಕಪರಿಶೋಧನೆ ಗಮನಿಸಿದೆ (ಆಗಸ್ಟ್‌ನಿಂದ ಡಿಸೆಂಬರ್ 2021) ವಿವರಗಳನ್ನು **ಚಿತ್ರಪಟ 2.2** ರಲ್ಲಿ ನೀಡಲಾಗಿದೆ.

**ಚಿತ್ರಪಟ 2.2: 2015-21ರಲ್ಲಿ ನಿಗದಿತ ಮಿತಿಗಳ ವಿರುದ್ಧ ವಿವಿಧ ವರ್ಗಗಳ ಅಡಿಯಲ್ಲಿ ಮಾಡಿದ ವೆಚ್ಚ**




ಆಧಾರ: ಪರೀಕ್ಷಾ-ತನಿಖೆಗೆ ಒಳಪಟ್ಟ ಮ.ಪಾಗಳ ಪ್ರಗತಿ ವರದಿಗಳು

ಮೇಲೆ ಗಮನಿಸಿದಂತೆ, ನಾಲ್ಕು ಪರೀಕ್ಷಾ- ತನಿಖೆಗೆ ಒಳಪಟ್ಟ ಮ.ಪಾಗಳಲ್ಲಿ, ಸಂಚಾರ ನಿರ್ವಹಣೆ ಕಾರ್ಯಗಳನ್ನು ವಿಜಯಪುರ ಮ.ಪಾಯಲ್ಲಿ ಮಾತ್ರ ಕಾರ್ಯಗತಗೊಳಿಸಲಾಗಿದೆ. ನೀರು ಸರಬರಾಜು ಮತ್ತು ಯುಜಿಡಿ ಕಾಮಗಾರಿಗೆ ಸಂಬಂಧಿಸಿದಂತೆ ನಿಗದಿಪಡಿಸಿದ ಕನಿಷ್ಠ ₹ 15 ಕೋಟಿ ಅನುದಾನವನ್ನು ಪರೀಕ್ಷೆಗೆ ಒಳಪಡಿಸಿದ ಯಾವುದೇ ಮ.ಪಾಗಳಲ್ಲಿ ಸಾಧಿಸಲಾಗಿಲ್ಲ. ಮ.ಪಾ, ಬಳ್ಳಾರಿ ಮತ್ತು ಮ.ಪಾ, ತುಮಕೂರು ಯಾವುದೇ ಯುಜಿಡಿ ಕಾಮಗಾರಿಗಳನ್ನು ನಡೆಸಿಲ್ಲ, ಮ.ಪಾ, ವಿಜಯಪುರ ಯೋಜನೆಯಡಿ ಯಾವುದೇ ನೀರು ಸರಬರಾಜು ಕಾಮಗಾರಿಗಳನ್ನು ನಡೆಸಿಲ್ಲ. ಇದಲ್ಲದೆ, ತುಮಕೂರಿನ ಮ.ಪಾ, ಪ್ರವರ್ಗ-1 (ರಸ್ತೆ ಕಾಮಗಾರಿ) ಅಡಿಯಲ್ಲಿ ₹ 57.19 ಕೋಟಿ ವೆಚ್ಚ ಮಾಡಲಾಗಿದ್ದು, ಗರಿಷ್ಠ ಮಿತಿ ₹ 55 ಕೋಟಿಗೆ ವಿರುದ್ಧವಾಗಿ ₹ 2.19 ಕೋಟಿ ಹೆಚ್ಚುವರಿ ವೆಚ್ಚವಾಗಿದೆ. ಇವುಗಳು ಕಾಮಗಾರಿಗಳನ್ನು ಆಯ್ಕೆಮಾಡಲು ನಿಗದಿಪಡಿಸಿದ ಮಾನದಂಡಗಳನ್ನು ಉಲ್ಲಂಘಿಸಿರುವುದು ಮಾತ್ರವಲ್ಲದೆ ನೀರು ಸರಬರಾಜು, ಯುಜಿಡಿ ಮತ್ತು ಟ್ರಾಫಿಕ್ ನಿರ್ವಹಣೆಯಂತಹ ಇತರ ಮೂಲಸೌಕರ್ಯ ಮತ್ತು ನಾಗರಿಕ ಸೌಲಭ್ಯಗಳನ್ನು ಮೇಲ್ದರ್ಜೆಗೇರಿಸುವ ಅಗತ್ಯವನ್ನು ನಿರ್ಲಕ್ಷಿಸುವುದಕ್ಕೆ ಕಾರಣವಾಯಿತು.

ರಾಜ್ಯ ಸರ್ಕಾರವು ನೀರು ಸರಬರಾಜು, ಯುಜಿಡಿ ಮತ್ತು ಟ್ರಾಫಿಕ್ ನಿರ್ವಹಣಾ ವಿಭಾಗಗಳ ಅನುಷ್ಠಾನದಲ್ಲಿನ ಕೊರತೆಯನ್ನು ಇತರ ಸರ್ಕಾರಿ ಯೋಜನೆಗಳ ಅಡಿಯಲ್ಲಿ ತೆಗೆದುಕೊಳ್ಳಲಾಗಿದೆ ಎಂದು ಉತ್ತರಿಸಿದೆ (ಏಪ್ರಿಲ್ 2022). ಮೇಲೆಹೇಳಿದ ವರ್ಗಗಳಡಿಯಲ್ಲಿ ಹಂಚಿಕೆಯಾದ ಅನುದಾನವನ್ನು ಯೋಜನೆಯ ಮಾರ್ಗಸೂಚಿಗಳ ವಿರುದ್ಧವಾಗಿ ಬೇರೆ ಯೋಜನೆಗಳ ಕಾಮಗಾರಿಗಳಿಗೆ ಉಪಯೋಗಿಸಿರುವುದು (ಕಂಡಿಕೆ 2.6 ರಲ್ಲಿ ವಿವರಿಸಿರುವಂತೆ) ಮತ್ತು ವರ್ಗಾವಾರು ಮಿತಿಗಳನ್ನು ಅನುಸರಿಸದಿರುವುದರಿಂದ, ಉತ್ತರವನ್ನು ಸ್ವೀಕರಿಸಲಾಗುವುದಿಲ್ಲ.

### 2.6 ಯೋಜನಾ ನಿಧಿಗಳ ತಿರುವು

ಯೋಜನೆಯ ಮಾರ್ಗಸೂಚಿಗಳ ಕಂಡಿಕೆ 4(ಜಿ)ಯಲ್ಲಿ, ಇತರ ಯೋಜನೆಗಳ ಅಡಿಯಲ್ಲಿ ತೆಗೆದುಕೊಳ್ಳಲಾದ ಕಾಮಗಾರಿಗಳನ್ನು ಹೊರತುಪಡಿಸಿ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಬೇಕು ಎಂದು ಸೂಚಿಸಲಾಗಿದೆ.

ಮಾರ್ಗಸೂಚಿಗಳಿಗೆ ವಿರುದ್ಧವಾಗಿ, ಮೂರು ಪರೀಕ್ಷಾ– ತನಿಖೆಗೆ ಒಳಪಟ್ಟ ಮ.ಪಾಗಳು (ಬಳ್ಳಾರಿ, ತುಮಕೂರು ಮತ್ತು ವಿಜಯಪುರ) ₹ 108.75 ಕೋಟಿಯನ್ನು (ಒಟ್ಟು ವೆಚ್ಚದ ₹ 269.28 ಕೋಟಿಯ ಶೇಕಡ 40ರಷ್ಟು) ಇತರ ಯೋಜನೆಗಳಿಗೆ (ಅಮೃತ್, ರಾಜೀವ್ ಗಾಂಧಿ ಆವಾಸ್ ಯೋಜನೆ ಮತ್ತು24*7 ನೀರು ಸರಬರಾಜು) ತಮ್ಮ ಕೊಡುಗೆ ಮೊತ್ತವನ್ನು ಪಾವತಿಸಲು ಅಥವಾ ಇತರ ಅನುದಾನಗಳ ಅಡಿಯಲ್ಲಿ ಕಾರ್ಯಗತಗೊಳ್ಳುತ್ತಿರುವ ಕಾಮಗಾರಿಗಳ ಕಡೆಗೆ ತಿರುಗಿಸಿದವು **ಅನುಬಂಧ 2.3** ರಲ್ಲಿ ವಿವರಿಸಿದಂತೆ.

ಇತರ ಯೋಜನೆಗಳು/ಅನುದಾನಗಳ ಅಡಿಯಲ್ಲಿ ತೆಗೆದುಕೊಳ್ಳಲಾದ ಕಾಮಗಾರಿಗಳಿಗೆ ಯೋಜನೆಯ ಹಣವನ್ನು ತಿರುಗಿಸುವುದು ಯೋಜನೆಯ ಮಾರ್ಗಸೂಚಿಗಳಿಗೆ ವಿರುದ್ಧವಾಗಿದೆ ಮತ್ತು ಮ.ಪಾಗಳು ಯೋಜನೆಯಿಂದ ಕ್ರೋಢೀಕರಿಸಬೇಕಾದ ಸಂಪೂರ್ಣ ಪ್ರಯೋಜನವನ್ನು ವಂಚಿತಗೊಳಿಸಿತು.

ರಾಜ್ಯ ಸರ್ಕಾರವು ತನ್ನ ಉತ್ತರದಲ್ಲಿ (ಏಪ್ರಿಲ್ 2022) ಲೆಕ್ಕಪರಿಶೋಧನೆಯು ಗಮನಸೆಳೆದ ನಿದರ್ಶನಗಳು ಹಣವನ್ನು ಬೇರೆಡೆಗೆ ತಿರುಗಿಸಲಾಗಿಲ್ಲ ಆದರೆ ಅಮೃತ್, ರೇ, ಇತ್ಯಾದಿ ಯೋಜನೆಗಳಿಗೆ ಮ.ಪಾಯ ಪಾಲನ್ನು ಒದಗಿಸಲು ಯೋಜನೆಯ ನಿಧಿಯ ಬಳಕೆಯಾಗಿದೆ ಎಂದು ಹೇಳಿದೆ. ಯೋಜನಾ ಮಾರ್ಗಸೂಚಿಗಳಂತೆ ಉತ್ತರವು ಸ್ವೀಕಾರಾರ್ಹವಲ್ಲ. ಇತರ ಯೋಜನೆಗಳ ಅಡಿಯಲ್ಲಿ ತೆಗೆದುಕೊಳ್ಳಲಾದ ಕಾಮಗಾರಿಗಳಿಗೆ ನಿಧಿಯ ಬಳಕೆ ನಿರ್ದಿಷ್ಟವಾಗಿ ನಿಷೇಧಿಸಲಾಗಿದೆ. ಭೂ ಪರಿಹಾರ ಪಾವತಿ, ಕಟ್ಟಡ ನಿರ್ಮಾಣ ಇತ್ಯಾದಿ ಅನರ್ಹ ಅಂಶಗಳಿಗೆ ಯೋಜನಾ ನಿಧಿಯ ಬಳಕೆಯ ಬಗ್ಗೆ ಉತ್ತರ ಮೌನವಾಗಿತ್ತು.

### 2.7 ನಗರೋತ್ಥಾನ (ಹಂತ–III) ಕಡೆಗೆ ಐತಿಹಾಸಿಕ ಮತ್ತು ಪಾರಂಪರಿಕ ಅನುದಾನದ ನಿಧಿಯ ತಿರುವು.

2014–15ರಲ್ಲಿ ಮೈಸೂರು ಮ.ಪಾಯಲ್ಲಿ ಪಾರಂಪರಿಕ ಕಟ್ಟಡಗಳ ಸುಧಾರಣೆ ಮತ್ತು ಇತರ ಕಾಮಗಾರಿಗಳಿಗೆ ₹ 100 ಕೋಟಿ ವಿಶೇಷ ಅನುದಾನವನ್ನು ಸರ್ಕಾರ ಘೋಷಿಸಿತ್ತು.

ದಾಖಲೆಗಳ ಪರಿಶೀಲನೆಯು (ಸೆಪ್ಟೆಂಬರ್ 2021 ರಿಂದ ಅಕ್ಟೋಬರ್ 2021) ಮೈಸೂರು ಡಿಸಿ, ನಗರೋತ್ಥಾನ (ಹಂತ–III) ಯೋಜನೆಯಡಿ ನಾಲ್ಕು ಕಾಮಗಾರಿಗಳಿಗೆ ₹ 1.51 ಕೋಟಿಯ ಐತಿಹಾಸಿಕ ಮತ್ತು ಪಾರಂಪರಿಕ ಅನುದಾನವನ್ನು ತಿರುಗಿಸಿದೆ (ಮಾರ್ಚ್ 2017) ಎಂದು ತೋರಿಸಿದೆ. ಅನುದಾನವನ್ನು ತಿರುಗಿಸಲು ಡಿಎಂಎ/ಯುಡಿಡಿಯಿಂದ ಯಾವುದೇ ಅನುಮೋದನೆ ಇರಲಿಲ್ಲ. ಯೋಜನೆಯಡಿಯಲ್ಲಿನ ಕಾಮಗಾರಿಗಳಿಗೆ ಮೊತ್ತವನ್ನು ಬಳಸಲಾಗಿದ್ದರೂ ₹ 1.51 ಕೋಟಿ ವೆಚ್ಚವು ಯೋಜನೆಯ ಪ್ರಗತಿ ವರದಿ/ಉಪಯುಕ್ತ ಪ್ರಮಾಣ ಪತ್ರದ ಭಾಗವಾಗಿಲ್ಲ ಎಂದು ಲೆಕ್ಕಪರಿಶೋಧನೆ ಗಮನಿಸಿದೆ. ಇದರಿಂದಾಗಿ ನಗರೋತ್ಥಾನ ಕಾಮಗಾರಿಗಳ ವೆಚ್ಚ ಆ ಮಟ್ಟಿಗೆ ಕಡಿಮೆಯಾಗಿದೆ.

ವರ್ಷಾಂತ್ಯದಲ್ಲಿ ಅನುದಾನದ ರದ್ದಾಗುದನ್ನು ತಪ್ಪಿಸಲು ಐತಿಹಾಸಿಕ ಮತ್ತು ಪಾರಂಪರಿಕ ಅನುದಾನವನ್ನು ಬೇರೆಡೆಗೆ ತಿರುಗಿಸಲಾಗಿದೆ ಎಂದು ರಾಜ್ಯ ಸರ್ಕಾರವು (ಏಪ್ರಿಲ್ 2022) ಹೇಳಿದೆ. ಅನುದಾನದ ರದ್ದಾಗುದನ್ನು ತಪ್ಪಿಸಲು ಹಣವನ್ನು ಡ್ರಾ ಮಾಡುವುದು ಕೋಡಲ್ ನಿಬಂಧನೆಗಳಿಗೆ ವಿರುದ್ಧವಾಗಿರುವುದರಿಂದ ಉತ್ತರವು ಸ್ವೀಕಾರಾರ್ಹವಲ್ಲ. ಅನುದಾನವನ್ನು ತಿರುಗಿಸಲು ಮತ್ತು

ನಗರೋತ್ಥಾನ ವೆಚ್ಚವನ್ನು ಕಡಿಮೆ ತೋರಿಸಲು ಡಿಎಂಎ/ಯುಡಿಡಿ ಯಿಂದ ಅನುಮೋದನೆ ಇಲ್ಲದಿರುವ ಬಗ್ಗೆ ಉತ್ತರವು ತಿಳಿಸಲಿಲ್ಲ.

## 2.8 ಬ್ಯಾಂಕ್ ಗ್ಯಾರಂಟಿಯನ್ನು ನವೀಕರಿಸದಿರುವುದು

ಕೆಎಂಎಬಿಆರ್, 2006 ರ ನಿಯಮ 115(2)ರಂತೆ, ಭದ್ರತಾ ಠೇವಣಿ (ಎಸ್‌ಡಿ) ಬದಲಿಗೆ ಗುತ್ತಿಗೆದಾರರಿಂದ ಬ್ಯಾಂಕ್ ಗ್ಯಾರಂಟಿಗಳನ್ನು (ಬಿಜಿ) ಒದಗಿಸಿದರೆ, ಲೆಕ್ಕಪತ್ರ ವಿಭಾಗವು ಬಿಜಿಗಳ ರಿಜಿಸ್ಟರ್‌ನಲ್ಲಿ ವಿವರಗಳನ್ನು ನಮೂದಿಸಬೇಕು. ಲೆಕ್ಕಪತ್ರ ವಿಭಾಗವು, ಬಿಜಿಗಳು ಅವಧಿ ಮುಗಿದಾಗ ಮತ್ತು ಅವುಗಳನ್ನು ನವೀಕರಿಸುವ ಮೂಲಕ ಖರೀದಿ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಅವಧಿಯಲ್ಲಿ ಜಾರಿಯಲ್ಲಿರಬೇಕು ಎಂದು ಖಚಿತಪಡಿಸಿಕೊಳ್ಳಬೇಕು.

ಟೆಂಡರ್ ದಾಖಲೆಗಳ ಪ್ರಕಾರ, ಗುತ್ತಿಗೆದಾರರು ಒಟ್ಟು ವೆಚ್ಚದ ಶೇಕಡಾ ಐದು ದರದಲ್ಲಿ ಎಸ್‌ಡಿ ಅನ್ನು ಒದಗಿಸಬೇಕಾಗಿತ್ತು ಮತ್ತು ದೋಷದ ಹೊಣೆಗಾರಿಕೆ ಅವಧಿಯಿಂದ (ಎರಡು ವರ್ಷಗಳು) 30 ದಿನಗಳವರೆಗೆ ಮಾನ್ಯವಾಗಿರಬೇಕು.

ಲೆಕ್ಕಪರಿಶೋಧನೆಯು (ಆಗಸ್ಟ್‌ನಿಂದ ಡಿಸೆಂಬರ್ 2021) ಪರೀಕ್ಷಾ– ತನಿಖೆಗೆ ಒಳಪಟ್ಟ ಯಾವುದೇ ಮ.ಪಾಗಳು ಬಿಜಿ ರಿಜಿಸ್ಟರ್ ಅನ್ನು ನಿರ್ವಹಿಸಿಲ್ಲ/ ನವೀಕರಿಸಿಲ್ಲವೆಂದು ಗಮನಿಸಿದೆ. 51 ಪರೀಕ್ಷಾ– ತನಿಖೆಗೆ ಒಳಪಟ್ಟ ಪ್ಯಾಕೇಜ್‌ಗಳಲ್ಲಿ (ಬಳ್ಳಾರಿಯಲ್ಲಿ ಕೆ.ಆರ್.ಐ.ಡಿ.ಎಲ್.ಗೆ ವಹಿಸಲಾದ ಒಂದು ಪ್ಯಾಕೇಜ್ ಹೊರತುಪಡಿಸಿ), ₹ 22.80 ಕೋಟಿ ವೆಚ್ಚದ 16 ಪ್ಯಾಕೇಜ್‌ಗಳಲ್ಲಿ (ಶೇ 31) ಎಸ್.ಡಿ/ಬಿಜಿ ವಿವರಗಳು ದಾಖಲೆಯಲ್ಲಿ ಲಭ್ಯವಿಲ್ಲ. 30 ಪ್ಯಾಕೇಜ್‌ಗಳಲ್ಲಿ (ಶೇ. 59), ಗುತ್ತಿಗೆದಾರರು ಒಟ್ಟು ₹ 2.08 ಕೋಟಿಯನ್ನು ಬಿಜಿ ರೂಪದಲ್ಲಿ ಎಸ್.ಡಿ ಒದಗಿಸಿದ್ದಾರಾದರೂ ಸಹಾ, ದೋಷದ ಹೊಣೆಗಾರಿಕೆ ಅವಧಿಗಳವರೆಗೆ ಇವುಗಳನ್ನು ನವೀಕರಿಸಲಾಗಿಲ್ಲ. ಒಂದು ಪ್ಯಾಕೇಜ್‌ನಲ್ಲಿ (ತುಮಕೂರಿನ ಪ್ಯಾಕೇಜ್ 26/2), ಗುತ್ತಿಗೆದಾರರು ₹ 3.52 ಲಕ್ಷಕ್ಕೆ ಸ್ಥಿರ ಠೇವಣಿ ರಸೀದಿ ರೂಪದಲ್ಲಿ ಸಲ್ಲಿಸಿದ್ದಾರೆ (ಏಪ್ರಿಲ್ 2019), ಅದು ಕಮಿಷನರ್, ಮ.ಪಾ ಹೆಸರಿನಲ್ಲಿ ಖಾತರಿ ಮಾಡಿಲ್ಲ, ಇದು ಟೆಂಡರ್ ದಾಖಲೆಗಳ ಕಲಂ 29 ಅನ್ನು ಉಲ್ಲಂಘಿಸಿದೆ.

ಬಿಜಿಗಳ ಅನುಪಸ್ಥಿತಿಯಲ್ಲಿ/ನವೀಕರಿಸದಿರುವಾಗ, ಒಪ್ಪಂದಗಳಿಗೆ ಸಂಬಂಧಿಸಿದಂತೆ ಸರ್ಕಾರಿ ಹಿತಾಸಕ್ತಿಗಳನ್ನು ಕಾಪಾಡಲು ಮ.ಪಾಗಳು ಸಾಕಷ್ಟು ಭದ್ರತೆಯನ್ನು ಹೊಂದಿರಲಿಲ್ಲ.

ರಾಜ್ಯ ಸರ್ಕಾರವು ಪಲಿತಾಂಶಗಳನ್ನು ಒಪ್ಪಿಕೊಂಡಿತು ಮತ್ತು ಭವಿಷ್ಯದಲ್ಲಿ ಬಿಜಿ ರೆಜಿಸ್ಟರ್‌ಗಳನ್ನು ನಿರ್ವಹಿಸಲಾಗುವುದು ಎಂದು ಹೇಳಿದೆ (ಏಪ್ರಿಲ್ 2022).

**ಆ) <u>ಸಾಲಗಳು</u>**

## 2.9 ಸಾಲ ಮತ್ತು ಮರುಪಾವತಿಯನ್ನು ಪಡೆಯುವಲ್ಲಿ ವ್ಯತ್ಯಾಸಗಳು

ಸಾಲವನ್ನು ಪಡೆಯಲು, ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿ ಎಸ್.ಬಿ.ಐ ಬ್ಯಾಂಕ್‌ನೊಂದಿಗೆ (ಏಪ್ರಿಲ್ 2017) ₹ 200 ಕೋಟಿಗೆ ಮತ್ತು ಐ.ಸಿ.ಐ.ಸಿ.ಐ ಬ್ಯಾಂಕ್‌ನೊಂದಿಗೆ (ಜನವರಿ 2018) ₹ 300 ಕೋಟಿಗೆ ಸಾಲ ಒಪ್ಪಂದಗಳನ್ನು ಮಾಡಿಕೊಂಡಿದೆ. ಸಾಲದ ಒಪ್ಪಂದಗಳು ಮತ್ತು ಸರ್ಕಾರದ ಸೂಚನೆಗಳ ಪ್ರಕಾರ, ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿ ಬ್ಯಾಂಕ್‌ಗಳಿಗೆ ಮೊತ್ತವನ್ನು ಮರುಪಾವತಿಸಬೇಕಾಗಿತ್ತು ಮತ್ತು ಸರ್ಕಾರಕ್ಕೆ (ಯುಡಿಡಿ) ಹಣದ ಬೇಡಿಕೆ ಸಲ್ಲಿಸಬೇಕಾಗಿತ್ತು. ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿ ಸಾಲದ ಮೊತ್ತದ ಬಾಕಿ ಮತ್ತು ಅನ್ವಯವಾಗುವ ಬಡ್ಡಿದರದ ಆಧಾರದ ಮೇಲೆ ಯುಡಿಡಿ ಯೊಂದಿಗೆ ಬೇಡಿಕೆಯನ್ನು ಇಡುತ್ತದೆ.

ಮಾರ್ಚ್ 2021 ರ ಹೊತ್ತಿಗೆ, ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿ ಒಟ್ಟು ₹ 368.70 ಕೋಟಿ[8] ಸಾಲವನ್ನು ಪಡೆದುಕೊಂಡಿದೆ. ಯೋಜನೆ (ಹಂತ–III) ಅಡಿಯಲ್ಲಿ ಪಡೆದ ₹ 368.70 ಕೋಟಿ ಸಾಲದ ಮೊತ್ತದ ವಿರುದ್ಧ, ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿ ₹ 176.42 ಕೋಟಿಯನ್ನು[9] ಬ್ಯಾಂಕ್‌ಗಳಿಗೆ ಮರುಪಾವತಿ (ಮಾರ್ಚ್ 2021) ಮಾಡಿದೆ.

ಸಾಲಗಳು ಮತ್ತು ಮರುಪಾವತಿಗಳನ್ನು ಪಡೆಯುವಲ್ಲಿನ ವ್ಯತ್ಯಾಸಗಳನ್ನು ಎತ್ತಿ ತೋರಿಸುವ ಲೆಕ್ಕಪರಿಶೋಧನಾ ಅಂಶಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

### *2.9.1 ಸಾಲ ಮರುಪಾವತಿ*

ಕರ್ನಾಟಕ ಆಯವ್ಯಯ ಕೈಪಿಡಿಯು ಆಯವ್ಯಯ ಅಂದಾಜುಗಳು ಸಾಧ್ಯವಾದಷ್ಟು ಹತ್ತಿರ ಮತ್ತು ನಿಖರವಾಗಿರಬೇಕು ಮತ್ತು ಪ್ರತಿ ಐಟಂಗೆ ಸಂಬಂಧಿಸಿದಂತೆ ಸೇರಿಸಬೇಕಾದ ನಿಬಂಧನೆಯು, ವರ್ಷದಲ್ಲಿ ವಾಸ್ತವವಾಗಿ ಪಾವತಿಸುವ ಅಥವಾ ಖರ್ಚು ಮಾಡುವ ನಿರೀಕ್ಷೆಯ ಆಧಾರದ ಮೇಲೆ ಇರಬೇಕೆಂದು ತಿಳಿಸುತ್ತದೆ. ಅಂದಾಜಿನಲ್ಲಿ ತಪ್ಪಿಸಬಹುದಾದ ಹೆಚ್ಚುವರಿ ನಿಬಂಧನೆಯು, ಮಂಜೂರಾದ ಅಂದಾಜಿಗಿಂತ ಹೆಚ್ಚಿನ ವೆಚ್ಚದಷ್ಟೇ ಹಣಕಾಸಿನ ಅಕ್ರಮವಾಗಿದೆ (ಕಂಡಿಕೆ 108). ಯೋಜನಾ ಮಾರ್ಗಸೂಚಿಗಳ ಪ್ರಕಾರ, ಸಾಲದ ಮೊತ್ತವನ್ನು ಭವಿಷ್ಯದ ಎಸ್. ಎಫ್.ಸಿ ಅನುದಾನಕ್ಕೆ ಸರಿಹೊಂದಿಸಬೇಕಾಗಿತ್ತು ಮತ್ತು ವೆಚ್ಚವನ್ನು (ಚಾರ್ಜ್ ಮಾಡಲಾಗಿದೆ) ಖಾತೆಯ 3604–00–191–0–51–240 (ಸಾಲದ ಸೇವೆ) ಅಡಿಯಲ್ಲಿ ಭರಿಸಲಾಗುವುದು. ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿ ಸಾಲದ ಮೊತ್ತವನ್ನು (ಬಡ್ಡಿ ಮತ್ತು ಅಸಲು) ಮರುಪಾವತಿಸಲು ಹಣವನ್ನು ಬಿಡುಗಡೆ ಮಾಡಲು ಸರ್ಕಾರವನ್ನು ವಿನಂತಿಸುತ್ತದೆ. ನಿಧಿ ಸ್ವೀಕೃತಿಯಾದ ಮೇಲೆ, ಅದು ಸಾಲದ ಸೇವೆಗಾಗಿ ಆಯಾ ಎಸ್ಕ್ರೊ ಖಾತೆಗಳಲ್ಲಿ ಮೊತ್ತವನ್ನು ಠೇವಣಿ ಮಾಡುತ್ತದೆ. ಸರ್ಕಾರದಿಂದ ಹಣ ಪಡೆಯುವಲ್ಲಿ ವಿಳಂಬವಾದರೆ, ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿ ಲಭ್ಯವಿರುವ ನಿಧಿಯಿಂದ ಸಾಲವನ್ನು ಮರುಪಾವತಿ ಮಾಡುತ್ತದೆ.

ದಾಖಲೆಗಳ ಪರಿಶೀಲನೆಯು (ಡಿಸೆಂಬರ್ 2021), ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿ ಯುಡಿಡಿ/ಡಿಎಂಎಗೆ ಸಾಲಗಳ ಸೇವೆಗಾಗಿ ಎಸ್. ಎಫ್.ಸಿ ಅನುದಾನದಿಂದ ಮಾಡಬೇಕಾದ ಬಜೆಟ್ ಅಂದಾಜಿನ ವಿವರಗಳನ್ನು ತಿಳಿಸಿದೆ ಎಂದು ತೋರಿಸಿದೆ. ಅದರ ನಂತರ, ಸ್ವೀಕರಿಸಿದ ಬೇಡಿಕೆಗಳ ಆಧಾರದ ಮೇಲೆ, ಯುಡಿಡಿ ಬ್ಯಾಂಕ್‌ಗಳಿಗೆ ಮರುಪಾವತಿಸಬಹುದಾದ ಅಸಲು ಮತ್ತು ಬಡ್ಡಿಗಳ ಕಡೆಗೆ ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿಗೆ ಹಣವನ್ನು ಬಿಡುಗಡೆ ಮಾಡಿತು.

2016–21ರ ಅವಧಿಯಲ್ಲಿ, ಯೋಜನೆಯ ಸಾಲ ಮರುಪಾವತಿಗೆ ಬಜೆಟ್ ಹಂಚಿಕೆ ₹ 239.05 ಕೋಟಿಗಳಾಗಿದ್ದು, ಇದರ ವಿರುದ್ಧ ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿ ಮೂಲಕ ಪಡೆದ ಬೇಡಿಕೆಗಳ ಆಧಾರದ ಮೇಲೆ ಯುಡಿಡಿ ₹ 176.23 ಕೋಟಿ ಬಿಡುಗಡೆ ಮಾಡಿದೆ. ₹ 62.82 ಕೋಟಿ ಹೆಚ್ಚುವರಿ ಬಜೆಟ್ ಒದಗಿಸಿರುವುದರಿಂದ ಬಜೆಟ್ ಅಂದಾಜುಗಳು ವಾಸ್ತವಿಕವಾಗಿಲ್ಲ. ವರ್ಷವಾರು ವಿಶ್ಲೇಷಣೆಯು 2016–17 ರಿಂದ 2019–20 ರ ಅವಧಿಯಲ್ಲಿ ಶೇಕಡಾ 38 ರಿಂದ 100 ರವರೆಗೆ ಹೆಚ್ಚುವರಿ ಅಂದಾಜುಗಳನ್ನು (ಬಜೆಟ್ ಮೇಲೆ ಉಳಿತಾಯ) ಸೂಚಿಸಿದೆ. ಆದರೆ 2020–21 ರ ಅವಧಿಯಲ್ಲಿ ವೆಚ್ಚವು ಮಂಜೂರಾದ ಅಂದಾಜಿಗಿಂತ ಶೇಕಡಾ 21 ರಷ್ಟು ಮೀರಿದೆ. ವಿವರಗಳನ್ನು **ಅನುಬಂಧ 2.4** ರಲ್ಲಿ ನೀಡಲಾಗಿದೆ.

---

8 ಎಸ್.ಬಿ.ಐ ಮೂಲಕ ₹ 200 ಕೋಟಿ ಮತ್ತು ಐಸಿಐಸಿಐ ಬ್ಯಾಂಕ್ ಮೂಲಕ ₹ 168.70 ಕೋಟಿ.

9 ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿ ಮೂಲಕ ಮರುಪಾವತಿಸಲಾದ ಸಾಲ: ಎಸ್.ಬಿ.ಐ – ₹ 66.56 ಕೋಟಿ (ಅಸಲು) ಮತ್ತು ₹49.59 ಕೋಟಿ (ಬಡ್ಡಿ); ಐಸಿಐಸಿಐ – ₹ 34.08 ಕೋಟಿ (ಅಸಲು) ಮತ್ತು ₹ 26.19 ಕೋಟಿ (ಬಡ್ಡಿ).

ಕಾರ್ಯಕ್ರಮದ ಅನುಷ್ಠಾನದಲ್ಲಿನ ವಿಳಂಬಗಳು ಮತ್ತು ವಾರ್ಷಿಕ ಮರುಹೊಂದಿಸುವ ಆಧಾರದ ಮೇಲೆ ಎಂ.ಸಿ.ಎಲ್.ಅರ್ ನಲ್ಲಿನ ಬದಲಾವಣೆಗಳು, ಮೊದಲ ಕಂತು ಪಡೆಯುವ ದಿನಾಂಕದಲ್ಲಿನ ಬದಲಾವಣೆ, ವೇಳಾಪಟ್ಟಿಯ ಪ್ರಕಾರ ಸಾಲದ ಮೊತ್ತವನ್ನು ಡ್ರಾ ಮಾಡದಿರುವುದು ಮತ್ತು ಇತರ ಅಂಶಗಳಿಗೆ ರಾಜ್ಯ ಸರ್ಕಾರವು ಈ ವ್ಯತ್ಯಾಸಗಳಿಗೆ ಕಾರಣವಾಗಿದೆ ಎಂದು ತಿಳಿಸಿತು (ಮೇ 2022) ಆದಾಗ್ಯೂ, ಕರ್ನಾಟಕ ಬಜೆಟ್ ಮ್ಯಾನ್ಯುಯಲ್‌ನ ನಿಬಂಧನೆಗಳಿಗೆ ವಿರುದ್ಧವಾದ ಬಜೆಟ್ ಅಂದಾಜಿನ ಮೇಲೆ ಉಳಿತಾಯ (ಶೇ 38 ರಿಂದ 100) ಮತ್ತು ಶೇಕಡಾ 21 ರಷ್ಟು ಹೆಚ್ಚಿನ ವೆಚ್ಚದ ನಿದರ್ಶನಗಳಿವೆ ಎಂಬುದು ನಿರ್ವಿವಾದ ಅಂಶವಾಗಿದೆ.

### *2.9.2 ಸಾಲದ ತಿರುವು ಮತ್ತು ತಪ್ಪಿಸಬಹುದಾದ ಬಡ್ಡಿ ಹೊಣೆಗಾರಿಕೆ*

ಸರ್ಕಾರದ ಸೂಚನೆಯ (ಆಗಸ್ಟ್ 2016) ಆಧಾರದ ಮೇಲೆ. ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿ. ಅತ್ಯಂತ ಸ್ಪರ್ಧಾತ್ಮಕ ದರದಲ್ಲಿ ಯೋಜನೆಗೆ ₹ 200 ಕೋಟಿಯನ್ನು ಪಡೆಯಲು ಟೆಂಡರ್ ಅಧಿಸೂಚನೆಯನ್ನು ಹೊರಡಿಸಿತು (ಅಕ್ಟೋಬರ್ 2016). ಸಾಲದ ಸೆಳೆತ ಬಾಕಿ ಉಳಿದಿದ್ದು, ನಗರೋತ್ಥಾನ ಹಂತ–II ರಿಂದ ಹಂತ–III ಕ್ಕೆ ₹ 100 ಕೋಟಿ ಸಾಲದ ಮೊತ್ತದ ತಾತ್ಕಾಲಿಕ ಬಳಕೆಗೆ ಸರ್ಕಾರವು (ಸೆಪ್ಟೆಂಬರ್ 2016) ಅನುಮೋದನೆ ನೀಡಿತು. ಹಂತ–III ಕ್ಕೆ ಸಾಲವನ್ನು ಪಡೆದ ನಂತರ ಹಂತ–II ಕ್ಕೆ ಮೊತ್ತವನ್ನು ಮರುಪಾವತಿಸಬೇಕು ಎಂಬುದು ಇದರ ಒಂದು ಷರತ್ತಾಗಿತ್ತು.

ಅದರಂತೆ, ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿ ಹಂತ–II ರಿಂದ ₹ 100 ಕೋಟಿ ಸಾಲವನ್ನು ಪಡೆದುಕೊಂಡು (26 ಸೆಪ್ಟೆಂಬರ್ 2016 ರಂದು ಸಿಂಡಿಕೇಟ್ ಬ್ಯಾಂಕ್‌ನಿಂದ ₹ 60.00 ಕೋಟಿ (ಶೇಕಡ 9.95 ರಲ್ಲಿ) ಮತ್ತು 23 ಸೆಪ್ಟೆಂಬರ್ 2016 ರಂದು ಬ್ಯಾಂಕ್ ಆಫ್ ಇಂಡಿಯಾದಿಂದ ₹ 40.00 ಕೋಟಿ (ಶೇಕಡ 9.95 ರಲ್ಲಿ))ಹಂತ–IIIಕ್ಕೆ ತಿರುಗಿಸಲಾಗಿದೆ.

ಎಸ್‌ಬಿಐ ಜೊತೆಗೆ ಶೇ.8.25 ಕ್ಕೆ ₹ 200 ಕೋಟಿಗೆ ಸಾಲ ಒಪ್ಪಂದಕ್ಕೆ (ಹಂತ–III) ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿ ಪ್ರವೇಶಿಸಿದೆ (ಏಪ್ರಿಲ್ 2017) ಎಂದು ಪರಿಶೀಲನೆಯು ತೋರಿಸಿತು. ಏಪ್ರಿಲ್ 2017 ರಲ್ಲಿ ಹಂತ–IIIಕಾಗಿ ಸಾಲದ ಲಭ್ಯತೆಯ ಹೊರತಾಗಿಯೂ, ಯುಡಿಡಿ/ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿ ತಕ್ಷಣವೇ ಹೆಚ್ಚಿನ ಬಡ್ಡಿದರದಲ್ಲಿ ಪಡೆದಿದ್ದ ₹ 100 ಕೋಟಿ ಮೊತ್ತವನ್ನು ಹಂತ–II ಗೆ ಮರುಪೂರಣ ಮಾಡಲಿಲ್ಲ. ಹಂತ–III ರಿಂದ ಹಂತ–II ಖಾತೆಗೆ (ಮಾರ್ಚ್ 2021 ರವರೆಗೆ) ₹ 33.20 ಕೋಟಿ ಮೊತ್ತವನ್ನು ಮಾತ್ರ (ಜುಲೈ 2017, ಏಪ್ರಿಲ್ 2018 ಮತ್ತು ಡಿಸೆಂಬರ್ 2019 ರಲ್ಲಿ) ಮರುಪಾವತಿ ಮಾಡಲಾಗಿದೆ.

ಹಂತ–III ರಲ್ಲಿ ಕಡಿಮೆ ಬಡ್ಡಿದರದಲ್ಲಿ ಹಣದ ಲಭ್ಯತೆಯ ಹೊರತಾಗಿಯೂ ವರ್ಗಾಯಿಸಲಾದ ₹ 100 ಕೋಟಿ ಮೊತ್ತವನ್ನು ಮರುಪಾವತಿಸಲು ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿ ವಿಫಲವಾದ ಕಾರಣ ₹ 5.09 ಕೋಟಿ (ಮಾರ್ಚ್ 2021 ರವರೆಗೆ) ತಪ್ಪಿಸಬಹುದಾದ ಬಡ್ಡಿ ಹೊರೆಗೆ ಕಾರಣವಾಯಿತು. ವಿವರಗಳನ್ನು **ಅನುಬಂಧ 2.5** ರಲ್ಲಿ ನೀಡಲಾಗಿದೆ.

2017–18 ರಿಂದ 2019–20 ರ ಅವಧಿಯಲ್ಲಿ ಹಂತ–IIಕ್ಕಾಗಿ ₹ 58.10 ಕೋಟಿ ಮೊತ್ತದ (ಆಕ್ಸಿಸ್ ಬ್ಯಾಂಕ್‌ನಿಂದ ₹ 45.30 ಕೋಟಿ ಮತ್ತು ಬ್ಯಾಂಕ್ ಆಫ್ ಇಂಡಿಯಾದಿಂದ ₹ 12.80 ಕೋಟಿ) ಸಾಲವನ್ನು ಪಡೆಯಲಾಗಿದೆ ಎಂದು ಲೆಕ್ಕಪರಿಶೋಧನೆ ಗಮನಿಸಿದೆ. ಹಂತ–III ರಿಂದ ₹ 66.80 ಕೋಟಿ ಮೊತ್ತವನ್ನು ಮರುಪಾವತಿಸಲು ಬಾಕಿ ಇರುವುದರಿಂದ ಮೇಲಿನ ಸಾಲಗಳನ್ನು ಸೆಳೆಯುವ ಅಗತ್ಯತೆ ಇರಲಿಲ್ಲ. ಹಂತ–III ರಿಂದ ಈ ಮೊತ್ತವನ್ನು ಪಡೆಯದಿರುವ ಸಮರ್ಥನೆ ಮತ್ತು ಮೇಲಿನ ಸಾಲವನ್ನು ಪಡೆದ ಬಡ್ಡಿಯ ದರಗಳನ್ನು ಲೆಕ್ಕತಪಾಸಣೆಗೆ ಒದಗಿಸಲಾಗಿಲ್ಲ. ಇದರ ಅನುಪಸ್ಥಿತಿಯಲ್ಲಿ, ಲೆಕ್ಕಪರಿಶೋಧನೆಯು ಬಡ್ಡಿಯ ಮತ್ತಷ್ಟು ನಷ್ಟವನ್ನು ಪ್ರಮಾಣೀಕರಿಸಲು ಸಾಧ್ಯವಾಗಲಿಲ್ಲ.

ಕಾಮಗಾರಿಗಳ ಪ್ರಗತಿಯ ಆಧಾರದ ಮೇಲೆ ನಗರೋತ್ಥಾನ ಹಂತ–III ಕ್ಕೆ ಮಂಜೂರಾದ ಬಾಕಿ ಸಾಲವನ್ನು ಪಡೆಯಲು ಮತ್ತು ನಗರೋತ್ಥಾನ ಹಂತ–IIಕ್ಕೆ ಮೊತ್ತವನ್ನು ಮರುಪೂರಣ ಮಾಡಲು ಡಿಎಂಎ (ನವೆಂಬರ್ 2021) ಸಂವಹಿಸಿತು ಎಂದು ರಾಜ್ಯ ಸರ್ಕಾರವು ಉತ್ತರಿಸಿದೆ (ಮೇ 2022). ಸಾಲದ ಮೊತ್ತವನ್ನು ಅಗತ್ಯಗಳ ಆಧಾರದ ಮೇಲೆ ಬಳಸಲಾಗಿರುವುದರಿಂದ ಮತ್ತು ಸಮಯಕ್ಕೆ ಮರುಪಾವತಿಯನ್ನು ಮಾಡಿರುವುದರಿಂದ ಯಾವುದೇ ತಪ್ಪಿಸಬಹುದಾದ ಬಡ್ಡಿ ಹೊರೆ ಇಲ್ಲ ಎಂದು ಹೇಳಲಾಗಿದೆ. ಸರ್ಕಾರದ ಆದೇಶವನ್ನು (ಸೆಪ್ಟೆಂಬರ್ 2016) ಉಲ್ಲಂಘಿಸಿ ತಿರುಗಿಸಲಾದ ಸಾಲದ ಮೊತ್ತವನ್ನು ಮರುಪೂರಣ ಮಾಡಲು ವಿಫಲವಾದ ಕಾರಣ ಉತ್ತರವು ಸ್ವೀಕಾರಾರ್ಹವಲ್ಲ.ಹಂತ–III ಕಿಂತ ಬಡ್ಡಿದರವು ಹಂತ–II ರಲ್ಲಿ ಕಡಿಮೆಯಿರುವುದರಿಂದ ಹೆಚ್ಚುವರಿ ಹೊಣೆಗಾರಿಕೆಯಲ್ಲಿ ಪರಿಣಮಿಸಿತು.

### *2.9.3 ಎಂ.ಸಿ.ಎಲ್.ಆರ್ ಮೇಲಿನ ಅನುಚಿತ ಹೆಚ್ಚಳವು ತಪ್ಪಿಸಬಹುದಾದ ಹೊರೆಗೆ ಕಾರಣವಾಗಿದೆ.*

₹ 200 ಕೋಟಿ ಸಾಲದ ಟೆಂಡರ್ ಅಧಿಸೂಚನೆಗೆ (ಅಕ್ಟೋಬರ್ 2016) ಅನುಸಾರವಾಗಿ, ಹನ್ನೆರಡು ಬಿಡ್‌ದಾರರು ಭಾಗವಹಿಸಿದ್ದರು ಮತ್ತು ಕಡಿಮೆ ದರವಾದ ಶೇಕಡಾ 8.98 (ಎಂ.ಸಿ.ಎಲ್.ಆರ್[10] + 0.08% ಮಾರ್ಜಿನ್) ಉಲ್ಲೇಖಿಸಿದ ಎಸ್.ಬಿ.ಐ, ವಾಣಿಜ್ಯ ಶಾಖೆ, ಬೆಂಗಳೂರು ಅನ್ನು ಆಯ್ಕೆಮಾಡಲಾಗಿದೆ.
ಎಸ್.ಬಿ.ಐ (4 ಮಾರ್ಚ್ 2017) ಪ್ರಸ್ತಾಪದ ಸ್ವೀಕಾರವನ್ನು ತಿಳಿಸುವಾಗ, ಬಡ್ಡಿಯ ದರವನ್ನು ಶೇಕಡಾ 8.25 (ಒಂದು ವರ್ಷದ ಎಂ.ಸಿ.ಎಲ್.ಆರ್ + ಶೇಕಡಾ 0.25 ಮಾರ್ಜಿನ್) ಎಂದು ಪರಿಷ್ಕರಿಸಿತು. ಕೆಡಬ್ಲ್ಯುಎಸ್‌ಪಿಎಫ್‌ಟಿ ಶೇಕಡಾ 8.25 ಪರಿಷ್ಕೃತ ದರದಲ್ಲಿ ಒಪ್ಪಂದಕ್ಕೆ (ಏಪ್ರಿಲ್ 2017) ಸಹಮತಿಸಿತು. ಎಂಸಿಎಲ್‌ಆರ್‌ನಲ್ಲಿ ಶೇಕಡಾ 8.90 ರಿಂದ (ನವೆಂಬರ್ 2016) ಶೇಕಡಾ 8.00 ಕ್ಕೆ (ಮಾರ್ಚ್ 2017) ಬದಲಾವಣೆಯಾಗಿ, ಪರಿಣಾಮಕಾರಿ ಬಡ್ಡಿದರದಲ್ಲಿನ ಕಡಿತಕ್ಕೆ ಕಾರಣವಾಗಿತು ಎಂಬುದನ್ನು ಪರಿಗಣಿಸದೆ, ಎಸ್‌ಬಿಐ ಮಾರ್ಜಿನ್ ಅನ್ನು ಶೇಕಡಾ 0.08 ರಿಂದ ಶೇಕಡಾ 0.25 ಕ್ಕೆ ಹೆಚ್ಚಿಸಿದ ಪ್ರಸ್ತಾಪವನ್ನು ಕೆಡಬ್ಲ್ಯುಎಸ್‌ಪಿಎಫ್‌ಟಿ ಒಪ್ಪಿಕೊಂಡಿದೆ. ಎಸ್.ಬಿ.ಐ ಶೇಕಡಾ 0.08 ಮಾರ್ಜಿನ್ ದರಕ್ಕೆ ಬದ್ಧವಾಗಿದೆ ಎಂದು ಖಚಿತಪಡಿಸಿಕೊಳ್ಳಲು ಕೆಡಬ್ಲ್ಯುಎಸ್‌ಪಿಎಫ್‌ಟಿ ವಿಫಲವಾದರಿಂದ ತಪ್ಪಿಸಬಹುದಾದ ₹ 2.72 ಕೋಟಿಯ[11] ಬಡ್ಡಿ ಹೊರೆಯಲ್ಲಿ ಪರಿಣಮಿಸಿತು.

ರಾಜ್ಯ ಸರ್ಕಾರವು, ಬಡ್ಡಿದರದಲ್ಲಿ ಶೇಕಡಾ 8.98 ರಿಂದ ಶೇಕಡಾ 8.25 ಕ್ಕೆ ಇಳಿಕೆಯಾಗಿದೆ ಮತ್ತು ಇದನ್ನು ಕೆಡಬ್ಲ್ಯುಎಸ್‌ಪಿಎಫ್‌ಟಿ ಒಪ್ಪಿಕೊಂಡಿದೆ ಎಂದು ಹೇಳಿದೆ (ಮೇ 2022). ಶೇಕಡಾ 0.08 ರಿಂದ ಶೇಕಡಾ 0.25 ಕ್ಕೆ ಮಾರ್ಜಿನ್‌ನಲ್ಲಿ ಅಸಮರ್ಪಕ ಹೆಚ್ಚಳದ ಕಾರಣಗಳ ಬಗ್ಗೆ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳಿಗೆ ಉತ್ತರ ತಿಳಿಸಲಿಲ್ಲ. ಇದಲ್ಲದೆ, ಎಸ್‌ಬಿಐ ತಿಳಿಸಿರುವ ಕಡಿತವು, ಎಂಸಿಎಲ್‌ಆರ್‌ನಲ್ಲಿ ಆದ ಬಡ್ಡಿ ದರದ ಬದಲಾವಣೆಯಿಂದ ಆಗಿದ್ದು (ಶೇಕಡಾ 8.90 ರಿಂದ ಶೇಕಡಾ 8.00 ಕ್ಕೆ), ಇದು ಬ್ಯಾಂಕಿನ ನೀತಿಯ ಪ್ರಕಾರವಾಗಿತ್ತು. ಆದರೆ ಮಾರ್ಜಿನ್ ದರವನ್ನು ನಿರಂಕುಶವಾಗಿ ಶೇಕಡಾ 0.08 ರಿಂದ ಶೇಕಡಾ 0.25 ಕ್ಕೆ ಹೆಚ್ಚಳ ಮಾಡಿದ್ದಕ್ಕೆ ಸಮರ್ಥನೆ ಇಲ್ಲ. ಒಂದು ವೇಳೆ, ಕೆಡಬ್ಲ್ಯುಎಸ್‌ಪಿಎಫ್‌ಟಿ ತನ್ನ ಉಲ್ಲೇಖಿಸಿದ ಮಾರ್ಜಿನ್ ದರ ಶೇಕಡಾ (+) 0.08 ಕ್ಕೆ ಬದ್ಧವಾಗಿರಲು ಎಸ್.ಬಿ.ಐ ಅನ್ನು ಒತ್ತಾಯಿಸಿದ್ದಲ್ಲಿ, ಬಡ್ಡಿಯ ದರವು ಶೇಕಡಾ 8.08 ಆಗಿರುತ್ತಿತ್ತು.

[10] ಎಂ.ಸಿ.ಎಲ್.ಆರ್–ಮಾರ್ಜಿನಲ್ ಕಾಸ್ಟ್ ಆಫ್ ಫಂಡ್ಸ್ ಆಧಾರಿತ ಲೆಂಡಿಂಗ್ ದರ

[11] ₹ 200 ಕೋಟಿ × ಶೇಕಡಾ 0.17 × 8 ವರ್ಷಗಳು = ₹ 2.72 ಕೋಟಿ.

### *2.9.4 ಹೆಚ್ಚಿನ ಬಡ್ಡಿದರದಲ್ಲಿ ಸಾಲದ ಕಂತುಗಳನ್ನು ಪಡೆದಿರುವುದು.*

ಕೆಡಬ್ಲ್ಯುಎಸ್.ಪಿ.ಎಫ್.ಟಿ ಎಸ್‌ಬಿಐ ಬ್ಯಾಂಕ್‌ನೊಂದಿಗೆ (ಏಪ್ರಿಲ್ 2017) ₹ 200 ಕೋಟಿಗೆ ಮತ್ತು ಐಸಿಐಸಿಐ ಬ್ಯಾಂಕ್‌ನೊಂದಿಗೆ (ಜನವರಿ 2018) ₹ 300 ಕೋಟಿಗೆ ಸಾಲ ಒಪ್ಪಂದಗಳನ್ನು ಮಾಡಿಕೊಂಡಿದೆ. ಮಾರ್ಚ್ 2021 ರ ಹೊತ್ತಿಗೆ, ಕೆ ಡಬ್ಲ್ಯು ಎಸ್ ಪಿ ಎಫ್ ಟಿ ಒಟ್ಟು ₹ 368.70 ಕೋಟಿ ಸಾಲವನ್ನು ಪಡೆದುಕೊಂಡಿದೆ (ಎಸ್‌ಬಿಐ ಮೂಲಕ ₹ 200 ಕೋಟಿ ಮತ್ತು ಐಸಿಐಸಿಐ ಬ್ಯಾಂಕ್ ಮೂಲಕ ₹ 168.70 ಕೋಟಿ).

ನಿಧಿಯ ಅಗತ್ಯತೆಗಳ ದಿನಾಂಕಗಳಲ್ಲಿ ಲಭ್ಯವಿರುವ ಬಡ್ಡಿದರಗಳ ಹೋಲಿಕೆಯು ಐಸಿಐಸಿಐ ಬ್ಯಾಂಕ್‌ನಿಂದ ಲಭ್ಯವಿರುವ ಕಡಿಮೆ ಬಡ್ಡಿದರದ (ಶೇ. 8.24) ಹೊರತಾಗಿಯೂ, ಕೆ.ಡಬ್ಲ್ಯುಎಸ್.ಪಿ.ಎಫ್.ಟಿ ಶೇ 8.40 ಹೆಚ್ಚಿನ ಬಡ್ಡಿದರದಲ್ಲಿ ಎಸ್.ಬಿ.ಐ ಮೂಲಕ ನಾಲ್ಕು ಕಂತುಗಳಲ್ಲಿ ₹ 85 ಕೋಟಿಯನ್ನು ಪಡೆದುಕೊಂಡಿದೆ (ಏಪ್ರಿಲ್ 2018 ರಿಂದ ಜನವರಿ 2019) ಎಂದು ತೋರಿಸಿದೆ. ವಿವರಗಳನ್ನು **ಅನುಬಂಧ 2.6** ರಲ್ಲಿ ನೀಡಲಾಗಿದೆ.

ಈ ₹ 85 ಕೋಟಿಯಲ್ಲಿ ಹೆಚ್ಚುವರಿ ಬಡ್ಡಿಯ (ಶೇ 0.16) ತಪ್ಪಿಸಬಹುದಾದ ಹೊಣೆಗಾರಿಕೆಯು ₹ 34.45 ಲಕ್ಷವಾಯಿತು (ಮಾರ್ಚ್ 2021). ಕಡಿಮೆ ದರದ ಲಭ್ಯತೆಯ ಹೊರತಾಗಿಯೂ ಹೆಚ್ಚಿನ ಬಡ್ಡಿದರದಲ್ಲಿ ₹ 85 ಕೋಟಿ ಮೊತ್ತದ ಸಾಲದ ಕಂತುಗಳನ್ನು ಪಡೆಯಲು ಕಾರಣ/ಸಮರ್ಥನೆಯನ್ನು ಲೆಕ್ಕಪರಿಶೋಧನೆಗೆ ಒದಗಿಸಲಾಗಿಲ್ಲ.

ರಾಜ್ಯ ಸರ್ಕಾರವು ಎಸ್‌ಬಿಐ ಮತ್ತು ಐಸಿಐಸಿಐನಿಂದ ಸಾಲ ಒಪ್ಪಂದಗಳು/ಮೊದಲ ವಿತರಣೆಯ ದಿನಾಂಕಗಳ ಪ್ರಕಾರ, ಸಾಲಗಳನ್ನು ಕ್ರಮವಾಗಿ 6 ಏಪ್ರಿಲ್ 2019 ಮತ್ತು 1 ಫೆಬ್ರವರಿ 2020 ರೊಳಗೆ ಪಡೆಯಬೇಕು ಎಂದು ಹೇಳಿದೆ (ಮೇ 2022). ಆದ್ದರಿಂದ, ಎಸ್‌ಬಿಐನಿಂದ ₹ 85 ಕೋಟಿಯ ಬಾಕಿ ಸಾಲದ ಮೊತ್ತವನ್ನು ತೆಗೆದುಕೊಳ್ಳಲಾಗಿದೆ ಮತ್ತು ಇದರಿಂದ ಯಾವುದೇ ಪ್ರತಿಕೂಲ ಆರ್ಥಿಕ ಪರಿಣಾಮವಾಗಿ ಗಿಲ್ಲ ಎಂದು ಹೇಳಿತು. ಕೆಳಗಿನ ಕಾರಣಗಳಿಗಾಗಿ ಉತ್ತರವು ಸ್ವೀಕಾರಾರ್ಹವಲ್ಲ:

i) ಎಸ್ ಬಿ ಐ ನಿಂದ ₹ 85 ಕೋಟಿಯ ಬಾಕಿ ಸಾಲವನ್ನು ತೀರಿಸುವ ಮೊದಲು, ಕೆ ಡಬ್ಲ್ಯೂ ಎಸ್ ಪಿ ಟಿಯು 2 ಫೆಬ್ರವರಿ 2018 ಮತ್ತು 24 ಏಪ್ರಿಲ್ 2018 ರಂದು ಐಸಿಐಸಿಐ ನಿಂದ ₹ 64 ಕೋಟಿ ಮೊತ್ತವನ್ನು ಸೆಳೆದಿದೆ;

ii) ಸೆಪ್ಟೆಂಬರ್ ಎಫ್ 2018 ರಲ್ಲಿ ಎಸ್‌ಬಿಐನಿಂದ ₹ 66.50 ಕೋಟಿ ಸೆಳೆಯುವ ಮೊದಲು, ಕೆಡಬ್ಲ್ಯುಎಸ್‌ಪಿಎಫ್‌ಟಿ ಐಸಿಐಸಿಐ ಬ್ಯಾಂಕ್‌ನಿಂದ ₹ 40 ಕೋಟಿ ಸೆಳೆಯುವ ಪ್ರಸ್ತಾಪಿಸಿತ್ತು. ಐಸಿಐಸಿಐ ಬ್ಯಾಂಕ್ ಈ ಮೊತ್ತವನ್ನು ಬಿಡುಗಡೆ ಮಾಡದ ಕಾರಣ, ಎಸ್‌ಬಿಐನಿಂದ ₹ 40 ಕೋಟಿ ಸೆಳೆಯಲಾಗಿದೆ;

iii) ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿ ಐಸಿಐಸಿಐ ಬ್ಯಾಂಕ್‌ನಿಂದ 1 ಫೆಬ್ರವರಿ 2020 ರ ನಂತರವೂ ಸಹ ₹ 40 ಕೋಟಿ ಸಾಲದ ಮೊತ್ತವನ್ನು ಪಡೆದುಕೊಂಡಿದೆ ಮತ್ತು ಮಾರ್ಚ 2021 ರ ಅಂತ್ಯಕ್ಕೆ ₹ 131.30 ಕೋಟಿ ಇನ್ನೂ ಸೆಳೆಯಲಾಗಿಲ್ಲ.

iv) ಐಸಿಐಸಿಐ (ಶೇ 8.24) ಗಿಂತ ಹೆಚ್ಚಿನ ದರದಲ್ಲಿ ಎಸ್‌ಬಿಐಗೆ (ಶೇ 8.40) ಬಡ್ಡಿಯನ್ನು ಪಾವತಿಸಿದ್ದರಿಂದ ಪ್ರತಿಕೂಲ ಆರ್ಥಿಕ ಪರಿಣಾಮವಾಗಿದೆ.

### *2.9.5 ಸಾಲ ಮರುಪಾವತಿಯಲ್ಲಿನ ವಿಳಂಬಗಳು (ಅಸಲು) ತಪ್ಪಿಸಬಹುದಾದ ಬಡ್ಡಿಯ ಪಾವತಿಗೆ ಕಾರಣವಾಗುತ್ತದೆ.*

ಎಸ್. ಬಿ. ಐ ಜೊತೆಗಿನ ಒಪ್ಪಂದದ ಪ್ರಕಾರ (ಷರತ್ತು 2.9), ಸಾಲವನ್ನು 24 ತ್ರೈಮಾಸಿಕ ಕಂತುಗಳಲ್ಲಿ ಮರುಪಾವತಿ ಮಾಡಬಹುದಾಗಿದೆ. ಮರುಪಾವತಿಯು ಮೊದಲ ವಿತರಣೆಯ ದಿನಾಂಕದಿಂದ (7ನೇ ಏಪ್ರಿಲ್ 2017) ಎರಡು ವರ್ಷಗಳ ಸಾಲ ತೀರುವಳಿ ಮುಂದೂಡಿಕೆ ಅವಧಿಯ ನಂತರ ಪ್ರಾರಂಭವಾಗುತ್ತದೆ ಮತ್ತು ಮೂರು ತಿಂಗಳ ನಂತರ ಅಂದರೆ 7 ಏಪ್ರಿಲ್ 2019, 7 ಜುಲೈ 2019, 7 ಅಕ್ಟೋಬರ್ 2019, 7 ಜನವರಿ 2020 ಮತ್ತು ಹೀಗೆ (ಪ್ರತಿ ಮೂರು ತಿಂಗಳಿಗೊಮ್ಮೆ) ಅನುಕ್ರಮವಾಗಿ ಕಂತುಗಳು ಪಾವತಿಸಬೇಕಾಗಿರುತ್ತದೆ.

ಅಂತೆಯೇ, ಐ.ಸಿ.ಐ.ಸಿ.ಐ ಬ್ಯಾಂಕ್‌ನೊಂದಿಗಿನ ಒಪ್ಪಂದದ ಷರತ್ತು 2.9 ಪ್ರಕಾರ ಸಾಲವನ್ನು 24 ತ್ರೈಮಾಸಿಕ ಕಂತುಗಳಲ್ಲಿ ಮರುಪಾವತಿಸಬೇಕು ಮತ್ತು ಪ್ರತಿ ಕಂತು ಒಟ್ಟು ಬಾಕಿ ಸಾಲದ ಮೊತ್ತದ ಶೇ 16.67 ಮೊತ್ತವನ್ನು ಹೊಂದಿದೆ. ಮೊದಲ ವಿತರಣೆಯ ದಿನಾಂಕದಿಂದ (2 ಫೆಬ್ರವರಿ 2018) ಎರಡು ವರ್ಷಗಳ ಸಾಲ ತೀರುವಳಿ ಅವಧಿಯ ನಂತರ ಮರುಪಾವತಿ ಪ್ರಾರಂಭವಾಗುತ್ತದೆ ಮತ್ತು ನಂತರದ ಪ್ರತಿ ತ್ರೈಮಾಸಿಕದ ಮೊದಲ ದಿನದಿಂದ ಅನುಕ್ರಮವಾಗಿ ಕಂತುಗಳು ಪಾವತಿಸಬೇಕಾಗಿರುತ್ತದೆ, ಅಂದರೆ 2 ಫೆಬ್ರವರಿ 2020, 1 ಏಪ್ರಿಲ್ 2020, 1 ಜುಲೈ 2020, 1 ಅಕ್ಟೋಬರ್ 2020 ಮತ್ತು ಹೀಗೆ (ಆ ನಂತರದ ಪ್ರತಿ ತ್ರೈಮಾಸಿಕದ ಮೊದಲ ದಿನ). ಆದಾಗ್ಯೂ,ಕೆ.ಡಬ್ಲ್ಯೂ. ಎಸ್. ಪಿ. ಎಫ್. ಟಿ ಸಾಲದ ಮೊತ್ತವನ್ನು ನಿಗದಿತ ದಿನಾಂಕಗಳಲ್ಲಿ ಮರುಪಾವತಿ ಮಾಡಿಲ್ಲ ಎಂದು ಲೆಕ್ಕಪರಿಶೋಧನೆ ಗಮನಿಸಿದೆ. ಎಸ್. ಬಿ. ಐ ಕಂತುಗಳನ್ನು ಮರುಪಾವತಿಸಲು 71 ರಿಂದ 84 ದಿನಗಳವರೆಗೆ (**ಅನುಬಂಧ 2.7**) ಮತ್ತು ಐ. ಸಿ. ಐ. ಸಿ. ಐ ಕಂತುಗಳನ್ನು ಮರುಪಾವತಿಸಲು 32 ರಿಂದ 92 ದಿನಗಳವರೆಗೆ (**ಅನುಬಂಧ 2.8**) ವಿಳಂಬವಾಗಿರುವುದನ್ನು ಲೆಕ್ಕಪರಿಶೋಧನೆ ಗಮನಿಸಿದೆ.

ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿಯು ಸಾಲದ ಕಂತುಗಳನ್ನು ನಿಗದಿತ ದಿನಾಂಕದಂದು ಮರುಪಾವತಿ ಮಾಡುವಲ್ಲಿ ವಿಫಲವಾದ ಕಾರಣ ತಪ್ಪಿಸಬಹುದಾಗಿದ ಒಟ್ಟು ₹ 1.81 ಕೋಟಿ[12] (ಮಾರ್ಚ್ 2021) ಬಡ್ಡಿಯನ್ನು ಪಾವತಿಸ ಬೇಕಾಯಿತು.

ರಾಜ್ಯ ಸರ್ಕಾರವು ಉತ್ತರದಲ್ಲಿ (ಮೇ 2022), ಎಸ್‌ಬಿಐ ಹಣಕಾಸಿನ ತ್ರೈಮಾಸಿಕಗಳ ಆಧಾರದ ಮೇಲೆ ಅಸಲು ಕಂತುಗಳ ಮರುಪಾವತಿ ವೇಳಾಪಟ್ಟಿಯನ್ನು ನಿಗದಿಪಡಿಸಿದೆ ಮತ್ತು ಮೊದಲ ಕಂತು 30 ಜೂನ್ 2019 ರಂದು ಬಾಕಿಯಿತು. ಐ.ಸಿ.ಐ.ಸಿ.ಐ ಬ್ಯಾಂಕ್‌ಗೆ ಸಂಬಂಧಿಸಿದಂತೆ, ಕ್ರೆಡಿಟ್ ಒಪ್ಪಂದ ಪತ್ರದ ಪ್ರಕಾರ ಸಾಲ ತೀರುವಳಿ ಮುಂದೂಡಿಕೆ ಅವಧಿಯ ಅಂತ್ಯದಿಂದ ಮುಂದಿನ ತ್ರೈಮಾಸಿಕದ ಮೊದಲ ದಿನದಂದು ಅಸಲು ಕಂತುಗಳನ್ನು ಮರುಪಾವತಿಸಲಾಗುವುದು. ಉತ್ತರದಲ್ಲಿ ಉಲ್ಲೇಖಿಸಲಾದ ಮರುಪಾವತಿ ವೇಳಾಪಟ್ಟಿಯು ಎಸ್.ಬಿ.ಐ ಮತ್ತು ಐ.ಸಿ.ಐ.ಸಿ.ಐ ಬ್ಯಾಂಕ್‌ಗಳೊಂದಿಗೆ ಮಾಡಿಕೊಂಡಿರುವ ಸಾಲ ಒಪ್ಪಂದಗಳಲ್ಲಿನ ಷರತ್ತುಗಳನ್ನು ಉಲ್ಲಂಘಿಸಿರುವುದರಿಂದ ಉತ್ತರವು ಸ್ವೀಕಾರಾರ್ಹವಲ್ಲ.

### *2.9.6 ನಿಧಿಗಳ ಹೆಚ್ಚಿನ ಬೇಡಿಕೆ ಮತ್ತು ತಪ್ಪಿಸಬಹುದಾದ ಬಡ್ಡಿ ಹೊರೆ.*

ಸಾಲದ ಒಪ್ಪಂದಗಳು ಮತ್ತು ಸಾಲವನ್ನು ಪಡೆಯಲು ಸರ್ಕಾರದ ಆದೇಶಗಳ ಪ್ರಕಾರ, ಕೆ. ಡಬ್ಲ್ಯೂ. ಎಸ್. ಪಿ. ಎಫ್. ಟಿ ಮೊತ್ತವನ್ನು ಬ್ಯಾಂಕುಗಳಿಗೆ ಮರುಪಾವತಿ ಮಾಡುತ್ತದೆ ಮತ್ತು ಸರ್ಕಾರದಿಂದ (ಯುಡಿಡಿ)

[12] ₹ 119.51 ಲಕ್ಷ (ಎಸ್‌ಬಿಐ) + ₹ 61.76 ಲಕ್ಷ (ಐಸಿಐಸಿಐ).

ಹಣಕ್ಕಾಗಿ ಬೇಡಿಕೆಯನ್ನು ಇಡುತ್ತದೆ. ಕೆ. ಡಬ್ಲ್ಯೂ. ಎಸ್. ಪಿ. ಎಫ್. ಟಿ ಸಾಲದ ಮೊತ್ತದ ಬಾಕಿ ಮತ್ತು ಅನ್ವಯವಾಗುವ ಬಡ್ಡಿದರದ ಆಧಾರದ ಮೇಲೆ ಯುಡಿಡಿಯೊಂದಿಗೆ ಬೇಡಿಕೆಯನ್ನು ಇಡುತ್ತದೆ.

ಬ್ಯಾಂಕ್‌ಗಳಿಗೆ ಕೆ. ಡಬ್ಲ್ಯೂ. ಎಸ್. ಪಿ. ಎಫ್. ಟಿ ಪಾವತಿಸಿದ ಮೊತ್ತ ಮತ್ತು ಸರ್ಕಾರದಿಂದ (ಯುಡಿಡಿ) ಬೇಡಿಕೆ ಇಟ್ಟಿರುವ ಮೊತ್ತಗಳ ಹೋಲಿಕೆಯು ಈ ಕೆಳಗಿನ ವ್ಯತ್ಯಾಸಗಳನ್ನು ತೋರಿಸಿದೆ:

i) 2018–19: 2019 ರ ಜನವರಿಯಿಂದ ಮಾರ್ಚ್ ತಿಂಗಳವರೆಗೆ, ಎಸ್‌ಬಿಐಗೆ ಪಾವತಿಸಿದ ₹ 4.12 ಕೋಟಿಗೆ ವಿರುದ್ಧವಾಗಿ, ಕೆ. ಡಬ್ಲ್ಯೂ. ಎಸ್. ಪಿ. ಎಫ್. ಟಿ ಯುಡಿಡಿಯಿಂದ ₹ 5.11 ಕೋಟಿ ಬೇಡಿಕೆ ಇಟ್ಟು, ಹಣ ಸ್ವೀಕರಿಸಿದೆ. ಅದೇ ಅವಧಿಗೆ ಕೆಡಬ್ಲ್ಯುಎಸ್‌ಪಿಎಫ್‌ಟಿ ಐಸಿಐಸಿಐ ಬ್ಯಾಂಕ್‌ಗೆ ₹ 1.57 ಕೋಟಿ ಪಾವತಿಸಿ, ಯುಡಿಡಿಯಿಂದ ₹ 3.61 ಕೋಟಿಗೆ ಬೇಡಿಕೆ ಇಟ್ಟಿದೆ. ಇದು, ₹ 3.03 ಕೋಟಿ ಹೆಚ್ಚುವರಿ ಬೇಡಿಕೆಯಲ್ಲಿ ಪರಿಣಮಿಸಿತು.

ii) 2019–20: ಜನವರಿಯಿಂದ ಮಾರ್ಚ್ 2020 ರವರೆಗೆ,ಕೆ. ಡಬ್ಲ್ಯೂ. ಎಸ್. ಪಿ. ಎಫ್. ಟಿ ಐಸಿಐಸಿಐ ಬ್ಯಾಂಕ್‌ಗೆ ₹ 9.36 ಕೋಟಿ ಪಾವತಿಸಿದ್ದರೂ, ಯುಡಿಡಿಯಿಂದ ಬೇಡಿಕೆ ಇಟ್ಟ ಅನುದಾನ ₹ 9.60 ಕೋಟಿ. ಅದೇ ರೀತಿ, ಜೂನ್ 2019 ರಲ್ಲಿ ಎಸ್‌ಬಿಐಗೆ ಪಾವತಿಸಿದ ಮೊತ್ತವು ₹ 1.52 ಕೋಟಿಯಾಗಿದ್ದರೆ, ಯುಡಿಡಿಯಿಂದ ಬೇಡಿಕೆಯ ಮೊತ್ತ ₹ 1.58 ಕೋಟಿ. ಇದರಿಂದಾಗಿ ₹ 0.29 ಕೋಟಿ ಹೆಚ್ಚುವರಿ ಬೇಡಿಕೆ ಇಟ್ಟಂತಾಗಿದೆ.

iii) 2020–21: ಕೆ. ಡಬ್ಲ್ಯೂ. ಎಸ್. ಪಿ. ಎಫ್. ಟಿ ಯುಡಿಡಿಯಿಂದ (ಜೂನ್ ಮತ್ತು ಜುಲೈ 2020) ₹ 2.34 ಕೋಟಿಗೆ ಬೇಡಿಕೆ ಇಟ್ಟು ಎಸ್.ಬಿ.ಐಗೆ ₹ 2.18 ಕೋಟಿಗಳನ್ನು ಪಾವತಿಸಿದೆ. ಇದು ₹ 0.16 ಕೋಟಿ ಹೆಚ್ಚುವರಿ ಬೇಡಿಕೆಯಲ್ಲಿ ಪರಿಣಮಿಸಿತು.

ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿಗೆ ಈ ಹೆಚ್ಚುವರಿ ಬೇಡಿಕೆಗಳು/ನಿಧಿಯ ಬಿಡುಗಡೆಗಳು ಮುಖ್ಯವಾಗಿ ಈ ಕೆಳಗಿನವುಗಳಿಗೆ ಕಾರಣವೆಂದು ಲೆಕ್ಕಪರಿಶೋಧನೆ ಗಮನಿಸಿದೆ:

ಅ) ಐ.ಸಿ.ಐ.ಸಿ.ಐ ಬ್ಯಾಂಕ್‌ನಿಂದ ₹ 64 ಕೋಟಿಯ ಬಾಕಿ ಸಾಲದ ವಿರುದ್ಧ, ಕೆ. ಡಬ್ಲ್ಯೂ. ಎಸ್. ಪಿ. ಎಫ್. ಟಿ ₹ 164 ಕೋಟಿಗಳ ಮೇಲೆ (ಜನವರಿಯಿಂದ ಮಾರ್ಚ್ 2019 ತಿಂಗಳವರೆಗೆ) ಬಡ್ಡಿಯನ್ನು ಕೇಳಿದೆ.

ಆ) ಅದೇ ರೀತಿ, ₹ 6.50 ಕೋಟಿಗಳ (ಎಸ್.ಬಿ.ಐ) ಮೇಲಿನ ಬಡ್ಡಿಯನ್ನು ಕೇಳುವ ಬದಲು, ಕೆ. ಡಬ್ಲ್ಯೂ. ಎಸ್. ಪಿ. ಎಫ್. ಟಿ ಯುಡಿಡಿಯೊಂದಿಗೆ ₹ 65 ಕೋಟಿಗೆ (ಜನವರಿಯಿಂದ ಮಾರ್ಚ್ 2019) ಬೇಡಿಕೆಯನ್ನು ಇಟ್ಟಿತು.

ಇ) ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿ 24ನೇ ಫೆಬ್ರವರಿ 2020 ರಂದು ಐ.ಸಿ.ಐ.ಸಿ.ಐ ಬ್ಯಾಂಕ್‌ನಿಂದ ₹ 20 ಕೋಟಿ ಸಾಲದ ಕಂತನ್ನು ಪಡೆದ ಕಾರಣದಿಂದಾಗಿ ಆರು ದಿನಗಳ ಬಡ್ಡಿಯನ್ನು ಪಾವತಿಸಬೇಕಾಗುತ್ತದೆ. ಆದರೂ, ಕೆ. ಡಬ್ಲ್ಯೂ. ಎಸ್. ಪಿ. ಎಫ್. ಟಿ ಯುಡಿಡಿಯೊಂದಿಗೆ 3ನೇ ಫೆಬ್ರವರಿ 2020 ರಿಂದ (27 ದಿನಗಳು) ಬೇಡಿಕೆಯನ್ನು ಇಟ್ಟಿತು.

ಈ) ಅಂತೆಯೇ,ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿ 5ನೇ ಫೆಬ್ರವರಿ 2020 ರಂದು ಐ.ಸಿ.ಐ.ಸಿ.ಐ ಬ್ಯಾಂಕ್‌ನಿಂದ ಶೇ 8.24 ರಲ್ಲಿ ₹ 5.00 ಕೋಟಿ ಸಾಲದ ಕಂತನ್ನು ಪಡೆದುಕೊಂಡಿತು . ಆದರೆ, 30ನೇ ಜನವರಿ 2020 ರಿಂದ ಶೇಕಡಾ 8.84 ದರದಲ್ಲಿ ಬಡ್ಡಿಗೆ ಯುಡಿಡಿಯೊಂದಿಗೆ ಬೇಡಿಕೆಯನ್ನು ಇಟ್ಟಿತು.

ಉ) ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿ ₹ 153.70 ಕೋಟಿಗೆ ಶೇಕಡಾ 8.24 ಬಡ್ಡಿದರದಲ್ಲಿ (ಮಾರ್ಚ್ 2020) ಐ.ಸಿ.ಐ.ಸಿ.ಐ ಬ್ಯಾಂಕ್‌ಗೆ ಬಡ್ಡಿಯನ್ನು ಪಾವಸಿತು. ಆದರೆ ಅದು ಶೇಕಡಾ 8.84 ಕ್ಕೆ ಬೇಡಿಕೆಯನ್ನು ಸಲ್ಲಿಸಿದೆ.

ಊ) ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿ ಎಸ್‌ಬಿಐಗೆ ₹ 174.98 ಕೋಟಿಗೆ ಅನ್ವಯಿಸುವ ಬಡ್ಡಿಯನ್ನು ಶೇಕಡಾ 8.00 ದರದಲ್ಲಿ ಪಾವತಿಸಿದೆ (ಜೂನ್ 2020) ಆದರೆ ಬೇಡಿಕೆಯನ್ನು ಶೇಕಡಾ 8.80 ಎಂದು ಲೆಕ್ಕಹಾಕಲಾಗಿದೆ. ಅಲ್ಲದೆ, ಜುಲೈ 2020 ರ ತಿಂಗಳಿಗೆ, ಕೆ. ಡಬ್ಲ್ಯೂ. ಎಸ್. ಪಿ. ಎಫ್. ಟಿ ಎಸ್‌ಬಿಐಗೆ ₹ 1.03 ಕೋಟಿ ಪಾವತಿಸಿದೆ, ಆದರೆ ಯುಡಿಡಿಯಿಂದ ₹ 1.08 ಕೋಟಿಗೆ ಬೇಡಿಕೆ ಇಟ್ಟಿದೆ.

ಎ) ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿ ಬೇಡಿಕೆಗಳ ಸತ್ಯಾಸತ್ಯತೆಯನ್ನು ಯುಡಿಡಿ ಪರಿಶೀಲಿಸಲಿಲ್ಲ ಮತ್ತು ಯಾವುದೇ ಹೊಂದಾಣಿಕೆ ಮಾಡದೆ ಹಣವನ್ನು ಬಿಡುಗಡೆ ಮಾಡಿತು.

ಮಾಸಿಕ–ವಾರು ವಿವರಗಳನ್ನು **ಅನುಬಂಧ 2.9** (ಎಸ್.ಬಿ.ಐ) ಮತ್ತು **ಅನುಬಂಧ 2.10** (ಐಸಿಐಸಿಐ ಬ್ಯಾಂಕ್) ರಲ್ಲಿ ನೀಡಲಾಗಿದೆ.

ಕೆಡಬ್ಲ್ಯುಎಸ್‌ಪಿಎಫ್‌ಟಿಯು ಇಲಾಖೆಯಿಂದ ಪಡೆದ ಹೆಚ್ಚುವರಿ ಮೊತ್ತವನ್ನು ಸಾಲದ ಪೂರ್ವಪಾವತಿ ಮಾಡಲು ಬಳಸದೇ ಇರುವುದನ್ನು ಲೆಕ್ಕಪರಿಶೋಧನೆ ಗಮನಿಸಿದೆ. ಇದರ ಪರಿಣಾಮವಾಗಿ, **ಅನುಬಂಧ 2.11** ರಲ್ಲಿ ವಿವರಿಸಿದಂತೆ ಬಡ್ಡಿ ಹೊರೆಯನ್ನು ₹ 0.49 ಕೋಟಿಗಳಷ್ಟು (ಮಾರ್ಚ್ 2021) ಕಡಿಮೆ ಮಾಡಲು ವಿಫಲವಾಗಿದೆ.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನೆಯ ಅಂಶಗಳನ್ನು ಒಪ್ಪಿ ಯುಡಿಡಿಗೆ ಹಣವನ್ನು ಬಿಡುಗಡೆಗಾಗಿ ವಿನಂತಿಯನ್ನು ಮಾಡುವ ಮೊದಲು ಅಂದಾಜು ಬೇಡಿಕೆಗಳನ್ನು ದೃಢೀಕರಿಸಲು ಮತ್ತು ಸಾಲ ಮರುಪಾವತಿಗಾಗಿ ಎಸ್ಕ್ರೊ ಖಾತೆಯಲ್ಲಿ ಲಭ್ಯವಿರುವ ಹೆಚ್ಚುವರಿ ಮೊತ್ತವನ್ನು ಜಮಾ ಮಾಡಲು ಬ್ಯಾಂಕ್‌ಗಳಿಗೆ ಸೂಚನೆ ನೀಡಲಾಗುತ್ತಿದೆ ಎಂದು ಹೇಳಿದೆ (ಮೇ 2022). ಆದರೆ, ₹ 64 ಕೋಟಿ ಮತ್ತು ₹ 6.50 ಕೋಟಿಯ ಬದಲಿಗೆ ₹ 164 ಕೋಟಿ ಮತ್ತು ₹ 65 ಕೋಟಿಯ ತಪ್ಪಾದ ಬೇಡಿಕೆಯಿಂದಾಗಿ ಹೆಚ್ಚುವರಿ ಬಿಡುಗಡೆಯ ಜವಾಬ್ದಾರಿಯನ್ನು ನಿಗದಿಪಡಿಸುವ ಬಗ್ಗೆ ಉತ್ತರವು ಮೌನವಾಗಿದೆ.

### *2.9.7 ಸಾಲದ ಉಪ–ಖಾತೆಗಳಿಗೆ ವಿಧಿಸಲಾದ ಹೆಚ್ಚುವರಿ ಬಡ್ಡಿ.*

ಕೆನರಾ ಬ್ಯಾಂಕ್‌ನಲ್ಲಿ ಇಡಲಾದ ಸಾಲದ ಉಪ–ಖಾತೆಗಳಿಗೆ ಸಂಬಂಧಿಸಿದ ಬ್ಯಾಂಕ್ ಸ್ಟೇಟ್‌ಮೆಂಟ್‌ಗಳ ಪರಿಶೀಲನೆ (ಆಗಸ್ಟ್‌ನಿಂದ ಡಿಸೆಂಬರ್ 2021) ಪರೀಕ್ಷಾ–ತನಿಖೆಗೆ ಒಳಪಟ್ಟ ಮ.ಪಾ (ಬಳ್ಳಾರಿ ಹೊರತುಪಡಿಸಿ) ಬ್ಯಾಂಕ್‌ನಿಂದ ₹ 27.95 ಲಕ್ಷ[13] ಮೊತ್ತವನ್ನು ಬಡ್ಡಿ ಬಂಡವಾಳವಾಗಿ ಮ.ಪಾಗಳ ಖರ್ಚು ಹಾಕಲಾಗಿದೆ ಎಂದು ತಿಳಿದುಬಂದಿದೆ. ಮುಖ್ಯ ಖಾತೆಯಲ್ಲಿ ಸಾಕಷ್ಟು ಹಣದ ಲಭ್ಯತೆಯನ್ನು ಖಾತ್ರಿಪಡಿಸದೆ ಚೆಕ್‌ಗಳನ್ನು ಪ್ರಸ್ತುತಪಡಿಸುವ ಮತ್ತು ನಂತರದ ಹಿಂತೆಗೆದುಕೊಳ್ಳುವಿಕೆಯು ಬಡ್ಡಿ ಮೊತ್ತವನ್ನು ವಿಧಿಸುವ ಸಾಧ್ಯತೆಯನ್ನು ತಳ್ಳಿಹಾಕಲಾಗುವುದಿಲ್ಲ. ಖರ್ಚು ಹಾಕಿದ ಮೊತ್ತದ ಬಗ್ಗೆ ಬ್ಯಾಂಕ್‌ಗಳಿಂದ ಸ್ಪಷ್ಟೀಕರಣವನ್ನು ಪಡೆಯಲು ಮತ್ತು ಅದನ್ನು ಮರುಪಡೆಯಲು ಡಿಎಂಎ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ (ಜನವರಿ 2022).

[13] ಮೈಸೂರು– ₹ 10.77 ಲಕ್ಷ, ತುಮಕೂರು– ₹ 2.60 ಲಕ್ಷ ಮತ್ತು ವಿಜಯಪುರ– ₹ 14.58 ಲಕ್ಷ.

## 2.10 ಹಣಕಾಸು ನಿರ್ವಹಣೆಯಲ್ಲಿನ ಇತರ ನ್ಯೂನತೆಗಳು

### *2.10.1 ತಪ್ಪಿಸಬಹುದಾದ ಬಡ್ಡಿಯ ಹೊಣೆಗಾರಿಕೆ*

ಇತರೆ ಯೋಜನೆಗಳಡಿ ಕಾಮಗಾರಿಗಳಿಗೆ ಅನುದಾನ ನೀಡುವುದನ್ನು ನಿಷೇಧಿಸಿರುವ ಯೋಜನಾ ಮಾರ್ಗಸೂಚಿಗೆ ವಿರುದ್ಧವಾಗಿ ರಸ್ತೆ ಅಗಲೀಕರಣಕ್ಕೆ ಸಂಬಂಧಿಸಿದಂತೆ ಭೂ ಪರಿಹಾರ ನೀಡಲು ವಿಜಯಪುರದ ಜಿಲ್ಲಾಧಿಕಾರಿಗಳು, ಆಯುಕ್ತರು, ವಿಜಯಪುರ, ಮ.ಪಾ ಅವರಿಗೆ ₹ 19.86 ಕೋಟಿ ಮೊತ್ತವನ್ನು (ನವೆಂಬರ್ 2017 ಮತ್ತು ಜುಲೈ 2018) ನಗರಕ್ಕೆ ಮಾಸ್ಟರ್ ಪ್ಲಾನ್ ಅನುಷ್ಠಾನ ಕಾರ್ಯಕ್ರಮಕ್ಕಾಗಿ ಬಿಡುಗಡೆ ಮಾಡಿದ್ದಾರೆ (ಪ್ಯಾರಾಗ್ರಾಫ್ 2.6 ರಲ್ಲಿ ವಿವರಿಸಲಾಗಿದೆ).

ಲೆಕ್ಕಪರಿಶೋಧನೆಯಿಂದ (ನವೆಂಬರ್ ಮತ್ತು ಡಿಸೆಂಬರ್ 2021) ಆಯುಕ್ತರು ನೋಟಿಸ್ ನೀಡಿ (ಸೆಪ್ಟೆಂಬರ್ 2014) ಮತ್ತು ಸಂತ್ರಸ್ತ ವ್ಯಕ್ತಿಗಳಿಗೆ ಪರಿಹಾರದ ಮೊತ್ತವನ್ನು ನೀಡಿದ್ದಾರೆ ಎಂದು ತಿಳಿದುಬಂದಿದೆ. ಈ ಪೈಕಿ 48 ಆಸ್ತಿ ಮಾಲೀಕರು ಪ್ರಸ್ತಾವಿತ ಪರಿಹಾರವನ್ನು ಪ್ರಶ್ನಿಸಿದ್ದರು (ಸೆಪ್ಟೆಂಬರ್ 2014) ಮತ್ತು ಕರ್ನಾಟಕ ಉಚ್ಚ ನ್ಯಾಯಾಲಯ (ಕಲಬುರಗಿ ಪೀಠದಲ್ಲಿ) ರಿಟ್ ಅರ್ಜಿಗಳನ್ನು (ಡಬ್ಲ್ಯುಪಿ) ಸಲ್ಲಿಸಿದರು. ರಿಟ್ ಅರ್ಜಿಗಳು ಬಾಕಿಯಿರುವಾಗ, ಮ.ಪಾಯು ಉಚ್ಚ ನ್ಯಾಯಾಲಯದಲ್ಲಿ ಕಾನೂನು ಪ್ರಕ್ರಿಯೆಗಳನ್ನು ಅನುಸರಿಸದೆ, ಅರ್ಜಿದಾರರ ವಿರುದ್ಧ ಕ್ರಮ ಕೈಗೊಳ್ಳವುದಿಲ್ಲವೆಂದು ಪ್ರಮಾಣೀಕರಿಸಿತು.

ಆದಾಗ್ಯೂ, ನೀಡಿದ ಭರವಸೆಯನ್ನು ಉಲ್ಲಂಘಿಸಿ, ಮ.ಪಾಯು ನೊಂದವರಿಗೆ ಸೇರಿದ ಆಸ್ತಿಗಳನ್ನು ನೆಲಸಮಗೊಳಿಸಿತು (ಅಕ್ಟೋಬರ್ 2014). ಪರಿಣಾಮವಾಗಿ, ಪ್ರಸ್ತುತ ಮಾರುಕಟ್ಟೆ ದರದಲ್ಲಿ ಭೂ ಪರಿಹಾರ ಮತ್ತು ಶೇ.100 ಸೊಲಾಟಿಯಂ ಇವೆರಡರ ಮೇಲೆ ಎರಡು ವರ್ಷಗಳಿಗೆ ವಾರ್ಷಿಕ ಶೇ.12 ಬಡ್ಡಿಯೊಂದಿಗೆ ಪರಿಹಾರವನ್ನು ನಿಗದಿಪಡಿಸಲು ಉಚ್ಚ ನ್ಯಾಯಾಲಯವು ಆದೇಶಿಸಿತು (ಜುಲೈ 2016). 30 ಜುಲೈ 2016 ರಂದು ಅಥವಾ ಅದಕ್ಕೂ ಮೊದಲು ಪರಿಹಾರದ ಶೇ 30 ರಷ್ಟು ಮುಂಗಡ ಪಾವತಿಯನ್ನು ಮ.ಪಾ ಪಾವತಿಸಬೇಕಾಗಿತ್ತು ಮತ್ತು ಉಳಿದ ಶೇಕಡಾ 70 ಅನ್ನು ಮೊದಲ ಕಂತಿನ ದಿನಾಂಕದಿಂದ ನಾಲ್ಕು ತಿಂಗಳೊಳಗೆ ಅಂದರೆ, 30 ನವೆಂಬರ್ 2016 ರಂದು ಅಥವಾ ಮೊದಲು ಪಾವತಿಸಲು ವಿಫಲವಾದರೆ ಉಳಿದ ಮೊತ್ತಕ್ಕೆ ಶೇ 15 ಬಡ್ಡಿಯನ್ನು ನೀಡಬೇಕಾಗುತ್ತದೆ.

ಈ ನಿಟ್ಟಿನಲ್ಲಿ, ಲೆಕ್ಕಪರಿಶೋಧನೆಯಲ್ಲಿ ಗಮನಿಸಿದ ಅಂಶಗಳು ಈ ಕೆಳಗಿನಂತಿವೆ:

i) ಮ.ಪಾ ಕಾನೂನಿನ ಸರಿಯಾದ ಕಾರ್ಯವಿಧಾನವನ್ನು ಅನುಸರಿಸದ ಕಾರಣ, ಪಾವತಿಸಬೇಕಾದ ಪರಿಹಾರ ಮೊತ್ತದ ಮೇಲೆ ಶೇ 24 (ಎರಡು ವರ್ಷಕ್ಕೆ ಶೇಕಡಾ 12 ರಂತೇ) ಬಡ್ಡಿಯನ್ನು ಪಾವತಿಸಬೇಕಾಗಿತ್ತು. ಈ ಬಡ್ಡಿ ಮೊತ್ತವು ₹ 1.94 ಕೋಟಿ ಗಳಾಗಿತ್ತು, ಅದರಲ್ಲಿ ₹ 1.36 ಕೋಟಿಯನ್ನು ಯೋಜನೆಯ ನಿಧಿಯಿಂದ ಪಾವತಿಸಲಾಗಿದೆ.

ii) ಜುಲೈ–ಆಗಸ್ಟ್ 2016 ರ ಅವಧಿಯಲ್ಲಿ ಮ.ಪಾ ಪರಿಹಾರ ಮೊತ್ತದ ಶೇ 30 ರಷ್ಟನ್ನು ಪಾವತಿಸಿದೆ ಮತ್ತು ಆದ್ದರಿಂದ, 30 ನವೆಂಬರ್ 2016 ರ ಮೊದಲು ಬಾಕಿ ಶೇ 70 ರಷ್ಟನ್ನು ಪಾವತಿಸಬೇಕಾಗಿತ್ತು ಮತ್ತು ವಿಫಲವಾದರೆ ವಾರ್ಷಿಕ 15 ಪ್ರತಿಶತದಷ್ಟು ಬಡ್ಡಿಯನ್ನು ನೀಡಬೇಕಾಗಿತ್ತು. ಸಾಕಷ್ಟು ನಿಧಿಯ ಲಭ್ಯತೆಯ ಹೊರತಾಗಿಯೂ, ನವೆಂಬರ್ 2017, ಜುಲೈ 2018 ಮತ್ತು ಫೆಬ್ರವರಿ 2019 ರಲ್ಲಿ ಮ.ಪಾ ಬಾಕಿ ಶೇ. 70 ರಷ್ಟನ್ನು ಪಾವತಿಸಿದೆ ಎಂದು ಲೆಕ್ಕಪರಿಶೋಧನೆ ಗಮನಿಸಿತು. ಈ ವಿಳಂಬಗಳು ಒಟ್ಟು ₹ 2.60 ಕೋಟಿಗಳ ಹೆಚ್ಚುವರಿ ಬಡ್ಡಿಯ ಹೊರೆಗೆ ಕಾರಣವಾಯಿತು.

ವಿವರಗಳನ್ನು **ಅನುಬಂಧ 2.12** ಮತ್ತು **ಅನುಬಂಧ 2.13** ರಲ್ಲಿ ನೀಡಲಾಗಿದೆ.

ನ್ಯಾಯಾಲಯದ ಆದೇಶದಂತೆ ಮ.ಪಾ, ವಿಜಯಪುರ ಭೂಮಾಲೀಕರಿಗೆ ಪಾವತಿ ಮಾಡಿದೆ ಮತ್ತು ಆದ್ದರಿಂದ ಮ.ಪಾಯ ಕಡೆಯಿಂದ ಯಾವುದೇ ದೋಷವಿಲ್ಲ ಎಂದು ರಾಜ್ಯ ಸರ್ಕಾರ ಹೇಳಿದೆ (ಏಪ್ರಿಲ್ 2022). ಮ.ಪಾಯು ಕಾನೂನಿನ ಸರಿಯಾದ ಕಾರ್ಯವಿಧಾನವನ್ನು ಅನುಸರಿಸದ ಕಾರಣ ಅಥವಾ ನಿಗದಿತ ದಿನಾಂಕದೊಳಗೆ ಪರಿಹಾರ ಮೊತ್ತದ ಶೇ 70 ರಷ್ಟನ್ನು ಪಾವತಿಸದ ಕಾರಣ ಉತ್ತರವು ಸ್ವೀಕಾರಾರ್ಹವಲ್ಲ, ಇದು ಹೆಚ್ಚಿನ ಬಡ್ಡಿಯ ಹೊಣೆಗೆ ಕಾರಣವಾಯಿತು.

### *2.10.2 ನಿಧಿಗಳ ತಡೆ*

ಕೆ.ಎಂ.ಎ.ಬಿ.ಆರ್.ನ ನಿಯಮ 73 ಪ್ರಕಾರ ಮ.ಪಾಯ ಪರವಾಗಿ ಇತರ ಸರ್ಕಾರಿ ಸಂಸ್ಥೆಯಿಂದ ಕೈಗೊಳ್ಳಲಾದ ಠೇವಣಿ ಕಾರ್ಯಗಳಿಗೆ ಸಂಬಂಧಿಸಿದಂತೆ ಒಪ್ಪಿಕೊಳ್ಳಲಾದ, ಒಟ್ಟು ಅಂದಾಜು ವೆಚ್ಚವನ್ನು ಒಂದೇ ಮೊತ್ತ ಅಥವಾ ಕಂತುಗಳಲ್ಲಿ ಬಿಡುಗಡೆ ಮಾಡಬಹುದು. ಮ.ಪಾ ಅಂತಹ ಕಾಮಗಾರಿಗಳ ವೆಚ್ಚದ ಪ್ರಗತಿಯನ್ನು ಮೇಲ್ವಿಚಾರಣೆ ಮಾಡುವುದು ಮತ್ತು ಖರ್ಚು ಮಾಡದ ಬಾಕಿ ಮೊತ್ತದ ಮರುಪಾವತಿಯನ್ನು ಖಚಿತಪಡಿಸುವುದು.

ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಿಡಬ್ಲ್ಯೂಡಿ ಉಪವಿಭಾಗ, ತುಮಕೂರು ಸಲ್ಲಿಸಿದ ಪ್ರಸ್ತಾವನೆಯನ್ನು ಆಧರಿಸಿ, "ಪಿಡಬ್ಲ್ಯುಡಿಯಿಂದ ಭದ್ರಮ್ಮ ವೃತ್ತದಿಂದ ಶೆಟ್ಟಿಹಳ್ಳಿ ರೈಲ್ವೆ ಗೇಟ್‌ವರೆಗೆ ತಲುಪುವ ರಸ್ತೆ ನಿರ್ಮಾಣ" ಕಾಮಗಾರಿಗೆ ಯೋಜನೆಯ ನಿಧಿಯಿಂದ ₹ 5.50 ಕೋಟಿ ಕಾಯ್ದಿರಿಸುವ ಪ್ರಸ್ತಾವನೆಗೆ ಡಿಎಲ್‌ಸಿ, ತುಮಕೂರು ಅನುಮೋದಿಸಿತು (ಫೆಬ್ರವರಿ 2014). ₹ 11 ಕೋಟಿ ವೆಚ್ಚದ ಕಾಮಗಾರಿಗೆ ನಗರೋತ್ಥಾನ ಯೋಜನೆ ಮತ್ತು ಮೂಲಸೌಕರ್ಯ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ (ತಲಾ ಶೇ. 50) ಅನುದಾನ ನೀಡಬೇಕಿತ್ತು. ಅದರಂತೆ, ಆಯುಕ್ತರು, ಮ.ಪಾ, ತುಮಕೂರು, ಅವರು ಯುಡಿಡಿ ಕಾರ್ಯದರ್ಶಿಗೆ ಕ್ರಿಯಾ ಯೋಜನೆಯನ್ನು ಪರಿಷ್ಕರಿಸಲು ಪ್ರಸ್ತಾವನೆಯನ್ನು ಸಲ್ಲಿಸಿದರು (ಫೆಬ್ರವರಿ 2014).

ಆದಾಗ್ಯೂ, ಅನುಮೋದಿತ ಪ್ರಸ್ತಾವನೆಗೆ ವ್ಯತಿರಿಕ್ತವಾಗಿ, ಮ.ಪಾ, ತುಮಕೂರು ಯೋಜನೆಯ ನಿಧಿಯ ₹ 11 ಕೋಟಿಗಳ[14] ಸಂಪೂರ್ಣ ಅಂದಾಜು ವೆಚ್ಚವನ್ನು ಪಿ.ಡಬ್ಲ್ಯೂ.ಡಿಯೊಂದಿಗೆ ಠೇವಣಿ ಮಾಡಿತು (ಆಗಸ್ಟ್/ಅಕ್ಟೋಬರ್ 2017), ಇದರ ಪರಿಣಾಮವಾಗಿ ₹ 5.50 ಕೋಟಿ ಹೆಚ್ಚುವರಿ ಠೇವಣಿಯಾಗಿದೆ. ಈ ಕಾಮಗಾರಿಯಡಿ ವೆಚ್ಚ ಕೇವಲ ₹ 1.61 ಕೋಟಿಗಳಾಗಿದೆ (ಜುಲೈ 2021 ರಂತೆ). ತುಮಕೂರಿನ ಮ.ಪಾ ಅಧಿಕಾರಿಗಳು ಸರಿಯಾದ ಕಾರ್ಯತತ್ಪರತೆ ವಹಿಸದೇ, ಒಂದೇ ಕಂತಿನಲ್ಲಿ ₹ 5.50 ಕೋಟಿ ಹೆಚ್ಚುವರಿ ಠೇವಣಿ ಬಿಡುಗಡೆ ಮಾಡಿ ಕಾಮಗಾರಿಯ ಪ್ರಗತಿಯನ್ನು ಖಾತ್ರಿಪಡಿಸಿಕೊಳ್ಳದೆ ನಾಲ್ಕು ವರ್ಷಗಳಿಗೂ ಹೆಚ್ಚು ಕಾಲ ₹ 9.39 ಕೋಟಿ ಮೊತ್ತದ ಯೋಜನಾ ನಿಧಿಗಳನ್ನು ತಡೆ ಹಿಡಿಯುವಲ್ಲಿ ಪರಿಣಮಿಸಿತು.

ನಾಲ್ಕು ಮಾರ್ಚ್ 2014 ರ ಸರ್ಕಾರಿ ಆದೇಶದ ಪ್ರಕಾರ, ಮೊತ್ತವನ್ನು ₹ 11 ಕೋಟಿಗೆ ಹೆಚ್ಚಿಸುವ ಪ್ರಸ್ತಾಪವನ್ನು ಮಾಡಲಾಗಿದೆ ಎಂದು ರಾಜ್ಯ ಸರ್ಕಾರವು ಹೇಳಿದೆ (ಏಪ್ರಿಲ್ 2022). ಸರ್ಕಾರದ ಆದೇಶದ ಪ್ರತಿಯನ್ನು ಲಗತ್ತಿಸದ ಕಾರಣ ಉತ್ತರವನ್ನು ಪರಿಶೀಲಿಸಲಾಗುವುದಿಲ್ಲ. ಇದಲ್ಲದೆ, ಕೆಲಸದ ಪ್ರಗತಿಯನ್ನು ಖಾತ್ರಿಪಡಿಸದೆ ಸಂಪೂರ್ಣ ಮೊತ್ತದ ಠೇವಣಿಯ ಬಗ್ಗೆ ಲೆಕ್ಕಪರಿಶೋಧಯಲ್ಲಿ ಕಂಡ ಅಂಶಗಳಿಗೆ ಉತ್ತರವು ಸ್ಪಷ್ಟಪಡಿಸುವುದಿಲ್ಲ.

#### ತೀರ್ಮಾನ

ಯೋಜನೆಯಡಿ ಕೈಗೊಳ್ಳಬೇಕಾದ ಕಾಮಗಾರಿಗಳ ವಿವರವಾದ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಲು ಮ.ಪಾಗಳು ಸರ್ಕಾರದ ಮಾರ್ಗಸೂಚಿಗಳನ್ನು ಅನುಸರಿಸಿಲ್ಲ. ಪರೀಕ್ಷೆ–ತನಿಖೆಗೆ ಒಳಪಟ್ಟ ಯಾವುದೇ ಮ.ಪಾಗಳು ಯಾವುದರ ಆಧಾರದ ಮೇಲೆ ಕಾರ್ಯಗಳನ್ನು ಆದ್ಯತೆ ಮತ್ತು ಆಯ್ಕೆ

[14] ಅನುದಾನದಲ್ಲಿ ₹ 4.67 ಕೋಟಿ (ಆಗಸ್ಟ್ 2017) ಮತ್ತು ₹ 6.33 ಕೋಟಿ ಸಾಲ (ಅಕ್ಟೋಬರ್ 2017).

ಮಾಡಲಾಗಿದೆ ಎಂಬುದರ ದತ್ತಾಂಶ/ದಾಖಲೆಗಳನ್ನು ಒದಗಿಸಿಲ್ಲ,. ಯೋಜನೆ ಮತ್ತು ಕಾರ್ಯಗಳ ಆಯ್ಕೆಯಲ್ಲಿ ಅಗತ್ಯ ಆಧಾರಿತ ವಿಶ್ಲೇಷಣೆಯ ಕೊರತೆ ಕಂಡುಬಂದಿದೆ.

ಕ್ರಿಯಾ ಯೋಜನೆಯಲ್ಲಿ ಮೂಲತಃ ಸೇರಿಸಲಾದ ಸುಮಾರು ಶೇ 19 ಕಾಮಗಾರಿಗಳನ್ನು ಮ.ಪಾಗಳು ಕಾರ್ಯಗತಗೊಳಿಸಲಿಲ್ಲ ಮತ್ತು ರಾಜ್ಯ ಸರ್ಕಾರವು ತನ್ನದೇ ಆದ ಸೂಚನೆಗಳನ್ನು ಕಡೆಗಣಿಸಿ, ಪರಿಷ್ಕೃತ ಕ್ರಿಯಾ ಯೋಜನೆಗಳಿಗೆ ಅನುಮೋದನೆಗಳನ್ನು ನೀಡಿತು. ಡಿ.ಎಲ್.ಸಿಗಳ ಒಪ್ಪಿಗೆಯಿಲ್ಲದೆ ಕ್ರಿಯಾ ಯೋಜನೆಗಳ ಪರಿಷ್ಕರಣೆಯು ಯೋಜನಾ ಮಾರ್ಗಸೂಚಿಗಳಲ್ಲಿ ಸೂಚಿಸಲಾದ ಸಮುದಾಯ/ಭಾಗಿತ್ವದ ಯೋಜನೆ ಪರಿಕಲ್ಪನೆಗೆ ವಿರುದ್ಧವಾಗಿದೆ.

ಬಜೆಟ್ ಅಂದಾಜಿನ ಮೇಲೆ ಉಳಿತಾಯ/ಹೆಚ್ಚುವರಿ ಮತ್ತು ಬಳಕೆಯಾಗದ ಕಾರಣ ಬಿಡುಗಡೆಯಾದ ಅನುದಾನದ ರದ್ದತಿಯ ನಿದರ್ಶನಗಳು ಇರುವುದರಿಂದ, ಆಯವ್ಯಯ ನಿಯಂತ್ರಣದಲ್ಲಿ ನ್ಯೂನ್ಯತೆ ಕಂಡುಬಂದಿತು.

ವಿವಿಧ ವರ್ಗಗಳ ಕಾಮಗಾರಿಗಳಿಗೆ ಯೋಜನಾ ಮಾರ್ಗಸೂಚಿಗಳಲ್ಲಿ ಸೂಚಿಸಲಾದ ಮಿತಿಗಳನ್ನು ಅನುಸರಿಸಲು ಮ.ಪಾಗಳು ವಿಫಲವಾದ ಕಾರಣ ಸಂಚಾರ ನಿರ್ವಹಣೆ, ನೀರು ಸರಬರಾಜು ಮತ್ತು ಒಳಚರಂಡಿಗೆ ಸಂಬಂಧಿಸಿದ ಕಾಮಗಾರಿಗಳನ್ನು ಆಯ್ಕೆ ಮಾಡದೆ, ನಗರಗಳ ಸಮಗ್ರ ಮೂಲಸೌಕರ್ಯ ಅಭಿವೃದ್ಧಿಯನ್ನು ಕಡೆಗಣಿಸಲಾಗಿದೆ. ಮಾರ್ಗಸೂಚಿಗಳಿಗೆ ವಿರುದ್ಧವಾಗಿ ಮ.ಪಾಗಳು ಯೋಜನೆಯ ಹಣವನ್ನು ಇತರ ಯೋಜನೆಗಳ ಅಡಿಯಲ್ಲಿ ತೆಗೆದುಕೊಳ್ಳಲಾದ ಕಾಮಗಾರಿಗಳಿಗೆ ತಿರುಗಿಸಿದವು.

ನಗರೋತ್ಥಾನ ಹಂತ–II ರಿಂದ ಹಂತ–III ಕ್ಕೆ ಹೆಚ್ಚಿನ ಬಡ್ಡಿದರದಲ್ಲಿ ಪಡೆದ ಸಾಲವನ್ನು ಮರುಪಾವತಿ ಮಾಡದ ಕಾರಣ ಕೆ. ಡಬ್ಲ್ಯೂ ಎಸ್ ಪಿ ಎಫ್.ಟಿ ₹ 5.09 ಕೋಟಿಯ ತಪ್ಪಿಸಬಹುದಾದ ಬಡ್ಡಿ ಹೊರೆಯನ್ನು ಉಂಟುಮಾಡಿದೆ. ನಮೂದಿಸಿದ ಬಡ್ಡಿದರಕ್ಕಿಂತ ಹೆಚ್ಚಿನ ಸಾಲ ಪಡೆದಿರುವುದು, ಕಡಿಮೆ ಬಡ್ಡಿದರದಲ್ಲಿ ಲಭ್ಯವಿರುವ ಸಾಲಗಳನ್ನು ಪಡೆಯುವ ಆಯ್ಕೆಯನ್ನು ಬಳಸದಿರುವುದು ಮತ್ತು ಒಪ್ಪಂದಗಳಲ್ಲಿ ಸೂಚಿಸಲಾದ ವೇಳಾಪಟ್ಟಿಯ ಪ್ರಕಾರ ಸಾಲ ಮರುಪಾವತಿಯಲ್ಲಿ ವಿಳಂಬದಿಂದಾಗಿ ₹ 4.87 ಕೋಟಿ ಹೆಚ್ಚುವರಿ ವೆಚ್ಚವಾಗಿದೆ. ಸಾಲ ಮರುಪಾವತಿಗಾಗಿ ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿಯಿಂದ ಅನುದಾನದ ಬೇಡಿಕೆಯ ತಪ್ಪಾದ ಅಂದಾಜು, ಯುಡಿಡಿಯು ಉದ್ದೇಶದ ಅಗತ್ಯಕ್ಕಿಂತ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಿತು.

ಹಣಕಾಸು ನಿರ್ವಹಣೆಯಲ್ಲಿನ ಇತರ ನ್ಯೂನತೆಗಳಾದ ಭೂ ಪರಿಹಾರ ಪಾವತಿಯಲ್ಲಿ ವಿಳಂಬದಿಂದ ತಪ್ಪಿಸಬಹುದಾದ ಬಡ್ಡಿ ಪಾವತಿ ಮತ್ತು ಅಗತ್ಯಕ್ಕಿಂತ ಹೆಚ್ಚಿನ ಠೇವಣಿ ಕಾಮಗಾರಿಗಳಲ್ಲಿ ಯೋಜನಾ ಹಣವನ್ನು ನಿರ್ಬಂಧಿಸುವುದು ಸಹ ಗಮನಕ್ಕೆ ಬಂದಿದೆ.

**ಶಿಫಾರಸುಗಳು**

- ***ನಗರಗಳ ಮೂಲಸೌಕರ್ಯಗಳ ಸಮಗ್ರ ಅಭಿವೃದ್ಧಿಗೆ ಸಹಾಯ ಮಾಡಲು ಮೂಲಸೌಕರ್ಯ ಅಭಿವೃದ್ಧಿಯ ಯೋಜನೆ ಅಗತ್ಯ ವಿಶ್ಲೇಷಣೆಯ ನಂತರ ಮತ್ತು ಪಾಲುದಾರರೊಂದಿಗೆ ಸಮಾಲೋಚಿಸಿದ ನಂತರ ಮಾತ್ರ ಕೈಗೊಳ್ಳಬೇಕು.***
- ***ಸಾಲಗಳನ್ನು ಪಡೆಯುವುದು ಮತ್ತು ಅವುಗಳ ಸೇವೆಯನ್ನು ಕಾರ್ಯತತ್ಪರತೆಯಿಂದ ನಿರ್ವಹಿಸಬೇಕಾಗುತ್ತದೆ ಮತ್ತು ಸರ್ಕಾರಕ್ಕೆ ಹೆಚ್ಚುವರಿ ಹೊರೆಗಳ ಅಪಾಯವನ್ನು ತಡೆಗಟ್ಟಲು ಸಾಲದ ಖಾತೆಗಳನ್ನು ನಿಯತಕಾಲಿಕವಾಗಿ ಸಮನ್ವಯಗೊಳಿಸಬೇಕು.***

# ಅಧ್ಯಾಯ–III

## ಒಪ್ಪಂದದ ನಿರ್ವಹಣೆ ಮತ್ತು ಕಾಮಗಾರಿಗಳ ಅನುಷ್ಠಾನ

ಯೋಜನೆಯನ್ನು ಎಚ್ಚರಿಕೆಯಿಂದ ರೂಪಿಸಲಾಗಿದೆಯೇ ಮತ್ತು ಯೋಜಿಸಲಾಗಿದೆಯೇ, ಸಂಪನ್ಮೂಲಗಳು ಮತ್ತು ವೆಚ್ಚಗಳನ್ನು ವಿವರವಾಗಿ ರೂಪಿಸಲಾಗಿದೆಯೇ, ಅಗತ್ಯ ಮಾನದಂಡಗಳ ಪ್ರಕಾರ ವಿನ್ಯಾಸಗಳನ್ನು ಕನಿಷ್ಠ ವೆಚ್ಚದಲ್ಲಿ ಮತ್ತು ನಿಖರವಾಗಿ ಮಾಡಲಾಗಿದೆಯೇ ಮತ್ತು ಯೋಜನೆಯನ್ನು ಕನಿಷ್ಠ ವೆಚ್ಚದೊಂದಿಗೆ, ಕಡಿಮೆ ಸಮಯದಲ್ಲಿ ಕಾರ್ಯಗತಗೊಳಿಸಲಾಗುತ್ತದೆಯೇ ಎಂದು ಖಚಿತಪಡಿಸಿಕೊಳ್ಳಲು ಕ್ರಮ ವಹಿಸುವುದನ್ನು ಒಪ್ಪಂದದ ನಿರ್ವಹಣೆಯು ರೂಪಿಸುತ್ತದೆ.

ಡಿಎಂಎ ಒದಗಿಸಿದ (ಜನವರಿ 2022) ಮಾಹಿತಿಯ ಪ್ರಕಾರ, 10 ಮ.ಪಾಗಳಲ್ಲಿ 1,421 ಕಾಮಗಾರಿಗಳನ್ನು ಯೋಜನೆಯಡಿ ತೆಗೆದುಕೊಳ್ಳಲಾಗಿದೆ, ಅದರಲ್ಲಿ 1,391 ಕಾಮಗಾರಿಗಳು (ಶೇ 98) 31 ಮಾರ್ಚ್ 2021 ರಂತೆ ಪೂರ್ಣಗೊಂಡಿವೆ. ಲೆಕ್ಕಪರಿಶೋಧನೆಯು, 2014–21ರ ಅವಧಿಯಲ್ಲಿ ನಾಲ್ಕು ಪರೀಕ್ಷಾ–ತನಿಖೆಗೆ ಒಳಪಟ್ಟ ಮ.ಪಾಗಳ 227 ಪ್ಯಾಕೇಜ್‌ಗಳಲ್ಲಿ 52 ಅನ್ನು ಪರಿಶೀಲಿಸಿತು (ಶೇ. 23) ಈ ಪ್ಯಾಕೇಜ್‌ಗಲ್ಲಿ ₹ 59.96 ಕೋಟಿ ವೆಚ್ಚವನ್ನು ಒಳಗೊಂಡ 145 ಕಾಮಗಾರಿಗಳನ್ನು, ಪರಿಶೀಲಿಸಲಾಗಿದೆ. ವರ್ಗವಾರು ವಿವರಗಳನ್ನು **ಕೋಷ್ಟಕ 3.1** ರಲ್ಲಿ ನೀಡಲಾಗಿದೆ.

**ಕೋಷ್ಟಕ 3.1: ಪರೀಕ್ಷಾ–ತನಿಖೆಗೆ ಒಳಪಟ್ಟ ಮ.ಪಾಗಳಲ್ಲಿ ಆಯ್ಕೆಮಾಡಿದ ಕಾಮಗಾರಿಗಳ ವರ್ಗವಾರು ವಿವರಗಳು.**

(₹ ಕೋಟಿಗಳಲ್ಲಿ)

| ಕಾಮಗಾರಿಗಳ ವರ್ಗ | ಒಟ್ಟು | | | ಆಯ್ಕೆ ಮಾಡಲಾದ | | | |
|---|---|---|---|---|---|---|---|
| | ಪ್ಯಾಕೇಜ್ ಗಳ ಸಂಖ್ಯೆ | ಕಾಮಗಾರಿಗಳ ಸಂಖ್ಯೆ | ವೆಚ್ಚ | ಪ್ಯಾಕೇಜ್ ಗಳ ಸಂಖ್ಯೆ | ಕಾಮಗಾರಿಗಳ ಸಂಖ್ಯೆ | ಅಂದಾಜು ವೆಚ್ಚ | ವೆಚ್ಚ. |
| **I** | 161 | 467 | 184.94 | 27 | 80 | 40.01 | 36.74 |
| **II** | 16 | 20 | 12.24 | 10 | 12 | 9.99 | 8.28 |
| **III** | 18 | 65 | 16.32 | 4 | 19 | 3.74 | 3.73 |
| **IV** | 6 | 6 | 4.23 | 2 | 5 | 1.63 | 1.51 |
| **V** | 26 | 85 | 26.70 | 9 | 29 | 13.74 | 9.70 |
| **ಒಟ್ಟು** | 227 | 643 | 244.43 | 52 | 145 | 69.11 | 59.96 |

ಆಧಾರ: ಪರೀಕ್ಷಾ–ತನಿಖೆಗೆ ಒಳಪಟ್ಟ ಮ.ಪಾಗಳ ಪ್ರಗತಿ ವರದಿಗಳು

ಕಾಮಗಾರಿಗಳ ನೀಡುವಿಕೆಯಲ್ಲಿ ಪಾರದರ್ಶಕತೆ ಮತ್ತು ಪರಿಣಾಮಕಾರಿ ಒಪ್ಪಂದದ ನಿರ್ವಹಣೆಗಾಗಿ, ಮ.ಪಾಗಳು ಸ್ಪರ್ಧಾತ್ಮಕ ಹರಾಜು ಮೂಲಕ ಟೆಂಡರ್ ಮಾಡಲು ಸ್ಥಾಪಿತ ವಿಧಾನವನ್ನು ಅನುಸರಿಸಬೇಕು. ಆದಾಗ್ಯೂ, ಟೆಂಡರ್‌ಗಳನ್ನು ಅಂತಿಮಗೊಳಿಸುವಾಗ ಕಾರ್ಯವಿಧಾನದ ಅವಶ್ಯಕತೆಗಳನ್ನು ಅನುಸರಿಸಲಾಗಿಲ್ಲ. ಸರಿಯಾದ ತನಿಖೆಗಳಿಲ್ಲದೆ ಕೈಗೆತ್ತಿಕೊಂಡ ಕಾಮಗಾರಿಗಳು ಮತ್ತು ನಿಗದಿತ ಮಾನದಂಡಗಳನ್ನು ಕಡೆಗಣಿಸಿ ಕಾಮಗಾರಿಗಳ ಅನುಷ್ಠಾನದಂತಹ ಅಕ್ರಮಗಳು ಸಹ ಇದ್ದು, ಇದು ಸ್ವೀಕಾರಾರ್ಹವಲ್ಲದ / ಅನಧಿಕೃತ / ಫಲಪ್ರದವಲ್ಲದ ವೆಚ್ಚಗಳಿಗೆ ಕಾರಣವಾಗುತ್ತದೆ. ಅಂತಹ ಅವಲೋಕನಗಳ ವಿವರಗಳನ್ನು ಮುಂದಿನ ಕಂಡಿಕೆಗಳಲ್ಲಿ ನೀಡಲಾಗಿದೆ:

## ಕಾಮಗಾರಿಗಳ ಅಂದಾಜು ತಯಾರಿಕೆ

### 3.1 ವಿವರವಾದ ಯೋಜನಾ ವರದಿಗಳ ತಯಾರಿಕೆ

ಕೆ.ಪಿ.ಡಬ್ಲ್ಯೂ.ಡಿ ಕೋಡ್‌ನ ಕಂಡಿಕೆ 90, ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ವ್ಯಾಪಕ ಚರ್ಚೆ ಮತ್ತು ಸ್ಥಳಗಳ ಸಮೀಕ್ಷೆಯ ನಂತರ ಹೊಸ ಕಾಮಗಾರಿಗೆ ವಿವರವಾದ ಯೋಜನಾ ವರದಿಯನ್ನು (ಡಿ.ಪಿ.ಆರ್) ಸಿದ್ಧಪಡಿಸಬೇಕು ಎಂದು ನಿಖರವಾಗಿ ತಿಳಿಸಿದೆ. ಕೆ.ಪಿ.ಡಬ್ಲ್ಯೂ.ಡಿ ಕೋಡ್‌ನ ಕಂಡಿಕೆ 92, ರಸ್ತೆಯ ಪದರಗಳ ದಪ್ಪವನ್ನು ತಿಳಿಯಲು, ಅಂದಾಜುಗಳನ್ನು ಸಿದ್ಧಪಡಿಸುವ ಮೊದಲು ಬೆಂಕೆಲ್‌ಮನ್ ಬೀಮ್ ಡಿಫ್ಲೆಕ್ಷನ್ (ಬಿ.ಬಿ.ಡಿ)[15] ತಂತ್ರ ಮತ್ತು ಸಂಚಾರ ಅಧ್ಯಯನಗಳನ್ನು ನಡೆಸಬೇಕು ಎಂದು ನಿಖರವಾಗಿ ತಿಳಿಸಿದೆ. ಇದಲ್ಲದೆ, ರಸ್ತೆಯ ಅಸ್ತಿತ್ವದಲ್ಲಿರುವ ಸ್ಥಿತಿ, ರಸ್ತೆಯ ವಯಸ್ಸು, ಮಣ್ಣಿನ ಬಲವನ್ನು ಗುರುತಿಸಲು ಕ್ಯಾಲಿಫೋರ್ನಿಯಾ ಬೇರಿಂಗ್ ರೇಶಿಯೊ (ಸಿ.ಬಿ.ಆರ್), ಬೇಸ್ / ಉಪ–ಬೇಸ್ನ್ಸ್ ಸ್ಥಿತಿ ಇತ್ಯಾದಿಗಳ ವಿವರಗಳನ್ನು ಅಂದಾಜಿನಲ್ಲಿ ದಾಖಲಿಸಬೇಕು.

ಮೂರು ಪರೀಕ್ಷಾ–ತನಿಖೆಗೆ ಒಳಪಟ್ಟ ಮ.ಪಾಗಳಲ್ಲಿ (ಮೈಸೂರು, ತುಮಕೂರು ಮತ್ತು ವಿಜಯಪುರ) ಡಿಪಿಆರ್‌ಗಳನ್ನು ಲೆಕ್ಕಪರಿಶೋಧನೆ ಮಾಡಲು ಒದಗಿಸಲಾಗಿಲ್ಲ. ರಸ್ತೆ ಕಾಮಗಾರಿಗೆ ಅಂದಾಜುಪಟ್ಟಿ ಸಿದ್ಧಪಡಿಸುವಾಗ ಮಣ್ಣಿನ ಬಲವನ್ನು ಖಚಿತಪಡಿಸಿಕೊಳ್ಳಲು ಸಿಬಿಆರ್ ಮೌಲ್ಯಗಳನ್ನು ಈ ಮೂರು ಮ.ಪಾಗಳು ಉಲ್ಲೇಖಿಸಿಲ್ಲ.

ಬಿ.ಬಿ.ಡಿ ಪರೀಕ್ಷೆಗಳು ಮತ್ತು ಟ್ರಾಫಿಕ್ ಅಧ್ಯಯನಗಳನ್ನು ಯಾವುದೇ ಪರೀಕ್ಷೆ–ತನಿಖೆಗೆ ಒಳಪಟ್ಟ ಮ.ಪಾಗಳಲ್ಲಿ ಅಂದಾಜುಗಳಿಗೆ ಲಗತ್ತಿಸಲಾಗಿಲ್ಲ ಎಂದು ಲೆಕ್ಕಪರಿಶೋಧನೆಯು (ಆಗಸ್ಟ್‌ನಿಂದ ಡಿಸೆಂಬರ್ 2021) ಗಮನಿಸಿದೆ.

ಇವುಗಳ ಅನುಪಸ್ಥಿತಿಯಲ್ಲಿ, ರಸ್ತೆಯ ವಿನ್ಯಾಸಗಳನ್ನು ಹೇಗೆ ದೃಢೀಕರಿಸಲಾಗಿದೆ ಮತ್ತು ಅಂದಾಜುಗಳಲ್ಲಿ ಮಾಡಲಾದ ನಿಬಂಧನೆಗಳು ಅಗತ್ಯಕ್ಕೆ ಹೇಗೆ ಅನುಗುಣವಾಗಿದೆ ಎಂಬುದನ್ನು ಪರಿಶೀಲಿಸಲು ಸಾಧ್ಯವಾಗಲಿಲ್ಲ.

ರಾಜ್ಯ ಸರ್ಕಾರವು ಬಿ.ಬಿ.ಡಿ ಪರೀಕ್ಷೆಗಳು ಮತ್ತು ಸಂಚಾರ ಅಧ್ಯಯನಗಳನ್ನು ನಡೆಸಲಾಗಿಲ್ಲ ಏಕೆಂದರೆ ಈ ರಸ್ತೆಗಳು ಕಡಿಮೆ ಟ್ರಾಫಿಕ್ ಹೊಂದಿರುವ ಆಂತರಿಕ ರಸ್ತೆಗಳಾಗಿವೆ ಎಂದು ಉತ್ತರಿಸಿದೆ (ಏಪ್ರಿಲ್ 2022). ಉತ್ತರವು ಕೆ.ಪಿ.ಬ್ಲ್ಯೂ.ಡಿ ಕೋಡ್‌ನ ನಿಬಂಧನೆಗಳಿಗೆ ವಿರುದ್ಧವಾಗಿರುವುದರಿಂದ ಸ್ವೀಕಾರಾರ್ಹವಲ್ಲ.

### 3.2 ರಸ್ತೆ ಇತಿಹಾಸ ವಹಿ ನಿರ್ವಹಣೆ ಮಾಡದಿರುವುದು

ಕೆ.ಪಿ.ಡಬ್ಲ್ಯೂ.ಡಿ. ಕೋಡ್, 2014 ರ ಕಂಡಿಕೆ 40 ರ ಪ್ರಕಾರ, ವರ್ಗೀಕರಣ, ಉದ್ದ, ಮಾರ್ಗದ ಬಲ, ಅಗಲ, ರಚನೆಯ ಅಗಲ, ಕ್ಯಾರೇಜ್‌ವೇ ಅಗಲ, ಶೌಲ್ಡರ್ ಮತ್ತು ರಸ್ತೆಯ ಮಾದರಿ ಅಡ್ಡ ಚರಂಡಿ ಕಾಮಗಾರಿಗಳ ವಿವರಗಳು, ಸೇತುವೆಗಳು, ಯಾವ ಪ್ರಕಾರದೊಂದಿಗೆ ರಸ್ತೆಯನ್ನು ಕೊನೆಯದಾಗಿ ಪುನರ್ಚೇತನಗೊಳಿಸಲಾಗಿದೆ/ಬಲಪಡಿಸಲಾಗಿದೆ, ವರ್ಷ, ಇತ್ಯಾದಿಗಳನ್ನು ಒಳಗೊಂಡ ರಸ್ತೆ ಇತಿಹಾಸವನ್ನು ಸಿದ್ಧಪಡಿಸಬೇಕಿತ್ತು. ಮೇಲ್ಪದರದ ಅಪಾಯದ ಸ್ಥಿತಿಗಾಗಿ ರಸ್ತೆ ಜಾಲವನ್ನು ವಿಶ್ಲೇಷಿಸುವ

[15] ಚಲಿಸುವ ಚಕ್ರದ ಹೊರೆಗಳ ಅಡಿಯಲ್ಲಿ ರಸ್ತೆಯ ವಿಚಲನವನ್ನು ಅಳೆಯಲು ಪ್ರಮಾಣಿತ ಪರೀಕ್ಷೆ.

ಮೂಲಕ, ನಿರ್ವಹಣೆಗಾಗಿ ತೆಗೆದುಕೊಳ್ಳಬೇಕಾದ ಕಾಮಗಾರಿಗಳಿಗೆ ಆದ್ಯತೆ ನೀಡಲು ಈ ದತ್ತಾಂಶವನ್ನು ಬಳಸಬೇಕಾಗಿತ್ತು ಮತ್ತು ಈ ಕಾಮಗಾರಿಗಳಿಗೆ ಅಂದಾಜು ಮಂಜೂರಾತಿ ಕೋರುವಾಗ ಪ್ರಸ್ತಾಪಗಳೊಂದಿಗೆ ಯಾವಾಗಲು ಲಗತ್ತಿಸಿರಬೇಕು.

ಇಪ್ಪತ್ತೇಳು ಪರೀಕ್ಷಾ–ತನಿಖೆಗೆ ಒಳಪಟ್ಟ ರಸ್ತೆ (ವರ್ಗ–I) ಪ್ಯಾಕೇಜ್‌ಗಳ ಅಂದಾಜುಗಳಿಗೆ ಅಂತಹ ಯಾವುದೇ ದತ್ತಾಂಶವನ್ನು ಲಗತ್ತಿಸಲಾಗಿಲ್ಲ ಎಂದು ಲೆಕ್ಕಪರಿಶೋಧನೆಯು ಗಮನಿಸಿದೆ (ಆಗಸ್ಟ್‌ನಿಂದ ಡಿಸೆಂಬರ್ 2021). ಹೀಗಾಗಿ, ₹ 40.01 ಕೋಟಿ ವೆಚ್ಚದ ಈ ರಸ್ತೆ ಪ್ಯಾಕೇಜ್‌ಗಳ ಪ್ರಸ್ತಾವನೆಯ ಆಧಾರವನ್ನು ಲೆಕ್ಕಪರಿಶೋಧನೆಯಲ್ಲಿ ನಿರ್ಣಯಿಸಲು ಸಾಧ್ಯವಾಗಲಿಲ್ಲ.

ರಾಜ್ಯ ಸರ್ಕಾರವು ತನ್ನ ಉತ್ತರದಲ್ಲಿ ರಸ್ತೆ ಇತಿಹಾಸ ವಹಿಯನ್ನು ನಿಗದಿಪಡಿಸಿದಂತೆ ನಿರ್ವಹಿಸಲಾಗುವುದು ಎಂದು ಹೇಳಿದೆ (ಏಪ್ರಿಲ್ 2022).

### 3.3 ದೋಷಪೂರಿತ ಅಂದಾಜುಗಳು

ಕೆ.ಪಿ.ಡಬ್ಲ್ಯೂ.ಡಿ ಕೋಡ್‌ನ ಕಂಡಿಕೆ 92(1) ಪ್ರಕಾರ ಅಂದಾಜುಗಳನ್ನು ಸಿದ್ಧಪಡಿಸಬೇಕು ಮತ್ತು ಸಂಪೂರ್ಣ ರೂಪದಲ್ಲಿ ಸಲ್ಲಿಸಬೇಕು. ಇದಲ್ಲದೆ, ವೈಯಕ್ತಿಕವಾಗಿ ಸ್ಥಳಗಳಿಗೆ ಭೇಟಿ ನೀಡಿದ ಪ್ರಮಾಣಪತ್ರ ಮತ್ತು ಕಾಮಗಾರಿಯನ್ನು ನಿರ್ವಹಿಸುವ ಅತ್ಯಂತ ಆರ್ಥಿಕ ಮತ್ತು ಸುರಕ್ಷಿತ ಮಾರ್ಗವನ್ನು ಒದಗಿಸುವ ಪ್ರಮಾಣಪತ್ರವನ್ನು ಪ್ರತಿ ಅಂದಾಜಿನಲ್ಲಿ ಸಂಬಂಧಪಟ್ಟ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ದಾಖಲಿಸಬೇಕು (ಕೆ.ಪಿ.ಬ್ಲ್ಯೂ.ಡಿ ಕೋಡ್‌ನ ಕಂಡಿಕೆ 101(1)) .

ನಾಲ್ಕು ಮ.ಪಾಗಳಲ್ಲಿನ 52 ಪ್ಯಾಕೇಜ್‌ಗಳಲ್ಲಿ ಪರೀಕ್ಷೆ–ತನಿಖೆಗೆ ಒಳಪಟ್ಟ 8 ಪ್ಯಾಕೇಜ್‌ಗಳಲ್ಲಿ (ಶೇ. 15) ಅಂದಾಜುಗಳ ಪರಿಶೀಲನೆ (ಆಗಸ್ಟ್‌ನಿಂದ ಡಿಸೆಂಬರ್ 2021,) ಕೆಳಗೆ ವಿವರಿಸಿದಂತೆ ವಾಸ್ತವಿಕವಾಗಿಲ್ಲ ಎಂದು ತೋರಿಸಿದೆ:

**(i) ಬಳ್ಳಾರಿ**

ಪ್ಯಾಕೇಜ್ 1: ಸೌಧಾಗರ ಕಾಲೋನಿ 1, 2, 3 ಮತ್ತು 4 ಸಂಪರ್ಕ ರಸ್ತೆಗಳಲ್ಲಿನ ರಸ್ತೆ ಮತ್ತು ಚರಂಡಿ ಕಾಮಗಾರಿಗಳ ಸುಧಾರಣೆಯ ₹ 26 ಲಕ್ಷಗಳ ಕಾಮಗಾರಿಯನ್ನು ಅಂದಾಜು ಒಳಗೊಂಡಿದೆ.
ಈ ಕಾಮಗಾರಿಯನ್ನು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ಈಗಾಗಲೇ ಕೈಗೆತ್ತಿಕೊಂಡಿದೆ. ಕೆಯುಐಡಿಎಫ್‌ಸಿಯು, ಈಗಾಗಲೇ ಇತರ ಯೋಜನೆಗಳಲ್ಲಿ ಕಾರ್ಯಗತಗೊಳಿಸಿದ ನೀರು ಸರಬರಾಜು ಮತ್ತು ಚರಂಡಿ ಕಾಮಗಾರಿಗಳನ್ನು ಕೂಡ ಅಂದಾಜು ಒಳಗೊಂಡಿತು.

ರಾಜ್ಯ ಸರ್ಕಾರವು, ವಿಳಂಬದ ಕಾರಣ, ಕೆ.ಕೆ.ಆರ್.ಡಿ.ಬಿ ಮೇಲಿನ ಕೆಲಸವನ್ನು ಕಾರ್ಯಗತಗೊಳಿಸಿದೆ ಎಂದು ತಿಳಿಸಿತು (ಏಪ್ರಿಲ್ 2022). ಉತ್ತರವು ಯೋಜನೆಯಲ್ಲಿನ ನ್ಯೂನತೆಗಳನ್ನು ಮತ್ತು ಅನುಷ್ಠಾನಗೊಳಿಸುವ ಏಜೆನ್ಸಿಗಳ ನಡುವಿನ ಸಮನ್ವಯದ ಕೊರತೆಯನ್ನು ಸೂಚಿಸುತ್ತದೆ.

**(ii) ಮೈಸೂರು**

(ಅ) ಪ್ಯಾಕೇಜ್ 3: ರಸ್ತೆಯ ಕೆಟ್ಟ ಸ್ಥಿತಿಯ ಕಾರಣದಿಂದಾಗಿ ಅದನ್ನು ಮರುನಿರ್ಮಾಣ ಮಾಡುವ ನಿಬಂಧನೆಯನ್ನು ಅಂದಾಜು ಒಳಗೊಂಡಿತ್ತು (ಡಿಸೆಂಬರ್ 2014). ತರುವಾಯ, ಎಸ್.ಇಯವರಿಂದ ಸ್ಥಳ ಪರಿಶೀಲನೆಯ (ಸೆಪ್ಟೆಂಬರ್ 2016) ಸಮಯದಲ್ಲಿ, ರಸ್ತೆ

ಸುಸ್ಥಿತಿಯಲ್ಲಿರುವುದು ಕಂಡುಬಂದಿತು ಮತ್ತು ಪ್ರೊಫೈಲ್ ಸರಿಪಡಿಸುವಿಕೆಯನ್ನು ಮಾತ್ರ ಕೈಗೊಳ್ಳಲಾಯಿತು. ಅಂದಾಜುಗಳಲ್ಲಿ ಪ್ರಸ್ತಾಪಿಸಲಾದ ರಸ್ತೆಗಳ ಉದ್ದಗಳು 154 ಮೀ ಮತ್ತು 296 ಮೀ ಆದರೆ, ವಾಸ್ತವವಾಗಿ ಕಾರ್ಯಗತಗೊಂಡ ಕಾಮಗಾರಿಗಳು ಕ್ರಮವಾಗಿ 194 ಮೀ ಮತ್ತು 400.5 ಮೀ ಆಗಿರುತ್ತದೆ. ಅಲ್ಲದೆ, ಅಂದಾಜಿನಲ್ಲಿ ಗಟ್ಟಿಯಾದ ಮಣ್ಣಿನಲ್ಲಿ ಹಸ್ತಚಾಲಿತ ವಿಧಾನದಿಂದ ಉತ್ಖನನದ ಐಟಂ ಸೇರಿದ್ದು, ಇದನ್ನು ಸಮರ್ಥಿಸಲು ಬೇಕಾದ ಮಣ್ಣು ಪರೀಕ್ಷಾ ವರದಿಯನ್ನು ಅಂದಾಜಿಗೆ ಲಗತ್ತಿಸಲಾಗಿಲ್ಲ.

ರಾಜ್ಯ ಸರ್ಕಾರವು, 2014 ರಲ್ಲಿ ನೈಜ ಸ್ಥಳ ಸ್ಥಿತಿಯ ಪ್ರಕಾರ ಅಂದಾಜು ತಯಾರಿಸಲಾಗಿದೆ, ಆದರೆ 2016 ರಲ್ಲಿ ಕಾಮಗಾರಿಯನ್ನು ಕಾರ್ಯಗತಗೊಳಿಸಿಲಾಗಿದೆ, ಇದು ವ್ಯತ್ಯಾಸಗಳಿಗೆ ಕಾರಣವಾಯಿತು ಎಂದು ಉತ್ತರಿಸಿತು (ಏಪ್ರಿಲ್ 2022). ಕಾರ್ಯಗತಗೊಳಿಸುವ ಹಂತದಲ್ಲಿ (2016) ರಸ್ತೆಯು ಸುಸ್ಥಿತಿಯಲ್ಲಿದೆ ಎಂದು ಕಂಡುಬಂದ ಕಾರಣ, ಅಂದಾಜು (2014) ಸಿದ್ಧಪಡಿಸುವಾಗ ಅದು ಕೆಟ್ಟ ಸ್ಥಿತಿಯಲ್ಲಿದೆ ಎಂಬ ಉತ್ತರವು ಸಮರ್ಥನೀಯವಲ್ಲ.

(ಆ) <u>ಪ್ಯಾಕೇಜ್ 13</u>: ಅಂದಾಜಿನಲ್ಲಿ (925 ಮೀ) ಪ್ರಸ್ತಾಪಿಸಲಾದ ರಸ್ತೆಯ ಉದ್ದವು, ಕಾರ್ಯಗತಗೊಳಿಸುವ ಸಮಯದಲ್ಲಿ (1,685.70 ಮೀ) ಶೇ 82 ಹೆಚ್ಚಾಗಿದೆ. ಅಲ್ಲದೆ, ಅಂದಾಜಿನಲ್ಲಿ ಗಟ್ಟಿಯಾದ ಮಣ್ಣಿನಲ್ಲಿ ಹಸ್ತಚಾಲಿತ ವಿಧಾನದಿಂದ ಉತ್ಖನನದ ಐಟಂ ಸೇರಿದ್ದು, ಇದನ್ನು ಸಮರ್ಥಿಸಲು ಬೇಕಾದ ಮಣ್ಣು ಪರೀಕ್ಷಾ ವರದಿಯನ್ನು ಅಂದಾಜಿಗೆ ಲಗತ್ತಿಸಲಾಗಿಲ್ಲ.

ರಾಜ್ಯ ಸರ್ಕಾರವು, ಕಾರ್ಯಗತಗೊಳಿಸುವ ಸಮಯದಲ್ಲಿ ಅಂದಾಜಿನಲ್ಲಿದ್ದ ಕೆಲವು ಕಾಮಗಾರಿಗಳು ಇತರ ಪ್ರಾಧಿಕಾರಗಳಿಂದ ಪೂರ್ಣಗೊಂಡಿದ್ದು ಕಂಡುಬಂದಿದೆ, ಸಂಬಂಧಪಟ್ಟ ಶಾಸಕರ ಸೂಚನೆ ಮೇರೆಗೆ ಪರ್ಯಾಯ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂದು ತಿಳಿಸಿತು (ಏಪ್ರಿಲ್ 2022). ಕಾಮಗಾರಿಯನ್ನು ಕೈಗೆತ್ತಿಕೊಳ್ಳುವಾಗ ಏಜೆನ್ಸಿಗಳ ನಡುವೆ ಸಮನ್ವಯ ಮತ್ತು ಯೋಜನೆ ಇಲ್ಲದಿರುವುದನ್ನು ಉತ್ತರವು ಸೂಚಿಸುತ್ತದೆ.

(ಇ) <u>ಪ್ಯಾಕೇಜ್ 14</u>: ಅಂದಾಜಿನಲ್ಲಿ ಸೇರಿಸಲಾದ ₹ 39.38 ಲಕ್ಷ ವೆಚ್ಚದ ಎರಡು ಐಟಂಗಳನ್ನು (ಕೋಬಲ್ ಸ್ಟೋನ್ಸ್ ಮತ್ತು ಕರ್ಬ್ ಸ್ಟೋನ್ಸ್) ಕಾರ್ಯಗತಗೊಳಿಸಲಾಗಿಲ್ಲ.

ರಾಜ್ಯ ಸರ್ಕಾರವು, ಮೇಲಿನ ಎರಡು ಐಟಂಗಳನ್ನು ಇತರ ಏಜೆನ್ಸಿಗಳು ಪೂರ್ಣಗೊಳಿಸಿರುವುದರಿಂದ ಅವುಗಳನ್ನು ತೆಗೆದುಕೊಳ್ಳಲಾಗಿಲ್ಲ ಎಂದು ಉತ್ತರಿಸಿದೆ (ಏಪ್ರಿಲ್ 2022). ಉತ್ತರವು, ಅಂದಾಜುಗಳು ಅವಾಸ್ತವಿಕವಾಗಿದೆ ಮತ್ತು ಕಾರ್ಯತತ್ಪರತೆಯ ಕೊರತೆಯಿಂದ ಸಿದ್ಧಪಡಿಸಲಾಗಿದೆ ಎಂದು ಖಚಿತಪಡಿಸುತ್ತದೆ.

(ಈ) <u>ಪ್ಯಾಕೇಜ್ 17</u>: ರಸ್ತೆಯನ್ನು 1.2 ಮೀಟರ್‌ಗಳಷ್ಟು ಅಗಲಗೊಳಿಸಲು ಅಂದಾಜಿನಲ್ಲಿ ಒದಗಿಸಲಾಗಿದೆ. ಆದರೆ, ರಸ್ತೆಯನ್ನು ಸರಾಸರಿ 2.5 ರಿಂದ 3 ಮೀಟರ್‌ಗೆ ವಿಸ್ತರಿಸಲಾಗಿದೆ. ಅಲ್ಲದೆ, ಮಳೆನೀರು ಚರಂಡಿಯ ಗೋಡೆಗೆ ಎಂ15 ದರ್ಜೆಯ ಬದಲಿಗೆ ಪ್ಲೇನ್ ಸಿಮೆಂಟ್ ಕಾಂಕ್ರೀಟ್ ಎಂ20 ದರ್ಜೆಯನ್ನು ಬಳಸಲಾಗಿದೆ. ಇದರಿಂದ, ವೆಚ್ಚದಲ್ಲಿ ₹ 20.71 ಲಕ್ಷ ಹೆಚ್ಚಳವಾಗಿದೆ.

ಹೆಚ್ಚಿದ ಟ್ರಾಫಿಕ್ ದಟ್ಟಣೆಗೆ ಅನುಗುಣವಾಗಿ ಮೈಸೂರು ಮ.ಪಾ ಆಯುಕ್ತರ ಅನುಮೋದನೆಯೊಂದಿಗೆ ರಸ್ತೆಯನ್ನು ವಿಸ್ತರಿಸಲಾಗಿದೆ ಎಂದು ರಾಜ್ಯ ಸರ್ಕಾರವು ಉತ್ತರಿಸಿದೆ (ಏಪ್ರಿಲ್ 2022). ಅಂದಾಜನ್ನು ಸಿದ್ಧಗೊಳಿಸುವ ಸಮಯದಲ್ಲಿ ಮೇಲಿನ ಅಂಶಗಳನ್ನು ಪರಿಗಣಿಸಬೇಕಾಗಿರುವುದರಿಂದ ಉತ್ತರವು ಸ್ವೀಕಾರಾರ್ಹವಲ್ಲ.

**(iii) ತುಮಕೂರು**

ಪ್ಯಾಕೇಜುಗಳು 5 ಮತ್ತು 9: ಅಂದಾಜುಗಳು ಗಟ್ಟಿಯಾದ ಮಣ್ಣಿನಲ್ಲಿ ಹಸ್ತಚಾಲಿತ ವಿಧಾನಗಳ ಮೂಲಕ ಮಣ್ಣಿನ ಉತ್ಖನನದ ಐಟಂ ಅನ್ನು ಒಳಗೊಂಡಿವೆ, ಆದರೆ, ಇದನ್ನು ಸಮರ್ಥಿಸಲು ಬೇಕಾದ ಮಣ್ಣು ಪರೀಕ್ಷಾ ವರದಿಯನ್ನು ಅಂದಾಜುಗಳಿಗೆ ಲಗತ್ತಿಸಲಾಗಿಲ್ಲ.

**(iv) ವಿಜಯಪುರ**

ಪ್ಯಾಕೇಜ್ 57: ಅಂದಾಜು ಆರು ಸ್ಥಳಗಳಲ್ಲಿ ಹೊಸ ಸೌರ ಟ್ರಾಫಿಕ್ ಸಿಗ್ನಲ್‌ಗಳ ಸ್ಥಾಪನೆ ಮತ್ತು ಐದು ಸಿಗ್ನಲ್‌ಗಳ ದುರಸ್ತಿಯನ್ನು ಒಳಗೊಂಡಿದೆ. ಗುತ್ತಿಗೆದಾರರು ನೀಡಿದ ಸಲಹೆ ಮತ್ತು ನಂತರ ಸಂಚಾರ ಪೊಲೀಸ್ ಇಲಾಖೆ ನಡೆಸಿದ ಸಮೀಕ್ಷೆಯ ಆಧಾರದ ಮೇಲೆ ಏಳು ಹೊಸ ಸಿಗ್ನಲ್‌ಗಳನ್ನು ಅಳವಡಿಸಲು ಇದನ್ನು ಪರಿಷ್ಕರಿಸಲಾಯಿತು (ನವೆಂಬರ್ 2017). ಇದರಿಂದ ₹ 12.84 ಲಕ್ಷ ವೆಚ್ಚ ಏರಿಕೆಯಾಗಿದೆ.

ರಾಜ್ಯ ಸರ್ಕಾರವು, ಟ್ರಾಫಿಕ್ ಪೊಲೀಸರ ಅವಶ್ಯಕತೆಗೆ ಅನುಗುಣವಾಗಿ ಒಂದು ಹೆಚ್ಚುವರಿ ಸಿಗ್ನಲ್ ಅನ್ನು ಸ್ಥಾಪಿಸಲಾಗಿದೆ ಎಂದು ಉತ್ತರಿಸಿದೆ (ಏಪ್ರಿಲ್ 2022). ಬಳಕೆದಾರ ಇಲಾಖೆಯ ಅಗತ್ಯತೆ ಮತ್ತು ಸರಿಯಾದ ಸ್ಥಳ ಪರಿಶೀಲನೆಯನ್ನು ನಿರ್ಣಯಿಸಿದ ನಂತರ ಅಂದಾಜುಗಳನ್ನು ಸಿದ್ಧಪಡಿಸಬೇಕಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

ಈ ನಿದರ್ಶನಗಳು ಮ.ಪಾಗಳು ಸ್ಥಳಗಳ ಪರಿಸ್ಥಿತಿಗಳ ಆಧಾರದ ಮೇಲೆ ವಾಸ್ತವಿಕ ಅಂದಾಜುಗಳನ್ನು ಸಿದ್ಧಪಡಿಸಲಿಲ್ಲ ಎಂದು ಸೂಚಿಸುತ್ತವೆ, ಇದು ಕಾರ್ಯಗತಗೊಳಿಸುವ ಸಮಯದಲ್ಲಿ ವ್ಯತ್ಯಾಸಗಳು/ವೆಚ್ಚದ ಹೆಚ್ಚಳಕ್ಕೆ ಕಾರಣವಾಯಿತು.

## 3.4 ರಸ್ತೆಗಳ ದೋಷಯುಕ್ತ ವಿನ್ಯಾಸ

(i) ಕೆ.ಪಿ.ಡಬ್ಲ್ಯೂ.ಡಿ ಕೋಡ್, 2014 ರ ಕಂಡಿಕೆ 8 ರಂತೆ, ರಸ್ತೆಗಳ ವಿನ್ಯಾಸ, ನಿರ್ಮಾಣ ಮತ್ತು ನಿರ್ವಹಣೆಯು ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ (ಎಂ.ಒ.ಆರ್.ಟಿ.ಹೆಚ್) ಮತ್ತು ಇಂಡಿಯನ್ ರೋಡ್ ಕಾಂಗ್ರೆಸ್ (ಐ.ಆರ್.ಸಿ) ಮಾನದಂಡಗಳಿಗೆ ಅನುಗುಣವಾಗಿರಬೇಕು,. ಐ.ಆರ್.ಸಿ 95:1987 ಕಲಂ 2.2 ರ ಪ್ರಕಾರ ಅರ ದಟ್ಟವಾದ ಬಿಟುಮಿನಸ್ ಕಾಂಕ್ರೀಟ್ (ಎಸ್.ಡಿ.ಬಿ.ಸಿ) ಅನ್ನು, ವೇರಿಂಗ್ ಕೋರ್ಸ್ ಆಗಿ ಬಳಸಬೇಕು ಮತ್ತು ನೇರವಾಗಿ ಡಬ್ಲ್ಯೂ.ಬಿ.ಎಂ ಅಥವಾ ಯಾವುದೇ ಗ್ರಾನ್ಯುಲರ್ ಬೇಸ್ ಮೇಲೆ ಹಾಕಬಾರದು. ಎಂ.ಒ.ಆರ್.ಟಿ.ಹೆಚ್ 5 ನೇ ಪರಿಷ್ಕರಣೆಯ ಕಲಂ 507.1 ಸಹ ಎಸ್.ಡಿ.ಬಿ.ಸಿ ಕಾಮಗಾರಿಯು ಹಿಂದೆ ಸಿದ್ಧಪಡಿಸಿದ ಬಿಟುಮಿನಸ್ ಬೌಂಡ್ ಮೇಲ್ಭಾಗದಲ್ಲಿ ಒಂದು ಪದರದ ಬಿಟುಮಿನಸ್ ಕಾಂಕ್ರೀಟ್ನ ನಿರ್ಮಾಣವನ್ನು ಒಳಗೊಂಡಿರಬೇಕು ಎಂದು ನಿಖರವಾಗಿ ತಿಳಿಸಿದೆ.

ಈ ಮಾನದಂಡಗಳನ್ನು ಕಡೆಗಣಿಸಿ, ಮೂರು ಮ.ಪಾಗಳಲ್ಲಿ (ಬಳ್ಳಾರಿ, ಮೈಸೂರು ಮತ್ತು ತುಮಕೂರು) 43 ಪ್ಯಾಕೇಜ್‌ಗಳಲ್ಲಿ ಐದು[16] (ಶೇಕಡಾ 12) ಅಂದಾಜುಗಳು ಎಸ್‌ಡಿಬಿಸಿಯನ್ನು ನೇರವಾಗಿ ಗ್ರಾನ್ಯುಲರ್ ಬೇಸ್ ಮೇಲೆ ಹಾಕಲು ಒದಗಿಸಲಾಗಿದೆ, ಅಂದರೆ, ಎಸ್‌ಡಿಬಿಸಿಯನ್ನು ಬಿಟುಮಿನಸ್ ಮೆಕಾಡಮ್ ಹಾಕದೆ ಹಾಕಲಾಗುತ್ತದೆ. ಮಾರ್ಗಸೂಚಿಗಳನ್ನು ಉಲ್ಲಂಘಿಸಿದ ಕಾರ್ಯವಿಧಾನವು ರಸ್ತೆಗಳ ಗುಣಮಟ್ಟ ಮತ್ತು ದೀರ್ಘಾಯುಷ್ಯಕ್ಕೆ ಹಾನಿಕರವಾದಗಿದೆ.

[16] ಬಳ್ಳಾರಿ – ಪ್ಯಾಕೇಜ್ 1 (₹ 10.25 ಲಕ್ಷ), ಮೈಸೂರು – ಪ್ಯಾಕೇಜ್ 14 (₹ 5.33 ಲಕ್ಷ), ತುಮಕೂರು – ಪ್ಯಾಕೇಜ್ 7 (₹ 48.17 ಲಕ್ಷ), ಪ್ಯಾಕೇಜ್ 10 (₹ 20.48 ಲಕ್ಷ) ಮತ್ತು ಪ್ಯಾಕೇಜ್ 9 (₹ 78.68 ಲಕ್ಷ).

(ii) ಐ.ಆರ್.ಸಿ 37–2012 ರ ಪ್ರಕಾರ, ಶೇ 4 ಸಿ.ಬಿ.ಆರ್ ಗಾಗಿ ಗ್ರ್ಯಾನ್ಯುಲರ್ ಸಬ್ ಬೇಸ್ (ಜಿ.ಎಸ್.ಬಿ)/ಗ್ರ್ಯಾನ್ಯುಲರ್ ಬೇಸ್ (ಜಿ.ಬಿ) ಬಿಟುಮಿನಸ್ ಸರ್ಫೇಸಿಂಗ್ ರಸ್ತೆಯ ದಪ್ಪವು 560 ಮೀ.ಮೀ ಆಗಿರಬೇಕು.

ಮ.ಪಾ, ಬಳ್ಳಾರಿ ಪ್ಯಾಕೇಜ್ 19ರಲ್ಲಿ ಒಟ್ಟಾಗಿ ₹ 1.85 ಕೋಟಿ ಅಂದಾಜು ವೆಚ್ಚದಲ್ಲಿ ನಾಲ್ಕು ರಸ್ತೆ ಕಾಮಗಾರಿ ಕೈಗೆತ್ತಿಕೊಂಡಿತು. ಮಂಜೂರಾದ ಅಂದಾಜಿನಲ್ಲಿ ಎರಡು ಕಾಮಗಾರಿಗಳಿಗೆ (1 ಮತ್ತು 3) 490 ಮೀ.ಮೀ ಮತ್ತು ಒಂದು ಕಾಮಗಾರಿಗೆ 475 ಮೀ.ಮೀ ಮಾರ್ಗದ ದಪ್ಪವನ್ನು (4)[17] ಶೇ 3.82 ರಷ್ಟು ಸಂಚಿತ ಸಿ.ಬಿ.ಆರ್ ಗೆ ಅನುಗುಣವಾಗಿ ಒದಗಿಸಲಾಗಿದೆ. ಅಳತೆ ಪುಸ್ತಕದ (ಎಂ.ಬಿ) ಪ್ರಕಾರ, ಕಾರ್ಯಗತಗೊಳಿಸಿದ ರಸ್ತೆ ಮಾರ್ಗದ ದಪ್ಪವು ಕ್ರಮವಾಗಿ 525 ಮೀ.ಮೀ, 490 ಮೀ.ಮೀ ಮತ್ತು 575 ಮೀ.ಮೀ. ಹೀಗಾಗಿ, ರಸ್ತೆ ಮಾರ್ಗದ ಅಂದಾಜು ಮತ್ತು ಕಾರ್ಯಗತಗೊಳಿಸಿದ ದಪ್ಪವು ಐ.ಆರ್.ಸಿ ಮಾರ್ಗಸೂಚಿಯೊಂದಿಗೆ ಸ್ಥಿರವಾಗಿಲ್ಲ. ರಸ್ತೆ ಮಾರ್ಗದ ಪ್ರತ್ಯೇಕ ಪದರಗಳ ದಪ್ಪವು ಐ.ಆರ್.ಸಿ ಮಾರ್ಗಸೂಚಿಗಳಲ್ಲಿ ಸೂಚಿಸಿದ್ದಕ್ಕಿಂತ ವ್ಯತ್ಯಾಸವನ್ನು ಹೊಂದಿದೆ (**ಅನುಬಂಧ 3.1** ರಲ್ಲಿ ವಿವರಿಸಲಾಗಿದೆ).

ಐ.ಆರ್.ಸಿ ಪ್ರಮಾಣ ಸೂಚಿಸುವ ಸಂಸ್ಥೆ ಆಗಿರುವುದರಿಂದ ಎಲ್ಲ ರೀತಿಯ ವಾಹನಗಳಿಗೆ ಸರಿ ಹೊಂದುವಂತಹ ರಸ್ತೆ ಮಾರ್ಗದ ವಿನ್ಯಾಸವನ್ನು ಸೂಚಿಸಲಾಗುತ್ತದೆ. ಮಾರ್ಗಸೂಚಿಗಳಿಂದ ಯಾವುದೇ ವಿಚಲನವನ್ನು ಸಮರ್ಥಿಸಬೇಕಾಗಿರುತ್ತದೆ, ಆದಾಗ್ಯೂ, ಐ.ಆರ್.ಸಿ ಮಾರ್ಗಸೂಚಿಗಳು ಮತ್ತು ಅನುಮೋದಿತ ಅಂದಾಜಿನಿಂದ ವಿಚಲನಗೊಳ್ಳಲು ಯಾವುದೇ ಸಮರ್ಥನೆಗಳು ದಾಖಲಾಗಿಲ್ಲ.

ರಾಜ್ಯ ಸರ್ಕಾರವು, ರಸ್ತೆಗಳಲ್ಲಿನ ಟ್ರಾಫಿಕ್ ಮಟ್ಟವನ್ನು ಆಧರಿಸಿ ರಸ್ತೆ ಮಾರ್ಗದ ದಪ್ಪವನ್ನು ಅಂದಾಜಿಸಲಾಗಿದೆ ಎಂದು ಉತ್ತರಿಸಿದೆ (ಏಪ್ರಿಲ್ 2022). ಪದರಗಳ ದಪ್ಪವು ಕೆ.ಪಿ.ಡಬ್ಲ್ಯೂ.ಡಿ. ಕೋಡ್‌ನ ನಿಬಂಧನೆಗಳನ್ನು ಉಲ್ಲಂಘಿಸಿರುವುದರಿಂದ ಉತ್ತರವು ಸ್ವೀಕಾರಾರ್ಹವಲ್ಲ. ಟ್ರಾಫಿಕ್ ಸಮೀಕ್ಷೆಗೆ ಸಂಬಂಧಿಸಿದಂತೆ ಯಾವುದೇ ದಾಖಲೆ ಸಾಕ್ಷ್ಯವನ್ನು ಲೆಕ್ಕಪರಿಶೋಧನೆಗೆ ನೀಡಲಾಗಿಲ್ಲ.

**ಟೆಂಡರ್ ಪ್ರಕ್ರಿಯೆ**

ಕೆಟಿಪಿಪಿ ನಿಯಮಗಳ 21 ರ ಪ್ರಕಾರ ಟೆಂಡರ್ ಸ್ವೀಕರಿಸುವ ಪ್ರಾಧಿಕಾರವು ಟೆಂಡರ್ ದಾಖಲೆಗಳಲ್ಲಿ ಸೂಚಿಸಲಾದ ಮೌಲ್ಯಮಾಪನ ಮಾನದಂಡಗಳಿಗೆ ಅನುಗುಣವಾಗಿ ಟೆಂಡರ್‌ಗಳ ಮೌಲ್ಯಮಾಪನವನ್ನು ಕಟ್ಟುನಿಟ್ಟಾಗಿ ನಡೆಸಬೇಕು.

### 3.5 ಯೋಜನಾ ನಿರ್ವಹಣಾ ಸಲಹೆಗಾರರಿಗೆ ಟೆಂಡರ್ ಪ್ರಕ್ರಿಯೆ.

ಯೋಜನೆಯ ಮಾರ್ಗಸೂಚಿಗಳ ಕಂಡಿಕೆ 10, 11 ಮತ್ತು 12, ಯೋಜನೆಗೆ ವಿವರವಾದ ಯೋಜನಾ ವರದಿಗಳನ್ನು (ಡಿ.ಪಿ.ಆರ್) ತಯಾರಿಸಲು ಅಗತ್ಯವಾದ ತಾಂತ್ರಿಕ ಸಾಮರ್ಥ್ಯವನ್ನು ಹೊಂದಿಲ್ಲದಿದ್ದರೆ ಮ.ಪಾಗಳಿಂದ ಯೋಜನಾ ನಿರ್ವಹಣಾ ಸಲಹೆಗಾರರನ್ನು (ಪಿ.ಎಂ.ಸಿ) ನೇಮಿಸಿಕೊಳ್ಳಲು ನಿಬಂಧನೆಗಳನ್ನು ಒಳಗೊಂಡಿದೆ. ಯೋಜನ ಮಾರ್ಗಸೂಚಿಗಳು, ಪಿ.ಎಂ.ಸಿಗಳನ್ನು ಡಿ.ಎಂ.ಎಯಿಂದ ನೇಮಿಸಬೇಕೆಂಬ ಷರತ್ತು ವಿಧಿಸಿದೆ. ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಿದಂತೆ ಪಿ.ಎಂ.ಸಿಗಳ ನೇಮಕದಲ್ಲಾದ ತಾಂತ್ರಿಕ ಮೌಲ್ಯಮಾಪನದಲ್ಲಿನ ವ್ಯತ್ಯಾಸಗಳನ್ನು ಲೆಕ್ಕಪರಿಶೋಧನೆಯ ಗಮನಿಸಿದೆ.

[17] ಕಾಮಗಾರಿ ಸಂಖ್ಯೆ 2 ಸಿಮೆಂಟ್ ಕಾಂಕ್ರೀಟ್ ರಸ್ತೆ ನಿರ್ಮಾಣವಾಗಿತ್ತು.

### 3.5.1 ಅನರ್ಹ ಸಲಹೆಗಾರರಿಗೆ ಕಾಮಗಾರಿಯ ನೀಡುವಿಕೆ.

ಡಿ.ಎಂ.ಎ ಎಲ್ಲಾ 10 ಮ.ಪಾಗಳಿಗೆ ಪಿ.ಎಂ.ಸಿಗಳ ಅಗತ್ಯವನ್ನು ಸೂಚಿಸಲು ಸೂಚನೆ ನೀಡಿದೆ(ಜೂನ್ 2014). ಈ 10 ಮ.ಪಾಗಳ ಪೈಕಿ ಏಳು ಮ.ಪಾಗಳು (ಮಂಗಳೂರು, ಕಲಬುರಗಿ ಮತ್ತು ಬಳ್ಳಾರಿ ಹೊರತುಪಡಿಸಿ) ಪಿ.ಎಂ.ಸಿಗಳನ್ನು ನೇಮಿಸುವಂತೆ ಮನವಿ ಮಾಡಿದರು. ಮ.ಪಾ, ಮಂಗಳೂರು ಈಗಾಗಲೇ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನಕ್ಕೆ ತಾಂತ್ರಿಕ ಸಲಹೆಗಾರರನ್ನು ನೇಮಿಸಿತ್ತು. ಡಿಸಿ, ಬಳ್ಳಾರಿ ಮತ್ತು ಮ.ಪಾ, ಕಲಬುರಗಿ ಅವರು ಪಿ.ಎಂ.ಸಿಗಳನ್ನು ನೇಮಿಸುವ ಅಗತ್ಯವಿಲ್ಲ ಎಂದು ಸೂಚಿಸಿದರು.

ಅದರಂತೆ, ಉಳಿದ ಏಳು ಮ.ಪಾಗಳಲ್ಲಿ ಪಿ.ಎಂ.ಸಿಗಳ ಕೇಂದ್ರೀಕೃತ ಟೆಂಡರ್‌ಗಳನ್ನು ಆಹ್ವಾನಿಸುವಾಗ (ಜೂನ್ 2014) ಡಿ.ಎಂ.ಎ ಈ ಮೂರು ಮ.ಪಾಗಳನ್ನು ಹೊರತುಪಡಿಸಿತು. ಬೆಳಗಾವಿ, ದಾವಣಗೆರೆ, ಹುಬ್ಬಳ್ಳಿ–ಧಾರವಾಡ (ಎಚ್‌ಡಿಎಂಸಿ), ಮೈಸೂರು, ಶಿವಮೊಗ್ಗ, ತುಮಕೂರು ಮತ್ತು ವಿಜಯಪುರಕ್ಕೆ ಮೂರು ಪಿ.ಎಂ.ಸಿಗಳ[18] ನೇಮಕಕ್ಕೆ ಸರ್ಕಾರ ಅನುಮೋದನೆ ನೀಡಿದೆ (ಫೆಬ್ರವರಿ 2015). ಪ್ರತಿ ಮ.ಪಾಗೆ ಕಾಮಗಾರಿ ವೆಚ್ಚ ₹ 2.09 ಕೋಟಿ.

ಟೆಂಡರ್ ದಾಖಲೆಗಳ ಪ್ರಕಾರ, ಯೋಜನೆಗಾಗಿ ಪಿ.ಎಂ.ಸಿಗಳ ಆಯ್ಕೆಯಲ್ಲಿ ಭಾಗವಹಿಸಲು ಆಸಕ್ತಿ ಹೊಂದಿರುವ ಸಲಹಾ ಸಂಸ್ಥೆಗಳು ಈ ಕೆಳಗಿನ ಷರತ್ತುಗಳನ್ನು ಪೂರೈಸಬೇಕು:

ಅ) ಸಂಸ್ಥೆಯು ರಾಜ್ಯ/ಕೇಂದ್ರ ಸರ್ಕಾರ ಮತ್ತು ಅದರ ಅಂಗ ಸಂಸ್ಥೆಗಳಿಗೆ ವಿನ್ಯಾಸ, ಯೋಜನಾ ನಿರ್ವಹಣೆ ಮತ್ತು ಸಲಹಾ ಸೇವೆಗಳನ್ನು ಒದಗಿಸಿರುವ ಸಿವಿಲ್ ಎಂಜಿನಿಯರಿಂಗ್ ಸಲಹಾ ಕ್ಷೇತ್ರದಲ್ಲಿ ಅನುಭವವನ್ನು ಹೊಂದಿರಬೇಕು.

ಆ) ಕಳೆದ ಐದು ವರ್ಷಗಳಲ್ಲಿ (ಅಂದರೆ, 2009–10 ರಿಂದ 2013–14) ಯಾವುದೇ ಎರಡು ವರ್ಷ ಕನಿಷ್ಠ ವಾರ್ಷಿಕ ಹಣಕಾಸು ವಹಿವಾಟು ₹ 2.60 ಕೋಟಿ ಇರಬೇಕು.

ಇ) ಯಾವುದೇ ರಾಜ್ಯ ಸರ್ಕಾರ/ಕೇಂದ್ರ ಸರ್ಕಾರಿ ಪ್ರಾಧಿಕಾರಗಳಿಗೆ ಸಲಹೆಗಾರರಾಗಿರಬೇಕು ಮತ್ತು ಡಿಪಿಆರ್ ಸಿದ್ಧಪಡಿಸಿರಬೇಕು/ ಮೇಲ್ವಿಚಾರಣಾ ಸೇವೆಗಳನ್ನು ಈ ಕೆಳಗಿನ ಕಾಮಗಾರಿಗಳಿಗೆ ಸಲ್ಲಿಸಿರಬೇಕು:

(i) ₹ 50 ಕೋಟಿ ಮತ್ತು ಅದಕ್ಕಿಂತ ಹೆಚ್ಚಿನ ಮೌಲ್ಯದ ರಸ್ತೆ, ಚರಂಡಿ ಮತ್ತು ಅಡಿಗಾಲುವೆ ಕಾಮಗಾರಿಗಳು;

(ii) ಓವರ್ ಹೆಡ್ ಟ್ಯಾಂಕ್ (ಒ.ಹೆಸ್.ಟಿ), ನೆಲಮಟ್ಟದ ಸಂಗ್ರಹಣಾ ಜಲಾಶಯ (ಜಿ.ಎಲ್.ಎಸ್.ಆರ್) ಮತ್ತು ಕೊಳಚೆ ನೀರು ಸಂಸ್ಕರಣಾ ಘಟಕ (ಎಸ್.ಟಿ.ಪಿ) ನಿರ್ಮಾಣ ಸೇರಿದಂತೆ ₹ 25 ಕೋಟಿಗಿಂತ ಕಡಿಮೆಯಿಲ್ಲದ ನೀರು ಸರಬರಾಜು ಮತ್ತು ಯು.ಜಿ.ಡಿ ಕಾಮಗಾರಿಗಳು; ಮತ್ತು

(iii) ₹ 8 ಕೋಟಿಗಿಂತ ಕಡಿಮೆ ಇಲ್ಲದ ಮೌಲ್ಯದ ಕಟ್ಟಡ ಕಾಮಗಾರಿಗಳು.

[18] (i) ಎಂ/ಎಸ್ ಇನ್ಫ್ರಾ ಸಪೋರ್ಟ್ ಇಂಜಿನಿಯರಿಂಗ್ ಕನ್ಸಲ್ಟೆಂಟ್ಸ್ ಪ್ರೈ.ಲಿ. ಬೆಳಗಾವಿ, ಎಚ್‌ಡಿಎಂಸಿ ಮತ್ತು ವಿಜಯಪುರಕ್ಕೆ.
(ii) ಎಂ/ಎಸ್ ಸಿವಿಲ್ ಟೆಕ್ನಾಲಜೀಸ್ ಇಂಡಿಯಾ ಪ್ರೈವೇಟ್.ಲಿನ (ಲೀಡ್) ಜಂಟಿ ಉದ್ಯಮ ಮತ್ತು ಎಂ/ಎಸ್ ಸಿ.ಎ.ಡಿ.ಡಿ ಸ್ಪೇಷನ್ ಟೆಕ್ನಾಲಜೀಸ್ ಪ್ರೈ. ಲಿ. ದಾವಣಗೆರೆ, ಶಿವಮೊಗ್ಗ ಮತ್ತು ತುಮಕೂರಿಗೆ.
(iii) ಎಂ/ಎಸ್ ಸಿ.ಎ.ಡಿ.ಡಿ ಸ್ಪೇಷನ್ ಟೆಕ್ನಾಲಜೀಸ್ ಪ್ರೈ. ಲಿ. ಮೈಸೂರಿಗೆ.

ಈ)ಸಲಹೆಗಾರರು ನಿಯೋಜನೆಗಾಗಿ ಎಲ್ಲಾ ಪರಿಣತಿಯನ್ನು ಹೊಂದಿಲ್ಲದಿದ್ದರೆ, ಅದು ಜಂಟಿ ಉದ್ಯಮವನ್ನು (ಜೆ.ವಿ) ರಚಿಸುವ ಮೂಲಕ ಪೂರ್ಣ ಶ್ರೇಣಿಯ ಪರಿಣತಿಯನ್ನು ಪಡೆಯಬಹುದು. ಜೆ.ವಿಯ ಪ್ರಮುಖ ಸಲಹೆಗಾರರು ಅರ್ಹತಾ ಮಾನದಂಡಗಳನ್ನು ಪೂರೈಸಬೇಕು ಮತ್ತು ರಸ್ತೆ ಕಾಮಗಾರಿಗಳು ಅಥವಾ ನೀರು ಸರಬರಾಜು/ಯು.ಜಿ.ಡಿ ಕೆಲಸಗಳಿಗೆ ಅಗತ್ಯವಾದ ತಾಂತ್ರಿಕ ಅರ್ಹತೆಯನ್ನು ಕಡ್ಡಾಯವಾಗಿ ಪೂರೈಸಬೇಕು.

ಈ ಮೂವರಲ್ಲಿ ಯಾವುದೇ ಸಲಹೆಗಾರರು ಕಡ್ಡಾಯ ಮಾನದಂಡಗಳನ್ನು ಪೂರೈಸಿಲ್ಲ ಮತ್ತು ಕೆಳಗೆ ವಿವರಿಸಿದ ಕಾರಣಗಳಿಗಾಗಿ ತಾಂತ್ರಿಕವಾಗಿ ಅನರ್ಹರು ಎಂಬ ಕಾರಣಕ್ಕೆ ತಿರಸ್ಕರಿಬೇಕಿತ್ತು ಎಂದು ಲೆಕ್ಕಪರಿಶೋಧನೆ ಗಮನಿಸಿದೆ (ಡಿಸೆಂಬರ್ 2021):

i) ಎಂ/ಎಸ್ ಸಿವಿಲ್ ಟೆಕ್ನಾಲಜೀಸ್ ಇಂಡಿಯಾ ಪ್ರೈ. ಲಿಮಿಟೆಡ್ (ಲೀಡ್) ಮತ್ತು ಎಂ/ಎಸ್ ಸಿ.ಎ.ಡಿ.ಡಿ ಸ್ಟೇಷನ್ ಟೆಕ್ನಾಲಜೀಸ್ ಪ್ರೈ. ಲಿಮಿಟೆಡ್ (ಜೆ.ವಿ):

ಅ) ಸಲಹೆಗಾರರು ಕಳೆದ ಐದು ವರ್ಷಗಳಲ್ಲಿ (ಅಂದರೆ, 2009–10 ರಿಂದ 2013–14) ಯಾವುದೇ ಎರಡು ವರ್ಷ ₹ 2.60 ಕೋಟಿಯ ಕನಿಷ್ಠ ವಾರ್ಷಿಕ ಹಣಕಾಸು ವಹಿವಾಟು ಹೊಂದಿಲ್ಲ;

ಆ) ಸಮಾಲೋಚಕರು ₹ 50 ಕೋಟಿ ಮತ್ತು ಅದಕ್ಕಿಂತ ಕಡಿಮೆ ಮೌಲ್ಯದ ರಸ್ತೆ, ಚರಂಡಿ ಮತ್ತು ಅಡಿಗಾಲುವೆ ಕಾಮಗಾರಿಗಳಿಗೆ ಮೇಲ್ವಿಚಾರಣಾ ಸೇವೆಗಳನ್ನು ಸಲ್ಲಿಸಿಲ್ಲ;

ಇ) ಡಿಎಂಎ, ಒಂದೇ ಪ್ರಮುಖ ವೃತ್ತಿಪರ ಸಿಬ್ಬಂದಿಯ ವೈಯಕ್ತಿಕ ಅಧ್ಯಯನ ಕ್ರಮವನ್ನು ಎರಡು ಮ.ಪಾಗಳಿಗೆ ಮಾತ್ರ ಬಳಸಬಹುದೆಂದು ಷರತ್ತು ವಿಧಿಸಿದೆ (ಜುಲೈ 2014). ಇದರ ಹೊರತಾಗಿಯೂ, ಸಲಹೆಗಾರರು ಮೂರು ಮ.ಪಾಗಳಿಗೆ ಅದೇ ಪ್ರಮುಖ ವೃತ್ತಿಪರ ಸಿಬ್ಬಂದಿಯನ್ನು ಪ್ರಸ್ತಾಪಿಸಿದ್ದರು.

ii) ಎಂ/ಎಸ್ ಸಿ.ಎ.ಡಿ.ಡಿ ಸ್ಟೇಷನ್ ಟೆಕ್ನಾಲಜೀಸ್ ಪ್ರೈ. ಲಿ.ರವರು 2009–14ರ ಅವಧಿಯಲ್ಲಿ ₹ 50 ಕೋಟಿ ಮತ್ತು ಅದಕ್ಕಿಂತ ಹೆಚ್ಚಿನ ಮೌಲ್ಯದ ರಸ್ತೆ, ಚರಂಡಿ ಮತ್ತು ಅಡಿಗಾಲುವೆಗಳ ಕಾಮಗಾರಿಗಳಿಗೆ ಡಿಪಿಆರ್ ಸಿದ್ಧಪಡಿಸಿಲ್ಲ ಅಥವಾ ಮೇಲ್ವಿಚಾರಣಾ ಸೇವೆಗಳನ್ನು ನೀಡಿಲ್ಲ.

iii) ಎಂ/ಎಸ್ ಇನ್ಫ್ರಾ ಸಪೋರ್ಟ್ ಇಂಜಿನಿಯರಿಂಗ್ ಕನ್ಸಲ್ಟೆಂಟ್ಸ್ ಪ್ರೈ. ಲಿಮಿಟೆಡ್ ರವರು ₹ 23.93 ಕೋಟಿ ವೆಚ್ಚದ ನೀರು ಸರಬರಾಜು ಮತ್ತು ಯುಜಿಡಿ ಕಾಮಗಾರಿಗಳಿಗೆ ಮೇಲ್ವಿಚಾರಣಾ ಸೇವೆಗಳನ್ನು ಸಲ್ಲಿಸಿದೆ, ಇದು ನಿಗದಿತ ಮಿತಿ ₹ 25 ಕೋಟಿಗಿಂತ ಕಡಿಮೆಯಾಗಿದೆ.

ಇವುಗಳ ಹೊರತಾಗಿಯೂ, ಡಿ.ಎಂ.ಎ/ಯು.ಡಿ.ಡಿ ಮೇಲಿನ ಟೆಂಡರ್‌ಗಳನ್ನು ಒಪ್ಪಿಕೊಂಡಿತು, ಇದು ಈ ಸಲಹಾ ಸಂಸ್ಥೆಗಳಿಗೆ ಅನಗತ್ಯವಾದ ಅನುಕೂಲವನ್ನು ವಿಸ್ತರಿಸಲು ಕಾರಣವಾಯಿತು (ವಿವರಗಳನ್ನು **ಅನುಬಂಧ 3.2** ರಲ್ಲಿ ನೀಡಲಾಗಿದೆ). ಡಿ.ಎಂ.ಎಯಿಂದ ತಪ್ಪಾದ ತಾಂತ್ರಿಕ ಮೌಲ್ಯಮಾಪನವು ಈ ಅನರ್ಹ ಸಲಹೆಗಾರರಿಗೆ ₹ 14.63 ಕೋಟಿ ಮೊತ್ತದ ಕಾಮಗಾರಿಗಳನ್ನು ನೀಡಲು ಕಾರಣವಾಯಿತು.

ರಾಜ್ಯ ಸರ್ಕಾರವು ಸ್ಪರ್ಧಾತ್ಮಕತೆಯನ್ನು ಸೃಷ್ಟಿಸಲು ಮತ್ತು ನಿಗದಿತ ಸಮಯದೊಳಗೆ ಯೋಜನೆಯನ್ನು ಪೂರ್ಣಗೊಳಿಸಲು ಟೆಂಡರ್ ಪರಿಶೀಲನಾ ಸಮಿತಿಯು ಕೆಲವು ಸಣ್ಣ ಅರ್ಹತೆಯ ಮಾನದಂಡಗಳನ್ನು ಸಡಿಲಗೊಳಿಸಿದೆ ಎಂದು ಹೇಳಿದೆ(ಏಪ್ರಿಲ್ 2022). ಉತ್ತರವು ವಾಸ್ತವಿಕವಾಗಿ ತಪ್ಪಾಗಿದೆ ಏಕೆಂದರೆ ಇವು ಕಡ್ಡಾಯ ಮಾನದಂಡಗಳಾಗಿವೆ ಮತ್ತು ದಾಖಲೆಯಲ್ಲಿ ಈ ಅರ್ಹತಾ ಮಾನದಂಡಗಳನ್ನು ಸಡಿಲಿಸುವ ಯಾವುದೇ ಸಾಕ್ಷ್ಯ/ ಪುರಾವೆಗಳಿಲ್ಲ. ಇದಲ್ಲದೆ, ಡಿಎಂಎ/ಯುಡಿಡಿಯಲ್ಲಿನ ಟೆಂಡರ್ ಮೌಲ್ಯಮಾಪನದಲ್ಲಿ

ಸ್ಪಷ್ಟವಾದ ತಪ್ಪುಗಳನ್ನು ಎತ್ತಿ ತೋರಿಸುವ ಲೆಕ್ಕಪರಿಶೋಧನಾ ಅಂಶಗಳನ್ನು ಉತ್ತರವು ತಿಳಿಸುವುದಿಲ್ಲ, ಇದು ಅನರ್ಹ ಸಲಹೆಗಾರರಿಗೆ ಕೆಲಸಗಳನ್ನು ನೀಡಲು ಕಾರಣವಾಗಿದೆ ಮತ್ತು, ಅದರ ಜವಾಬ್ದಾರಿಯನ್ನು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ನಿಗದಿಪಡಿಸಬೇಕಾಗುತ್ತದೆ.

### *3.5.2 ತಾಂತ್ರಿಕ ಬಿಡ್‌ನ ಮೌಲ್ಯಮಾಪನದಲ್ಲಿ ಕಂಡ ನ್ಯೂನತೆಗಳು.*

ಟೆಂಡರ್ ದಾಖಲೆಗಳ ಷರತ್ತು 5.13, ಪ್ರಮುಖ ವೃತ್ತಿಪರ ಸಿಬ್ಬಂದಿಯ ಕನಿಷ್ಠ ಅರ್ಹತೆ ಮತ್ತು ಅನುಭವವನ್ನು ನಿಗದಿಪಡಿಸಿದೆ. ಈ ಷರತ್ತಿನ ಪ್ರಕಾರ, ಪ್ರಸ್ತಾಪಿಸಿದ ತಂಡದ ಮುಖ್ಯಸ್ಥರು ₹ 100 ಕೋಟಿ ಅಥವಾ ಅದಕ್ಕಿಂತ ಹೆಚ್ಚಿನ ವೆಚ್ಚದ ಯೋಜನೆಯಲ್ಲಿ ತಂಡವನ್ನು ಮುನ್ನಡೆಸಿರಬೇಕು ಮತ್ತು ಕನಿಷ್ಠ 15 ವರ್ಷಗಳ ಅನುಭವವನ್ನು ಹೊಂದಿರಬೇಕು. ತಂಡದ ಉಪ ನಾಯಕ ₹ 50 ಕೋಟಿ ಅಥವಾ ಅದಕ್ಕಿಂತ ಅಧಿಕ ವೆಚ್ಚದ ಯೋಜನೆಯಲ್ಲಿ ಕೆಲಸ ಮಾಡಬೇಕಾಗಿತ್ತು. ಅಂತೆಯೇ, ಷರತ್ತು 5.14 ಉಪ–ಪ್ರಮುಖ ಸಿಬ್ಬಂದಿಯ ಅರ್ಹತೆ ಮತ್ತು ಅನುಭವವನ್ನು ಸೂಚಿಸಿದೆ. ಅಲ್ಲದೆ, ಆರ್.ಎಫ್.ಪಿಯ ಅನುಬಂಧದ ಪ್ರಕಾರ, ಪ್ರಮುಖ ವೃತ್ತಿಪರ ಸಿಬ್ಬಂದಿಯ ವಯಸ್ಸು 65 ವರ್ಷಕ್ಕಿಂತ ಹೆಚ್ಚಿರಬಾರದು.

ಆಯ್ದ ಮೂರು ಏಜೆನ್ಸಿಗಳು ಪ್ರಸ್ತಾಪಿಸಿದ ಪ್ರಮುಖ ಸಿಬ್ಬಂದಿಯ ಅಗತ್ಯ ಅನುಭವ/ಅರ್ಹತೆಯಲ್ಲಿ ಈ ಕೆಳಗಿನ ನ್ಯೂನತೆಗಳನ್ನು ಗುರುತಿಸದ ಕಾರಣ ಡಿ.ಎಂ.ಎಯಿಂದ ಟೆಂಡರ್ ಪರಿಶೀಲನೆಯು ದೋಷಪೂರಿತವಾಗಿದೆ ಎಂದು ಲೆಕ್ಕಪರಿಶೋಧನೆ ಗಮನಿಸಿದೆ (ಡಿಸೆಂಬರ್ 2021):

i) ದಾವಣಗೆರೆ, ಶಿವಮೊಗ್ಗ ಮತ್ತು ತುಮಕೂರಿನ ತಂಡದ ಮುಖ್ಯಸ್ಥರು (ಎಂ/ಎಸ್ ಸಿವಿಲ್ ಟೆಕ್ನಾಲಜೀಸ್ ಇಂಡಿಯಾ ಪ್ರೈ. ಲಿಮಿಟೆಡ್ ಮತ್ತು ಎಂ/ಎಸ್ ಸಿ.ಎ.ಡಿ.ಡಿ ಸ್ಪೇಷನ್ ಟೆಕ್ನಾಲಜೀಸ್ ಪ್ರೈ. ಲಿಮಿಟೆಡ್‌ನ ಜೆ.ವಿ), ₹ 100 ಕೋಟಿ ವೆಚ್ಚದ ಯೋಜನೆಯ ನೇತೃತ್ವ ವಹಿಸಿರಲಿಲ್ಲ.

ii) ವಿಜಯಪುರಕ್ಕೆ (ಎಂ/ಎಸ್ ಇನ್ಫ್ರಾ ಸಪೋರ್ಟ್ ಇಂಜಿನಿಯರಿಂಗ್ ಕನ್ಸಲ್ಟೆಂಟ್ಸ್ ಪ್ರೈ. ಲಿಮಿಟೆಡ್) ಪ್ರಸ್ತಾಪಿಸಿದ ತಂಡದ ನಾಯಕನ ಅನುಭವ ಕೇವಲ 14 ವರ್ಷಗಳು ಮತ್ತು ಒಂದು ತಿಂಗಳಾಗಿತ್ತು;

iii) ಬೆಳಗಾವಿ ಮತ್ತು ಹೆಸ್.ಡಿ.ಎಂ.ಸಿ(ಎಂ/ಎಸ್ ಇನ್ಫ್ರಾ ಸಪೋರ್ಟ್ ಇಂಜಿನಿಯರಿಂಗ್ ಕನ್ಸಲ್ಟೆಂಟ್ಸ್ ಪ್ರೈ. ಲಿಮಿಟೆಡ್) ಗೆ ಪ್ರಸ್ತಾಪಿಸಿದ ಉಪ ತಂಡದ ನಾಯಕ ₹ 50 ಕೋಟಿ ವೆಚ್ಚದ ಯೋಜನೆಯಲ್ಲಿ ಕೆಲಸ ನಿರ್ವಹಿಸಿರಲಿಲ್ಲ; ಮತ್ತು

iv) ಮೈಸೂರಿಗೆ (ಎಂ/ಎಸ್ ಸಿ.ಎ.ಡಿ.ಡಿ ಸ್ಪೇಷನ್ ಟೆಕ್ನಾಲಜೀಸ್ ಪ್ರೈ. ಲಿಮಿಟೆಡ್) ಪ್ರಸ್ತಾಪಿಸಲಾದ ತಂಡದ ನಾಯಕನ ವಯಸ್ಸು 65 ವರ್ಷಗಳಿಗಿಂತ ಹೆಚ್ಚುಗಿತ್ತು.

ಬಿಡ್ ದಾಖಲೆಗಳಲ್ಲಿ ಉಪ–ಪ್ರಮುಖ ಸಿಬ್ಬಂದಿಯ ಹೆಸರುಗಳು ಮತ್ತು ಅನುಭವವನ್ನು ನಮೂದಿಸುವ ಬದಲು, ಈ ಮೂರು ಏಜೆನ್ಸಿಗಳಲ್ಲಿ ಎರಡು (ಎಂ/ಎಸ್ ಸಿವಿಲ್ ಟೆಕ್ನಾಲಜೀಸ್ ಮತ್ತು ಎಂ/ಎಸ್ ಇನ್ಫ್ರಾ ಸಪೋರ್ಟ್), 'ನಿಯೋಜನೆಗೊಳ್ಳಬೇಕಿದೆ' ಮತ್ತು 'ಟಿ.ಬಿ.ಎ' ಎಂದು ನಮೂದಿಸಿರುವುದನ್ನು ಲೆಕ್ಕಪರಿಶೋಧನೆ ಗಮನಿಸಿದೆ. ಅಗತ್ಯ ಅರ್ಹತೆ ಮತ್ತು ಉಪ–ಪ್ರಮುಖ ಸಿಬ್ಬಂದಿಯ ಅನುಭವವನ್ನು ಖಾತರಪಡಿಸಿಕೊಳ್ಳಲು ಸಾಧ್ಯವಾಗದಿದ್ದರೂ, ಡಿ.ಎಂ.ಎ ಈ ಎರಡು ಏಜೆನ್ಸಿಗಳಿಗೆ ಅರ್ಹತೆ ನೀಡಿತು.

### *3.5.3 ಹಲವು ಪ್ಯಾಕೇಜ್‌ಗಳನ್ನು ನೀಡಿರುವುದು.*

ಟೆಂಡರ್ ದಾಖಲೆಗಳ ಷರತ್ತು 2.7.3 ರಂತೆ, ಸಲಹೆಗಾರರು ಒಂದಕ್ಕಿಂತ ಹೆಚ್ಚು ಮ.ಪಾ ಪ್ಯಾಕೇಜ್‌ಗಳಿಗೆ ಅರ್ಜಿ ಸಲ್ಲಿಸಿದರೆ, ಹಲವು ಪ್ಯಾಕೇಜ್‌ಗಳ ಕಾರ್ಯಗಳನ್ನು ಕೈಗೊಳ್ಳಲು ಅವರ ಸಂಯೋಜಿತ

ಸಾಮರ್ಥ್ಯಗಳನ್ನು ಖಚಿತಪಡಿಸಿಕೊಳ್ಳಲು ಡಿ.ಎಂ.ಎ ಹಕ್ಕನ್ನು ಹೊಂದಿದೆ. ಆದಾಗ್ಯೂ, ಯಾವುದೇ ಸಂದರ್ಭದಲ್ಲಿ, ಒಬ್ಬ ಸಲಹೆಗಾರನಿಗೆ ಮೂರು ಮ.ಪಾ ಪ್ಯಾಕೇಜ್‌ಗಳಿಗಿಂತ ಹೆಚ್ಚಿನದನ್ನು ನೀಡಲಾಗುವುದಿಲ್ಲ.

ಇದಕ್ಕೆ ವಿರುದ್ಧವಾಗಿ, ಎಂ/ಎಸ್ ಸಿ.ಎ.ಡಿ.ಡಿ ಸ್ಟೇಷನ್ ಟೆಕ್ನಾಲಜೀಸ್ ಪ್ರೈ. ಲಿ.ಗೆ (**ಅನುಬಂಧ 3.3** ರಲ್ಲಿ ವಿವರಿಸಿದಂತೆ) ಆರು ಪ್ಯಾಕೇಜ್‌ಗಳಲ್ಲಿ ಪಿ.ಎಂ.ಸಿ ಕಾರ್ಯಗಳನ್ನು ನೀಡಲಾಯಿತು.

ರಾಜ್ಯ ಸರ್ಕಾರವು, ಎಂ/ಎಸ್ ಸಿ.ಎ.ಡಿಡಿ ಸ್ಟೇಷನ್ ಟೆಕ್ನಾಲಜೀಸ್‌ಗೆ ಡಿ.ಎಂ.ಎಯಿಂದ ಕೇವಲ ಎರಡು ಪ್ಯಾಕೇಜ್‌ಗಳನ್ನು ನೀಡಲಾಗಿದೆ ಮತ್ತು ಕಲಬುರಗಿ ಪ್ಯಾಕೇಜ್ ಅನ್ನು ಪ್ರತ್ಯೇಕ ಟೆಂಡರ್‌ನಲ್ಲಿ ನೀಡಲಾಗಿದೆ ಎಂದು ಉತ್ತರಿಸಿದೆ (ಏಪ್ರಿಲ್ 2022). ಉಳಿದ ಪ್ಯಾಕೇಜ್‌ಗಳನ್ನು ಎಂ/ಎಸ್ ಸಿವಿಲ್ ಟೆಕ್ನಾಲಜೀಸ್ ಮತ್ತು ಎಂ/ಎಸ್ ಸಿ.ಎ.ಡಿ.ಡಿ ಸ್ಟೇಷನ್ ಟೆಕ್ನಾಲಜೀಸ್‌ನ ಜೆ.ವಿಗೆ ನೀಡಲಾಯಿತು ಹಾಗು ಇದನ್ನು ಟೆಂಡರ್ ಷರತ್ತುಗಳ ಪ್ರಕಾರ ಅನುಮತಿಸಲಾಗಿದೆ. ಕನ್ಸಲ್ಟೆನ್ಸಿ ಸೇವೆಗಳ ಪ್ರಸ್ತಾವನೆಗಾಗಿ ಉಲ್ಲೇಖದ ನಿಯಮಗಳಿಗೆ ಅನುಗುಣವಾಗಿ ಸಲಹಾ ಕೆಲಸಕ್ಕೆ ಸಂಬಂಧಿಸಿದ ಎಲ್ಲಾ ಬಾಧ್ಯತೆಗಳು ಮತ್ತು ಹೊಣೆಗಾರಿಕೆಗಳಿಗೆ ಜಂಟಿ ಉದ್ಯಮ ಪಾಲುದಾರರು ಜಂಟಿಯಾಗಿ ಮತ್ತು ತೀವ್ರವಾಗಿ ಜವಾಬ್ದಾರರಾಗಿರುವುದರಿಂದ ಉತ್ತರವು ಸ್ವೀಕಾರಾರ್ಹವಲ್ಲ.

### *3.5.4 ಪ್ರಮುಖ ವೃತ್ತಿಪರ ಸಿಬ್ಬಂದಿಯಲ್ಲಿನ ವ್ಯತ್ಯಾಸಗಳ ಪ್ರಸ್ತಾವನೆ ಮತ್ತು ನಿಯೋಜನೆ.*

ನಗರೋತ್ಥಾನದ ರಾಜ್ಯ ಮಟ್ಟದ ಸಮಿತಿಯು (ಸರ್ಕಾರದ ಕಾರ್ಯದರ್ಶಿ, ಯುಡಿಡಿ ನೇತೃತ್ವದ) ತನ್ನ 32 ನೇ ಸಭೆಯಲ್ಲಿ (ಜನವರಿ 2015) ಏಳು ಮ.ಪಾಗಳಲ್ಲಿ ಪಿ.ಎಂ.ಸಿಗಳನ್ನು ನೇಮಿಸುವ ಹಣಕಾಸಿನ ಪ್ರಸ್ತಾವನೆಯನ್ನು ಅನುಮೋದಿಸಿದ್ದು, ಪ್ರಸ್ತಾವನೆಯಲ್ಲಿ ಹೆಸರಿಸಲಾದ ಪ್ರಮುಖ ವೃತ್ತಿಪರರನ್ನು ಏಜೆನ್ಸಿ ನಿಯೋಜಿಸಬೇಕು ಎಂಬ ಷರತ್ತು ಒಳಗೊಂಡಿತ್ತು. .

ಆದಾಗ್ಯೂ, ಲೆಕ್ಕಪರಿಶೋಧನೆಯು ಈ ಏಳು ಮ.ಪಾಗಳಲ್ಲಿನ ಐದರಲ್ಲಿ ನಿಯೋಜಿಸಲಾದ ಪ್ರಮುಖ ಸಿಬ್ಬಂದಿಗಳಲ್ಲಿ ವ್ಯತ್ಯಾಸಗಳಿವೆ ಎಂದು ಗಮನಿಸಿದೆ (ಡಿಸೆಂಬರ್ 2021). ವಿವರಗಳನ್ನು **ಅನುಬಂಧ 3.4** ರಲ್ಲಿ ನೀಡಲಾಗಿದೆ.

ಟೆಂಡರ್ ಪ್ರಸ್ತಾವನೆಗಳಲ್ಲಿ ಹೆಸರಿಸಲಾದ ಪ್ರಮುಖ ವೃತ್ತಿಪರ ಸಿಬ್ಬಂದಿಯನ್ನು ಏಜೆನ್ಸಿಗಳು ನಿಯೋಜಿಸಿರುವುದನ್ನು ಖಾತ್ರಿಪಡಿಸುವಲ್ಲಿ ಡಿಎಂಎ ವೈಫಲ್ಯವು ಟೆಂಡರ್ ಒಪ್ಪಂದಗಳ ಉಲ್ಲಂಘನೆಯ ಜೊತೆಗೆ ಸರ್ಕಾರದ ಕಾರ್ಯದರ್ಶಿ, ಯುಡಿಡಿ ನೇತೃತ್ವದ 32 ನೇ ರಾಜ್ಯ ಮಟ್ಟದ ಸಮಿತಿಯ ಆದೇಶವನ್ನು ಉಲ್ಲಂಘಿಸಿದೆ.

### *3.5.5 ಮಹಾನಗರ ಪಾಲಿಕೆ ಬಳ್ಳಾರಿಯಿಂದ ತಾಂತ್ರಿಕ ಸಾಮರ್ಥ್ಯದ ಅಸಮರ್ಪಕ ಮೌಲ್ಯಮಾಪನ.*

ಮ.ಪಾಗಳಿಗೆ ಪಿ.ಎಂ.ಸಿಗಳ ಅಗತ್ಯವನ್ನು ಸೂಚಿಸಲು ಡಿ.ಎಂ.ಎ ಇಂದ ಸೂಚನೆಗಳನ್ನು ಸ್ವೀಕರಿಸಿದ (6 ಜೂನ್ 2014) ಪರಿಣಾಮವಾಗಿ, ಆಯುಕ್ತರು 18 ಜೂನ್ 2014 ರಂದು ಪಿ.ಎಂ.ಸಿ ನೇಮಕಾತಿಗಾಗಿ ಡಿ ಎಂ.ಎಯನ್ನು ವಿನಂತಿಸಿದರು. ಆದಾಗ್ಯೂ, ಡಿಸಿ, ಬಳ್ಳಾರಿ 20 ಜೂನ್ 2014 ರಂದು ನಿರ್ದೇಶಕರು, ಡಿ.ಎಂ.ಎ ಅವರೊಂದಿಗೆ ದೂರವಾಣಿ ಸಂಭಾಷಣೆಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲು ಪಿ.ಎಂ.ಸಿಗಳನ್ನು ನೇಮಿಸುವ ಅಗತ್ಯವಿಲ್ಲ ಎಂದು ಸೂಚಿಸಿದರು.

ಇದರ ಪರಿಣಾಮವಾಗಿ, ಪಿ.ಎಂ.ಸಿಗಳ ಕೇಂದ್ರೀಕೃತ ಟೆಂಡರ್‌ಗಳನ್ನು ಆಹ್ವಾನಿಸುವಾಗ ಡಿಎಂ.ಎ ಬಳ್ಳಾರಿಯನ್ನು ಹೊರತುಪಡಿಸಿತು. ಲೆಕ್ಕಪರಿಶೋಧನೆಯು, ಡಿ.ಎಂ.ಎ ಏಳು ಮ.ಪಾಗಳಿಗೆ ಕೇಂದ್ರೀಕೃತ ಟೆಂಡರ್‌ನ ಆಹ್ವಾನದ (ಜೂನ್ 2014) ಮತ್ತು ಅದರ ತಾಂತ್ರಿಕ ಮೌಲ್ಯಮಾಪನದ (ಸೆಪ್ಟೆಂಬರ್ 2014)

ನಂತರ, ಡಿಸಿ, ಬಳ್ಳಾರಿ ಅವರು ಡಿ.ಎಂ.ಎಗೆ ಅಗತ್ಯವಿರುವ ತಾಂತ್ರಿಕ ಸಾಮರ್ಥ್ಯದ ಅಲಭ್ಯತೆಯನ್ನು ಉಲ್ಲೇಖಿಸಿ ಪಿ.ಎಂ.ಸಿಗಳಿಗಾಗಿ ಟೆಂಡರ್‌ಗಳುನ್ನು ಕರೆಯಲು ಅನುಮತಿ ನೀಡುವಂತೆ ವಿನಂತಿಸಿದ್ದಾರೆ (ನವೆಂಬರ್ ಮತ್ತು ಡಿಸೆಂಬರ್ 2014) ಎಂದು ಗಮನಿಸಿತು (ನವೆಂಬರ್ 2021). ಡಿ.ಎಂ.ಎ ಅನುಮೋದನೆ ನೀಡಿದ್ದರಿಂದ ಬಳ್ಳಾರಿ ಮ.ಪಾ ಪಿ.ಎಂ.ಸಿಗಾಗಿ ವೈಯಕ್ತಿಕ ಟೆಂಡರ್‌ಗಳನ್ನು ಆಹ್ವಾನಿಸಿದೆ (ಜನವರಿ 2015).

ಎಂ/ಎಸ್ ನಿಕೇತನ್ ಕನ್ಸಲ್ಟೆಂಟ್ಸ್ ಪ್ರೈವೇಟ್. ಲಿ. ಮತ್ತು ಎಂ/ಎಸ್ ಯುನಿಸನ್ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಪ್ರೈ. ಲಿ. ಜಂಟಿ ಉದ್ಯಮದಿಂದ ಒಂದೇ ಬಿಡ್ ಅನ್ನು ಸ್ವೀಕರಿಸಲಾಗಿದೆ ಎಂದು ಲೆಕ್ಕಪರಿಶೋಧನೆ ಗಮನಿಸಿದೆ ಮತ್ತು ಅದನ್ನು ತಿರಸ್ಕರಿಸಿ ಹೊಸದಾಗಿ ಟೆಂಡರ್ ಆಹ್ವಾನಿಸುವ ಬದಲು ಸಿಂಗಲ್ ಬಿಡ್ದಾರನಿಗೆ ಕೆಲಸವನ್ನು ವಹಿಸಲಾಯಿತು (ಆಗಸ್ಟ್ 2015).

ಮ.ಪಾ ಇಂಜಿನಿಯರ್‌ಗಳ ಮೂಲಕ ಕಾಮಗಾರಿಗಳನ್ನು ಸಿದ್ಧಪಡಿಸಿ ಕಾರ್ಯಗತಗೊಳಿಸಲು ಬಳ್ಳಾರಿ ಮ.ಪಾಯು (ಜೂನ್ 2014) ಯೋಜಿಸಿತ್ತು ಎಂದು ರಾಜ್ಯ ಸರ್ಕಾರ ಹೇಳಿದೆ (ಏಪ್ರಿಲ್ 2022). ತರುವಾಯ, ವಿವರವಾದ ಸಮೀಕ್ಷೆಗಳು, ಸ್ಥಳ ಪರೀಕ್ಷೆ, ವಿನ್ಯಾಸ/ರೇಖಾಚಿತ್ರಗಳ ತಯಾರಿಕೆ ಮತ್ತು ಗುಣಮಟ್ಟದ ಮೇಲ್ವಿಚಾರಣೆಯ ಅಗತ್ಯವಿರುವ ಪ್ರಮುಖ ಕೆಲಸಗಳಾಗಿರುವುದರಿಂದ ಡಿಸೆಂಬರ್ 2014 ರಲ್ಲಿ ಪಿ.ಎಂ.ಸಿಯನ್ನು ನೇಮಿಸಲು ನಿರ್ಧರಿಸಲಾಯಿತು. ಸೆಪ್ಟೆಂಬರ್ 2013/ಮೇ 2014 ರಲ್ಲಿ ನೀಡಲಾದ ಯೋಜನಾ ಮಾರ್ಗಸೂಚಿಗಳಲ್ಲಿ ಕಾಮಗಾರಿಗಳ ಸ್ವರೂಪವನ್ನು ಈಗಾಗಲೇ ವ್ಯಾಖ್ಯಾನಿಸಲಾಗಿದೆ ಮತ್ತು ಜೂನ್ 2014 ರ ಮೊದಲು ಬಳ್ಳಾರಿಯ ಕ್ರಿಯಾ ಯೋಜನೆಯನ್ನು ಅನುಮೋದಿಸಿರುವುದರಿಂದ ಉತ್ತರವು ಸ್ವೀಕಾರಾರ್ಹವಲ್ಲ.

### *3.5.6 ಮ.ಪಾ. ಬಳ್ಳಾರಿಯಲ್ಲಿ ಯೋಜನಾ ನಿರ್ವಹಣೆ ಸಲಹೆಗಾರರ ಕಾರ್ಯಕ್ಷಮತೆಯ ಅಸಮರ್ಪಕ ಮೌಲ್ಯಮಾಪನ.*

ಡಿ.ಎಂ.ಎಯಿಂದ ಪಿ.ಎಂ.ಸಿ ನೇಮಕಕ್ಕಾಗಿ ಅನುಮೋದನೆಯ (ಡಿಸೆಂಬರ್ 2014) ನಂತರ, ಬಳ್ಳಾರಿ ಮ.ಪಾ ಟೆಂಡರ್‌ಗಳನ್ನು ಆಹ್ವಾನಿಸಿದೆ (ಜನವರಿ 2015). ಟೆಂಡರ್ ಮೌಲ್ಯಮಾಪನದಲ್ಲಿ ಈ ಕೆಳಗಿನ ವ್ಯತ್ಯಾಸಗಳನ್ನು ಲೆಕ್ಕಪರಿಶೋಧನೆ (ನವೆಂಬರ್ 2021) ಗಮನಿಸಿತು.

i) ಟೆಂಡರ್ ಷರತ್ತುಗಳ ಪ್ರಕಾರ, ಜೆವಿಯ ಪ್ರಮುಖ ಸಲಹೆಗಾರರು ಅರ್ಹತಾ ಮಾನದಂಡಗಳನ್ನು ಪೂರೈಸಬೇಕು ಮತ್ತು ಕಡ್ಡಾಯವಾಗಿ ರಸ್ತೆ ಕಾಮಗಾರಿಗಳು ಅಥವಾ ನೀರು ಸರಬರಾಜು/ಯುಜಿಡಿ ಕೆಲಸಗಳ ಅಗತ್ಯವಿರುವ ತಾಂತ್ರಿಕ ಅರ್ಹತೆಯನ್ನು ಪೂರೈಸಬೇಕು. ಈ ಕೆಲಸವನ್ನು ಎಂ/ ಎಸ್ ನಿಕೇತನ್ ಕನ್ಸಲ್ಟೆಂಟ್ಸ್ ಪ್ರೈವೇಟ್‌ನ ಲಿ. (ಲೀಡ್) ಮತ್ತು ಎಂ/ಎಸ್ ಯುನಿಸನ್ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಪ್ರೈ. ಲಿ ಜೆವಿಗೆ ನೀಡಲಾಯಿತು. ಆದಾಗ್ಯೂ, ಎಂ/ಎಸ್ ನಿಕೇತನ್ ಕನ್ಸಲ್ಟೆಂಟ್‌ಗಳು ರಸ್ತೆ ಕಾಮಗಾರಿಗಳನ್ನು ಮೇಲ್ವಿಚಾರಣೆ ಮಾಡುವ ಅಗತ್ಯವಿರುವ ತಾಂತ್ರಿಕ ಅರ್ಹತೆಯನ್ನು ಹೊಂದಿಲ್ಲದಿದ್ದರೂ, ಎಂ/ಎಸ್ ಯುನಿಸನ್ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಪ್ರೈವೇಟ್ ಲಿ.ನ ಅನುಭವವನ್ನು ಪರಿಗಣಿಸಿದೆ ಎಂದು ಲೆಕ್ಕಪರಿಶೋಧನೆ ಗಮನಿಸಿದೆ. ನೀರು ಸರಬರಾಜು/ಯುಜಿಡಿ ಕಾಮಗಾರಿಗಳಿಗಾಗಿ ಪರಿಗಣಿಸಲಾದ ಎಂ/ಎಸ್ ನಿಕೇತನ ಸಲಹೆಗಾರರ ಅನುಭವವು ಐದು ವರ್ಷಗಳ ಹಿಂದೆ ಪೂರ್ಣಗೊಂಡ ಯೋಜನೆಗಳಿಗೆ ಸಂಬಂಧಿಸಿದ್ದರಿಂದ, ತಾಂತ್ರಿಕ ಮೌಲ್ಯಮಾಪನದ ಸಮಯದಲ್ಲಿ ಯಾವುದೇ ತೂಕವನ್ನು ನೀಡಬಾರದು ಎಂದು ಲೆಕ್ಕಪರಿಶೋಧನೆ ಗಮನಿಸಿದೆ.

ii) ಟೆಂಡರ್ ದಾಖಲೆಗಳು ಸಲಹೆಗಾರರ ಸೇವೆಗಳನ್ನು ಒದಗಿಸಲು ಜೆವಿಯನ್ನು ಆಯ್ಕೆಮಾಡಿದರೆ, ನಿರ್ದಿಷ್ಟ ಪ್ರಾಜೆಕ್ಟ್ ಇನ್‌ಪುಟ್‌ಗಳು ಮತ್ತು ಪ್ರತಿ ಸಲಹೆಗಾರರ ಪಾತ್ರವನ್ನು ಸೂಚಿಸುವ

> ವಿವರವಾದ ಎಂಒಯು ಮತ್ತು ಸೇವೆಗಳ ವೆಚ್ಚದ ಶೇಕಡಾವಾರು ಹಂಚಿಕೆಯನ್ನು ಉದ್ಯೋಗದಾತರಿಗೆ ಸಲ್ಲಿಸಬೇಕು. ಆದಾಗ್ಯೂ, ಅಂತಹ ಯಾವುದೇ ಎಂಒಯು ದಾಖಲೆಗಳು ಲಭ್ಯವಿರಲಿಲ್ಲ. ಉದ್ಯೋಗಕ್ಕಾಗಿ ಪ್ರಸ್ತಾಪಿಸಲಾದ ಯಾವುದೇ ಸಿಬ್ಬಂದಿ ಎಂ/ಎಸ್ ಯುನಿಸನ್ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಪ್ರೈವೇಟ್ ಲಿಗೆ ಸೇರಿದವರಲ್ಲವಾದರು ರಸ್ತೆ ಕಾಮಗಾರಿ ಕಾರ್ಯಯೋಜನೆಯ ಅನುಭವಕ್ಕೆ ತಾಂತ್ರಿಕ ಮೌಲ್ಯಮಾಪನದಲ್ಲಿ ತೂಕ ನೀಡಲಾಗಿದೆ ಎಂದು ಲೆಕ್ಕಪರಿಶೋಧನೆ ಗಮನಿಸಿದೆ.

ಯೋಜನೆ ಅಡಿಯಲ್ಲಿ ನೀರು ಸರಬರಾಜು ಮತ್ತು ಯುಜಿಡಿ ಕಾಮಗಾರಿಗಳನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ (ಕೆಯುಡಬ್ಲ್ಯುಎಸ್‌ಡಿಬಿ) ವಹಿಸಿರುವುದರಿಂದ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಮಾನದಂಡಗಳನ್ನು ಸಡಿಲಿಸಲಾಗಿದೆ ಎಂದು ರಾಜ್ಯ ಸರ್ಕಾರವು ಹೇಳಿದೆ (ಏಪ್ರಿಲ್ 2022). ತಾಂತ್ರಿಕ ಮೌಲ್ಯಮಾಪನವನ್ನು ಜೂನ್ 2015 ರಲ್ಲಿ ನಡೆಸಿದ್ದು ನೀರು ಸರಬರಾಜು/ಯುಜಿಡಿ ಕಾಮಗಾರಿಗಳನ್ನು ಕೆಯುಡಬ್ಲ್ಯೂಎಸ್‌ಡಿಬಿಗೆ ವಹಿಸಲು ಅನುಮೋದನೆಯನ್ನು ಆಗಸ್ಟ್ 2017 ರಲ್ಲಿ ನೀಡಲಾಗಿರುವುದರಿಂದ ಉತ್ತರವು ತಪ್ಪುದಾರಿಗೆಳೆಯುವಂತಿದೆ. ಅಲ್ಲದೆ, ತಾಂತ್ರಿಕ ಮೌಲ್ಯಮಾಪನ ಪ್ರಕಾರ, ದಾಖಲೆಯಲ್ಲಿ ಅಂತಹ ಯಾವುದೇ ಸಡಿಲಿಕೆ ಇಲ್ಲ.

## 3.6 ಯೋಜನೆಯ ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆ.

ಕೆಳಗೆ ವಿವರಿಸಿದಂತೆ ಯೋಜನಾ ಕಾರ್ಯಗಳಿಗಾಗಿ ಬಿಡ್‌ಗಳ ಮೌಲ್ಯಮಾಪನದಲ್ಲಿ ನಿಗದಿಪಡಿಸಿದ ಮಾನದಂಡಗಳಿಂದ ವ್ಯತ್ಯಾಸಗಳನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಿದೆ:

### *3.6.1 ಅಸಮರ್ಪಕ ಪ್ರಚಾರ ಮತ್ತು ಕೆಲವೇ ಬಿಡ್ದಾರರ ಭಾಗವಹಿಸುವಿಕೆ*

ರಾಜ್ಯ ಸರ್ಕಾರವು ಹೊರಡಿಸಿದ (ಡಿಸೆಂಬರ್ 2002) ಮಾರ್ಗಸೂಚಿಗಳ ಪ್ರಕಾರ, ಒಂದು ಕಾಮಗಾರಿಗೆ ಮೂರಕ್ಕಿಂತ ಕಡಿಮೆ ಟೆಂಡರ್‌ಗಳು ಬಂದಾಗ ಹೊಸದಾಗಿ ಟೆಂಡರ್‌ಗಳನ್ನು ಆಹ್ವಾನಿಸಬೇಕಾಗಿತ್ತು. ಕೆಪಿಡಬ್ಲ್ಯುಡಿ ಕೋಡ್‌ನ ಕಂಡಿಕೆ 173, ಸ್ಥಳೀಯ ಪತ್ರಿಕೆಗಳಲ್ಲಿ ಇಂಗ್ಲಿಷ್ ಮತ್ತು ಕನ್ನಡದಲ್ಲಿ ಸೂಚನೆಯ ಮೂಲಕ ಸಾಧ್ಯವಾದಷ್ಟು ಮುಕ್ತ ಮತ್ತು ಸಾರ್ವಜನಿಕ ರೀತಿಯಲ್ಲಿ ಟೆಂಡರ್ ಅನ್ನು ಆಹ್ವಾನಿಸಬೇಕು ಎಂದು ಷರತ್ತು ವಿಧಿಸಿದೆ.

₹ 18.81 ಕೋಟಿ ವೆಚ್ಚದ 52 ಪರೀಕ್ಷಾ–ತನಿಖೆಗೆ ಒಳಪಟ ಪ್ಯಾಕೇಜ್‌ಗಳಲ್ಲಿ 13 (ಶೇ. 25) ಪ್ಯಾಕೇಜ್‌ಗಳಲ್ಲಿ, ಟೆಂಡರ್‌ಗಳ ಆಹ್ವಾನ/ತೆರೆಯುವಿಕೆಯ ಮಾಹಿತಿಯನ್ನು ಒಳಗೊಂಡಿರುವ ಸೂಚನೆ ಆಹ್ವಾನಿತ ಟೆಂಡರ್‌ಗಳು (ಎನ್.ಐ.ಟಿ) ಎರಡು ಪತ್ರಿಕೆಗಳ ಬದಲಿಗೆ ಸ್ಥಳೀಯ ಪತ್ರಿಕೆ ಒಂದರಲ್ಲಿ ಮಾತ್ರ ಪ್ರಕಟಿಸಲಾಗಿದೆ ಎಂದು ಲೆಕ್ಕಪರಿಶೋಧನೆ ಗಮನಿಸಿದೆ (ಆಗಸ್ಟ್‌ನಿಂದ ಡಿಸೆಂಬರ್ 2021). ₹ 17.05 ಕೋಟಿ ವೆಚ್ಚದ ಮತ್ತೊಂದು 13 ಪ್ಯಾಕೇಜ್‌ಗಳಿಗೆ (ಶೇ 25) ಸಂಬಂಧಿಸಿದಂತೆ, ಎನ್‌ಐಟಿಗಳನ್ನು ಲೆಕ್ಕಪರಿಶೋಧನೆಗಾಗಿ ಒದಗಿಸಲಾಗಿಲ್ಲ.

ಪರೀಕ್ಷಾ–ತನಿಖೆಗೆ ಒಳಪಟ 52 ಪ್ಯಾಕೇಜ್‌ಗಳಲ್ಲಿ, ₹ 39.14 ಕೋಟಿ ವೆಚ್ಚದ 31[19] ಪ್ಯಾಕೇಜ್‌ಗಳನ್ನು (ಶೇ 60) ಏಕ ಬಿಡ್‌ಗಳ ಆಧಾರದ ಮೇಲೆ ನೀಡಲಾಗಿದೆ. ₹ 13.88 ಕೋಟಿ ವೆಚ್ಚದ ಇನ್ನು 10[20]

---

[19] ಬಳ್ಳಾರಿ – 6 ಪ್ಯಾಕೇಜ್ (₹ 8.91 ಕೋಟಿ), ಮೈಸೂರು – 15 ಪ್ಯಾಕೇಜ್ (₹ 15.64 ಕೋಟಿ), ತುಮಕೂರು 7 ಪ್ಯಾಕೇಜ್ (₹ 11.55 ಕೋಟಿ) ಮತ್ತು ವಿಜಯಪುರ – 3 ಪ್ಯಾಕೇಜ್ (₹ 3.04 ಕೋಟಿ).

[20] ಬಳ್ಳಾರಿ – 1 ಪ್ಯಾಕೇಜ್ (₹ 1.66 ಕೋಟಿ), ಮೈಸೂರು – 3 ಪ್ಯಾಕೇಜ್ (₹ 4.33 ಕೋಟಿ), ತುಮಕೂರು – 3 ಪ್ಯಾಕೇಜ್ (₹ 4.87 ಕೋಟಿ) ಮತ್ತು ವಿಜಯಪುರ – 3 ಪ್ಯಾಕೇಜ್ (₹ 3.02 ಕೋಟಿ).

ಪ್ಯಾಕೇಜ್‌ಗಳಲ್ಲಿ (ಶೇ 19), ಪರೀಕ್ಷಾ-ತನಿಖೆಗೆ ಒಳ್ಳಪಟ ಮ.ಪಾಗಳಲ್ಲಿ ಎರಡು ಬಿಡ್‌ಗಳ ಆಧಾರದ ಮೇಲೆ ಕಾಮಗಾರಿಗಳನ್ನು ನೀಡಿವೆ.

ಟೆಂಡರ್‌ಗಳಿಗೆ ವ್ಯಾಪಕ ಪ್ರಚಾರವನ್ನು ನೀಡಲು ಮತ್ತು ಬಿಡ್‌ದಾರರು ಸಾಕಷ್ಟು ಭಾಗವಹಿಸದ ಪ್ರಕರಣಗಳಲ್ಲಿ ಹೊಸದಾಗಿ ಟೆಂಡರ್‌ಗಳನ್ನು ಆಹ್ವಾನಿಸದೆ ಕಾಮಗಾರಿಗಳನ್ನು ನೀಡಿದ ಮ.ಪಾಗಳು ಸರ್ಕಾರದ ಸೂಚನೆಗಳು/ಕೆ.ಪಿ.ಡಬ್ಲ್ಯೂ.ಡಿ ಕೋಡ್ ಅನ್ನು ಉಲ್ಲಂಘಿಸಿದ್ದಾರೆ. ಇದು ಯೋಜನೆಯಡಿಯಲ್ಲಿ ಕೈಗೊಂಡ ಕಾಮಗಾರಿಗಳಿಗೆ ಸ್ಪರ್ಧಾತ್ಮಕ ದರಗಳನ್ನು ಪಡೆಯಲು ಮ.ಪಾಗಳ ಅಸಮರ್ಪಕ ಪ್ರಯತ್ನವನ್ನು ಸೂಚಿಸುತ್ತದೆ.

ರಾಜ್ಯ ಸರ್ಕಾರವು ಭವಿಷ್ಯದಲ್ಲಿ ಕಾರ್ಯವಿಧಾನವನ್ನು ಅನುಸರಿಸಲು ಸಮ್ಮತಿಸುತ್ತಾ, ಕಾಮಗಾರಿಗಳ ಅವಶ್ಯಕತೆ ಮತ್ತು ತುರ್ತು ಕಾರಣದಿಂದ ಒಂದೇ ಟೆಂಡರ್‌ಗಳನ್ನು ಸ್ವೀಕರಿಸಲಾಗಿದೆ ಎಂದು ಹೇಳಿದೆ (ಏಪ್ರಿಲ್ 2022). ಯೋಜನಾ ಅಡಿಯಲ್ಲಿ ತೆಗೆದುಕೊಳ್ಳಲಾದ ಕಾಮಗಾರಿಗಳ ವಿಳಂಬ/ಕಾರ್ಯಗತಗೊಳಸದಿರುವ ನಿದರ್ಶನಗಳಿವೆ ಎಂದು ಲೆಕ್ಕಪರಿಶೋಧನೆ ಗಮನಿಸಿದ ಕಾರಣ ಉತ್ತರವನ್ನು ಸ್ವೀಕರಿಸಲಾಗುವುದಿಲ್ಲ (ಕಂಡಿಕೆ 3.8).

### *3.6.2 ಅನಿಯಮಿತ ಕಾಮಗಾರಿಗಳ ನೀಡುವಿಕೆ.*

ಕೆ.ಟಿ.ಪಿ.ಪಿ ನಿಯಮ 21 ರಂತೆ ಟೆಂಡರ್ ಸ್ವೀಕರಿಸುವ ಪ್ರಾಧಿಕಾರವು ಟೆಂಡರ್ ದಾಖಲೆಗಳಲ್ಲಿ ಸೂಚಿಸಲಾದ ಮೌಲ್ಯಮಾಪನ ಮಾನದಂಡಗಳಿಗೆ ಅನುಗುಣವಾಗಿ ಟೆಂಡರ್‌ಗಳ ಮೌಲ್ಯಮಾಪನವನ್ನು ಕಟ್ಟುನಿಟ್ಟಾಗಿ ನಡೆಸಬೇಕು ಎಂದು ಸೂಚಿಸಿದೆ.

ಎರಡು ಪರೀಕ್ಷಾ-ತನಿಖೆಗೆ ಒಳ್ಳಪಟ ಮ.ಪಾಗಳಲ್ಲಿ (ಬಳ್ಳಾರಿ ಮತ್ತು ಮೈಸೂರು) ಟೆಂಡರ್ ಮೌಲ್ಯಮಾಪನದಲ್ಲಿನ ವ್ಯತ್ಯಾಸಗಳು, 31 ಪರೀಕ್ಷಾ-ತನಿಖೆಗೆ ಒಳ್ಳಪಟ ಪ್ಯಾಕೇಜ್‌ಗಳಲ್ಲಿ ಆರನ್ನು (ಶೇ 19) ಅನರ್ಹ ಗುತ್ತಿಗೆದಾರರಿಗೆ ₹ 9.26 ಕೋಟಿ ವೆಚ್ಚದಲ್ಲಿ ನೀಡಲು ಕಾರಣವಾಯಿತು ಎಂದು ಲೆಕ್ಕಪರಿಶೋಧನೆಯಲ್ಲಿ ತೋರಿಸಿದೆ (ಸೆಪ್ಟೆಂಬರ್ ನಿಂದ ನವೆಂಬರ್ 2021). ವಿವರಗಳು ಈ ಕೆಳಗಿನಂತಿವೆ:

**(i)** <u>**ಬಳ್ಳಾರಿ**</u>

ಅ) <u>ಪ್ಯಾಕೇಜ್ 19</u>: ಟೆಂಡರ್ ದಾಖಲೆಗಳ ಷರತ್ತು 3.2 (ಸಿ) ಪ್ರಕಾರ, ಟೆಂಡರದಾರರು ಪ್ಯಾಕೇಜ್ 19ರಲ್ಲಿ ರಸ್ತೆ ಕಾಮಗಾರಿಯ ಗುತ್ತಿಗೆಯ ಅರ್ಹತೆ ಪಡೆಯಲು ಕಳೆದ ಐದು ವರ್ಷಗಳಲ್ಲಿ ಅಂದರೆ, 2010–11 ರಿಂದ 2014–15 ರವರೆಗೆ ಕನಿಷ್ಠ ಪ್ರಮಾಣದ 430 ಕ್ಯುಬಿಕ್ ಮೀಟರ (ಸಿ.ಯು.ಎಂ) ಡಾಂಬರು ಕಾಮಗಾರಿಯನ್ನು ನಿರ್ವಹಿಸಿರಬೇಕು. ಈ ಪ್ಯಾಕೇಜ್ ಅಡಿಯಲ್ಲಿ ನಾಲ್ಕು ರಸ್ತೆ ಕಾಮಗಾರಿಗಳನ್ನು (₹ 1.85 ಕೋಟಿ ವೆಚ್ಚ) ಗುತ್ತಿಗೆದಾರರಿಗೆ ನೀಡಲಾಯಿತು (ನವೆಂಬರ್ 2016).

ಡಿಎಂಎಯ ತಾಂತ್ರಿಕ ಮೌಲ್ಯಮಾಪನ ವರದಿಯ (ಆಗಸ್ಟ್ 2016) ಪ್ರಕಾರ, ಗುತ್ತಿಗೆದಾರರಿಂದ ನಿರ್ವಹಿಸಲಾದ ಡಾಂಬರು ಕಾಮಗಾರಿಯ ಪ್ರಮಾಣವು 403.27 ಸಿಯುಎಂ ಆಗಿತ್ತು ಮತ್ತು ಇದು ಟೆಂಡರ್ ದಾಖಲೆಯಲ್ಲಿ ನಿಗದಿಪಡಿಸಿದ ಪ್ರಮಾಣಕ್ಕಿಂತ ಕಡಿಮೆಯಾಗಿದೆ. ಡಾಂಬರಿನ ಕಾರ್ಯಗತಗೊಳಿಸಿದ ಪ್ರಮಾಣದಲ್ಲಿ ಕೊರತೆಯು ಚಿಕ್ಕದಾಗಿದೆ ಎಂದು ಉಲ್ಲೇಖಿಸಿ ಡಿಎಂಎ, ಗುತ್ತಿಗೆದಾರರಿಗೆ ಅರ್ಹತೆ ನೀಡಿತು. ಟೆಂಡರ್ ದಾಖಲೆಯಲ್ಲಿ ನಿಗದಿಪಡಿಸಿದ ಕನಿಷ್ಠ

ಮಾನದಂಡಗಳನ್ನು ಪೂರೈಸದ ಕಾರಣ, ತಾಂತ್ರಿಕ ಅರ್ಹತೆ ಮತ್ತು ಗುತ್ತಿಗೆದಾರರಿಗೆ ಕಾಮಗಾರಿಯನ್ನು ನೀಡಿರುವುದು ಸ್ವೀಕಾರಾರ್ಹವಲ್ಲ.

ಆ) 32ಎ ಮತ್ತು 36 ಪ್ಯಾಕೇಜುಗಳು: ಕೆ.ಡಬ್ಲ್ಯೂ–4[21] ಸ್ಟ್ಯಾಂಡರ್ಡ್ ಟೆಂಡರ್ ದಾಖಲೆ ಗುತ್ತಿಗೆದಾರರು ಕಳೆದ ಐದು ವರ್ಷಗಳಲ್ಲಿ ಎರಡರಲ್ಲಿ ಕನಿಷ್ಠ ಹಣಕಾಸಿನ ವಹಿವಾಟು ಅಂದಾಜು ವಾರ್ಷಿಕ ಪಾವತಿಗಳ ಎರಡು ಪಟ್ಟಿಗಿಂತ ಕಡಿಮೆಯಿಲ್ಲದಂತೆ ಸಾಧಿಸಬೇಕು ಎಂದು ಸೂಚಿಸಲಾಗಿದೆ. ಮ.ಪಾ, ಬಳ್ಳಾರಿ ₹ 2.22 ಕೋಟಿ[22] ವೆಚ್ಚದ ಎರಡು ಪರೀಕ್ಷಾ–ಪರಿಶೀಲಿತ ಪ್ಯಾಕೇಜ್‌ಗಳನ್ನು ಗುತ್ತಿಗೆದಾರರಿಗೆ ವಹಿಸಲಾಗಿದೆ (ಜುಲೈ ಮತ್ತು ಆಗಸ್ಟ್ 2017).

ಗುತ್ತಿಗೆದಾರರು ವಿವಿಧ ಕಾಮಗಾರಿಗಳಿಗೆ ಸಲ್ಲಿಸಿದ ಬಿಡ್ ದಾಖಲೆಗಳ ಹೋಲಿಕೆಯಿಂದ 2010–11 ಮತ್ತು 2011–12 ನೇ ಸಾಲಿನಲ್ಲಿ ಒದಗಿಸಲಾದ ಗುತ್ತಿಗೆದಾರರ ವಹಿವಾಟಿನಲ್ಲಿ ಭಾರಿ ವ್ಯತ್ಯಾಸ ಕಂಡುಬಂದಿದೆ. 2011–12 ನೇ ಸಾಲಿನ ಒಂದು ಕಾಮಗಾರಿಗೆ (ಇಂಡೆಂಟ್ ಸಂಖ್ಯೆ.54096) ₹ 29.93 ಕೋಟಿ ಎಂದು ಪ್ರದರ್ಶಿಸಿದರೆ, ಇನ್ನೊಂದು ಕಾಮಗಾರಿಗೆ ಸಲ್ಲಿಸಿದ ಬಿಡ್ ದಾಖಲೆಗಳಲ್ಲಿ ₹ 5.68 ಕೋಟಿ (ಇಂಡೆಂಟ್ ಸಂಖ್ಯೆ. 24917 ಮತ್ತು 12088) ಎಂದು ದಾಖಲಿಸಿದ್ದಾರೆ. ಅದೇ ರೀತಿ, ಒಂದು ಕಾಮಗಾರಿಯ ಬಿಡ್ ದಾಖಲೆಗಳ ಪ್ರಕಾರ ವಾರ್ಷಿಕ ವಹಿವಾಟು (2010–11) ₹ 29.38 ಕೋಟಿ (ಇಂಡೆಂಟ್ ನಂ.37800). ಆದರೆ, ಇನ್ನೊಂದು ಕಾಮಗಾರಿಗೆ ₹ 2.79 ಕೋಟಿ (ಇಂಡೆಂಟ್ ಸಂಖ್ಯೆ. 24917 ಮತ್ತು 12088) ಎಂದು ದಾಖಲಿಸಿದ್ದಾರೆ. ಆದ್ದರಿಂದ, ಟೆಂಡರ್ ಕಾರ್ಯವಿಧಾನದ ಮೇಲೆ ಪ್ರಭಾವ ಬೀರಲು ದಾಖಲೆಗಳನ್ನು ಸೃಷ್ಟಿಸುವ ಮತ್ತು ಸತ್ಯಗಳ ತಪ್ಪು ನಿರೂಪಣೆಯ ಸಾಧ್ಯತೆಯನ್ನು ತಳ್ಳಿಹಾಕಲಾಗುವುದಿಲ್ಲ. ಮ.ಪಾ, ಬಳ್ಳಾರಿ ಪ್ರಗತಿ ವರದಿಯಂತೆ, ಇದೇ ಗುತ್ತಿಗೆದಾರರಿಗೆ ಇನ್ನೂ ಐದು ಯೋಜನಾ ಪ್ಯಾಕೇಜ್‌ಗಳನ್ನು[23] (₹ 6.13 ಕೋಟಿ ವೆಚ್ಚ) ವಹಿಸಿತ್ತು.

ರಾಜ್ಯ ಸರ್ಕಾರವು, ಅದೇ ವರ್ಷ ಪ್ರಮಾಣೀಕರಿಸಿದ ವಾರ್ಷಿಕ ವಹಿವಾಟಿನಲ್ಲಿನ ವ್ಯತ್ಯಾಸಗಳಿಗಾಗಿ ಚಾರ್ಟರ್ಡ್ ಅಕೌಂಟೆಂಟ್‌ರಿಂದ ಸ್ಪಷ್ಟೀಕರಣವನ್ನು ಕೇಳಲಾಗಿದೆ ಎಂದು ಉತ್ತರಿಸಿದೆ (ಏಪ್ರಿಲ್ 2022).

ಇ) ಪ್ಯಾಕೇಜ್ 50: ಪ್ರತಿ ಟೆಂಡರ್ ದಾರರು ರಸ್ತೆ ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಒಂದು ವೈಬ್ರೇಟರಿ ರೋಲರ್ ಅನ್ನು ಹೊಂದಿರುವ ಲಭ್ಯತೆಯನ್ನು ಪ್ರದರ್ಶಿಸಬೇಕು ಎಂದು ಟೆಂಡರ್ ದಾಖಲೆಗಳು ನಿರ್ದಿಷ್ಟಪಡಿಸಿದೆ.

ತಾಂತ್ರಿಕ ಮೌಲ್ಯಮಾಪನ ವರದಿಯ ಪ್ರಕಾರ (ನವೆಂಬರ್ 2017), ವೈಬ್ರೇಟರಿ ರೋಲರ್ ಹೊಂದಿರುವ ಮಾಹಿತಿಯನ್ನು ಒದಗಿಸದಿದ್ದರೂ ಗುತ್ತಿಗೆದಾರನ ತಾಂತ್ರಿಕ ಬಿಡ್ ಅನ್ನು ಅನುಮೋದಿಸಲಾಗಿದೆ. ಕಡ್ಡಾಯ ಮಾನದಂಡ ಅನುಸರಿಸದಿದ್ದಕ್ಕಾಗಿ ಬಿಡ್ ತಿರಸ್ಕರಿಸುವ ಬದಲು ಮ.ಪಾ, ಬಳ್ಳಾರಿ ತಾಂತ್ರಿಕ ಬಿಡ್ ಅನ್ನು ಅನುಮೋದಿಸಿದ ನಂತರ, ₹ 2.89 ಕೋಟಿ (ಅಂದಾಜು ವೆಚ್ಚ – ₹ 3.00 ಕೋಟಿ) ಕಾಮಗಾರಿಯನ್ನು ಅನಿಯಮಿತವಾಗಿ ನೀಡಿತು (ಡಿಸೆಂಬರ್ 2017).

---

[21] ₹ ಒಂದು ಕೋಟಿಯಿಂದ ₹ 10 ಕೋಟಿ ವೆಚ್ಚದ ಕಾಮಗಾರಿಗೆ ನಿಗದಿತ ಪ್ರಮಾಣಿತ ಟೆಂಡರ್ ದಾಖಲೆ.

[22] ಪ್ಯಾಕೇಜುಗಳು 32ಎ (₹ 1.21 ಕೋಟಿ) ಮತ್ತು 36 (₹ 1.01 ಕೋಟಿ).

[23] ಪ್ಯಾಕೇಜ್ 2 (₹ 1.01 ಕೋಟಿ), 30 (₹ 1.20 ಕೋಟಿ), 31 (₹ 1.28 ಕೋಟಿ), 33 (₹ 1.46 ಕೋಟಿ) ಮತ್ತು 35 (₹ 1.18 ಕೋಟಿ).

ಬಳ್ಳಾರಿಯಲ್ಲಿ ಪ್ಯಾಕೇಜ್ 19 ಮತ್ತು 50 ಕ್ಕೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರವು ತನ್ನ ಉತ್ತರದಲ್ಲಿ (ಏಪ್ರಿಲ್ 2022) ಗಣನೀಯವಾಗಿ ಸ್ಪಂದಿಸಿದ ಬಿಡ್ದಾರರಿಗೆ ಮಾನದಂಡಗಳಲ್ಲಿ ಸಡಿಲಿಕೆಯನ್ನು ನೀಡಲಾಗಿದೆ ಎಂದು ಹೇಳಿದೆ. ಸ್ಟ್ಯಾಂಡರ್ಡ್ ಟೆಂಡರ್ ದಾಖಲೆ, ಗಣನೀಯವಾಗಿ ಸ್ಪಂದಿಸಿದ ಟೆಂಡರ್ ಎಲ್ಲಾ ನಿಯಮಗಳು, ಷರತ್ತುಗಳು ಮತ್ತು ಅಳತೆಗಳಿಗೆ ಅನುಗುಣವಾಗಿರಬೇಕು ಎಂದು ಸೂಚಿಸಿದ್ದುದರಿಂದ ಉತ್ತರವು ಸ್ವೀಕಾರಾರ್ಹವಲ್ಲ ಮತ್ತು ಯಾವುದೇ ಸಡಿಲಿಕೆಯು ಬಿಡ್‌ದಾರರಿಗೆ ಅನಗತ್ಯ ಲಾಭವನ್ನು ಉಂಟುಮಾಡುತ್ತದೆ.

**ii) <u>ಮೈಸೂರು</u>**

ಅ)<u>ಪ್ಯಾಕೇಜ್ 10</u>: ₹ 0.99 ಕೋಟಿ ವೆಚ್ಚದ ಈ ಪ್ಯಾಕೇಜ್ನ ಆರ್ಥಿಕ ಮೌಲ್ಯಮಾಪನ 2015ರ ಆಗಸ್ಟ್ 26ರಂದು ನಡೆದಿದ್ದು ಮತ್ತು 2015ರ ಆಗಸ್ಟ್ 27ರಂದು ಗುತ್ತಿಗೆದಾರರಿಗೆ ಕಾಮಗಾರಿ ಆದೇಶ ನೀಡಲಾಗಿದೆ.

ಲೆಕ್ಕಪರಿಶೋಧನೆಯಲ್ಲಿ, ಆದಾಗ್ಯೂ, ಮತ್ತೊಂದು ಪ್ಯಾಕೇಜ್‌ಗಾಗಿ[24], ಗುತ್ತಿಗೆದಾರರು ನಕಲಿ ಪ್ರಮಾಣಪತ್ರಗಳನ್ನು ಸಲ್ಲಿಸಿದ್ದು, ಈ ವಿಷಯ ಆರ್ಥಿಕ ಮೌಲ್ಯಮಾಪನವನ್ನು ಪೂರ್ಣಗೊಳಿಸುವ ಮೊದಲು ಇಇ, ಯುಜಿಡಿ, ಮ.ಪಾ, ಮೈಸೂರು ರವರು ಡಿಎಂಎಗೆ ಮಾಹಿತಿ ನೀಡಿದ್ದಾರೆ (25 ಆಗಸ್ಟ್ 2015). ಮೇಲಿನ ಮಾಹಿತಿಯನ್ನು ಹೊಂದಿದ್ದರೂ ಸಹ, ಡಿಎಂಎ ಈ ಟೆಂಡರ್ ಅನ್ನು ಮಾನ್ಯವಾಗಿದ್ದು, ಮ.ಪಾ ಕೆಲಸದ ಆದೇಶವನ್ನು ನೀಡಿತು, ಇದು ಅನಿಯಮಿತವಾಗಿದೆ.

ಆ) <u>ಪ್ಯಾಕೇಜ್ 13</u>: ಟೆಂಡರ್ ದಾಖಲೆಗಳ ಷರತ್ತು 3.6 ರ ಪ್ರಕಾರ, ನಿಗದಿತ ಕನಿಷ್ಠ ಅರ್ಹತಾ ಮಾನದಂಡಗಳನ್ನು ಪೂರೈಸುವ ಟೆಂಡರ್‌ದಾರರು, ಅವರ ಲಭ್ಯವಿರುವ ಟೆಂಡರ್ ಸಾಮರ್ಥ್ಯವು[25] ಒಟ್ಟು ಟೆಂಡರ್ ಮೌಲ್ಯಕ್ಕಿಂತ ಹೆಚ್ಚಿದ್ದರೆ ಮಾತ್ರ ಅರ್ಹತೆ ಪಡೆಯುತ್ತಾರೆ.

₹ 1.20 ಕೋಟಿ ವೆಚ್ಚದ ಪ್ಯಾಕೇಜ್‌ನ ತಾಂತ್ರಿಕ ಮೌಲ್ಯಮಾಪನ ವರದಿಯ ಪ್ರಕಾರ (ಜನವರಿ 2016) ಡಿಎಂಎ ಪ್ರಸ್ತುತ ಬದ್ಧತೆಗಳನ್ನು ₹ 7.83 ಕೋಟಿ ಎಂದು ಪರಿಗಣಿಸಿ ಏಕ ಬಿಡ್‌ದಾರನ ಲಭ್ಯವಿರುವ ಟೆಂಡರ್ ಸಾಮರ್ಥ್ಯವನ್ನು ₹ 1.25 ಕೋಟಿ[26] ಎಂದು ನಿರ್ಣಯಿಸಿದೆ ಎಂದು ಆಡಿಟ್ ಗಮನಿಸಿದೆ. ಆದಾಗ್ಯೂ, ಇತರ ಸ್ಕೀಮ್ ಪ್ಯಾಕೇಜ್‌ಗಳ (ಇಂಡೆಂಟ್ 31121, 31009, 31116) ತಾಂತ್ರಿಕ ಮೌಲ್ಯಮಾಪನದಲ್ಲಿ, ಅದೇ ಗುತ್ತಿಗೆದಾರನ ಪ್ರಸ್ತುತದಲ್ಲಿರುವ ಬದ್ಧತೆಗಳ ಮೌಲ್ಯವನ್ನು ₹ 7.98 ಕೋಟಿ ಎಂದು ಪರಿಗಣಿಸಿ, ನಿರಧರಿಸುವ ಲಭ್ಯ ಟೆಂಡರ್ ಸಾಮರ್ಥ್ಯವು ₹ 1.10 ಕೋಟಿ[27] ಎಂದು ನಿರ್ಣಯಿಸಿದೆ. ಇದು ಟೆಂಡರ್ ನಿರಾಕರಣೆಗೆ ಕಾರಣವಾಯಿತು. ಲಭ್ಯವಿರುವ ಬಿಡ್ ಲೆಕ್ಕಾಚಾರದಲ್ಲಿ ಒಂದೇ ಬಿಡ್‌ದಾರರ ವಿವಿಧ ಟೆಂಡರ್‌ಗಳಿಗೆ ಒಂದೇ

[24] ಇಂಡೆಂಟ್ ಸಂಖ್ಯೆ. ಡಿ.ಎಂ.ಎ/2014-15/ಡಬ್ಲ್ಯೂ.ಎಸ್/ಕಾಮಗಾರಿ-ಇಂಡೆಂಟ್ 30664.

[25] ಅಂದಾಜು ಲಭ್ಯವಿರುವ ಟೆಂಡರ್ ಸಾಮರ್ಥ್ಯ = (ಎ*ಎನ್*1.50 – ಬಿ), ಅಲ್ಲಿ

ಎ = ಕಳೆದ ಐದು ವರ್ಷಗಳಲ್ಲಿ ಪೂರ್ಣಗೊಂಡ ಮತ್ತು ಪ್ರಗತಿಯಲ್ಲಿರುವ ಕೆಲಸಗಳನ್ನು ಗಣನೆಗೆ ತೆಗೆದುಕೊಂಡು ಯಾವುದೇ ಒಂದು ವರ್ಷದಲ್ಲಿ ಸಿವಿಲ್ ಇಂಜಿನಿಯರಿಂಗ್ ಕೆಲಸಗಳ ಗರಿಷ್ಠ ಮೌಲ್ಯ (2015-16 ಬೆಲೆಯ ಮಟ್ಟಕ್ಕೆ ನವೀಕರಿಸಲಾಗಿದೆ).

ಎನ್ = ಟೆಂಡರ್‌ಗಳನ್ನು ಆಹ್ವಾನಿಸಲಾದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸೂಚಿಸಲಾದ ವರ್ಷಗಳ ಸಂಖ್ಯೆ.

ಬಿ = ಮೌಲ್ಯ, 2015-16ರ ಬೆಲೆಯ ಮಟ್ಟದಲ್ಲಿ ಅಸ್ತಿತ್ವದಲ್ಲಿರುವ ಬದ್ಧತೆಗಳು ಮತ್ತು ನಡೆಯುತ್ತಿರುವ ಕೆಲಸಗಳು ಮುಂದಿನ ವರ್ಷದಲ್ಲಿ ಪೂರ್ಣಗೊಳ್ಳಲಿವೆ.

[26] ₹ 124.63 ಲಕ್ಷ = ₹ 1,210 ಲಕ್ಷ × 0.5 × 1.50 – ₹ 782.87 ಲಕ್ಷ.

[27] ₹ 109.63 ಲಕ್ಷ = ₹ 1,210 ಲಕ್ಷ × 0.5 × 1.50 – ₹ 797.87 ಲಕ್ಷ.

ಸಮಯದಲ್ಲಿ ಅಸಂಗತತೆ ಕಂಡುಬಂದಿದ್ದು ಡಿಎಂಎ ನಡೆಸಿದ ತಾಂತ್ರಿಕ ಮೌಲ್ಯಮಾಪನದಲ್ಲಿನ ನ್ಯೂನತೆಗಳನ್ನು ಸೂಚಿಸುತ್ತದೆ.

ಹೀಗಾಗಿ, ತಾಂತ್ರಿಕ ಮೌಲ್ಯಮಾಪನದಲ್ಲಿನ ನ್ಯೂನತೆಗಳು/ಅಸಂಗತತೆಗಳು ಟೆಂಡರ್ ಪ್ರಕ್ರಿಯೆಯಲ್ಲಿ ಪಾರದರ್ಶಕತೆಯ ಕೊರತೆಯನ್ನು ಸೂಚಿಸುತ್ತವೆ ಮತ್ತು ಅನರ್ಹ ಗುತ್ತಿಗೆದಾರರ ಆಯ್ಕೆಗೆ ಕಾರಣವಾಗುತ್ತದೆ. ಭವಿಷ್ಯದ ತಾಂತ್ರಿಕ ಮೌಲ್ಯಮಾಪನಗಳಲ್ಲಿ ಮೇಲಿನ ವ್ಯತ್ಯಾಸಗಳನ್ನು ತಪ್ಪಿಸಲಾಗುವುದು ಎಂದು ರಾಜ್ಯ ಸರ್ಕಾರವು ಉತ್ತರಿಸಿದೆ (ಏಪ್ರಿಲ್ 2022).

### *3.6.3 ಹರಾಜು ಪ್ರಕ್ರಿಯೆಯಲ್ಲಿ ಪಾರದರ್ಶಕತೆ*

ಕೆಟಿಪಿಪಿ ಕಾಯಿದೆ ಮತ್ತು ನಿಯಮಗಳ ನಿಬಂಧನೆಗಳು, ಬಿಡ್ ಸಾಮರ್ಥ್ಯ ಮತ್ತು ಹಿಂದಿನ ಕಾರ್ಯಕ್ಷಮತೆ ಸೇರಿದಂತೆ ನಿಗದಿತ ಅರ್ಹತಾ ಮಾನದಂಡಗಳನ್ನು ಪೂರೈಸುವ ಕಡಿಮೆ ಮೌಲ್ಯಮಾಪನ ಮಾಡಿದ ತಾಂತ್ರಿಕವಾಗಿ ಮತ್ತು ವಾಣಿಜ್ಯಿಕವಾಗಿ ಸ್ಪಂದಿಸುವ ಟೆಂಡರ್‌ದಾರರಿಗೆ ಗುತ್ತಿಗೆಯನ್ನು ನೀಡಬೇಕು ಎಂದು ನಿರ್ದಿಷ್ಟಪಡಿಸಲಾಗಿದೆ. ಎರಡು ಮ.ಪಾಗಳಲ್ಲಿ (ಬಳ್ಳಾರಿ ಮತ್ತು ತುಮಕೂರು) ದಾಖಲೆಗಳ ಪರೀಕ್ಷಾ–ತನಿಖೆಗೆ ಒಳಪಟಂತಹ ಕೆಳಗೆ ವಿವರಿಸಿದಂತೆ ತಾಂತ್ರಿಕವಾಗಿ ಸ್ಪಂದಿಸುವ ಬಿಡ್‌ಗಳನ್ನು ಅಸಮರ್ಥನೀಯವಾಗಿ ತಿರಸ್ಕರಿಸಲಾಗಿದೆ ಎಂದು ತೋರಿಸಿದೆ:

**i)** <u>ಬಳ್ಳಾರಿ</u>

ಮ.ಪಾ, ಬಳ್ಳಾರಿಯಲ್ಲಿ ದಾಖಲೆಗಳ ಪರಿಶೀಲನೆಯು (ನವೆಂಬರ್ 2021) ಒಂಬತ್ತು ಪರೀಕ್ಷಾ–ತನಿಖೆಗೆ ಒಳಪಟ ಪ್ಯಾಕೇಜ್‌ಗಳಲ್ಲಿ ನಾಲ್ಕಕ್ಕೆ[28] (ಶೇಕಡಾ 44) ಟೆಂಡರ್‌ಗಳನ್ನು ಮತ್ತಿತರ 18 ಪ್ಯಾಕೇಜ್‌ಗಳೊಂದಿಗೆ ಆಹ್ವಾನಿಸಲಾಗಿದೆ ಎಂದು ತೋರಿಸಿದೆ. ಈ 22 ಪ್ಯಾಕೇಜ್‌ಗಳಿಗೆ 11 ಮಾರ್ಚ್ 2016 ರಂದು ಎನ್.ಐ.ಟಿ ಅನ್ನು ಪ್ರಕಟಿಸಲಾಗಿದೆ. ಮ.ಪಾ, ಬಳ್ಳಾರಿ ತಾಂತ್ರಿಕ ಮೌಲ್ಯಮಾಪನವನ್ನು ನಡೆಸಿತು (ಮೇ 2016) ಮತ್ತು ವರದಿಯನ್ನು ಡಿಎಂಎಗೆ ಅನುಮೋದನೆಗಾಗಿ ಸಲ್ಲಿಸಿತು (ಜುಲೈ 2016). ಡಿಎಂಎ ತಾಂತ್ರಿಕ ಮೌಲ್ಯಮಾಪನವನ್ನು (ಆಗಸ್ಟ್ 2016) ಮತ್ತು ಹಣಕಾಸು ಮೌಲ್ಯಮಾಪನವನ್ನು (ಸೆಪ್ಟೆಂಬರ್ 2016) ನಡೆಸಿತು ಮತ್ತು ಅಕ್ಟೋಬರ್ 2016 ರಲ್ಲಿ ಟೆಂಡರ್‌ಗಳಿಗೆ ಅನುಮೋದನೆಯನ್ನು ನೀಡಿತು. ಟೆಂಡರ್ ಮೌಲ್ಯಮಾಪನದಲ್ಲಿ ಲೆಕ್ಕ ಪರಿಶೋಧನೆ ಈ ಕೆಳಗಿನ ಅಕ್ರಮಗಳನ್ನು ಗಮನಿಸಿದೆ:

#### *ಅ) ಟೆಂಡರ್ ಸಾಮರ್ಥ್ಯದಲ್ಲಿನ ಕೊರತೆಯಿಂದಾಗಿ ಬಿಡ್‌ಗಳ ನಿರಾಕರಣೆ*

22 ಪ್ಯಾಕೇಜ್‌ಗಳಲ್ಲಿ, ನಿರ್ಧರಿಸಿರುವ ಲಭ್ಯ ಟೆಂಡರ್ ಸಾಮರ್ಥ್ಯಗಳಲ್ಲಿನ ಕೊರತೆಯನ್ನು ಉಲ್ಲೇಖಿಸಿ 14 ಪ್ಯಾಕೇಜ್‌ಗಳಲ್ಲಿ ಮೂರು ಬಿಡ್‌ದಾರರ (ಶ್ರೀ ಕೆ ರವಿಕುಮಾರ್, ಶ್ರೀ ಎಂ ಸಿದ್ದರಾಮಣ್ಣಗೌಡ ಮತ್ತು ಶ್ರೀ ವೊಂಟಾರು ಚಂದ್ರ ಮೋಹನ್) ಪೈಕಿ ಒಂದು ಅಥವಾ ಅದಕ್ಕಿಂತ ಹೆಚ್ಚಿನ ಬಿಡ್ಡಾರರ ತಾಂತ್ರಿಕ ಬಿಡ್‌ಗಳನ್ನು ಡಿಎಂಎ ತಿರಸ್ಕರಿಸಿದೆ (ಆಗಸ್ಟ್ 2016). ಲೆಕ್ಕಪರಿಶೋಧನೆಯಲ್ಲಿ, ಡಿಎಂಎ ತಪ್ಪಾಗಿ ಆ ಪ್ಯಾಕೇಜ್‌ಗಳ ಅಂದಾಜು ವೆಚ್ಚ/ಉಲ್ಲೇಖಿತ ದರಗಳನ್ನು (22 ಪ್ಯಾಕೇಜ್‌ಗಳಲ್ಲಿ) ಸೇರಿಸಿದ್ದು, ಈ ಮೂರು ಬಿಡ್‌ದಾರರ ಅಸ್ತಿತ್ವದಲ್ಲಿರುವ ಬದ್ಧತೆಗಳು ಮತ್ತು ನಡೆಯುತ್ತಿರುವ ಕೆಲಸಗಳ ಜೊತೆಗೆ ಹಣಕಾಸಿನ ಅನುಮೋದನೆಯನ್ನು ತರುವಾಯ ನೀಡಲಾಯಿತು (21 ಅಕ್ಟೋಬರ್ 2016) ಎಂದು ಗಮನಿಸಲಾಯಿತು. ವಿವರಗಳು ಕೆಳಕಂಡಂತಿವೆ **(ಕೋಷ್ಟಕ 3.2):**

[28] ಪ್ಯಾಕೇಜುಗಳು 1, 4, 10 ಮತ್ತು 19.

**ಕೋಷ್ಟಕ 3.2: ಅಸ್ತಿತ್ವದಲ್ಲಿರುವ ಬದ್ಧತೆಗಳ ತಪ್ಪಾದ ಅಳವಡಿಕೆಯನ್ನು ತೋರಿಸುವ ಬಿಡ್‌ಗಳ ನ್ಯಾಯಸಮ್ಮತವಲ್ಲದ ನಿರಾಕರಣೆಗೆ ಕಾರಣವಾಗುವ ಹೇಳಿಕೆಯ ವಿವರ**

(₹ ಲಕ್ಷಗಳಲ್ಲಿ)

| ಬಿಡ್‌ದಾರರ ಹೆಸರು (ಶ್ರೀ) | 22 ಪ್ಯಾಕೇಜ್‌ಗಳಲ್ಲಿ ಸಲ್ಲಿಸಲಾದ ಬಿಡ್‌ಗಳ ಸಂಖ್ಯೆ | ಬಿಡ್ ಸಲ್ಲಿಕೆ ಕೊನೆಯ ದಿನಾಂಕ (20.04.2016) ರಂತೆ ಅಸ್ತಿತ್ವದಲ್ಲಿರುವ ಬದ್ಧತೆಯ ಮತ್ತು ನಡೆಯುತ್ತಿರುವ ಕಾಮಗಾರಿಗಳ ವೆಚ್ಚ | 21.10.2016 ರಂದು ತಾಂತ್ರಿಕವಾಗಿ ಅರ್ಹತೆ ಪಡೆದ ಮತ್ತು ಅನುಮೋದನೆ ನೀಡಿದ ಪ್ಯಾಕೇಜ್‌ಗಳ ಸಂಖ್ಯೆ | | ಲಭ್ಯವಿರುವ ಟೆಂಡರ್ ಸಾಮರ್ಥ್ಯದ ಕೊರತೆಯಿಂದಾಗಿ 06.08.2016 ರಿಂದ 09.08.2016 ರವರೆಗೆ ತಾಂತ್ರಿಕವಾಗಿ ತಿರಸ್ಕರಿಸಲಾದ ಪ್ಯಾಕೇಜ್‌ಗಳ ಸಂಖ್ಯೆ | |
|---|---|---|---|---|---|---|
| | | | ಸಂಖ್ಯೆ | ಒಟ್ಟು ಟೆಂಡರ್ ಮೊತ್ತ | ಸಂಖ್ಯೆ | ಅಸ್ತಿತ್ವದಲ್ಲಿರುವ ಬದ್ಧತೆ ಮತ್ತು ಡಿಎಂಎ ಅಳವಡಿಸಿಕೊಂಡ ಚಾಲ್ತಿಯಲ್ಲಿರುವ ಕೆಲಸಗಳು |
| ಕೆ ರವಿಕುಮಾರ್ | 9 | 24.66 | 3[29] | 385.35 | 6[30] | 410.01 (24.66 + 385.35) |
| ಎಂ ಸಿದ್ದರಾಮಣ್ಣಗೌಡ | 14 | 2,192.00 | 4[31] | 455.52 | 10[32] | 2,647.52 (2,192 + 455.52) |
| ವೊಂಟಾರು ಚಂದ್ರ ಮೋಹನ್ | 7 | 17.38 | 2[33] | 328.83 | 5[34] | 346.21 (17.38 + 328.83) |

ಆಧಾರ: ಡಿಎಂಎ ಮೂಲಕ ಕೈಗೊಳ್ಳಲಾದ 22 ಪ್ಯಾಕೇಜ್‌ಗಳ ತಾಂತ್ರಿಕ ಮತ್ತು ಆರ್ಥಿಕ ಮೌಲ್ಯಮಾಪನಕ್ಕೆ ಸಂಬಂಧಿಸಿದ ದಾಖಲೆಗಳು.

ಇಂಡೆಂಟ್–ವಾರು ಮತ್ತು ಪ್ಯಾಕೇಜ್–ವಾರು ವಿವರಗಳನ್ನು **ಅನುಬಂಧ 3.5** ರಲ್ಲಿ ನೀಡಲಾಗಿದೆ. ಈ ಬಿಡ್ದಾರರಿಗೆ ಇನ್ನೂ ಅನುಮೋದನೆಗೊಳ್ಳದ ಮತ್ತು ನೀಡಬೇಕಾದ ಪ್ಯಾಕೇಜ್‌ಗಳ ವೆಚ್ಚವನ್ನು ಸಹ ಅಸ್ತಿತ್ವದಲ್ಲಿರುವ ಬದ್ಧತೆಗಳೆಂದು ಸೇರಿಸಲಾಗಿದೆ ಎಂದು ಗಮನಿಸಬಹುದಾಗಿದೆ. ತಾಂತ್ರಿಕ ಮೌಲ್ಯಮಾಪನದ ದಿನಾಂಕದಂದು ಈ ಕೆಲಸಗಳನ್ನು ಅಸ್ತಿತ್ವದಲ್ಲಿರುವ ಅಥವಾ ನಡೆಯುತ್ತಿರುವ ಕಾಮಗಾರಿಗಳೆಂದು ಪರಿಗಣಿಸಲಾಗುವುದಿಲ್ಲ. ಇದು ಮೇಲಿನ ಬಿಡ್ದಾರರ ಲಭ್ಯವಿರುವ ಟೆಂಡರ್ ಸಾಮರ್ಥ್ಯದ ತಪ್ಪಾದ ಲೆಕ್ಕಾಚಾರಕ್ಕೆ ಕಾರಣವಾಯಿತು ಮತ್ತು ಆದ್ದರಿಂದ, ಮೇಲಿನ ಆಧಾರದ ಮೇಲೆ ಅವರ ಅನರ್ಹತೆಯು ಸಮರ್ಥನೀಯವಲ್ಲ.

### *ಆ) ಟೆಂಡರ್ ಪ್ರಕ್ರಿಯೆ*

ರಾಜ್ಯ ಸರ್ಕಾರವು, ಕಡಿಮೆ ಮೊತ್ತ ಸೂಚಿಸಿರುವ ಟೆಂಡರ್‌ದಾರರೊಂದಿಗಿನ ಸಂಧಾನ ಮಾತುಕತೆಗಳು ಸ್ಪರ್ಧಾತ್ಮಕ ಟೆಂಡರ್‌ನ ನೈತಿಕತೆಯನ್ನು ಸೋಲಿಸುತ್ತದೆ ಮತ್ತು ಕೇವಲ ದರಗಳನ್ನು ಕಡಿಮೆ ಮಾಡುವ ಉದ್ದೇಶಕ್ಕಾಗಿ ಇದನ್ನು ಆಶ್ರಯಿಸಬಾರದು ಎಂದು ನಿಖರವಾಗಿ ಹೇಳುತ್ತದೆ (ಡಿಸೆಂಬರ್ 2002). ಕಡಿಮೆ ಬೆಲೆಗಳನ್ನು ಪಡೆಯುವ ಉದ್ದೇಶಕ್ಕಾಗಿ ಮಾತ್ರ ಸಂಧಾನ ಮಾತುಕತೆಗಳು ಅಸಾಧಾರಣ ಸಂದರ್ಭಗಳಲ್ಲಿ ಮಾತ್ರ ಸೂಕ್ತವಾಗಿರುತ್ತದೆ, ಉದಾಹರಣೆಗೆ ಸ್ಪರ್ಧೆಯ ಕೊರತೆ (ಮೂರಕ್ಕಿಂತ ಕಡಿಮೆ), ಒಂದೇ ಬಿಡ್, ಶಂಕಿತ ಒಪ್ಪಂದ, ಅಥವಾ ಕಡಿಮೆ ಮೌಲ್ಯಮಾಪನ ಮಾಡಿದ ಪ್ರತಿಕ್ರಿಯಾಶೀಲ ಬಿಡ್ ಅಂದಾಜು ವೆಚ್ಚಕ್ಕಿಂತ ಗಣನೀಯವಾಗಿ ಹೆಚ್ಚಿದ್ದರೆ. ಅಂತಹ ಸಂದರ್ಭಗಳಲ್ಲಿ, ಮೊದಲ ಆಯ್ಕೆಯು ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವುದು ಮತ್ತು ಹೊಸ ಟೆಂಡರ್‌ಗಳನ್ನು ಮರು ಆಹ್ವಾನಿಸುವುದಾಗಿರುತ್ತದೆ.

[29] ಇಂಡೆಂಟ್ ಸಂಖ್ಯೆ. 38093, 38119 ಮತ್ತು 38126

[30] ಇಂಡೆಂಟ್ ಸಂಖ್ಯೆ 38073, 38091, 38106, 38351, 38103 ಮತ್ತು **38105**

[31] ಇಂಡೆಂಟ್ ಸಂಖ್ಯೆ 38073, 38090, 38091 ಮತ್ತು 38354

[32] ಇಂಡೆಂಟ್ ಸಂಖ್ಯೆ 38351, 38102, 38103, 38104, 38105, 38353, 38110, 38120, 38124 ಮತ್ತು 38135

[33] ಇಂಡೆಂಟ್ ಸಂಖ್ಯೆ 38110 ಮತ್ತು 38120

[34] ಇಂಡೆಂಟ್ ಸಂಖ್ಯೆ 38102, 38353, 38116, 38124 ಮತ್ತು 38135

ಇವುಗಳಿಗೆ ವಿರುದ್ಧವಾಗಿ, ಮ.ಪಾ, ಬಳ್ಳಾರಿ ಈ 22 ಪ್ಯಾಕೇಜ್‌ಗಳಲ್ಲಿ ಕಡಿಮೆ (ಎಲ್ 1) ಬಿಡ್‌ದಾರರನ್ನು ಮಾತುಕತೆಗಾಗಿ ಆಹ್ವಾನಿಸಿದೆ (ಆಗಸ್ಟ್ 2016) ಮತ್ತು ಡಿಎಂಎ ಟೆಂಡರ್‌ಗೆ ಆರ್ಥಿಕ ಅನುಮೋದನೆ ನೀಡಿದೆ (ಅಕ್ಟೋಬರ್ 2016).

ಈ 22 ಪ್ಯಾಕೇಜ್‌ಗಳ ಉಲ್ಲೇಖಿತ ದರಗಳು, ಮಾತುಕತೆಯ ದರಗಳು ಮತ್ತು ಅಂದಾಜು ವೆಚ್ಚಗಳ ಹೋಲಿಕೆಯು ನಾಲ್ಕು ಪ್ಯಾಕೇಜ್‌ಗಳಲ್ಲಿನ ಸಮಾಲೋಚನಾ ದರಗಳು ಪ್ರಸ್ತುತ ದರಗಳ ಪಟ್ಟಿ (ಎಸ್.ಆರ್) 2016-17 ರ ಅಂದಾಜು ವೆಚ್ಚಕ್ಕಿಂತ ಕಡಿಮೆಯಾಗಿದೆ ಮತ್ತು ಉಳಿದ 18 ಪ್ಯಾಕೇಜ್‌ಗಳಲ್ಲಿ ಇವುಗಳು ಅಂದಾಜು ವೆಚ್ಚದ ಶೇ. 2.98 ರಿಂದ ಶೇ. 6.50 ನಡುವೆ ಇರುತ್ತವೆ.

ಡಿಎಂಎ ಸಂಧಾನದ ದರಗಳನ್ನು ಕಡೆಗಣಿಸಿ, ಈ 18 ಪ್ಯಾಕೇಜ್‌ಗಳಲ್ಲಿ 15 ರಲ್ಲಿನ ಸಮಾಲೋಚನಾ ದರಗಳನ್ನು ಅಂದಾಜು ವೆಚ್ಚಗಳಿಗೆ ಅಂದರೆ ಶೇ. 'ನಿಲ್' ಟೆಂಡರ್ ದರಗಳಿಗೆ ಮಿತಿಗೊಳಸಿದ್ದನ್ನು ಗಮನಿಸಲಾಯಿತು. ಉಳಿದ ಮೂರು ಪ್ಯಾಕೇಜ್‌ಗಳಿಗೆ (ಸಂಖ್ಯೆ 10, 17 ಮತ್ತು 18) ಸಂಬಂಧಿಸಿದಂತೆ ಶ್ರೀ ಎಸ್ ಗುರುವ ರೆಡ್ಡಿ ಎಲ್1 ಆಗಿದ್ದು, ಡಿಎಂಎ ಸಮಾಲೋಚನಾ ದರದಲ್ಲಿ (ಶೇ.6.25 ರಿಂದ ಶೇ.6.40 ರಷ್ಟು ಟೆಂಡರ್ ಪ್ರೀಮಿಯಂ) ಕಾಮಗಾರಿಗಳನ್ನು ನೀಡಿತು. ವಿವರಗಳನ್ನು **ಅನುಬಂಧ 3.6** ರಲ್ಲಿ ನೀಡಲಾಗಿದೆ.

ಹದಿನೆಂಟು ಪ್ಯಾಕೇಜ್‌ಗಳಲ್ಲಿ ಮೂರನ್ನು ಮಾತ್ರ ಟೆಂಡರ್ ಪ್ರೀಮಿಯಂನಲ್ಲಿ ನೀಡುವ ಡಿಎಂಎಯ ಕ್ರಮ ಮತ್ತು ಅಂದಾಜು ವೆಚ್ಚದಲ್ಲಿ ಇತರ ಪ್ಯಾಕೇಜ್‌ಗಳನ್ನು ನಿರ್ಬಂಧಿಸುವುದು, ವಿಭಿನ್ನ ನಡುವಳಿಕೆ ಮತ್ತು ಸ್ಥಿರತೆಯ ಕೊರತೆಯನ್ನು ಕಾಮಗಾರಿಗಳ ನೀಡುವಿಕೆಯ ಕೊರತೆಯನ್ನು ಸೂಚಿಸುತ್ತದೆ. ಮೇಲೆ ಹೇಳಿದ ಮೂರು ಪ್ಯಾಕೇಜ್‌ಗಳ ಅಂದಾಜು ವೆಚ್ಚ ಮತ್ತು ನೀಡಲಾದ ವೆಚ್ಚಗಳಲ್ಲಿನ ವ್ಯತ್ಯಾಸದ ಒಟ್ಟು ₹ 25.70 ಲಕ್ಷ ಲಾಭದ ಮೊತ್ತವನ್ನು ಶ್ರೀ ಎಸ್ ಗುರುವಾ ರೆಡ್ಡಿ ಅವರಿಗೆ ವಿಸ್ತರಿಸಿತು ಮತ್ತು ಇತರ ಗುತ್ತಿಗೆದಾರರಿಗೆ ನಿರಾಕರಿಸಲಾಯಿತು.

ಭವಿಷ್ಯದಲ್ಲಿ ತಾಂತ್ರಿಕ ಮೌಲ್ಯಮಾಪನಗಳು ನಿಗದಿತ ನಿಯಮಗಳ ಪ್ರಕಾರ ನಡೆಸಲಾಗುವುದು ಎಂದು ರಾಜ್ಯ ಸರ್ಕಾರವು ಉತ್ತರಿಸಿದೆ (ಏಪ್ರಿಲ್ 2022). ಟೆಂಡರ್ ಪ್ರೀಮಿಯಂಗಳ ಸಂಧಾನ ಮಾತುಕತೆಯಲ್ಲಿನ ಅಸಂಗತತೆಯ ಬಗ್ಗೆ, ಟೆಂಡರ್ ಪ್ರೀಮಿಯಂಗಳ ಸಂಧಾನ ಮಾತುಕತೆಗಳು ಕೆಲಸದ ಸ್ವರೂಪದೊಂದಿಗೆ ಬದಲಾಗುತ್ತವೆ ಎಂದು ಹೇಳಲಾಗಿತು. ನಿರ್ದಿಷ್ಟ ಗುತ್ತಿಗೆದಾರರಿಗೆ ಅನಗತ್ಯ ಲಾಭದ ವಿಸ್ತರಣೆಗೆ ಕಾರಣವಾದ ಸಂಧಾನ ಮಾತುಕತೆಗಳಲ್ಲಿ ಸ್ಥಿರತೆಯ ಕೊರತೆಯಿಂದ ಉತ್ತರವು ಸ್ವೀಕಾರಾರ್ಹವಲ್ಲ.

**ii) <u>ತುಮಕೂರು</u>:**

***(ಅ)ತಪ್ಪಾದ ತಾಂತ್ರಿಕ ಮೌಲ್ಯಮಾಪನ ಮತ್ತು ಗಣನೀಯವಾಗಿ ಹೆಚ್ಚಿನ ದರದಲ್ಲಿ ಕೆಲಸದ ನೀಡುವಿಕೆ.***

ಮ.ಪಾ, ತುಮಕೂರು ಪ್ಯಾಕೇಜ್ 26 ರಲ್ಲಿ ಐದು ರಸ್ತೆ ಮತ್ತು ಚರಂಡಿ ಕಾಮಗಾರಿಗಳನ್ನು ಗುಂಪಾಗಿಸಿತ್ತು ಮತ್ತು ಅಂದಾಜು ವೆಚ್ಚ ₹ 1.65 ಕೋಟಿ ಆಗಿತ್ತು. ಪ್ಯಾಕೇಜ್‌ಗಾಗಿ ಸ್ವೀಕರಿಸಲಾದ ಮೂರು ಬಿಡ್‌ಗಳಲ್ಲಿ, ಎರಡು ತಾಂತ್ರಿಕ ಬಿಡ್‌ಗಳನ್ನು (ಶ್ರೀ ಸಿ ಆರ್ ಹರೀಶ್ ಮತ್ತು ಶ್ರೀ ವೈ ಆರ್ ವೇಣುಗೋಪಾಲ್) ಈ ಕೆಳಗಿನ ಆಧಾರದ ಮೇಲೆ ತಿರಸ್ಕರಿಸಲಾಗಿದೆ ಎಂದು ಪರಿಶೀಲನೆಯು ತೋರಿಸಿದೆ:

i) ಗುತ್ತಿಗೆದಾರರು (ಶ್ರೀ ಸಿ ಆರ್ ಹರೀಶ್) ಬಿಡ್ ಸಿಂಧುತ್ವವನ್ನು ವಿಸ್ತರಿಸಲಿಲ್ಲ.

ii) ಗುತ್ತಿಗೆದಾರರು (ಶ್ರೀ ವೈ ಆರ್ ವೇಣುಗೋಪಾಲ್) ಅಗತ್ಯ ಬಿಡ್ ಸಾಮರ್ಥ್ಯವನ್ನು ಹೊಂದಿರಲಿಲ್ಲ ಮತ್ತು ಬಿಡ್ ಸಿಂಧುತ್ವವನ್ನು ವಿಸ್ತರಿಸಲಿಲ್ಲ.

ಮೇಲಿನ ಕೆಲಸವನ್ನು ಸಿಎಸ್‌ಆರ್ 2014-15 ಕ್ಕಿಂತ ಶೇ. 6.80 ಹೆಚ್ಚಿನದರದಲ್ಲಿ ಏಕ ಅರ್ಹ ಬಿಡ್ಡರ್ (ಎಂ/ಎಸ್ ಅಮೃತಾ ಕನ್ಸ್ಟ್ರಕ್ಷನ್ಸ್) ಗೆ ನೀಡಲಾಯಿತು (ಜುಲೈ 2015). ಟೆಂಡರ್‌ಗಳನ್ನು

ತಿರಸ್ಕರಿಸಿರುವುದು ಈ ಕೆಳಗಿನ ಕಾರಣಗಳಿಗಾಗಿ ಸಮರ್ಥಿಸಲಾಗಿಲ್ಲ ಎಂದು ಲೆಕ್ಕಪರಿಶೋಧನೆಯು ಗಮನಿಸಿದೆ (ಸೆಪ್ಟೆಂಬರ್ 2021):

ಅ) ಬಿಡ್ ಸಿಂಧುತ್ವವನ್ನು ವಿಸ್ತರಿಸಲು ಟೆಂಡರ್‌ದಾರರಿಗೆ ವಿನಂತಿಸಿದ ಪತ್ರವ್ಯವಹಾರಗಳು ಇರುವುದಿಲ್ಲ.

ಆ) ಟೆಂಡರ್ ಷರತ್ತುಗಳ ಪ್ರಕಾರ, 2009–10 ರಿಂದ 2014–15 ರ ಅವಧಿಯಲ್ಲಿ ಗುತ್ತಿಗೆದಾರರ ಲಭ್ಯವಿರುವ ಟೆಂಡರ್ ಸಾಮರ್ಥ್ಯವು ಅಂದಾಜು ವೆಚ್ಚಕ್ಕೆ ಸಮನಾಗಿರಬೇಕು ಅಥವಾ ಅದಕ್ಕಿಂತ ಹೆಚ್ಚಾಗಿರಬೇಕು. ಶ್ರೀ ವೈ ಆರ್ ವೇಣುಗೋಪಾಲ್ ಅವರಿಗೆ ಸಂಬಂಧಿಸಿದಂತೆ, 2009–10ನೇ ಸಾಲಿನ ₹ 4.54 ಕೋಟಿ[35] ಮೊತ್ತದ ಹಣಕಾಸಿನ ವಹಿವಾಟು ಲಭ್ಯವಿರುವ ಟೆಂಡರ್ ಸಾಮರ್ಥ್ಯವನ್ನು ಲೆಕ್ಕಾಚಾರ ಮಾಡಲು ಪರಿಗಣಿಸಲಾಗಿಲ್ಲ, ಇದರಿಂದಾಗಿ ತಾಂತ್ರಿಕ ಬಿಡ್‌ನ ತಪ್ಪಾದ ನಿರಾಕರಣೆಯಾಗಿದೆ.

ಇದೇ ಅವಧಿಯಲ್ಲಿ, ಯೋಜನೆಯಡಿಯಲ್ಲಿ ಮತ್ತೊಂದು ಪರೀಕ್ಷಾ–ತನಿಖೆಗೆ ಒಳಪಟ ಪ್ಯಾಕೇಜ್ ಸಂಖ್ಯೆ. 15 ರಲ್ಲಿ, ಶ್ರೀ ವೈ ಆರ್ ವೇಣುಗೋಪಾಲ್ ಅವರಿಗೆ 2014–15 ರ ಸಿ.ಎಸ್.ಆರ್.ಗಿಂತ. ಶೇಕಡಾ 10.91 ರಷ್ಟು ಕಡಿಮೆ ದರದಲ್ಲಿ ಕೆಲಸವನ್ನು ನೀಡಲಾಗಿದೆ ಎಂದು ಲೆಕ್ಕಪರಿಶೋಧನೆ ಗಮನಿಸಿದೆ. ಪ್ಯಾಕೇಜ್ 15 (ಶ್ರೀ ವೈ ಆರ್ ವೇಣುಗೋಪಾಲ್)[36] ಮತ್ತು ಪ್ಯಾಕೇಜ್ 26 (ಎಂ/ಎಸ್ ಅಮೃತಾ ಕನ್ಸ್ಟ್ರಕ್ಷನ್ಸ್)ಕ್ಕೆ ಪಾವತಿಸಿದ ದರಗಳ ಹೋಲಿಕೆಯು ಮ.ಪಾಯು ಎಂ/ಎಸ್ ಅಮೃತಾ ಕನ್ಸ್ಟ್ರಕ್ಷನ್ಸ್‌ಗೆ ಎಂಟು ಐಟಂಗಳಲ್ಲಿ ಏಳಕ್ಕೆ[37] ₹ 61.99 ಲಕ್ಷವನ್ನು ಪಾವತಿಸಿದೆ ಆದರೆ ಶ್ರೀ ವೈ ಆರ್ ವೇಣುಗೋಪಾಲ್ ಅವರಿಗೆ ಪಾವತಿಸಬೇಕಾದ ಮೊತ್ತವು ಕೇವಲ ₹ 49.06 ಲಕ್ಷ. ಹೀಗಾಗಿ, ಬಿಡ್ ಅನ್ನು ಅಸಮಂಜಸವಾಗಿ ತಿರಸ್ಕರಿಸಿದರಿಂದ, ₹ 12.93 ಲಕ್ಷದವರೆಗೆ ತಪ್ಪಿಸಬಹುದಾದ ಖರ್ಚು ಮಾಡಬೇಕಾಯಿತು (ವಿವರಗಳನ್ನು **ಅನುಬಂಧ 3.7** ರಲ್ಲಿ ನೀಡಲಾಗಿದೆ).

ಇದಲ್ಲದೆ, ಸಂಧಾನ ಮಾತುಕತೆಗಳನ್ನು ನಡೆಸಲು ಇರುವ ಮಾರ್ಗಸೂಚಿಗಳ (ಡಿಸೆಂಬರ್ 2002) ಪ್ರಕಾರ, ನವೀಕರಿಸಿದ ಅಂದಾಜಿನ ಮೇಲಿನ 10 ಪ್ರತಿಶತದಷ್ಟು ಒಪ್ಪಂದವನ್ನು ಗಣನೀಯವಾಗಿ ಹೆಚ್ಚಿನ ಟೆಂಡರ್ ಎಂದು ಕರೆಯಲಾಗುತ್ತದೆ. ಅಂತಹ ಸಂದರ್ಭಗಳಲ್ಲಿ, ಟೆಂಡರ್ ಪರಿಶೀಲನಾ ಸಮಿತಿಯು ಹೆಚ್ಚಿನ ದರಗಳನ್ನು ಹೊಂದಿರುವ ವಸ್ತುಗಳನ್ನು ಗುರುತಿಸಬೇಕು ಮತ್ತು ಆ ದರಗಳ ವಿಭಜನೆಯನ್ನು ಪಡೆದು, ಕಾಮಗಾರಿಯನ್ನು ನೀಡುವ ಮೊದಲು ಸಮಂಜಸತೆಯನ್ನು ಕೂಲಂಕಷವಾಗಿ ಪರಿಶೀಲಿಸಬೇಕು.

ಡಿಎಂಎಯಿಂದ ನೀಡಲಾದ ಹಣಕಾಸಿನ ಮೌಲ್ಯಮಾಪನ ಮತ್ತು ಟೆಂಡರ್ ಅನುಮೋದನೆಯ ಪ್ರಕಾರ (ಜೂನ್ 2015), ಪ್ಯಾಕೇಜ್ 26 ರ ಟೆಂಡರ್ ಪ್ರೀಮಿಯಂ ಸಿ.ಎಸ್.ಆರ್ 2014–15 ಕ್ಕಿಂತ ಶೇ. 6.80 ರಷ್ಟು ಹೆಚ್ಚಿನ ದರವನ್ನು ಹೊಂದಿತ್ತು (ನಮೂದಿಸಿದ ದರವು ₹ 193.27 ಲಕ್ಷವಾದರೆ ಸಿ.ಎಸ.ಆರ್ 2014–15 ದರ ₹ 180.96 ಲಕ್ಷ).

ಹಣಕಾಸಿನ ಮೌಲ್ಯಮಾಪನದ ಲೆಕ್ಕಪರಿಶೋಧನೆಯು ಎರಡು ಐಟಂಗಳಿಗೆ[38] ಅಳವಡಿಸಿಕೊಂಡ ದರಗಳು ತಪ್ಪಾಗಿದೆ ಎಂದು ತೋರಿಸಿದೆ ಮತ್ತು ಇದು ನವೀಕರಿಸಿದ ಅಂದಾಜು ವೆಚ್ಚವನ್ನು ₹

[35] 2009–10 ರ ವಹಿವಾಟನ್ನು ₹ 4.54 ಕೋಟಿ ಎಂದು ಪರಿಗಣಿಸಿದ್ದರೆ, ಲಭ್ಯವಿರುವ ಟೆಂಡರ್ ಸಾಮರ್ಥ್ಯವು (+)₹ 1.91 ಕೋಟಿ ಆಗಿತ್ತು, ಇದು ಅಂದಾಜು ಮೌಲ್ಯ ₹ 1.65 ಕೋಟಿಗಿಂತ ಹೆಚ್ಚಾಗಿತ್ತು.

[36] ನಗರೋತ್ಥಾನ ಹಂತ–III ರ ಅಡಿಯಲ್ಲಿ ಶ್ರೀ ಸಿ ಆರ್ ಹರೀಶ್ ಅವರಿಗೆ ಯಾವುದೇ ಕೆಲಸವನ್ನು ವಹಿಸಲಾಗಿಲ್ಲ. ಆದ್ದರಿಂದ, ದರಗಳನ್ನು ಹೋಲಿಸಲಾಗುವುದಿಲ್ಲ.

[37] ಐಟಂ ನಂ.6 ಪ್ಯಾಕೇಜ್ 15 ರಲ್ಲಿ ಇರಲಿಲ್ಲ. ಆದ್ದರಿಂದ, ಇದನ್ನು ಹೋಲಿಕೆಯಿಂದ ಹೊರಗಿಡಲಾಗಿದೆ.

[38] ಅ) ಐಟಂ ಸಂಖ್ಯೆ.4 (ಆರ್‌ಸಿಸಿ ಕೆಲಸಕ್ಕಾಗಿ ಟಿಎಂಟಿ ಉಕ್ಕಿನ ಬಲವರ್ಧನೆಯನ್ನು ಒದಗಿಸುವುದು) – ಸಿಎಸ್‌ಆರ್ ದರ ₹ 7,358/ಸಿ.ಯು.ಎಂ ಬದಲಿಗೆ ₹ 7,538/ಸಿ.ಯು.ಎಂ ಅನ್ನು ಅಳವಡಿಸಲಾಗಿದೆ.

5.80 ಲಕ್ಷ ಹೆಚ್ಚಿಸಿದೆ. ಹೀಗಾಗಿ, ₹ 180.96 ಲಕ್ಷದ ಬದಲಿಗೆ, ನವೀಕರಿಸಿದ ಅಂದಾಜು ವೆಚ್ಚ (ಸಿಎಸ.ಆರ್ 2014–15) ₹ 175.16 ಲಕ್ಷವಾಗಿ ಮತ್ತು ಟೆಂಡರ್ ಪ್ರೀಮಿಯಂ ಶೇಕಡಾ 10.34 ಆಗುತ್ತದೆ. ಟೆಂಡರ್ ಪ್ರೀಮಿಯಂ ಶೇಕಡಾ 10 ಕ್ಕಿಂತ ಹೆಚ್ಚಿರುವ ಕಾರಣ, ಮ.ಪಾ/ಡಿಎಂಎ ದರಗಳನ್ನು ಕೂಲಂಕುಷವಾಗಿ ಪರಿಶೀಲಿಸಬೇಕು ಮತ್ತು ಅಗತ್ಯವಿದ್ದರೆ ಮಾತುಕತೆ ನಡೆಸಬೇಕು. ಆದಾಗ್ಯೂ, ನಿಗದಿತ ಕಾರ್ಯವಿಧಾನವನ್ನು ಅನುಸರಿಸಲಾಗಿಲ್ಲ ಮತ್ತು ಗಣನೀಯವಾಗಿ ಹೆಚ್ಚಿನ ದರದಲ್ಲಿ ಕೆಲಸವನ್ನು ನೀಡಲಾಗಿದೆ.

ರಾಜ್ಯ ಸರ್ಕಾರವು, ಮ.ಪಾ, ತುಮಕೂರು ಬಿಡ್ ಸಿಂಧುತ್ವವನ್ನು ವಿಸ್ತರಿಸಲು ಗುತ್ತಿಗೆದಾರರಿಗೆ ವಿನಂತಿದರೂ ಸಹ ತಿರಸ್ಕರಿಸಿದ ಟೆಂಡರ್‌ದಾರರು ಒಪ್ಪಿರಲಿಲ್ಲ ಎಂದು ಉತ್ತರಿಸಿದೆ (ಏಪ್ರಿಲ್ 2022). ತಿರಸ್ಕೃತಗೊಂಡ ಟೆಂಡರ್‌ದಾರರ ಲಭ್ಯವಿರುವ ಟೆಂಡರ್ ಸಾಮರ್ಥ್ಯವು 2013–14ರ ಅವಧಿಯಲ್ಲಿ ಮಾತ್ರ ತೃಪ್ತಿಕರವಾಗಿದೆ ಎಂದು ಸಹ ತಿಳಿಸಲಾಗಿದೆ. ಬಿಡ್ ಸಿಂಧುತ್ವದ ವಿಸ್ತರಣೆಗೆ ಸಂಬಂಧಿಸಿದಂತೆ ಪತ್ರವ್ಯವಹಾರದ ಯಾವುದೇ ದಾಖಲೆ/ಪುರಾವೆಗಳನ್ನು ತೋರಿಸದ ಕಾರಣ ಉತ್ತರವನ್ನು ಸ್ವೀಕರಿಸಲಾಗಲಿಲ್ಲ. ಇದಲ್ಲದೆ, ಸೂಚಿಸಿದಂತೆ, ಲಭ್ಯವಿರುವ ಟೆಂಡರ್ ಸಾಮರ್ಥ್ಯವನ್ನು ಲೆಕ್ಕಾಚಾರ ಮಾಡಲು 2009–10ರ ಅವಧಿಯಲ್ಲಿನ ಗುತ್ತಿಗೆದಾರನ ವಾರ್ಷಿಕ ವಹಿವಾಟನ್ನು ಪರಿಗಣಿಸದಿದ್ದರಿಂದ ಗುತ್ತಿಗೆದಾರರ ಟೆಂಡರ್ ಅನ್ನು ತಿರಸ್ಕರಿಸಲು ಕಾರಣವಾಯಿತು.

### *3.6.4 ಬಿಡ್ ಸಿಂಧುತ್ವದ ಅವಧಿ ಮುಗಿದ ನಂತರ ಕಾಮಗಾರಿಗಳ ನೀಡುವಿಕೆ.*

ಕೆಟಿಪಿಪಿ ನಿಯಮಗಳು, 2000 ರ ನಿಯಮ 22 ಮತ್ತು ಟೆಂಡರ್ ದಾಖಲೆಗಳಲ್ಲಿ ಟೆಂಡರ್ ಆಹ್ವಾನದ ಷರತ್ತು 12 ರ ಪ್ರಕಾರ, ಟೆಂಡರ್‌ಗಳ ಮೌಲ್ಯಮಾಪನ ಮತ್ತು ಗುತ್ತಿಗೆಯನ್ನು ನೀಡುವುದನ್ನು ಟೆಂಡರ್‌ಗಳು ಮಾನ್ಯವಾಗಿರುವ ಅವಧಿಯೊಳಗೆ ಪೂರ್ಣಗೊಳಿಸಬೇಕಾಗಿತ್ತು. ಅಸಾಧಾರಣ ಸಂದರ್ಭಗಳಲ್ಲಿ, ಮೂಲ ಸಮಯದ ಮಿತಿಯ ಮುಕ್ತಾಯದ ಮೊದಲು, ಉದ್ಯೋಗದಾತರು ಟೆಂಡರ್ದಾರರಿಗೆ ನಿರ್ದಿಷ್ಟ ಹೆಚ್ಚುವರಿ ಅವಧಿಗೆ ಮಾನ್ಯತೆಯ ಅವಧಿಯನ್ನು ವಿಸ್ತರಿಸಲು ವಿನಂತಿಸಬಹುದು. ಮನವಿ ಮತ್ತು ಟೆಂಡರ್ದಾರರ ಪ್ರತಿಕ್ರಿಯೆಗಳನ್ನು ಲಿಖಿತವಾಗಿ ಅಥವಾ ಕೇಬಲ್ ಮೂಲಕ ಮಾಡಬೇಕಾಗಿತ್ತು. ವಿಸ್ತೃತ ಅವಧಿಯೊಳಗೆ ಟೆಂಡರ್‌ಗಳ ಮೌಲ್ಯಮಾಪನ ಮತ್ತು ಗುತ್ತಿಗೆಯನ್ನು ನೀಡದಿದ್ದಲ್ಲಿ, ಎಲ್ಲಾ ಟೆಂಡರ್‌ಗಳನ್ನು ಅಮಾನ್ಯವಾಗಿದೆ ಎಂದು ಪರಿಗಣಿಸಿ ಮತ್ತು ಹೊಸದಾಗಿ ಟೆಂಡರ್‌ಗಳನ್ನು ಕರೆಯಬೇಕು.

ಬಿಡ್ ಸಿಂಧುತ್ವದ ಅವಧಿ ಮುಗಿದ ನಂತರ 43 ಪ್ಯಾಕೇಜ್‌ಗಳಲ್ಲಿ 18[39] (ಶೇಕಡಾ 42)ರಲ್ಲಿ ಮೂರು ಪರೀಕ್ಷಾ–ತನಿಖೆಗೆ ಒಳಪಟ ಮ.ಪಾಗಳು (ಬಳ್ಳಾರಿ, ಮೈಸೂರು ಮತ್ತು ತುಮಕೂರು) ಗುತ್ತಿಗೆಗಳನ್ನು ನೀಡಿರುವುದನ್ನು ಲೆಕ್ಕಪರಿಶೋಧನೆ ಗಮನಿಸಿದೆ (ಆಗಸ್ಟ್‌ನಿಂದ ನವೆಂಬರ್ 2021). ಈ ಮ.ಪಾಗಳು ಈ ಯಾವುದೇ ಪ್ರಕರಣಗಳಲ್ಲಿ ಗುತ್ತಿಗೆದಾರರಿಂದ ಬಿಡ್ ಸಿಂಧುತ್ವದ ವಿಸ್ತರಣೆಯನ್ನು ಕೋರಿರಲಿಲ್ಲ. ಬಿಡ್ ಸಿಂಧುತ್ವದ ಕೊರತೆಯಿಂದಾಗಿ ಗುತ್ತಿಗೆದಾರರು ಒಪ್ಪಿದ ದರಗಳಿಗೆ ಬದ್ಧರಾಗಿರಬೇಕಾಗಿಲ್ಲವಾದ್ದರಿಂದ ಮೇಲಿನ ಪ್ರಕರಣಗಳಲ್ಲಿನ ಕಾಮಗಾರಿಗಳ ನೀಡುವಿಕೆಯು ಹಣಕಾಸಿನ ಅಪಾಯವನ್ನು ಹೊಂದಿದೆ.

ಮೇಲಿನ ಪ್ರಕರಣಗಳಲ್ಲಿ ಬಿಡ್ ಮಾನ್ಯತೆಯ ಅವಧಿಯನ್ನು ಗುತ್ತಿಗೆದಾರರಿಗೆ ನೀಡಿದ ಮೌಖಿಕ ಸೂಚನೆಗಳ ಮೂಲಕ ವಿಸ್ತರಿಸಲಾಗಿದೆ ಎಂದು ರಾಜ್ಯ ಸರ್ಕಾರವು ಉತ್ತರಿಸಿರುವುದು (ಏಪ್ರಿಲ್ 2022) ಸ್ವೀಕಾರಾರ್ಹವಲ್ಲ.

---

ಆ) ಐಟಂ ಸಂಖ್ಯೆ.14 (ಅಸ್ತಿತ್ವದಲ್ಲಿರುವ ಡಬ್ಲ್ಯೂ.ಬಿ.ಎಂ ರಸ್ತೆಯ ಮೇಲ್ಮೈಯನ್ನು ಸ್ವಚ್ಛಗೊಳಿಸುವುದು) – ₹ 11.30/ಚದರ ಮೀಟರ್ ಸಿ,ಎಸ್.ಆರ್ ದರದ ಬದಲಿಗೆ ₹ 32.60/ಚ.ಮೀ.

[39] ಬಳ್ಳಾರಿ – 4 ಪ್ಯಾಕೇಜುಗಳು (ಸಂ. 1, 4, 10 ಮತ್ತು 19); ಮೈಸೂರು – 9 ಪ್ಯಾಕೇಜ್‌ಗಳು (ಸಂ. 1, 3, 13, 14, 17, 29, 81, 82 ಮತ್ತು 83) ಮತ್ತು ತುಮಕೂರು – 5 ಪ್ಯಾಕೇಜ್‌ಗಳು (ಸಂ. 6, 9, 15, 26 ಮತ್ತು 34).

**ಕಾಮಗಾರಿಗಳ ಕಾರ್ಯಗತಗೊಳಿಸುವಿಕೆ**

### 3.7 ಪ್ಯಾಕೇಜ್/ಕಾಮಗಾರಿಯ ವೆಚ್ಚದ ಹಂಚಿಕೆಯಲ್ಲಿ ವಿಚಲನ

ಯೋಜನಾ ಮಾರ್ಗಸೂಚಿಗಳು (ಕಂಡಿಕೆ 23), ಕೈಗೆತ್ತಿಕೊಳ್ಳಬೇಕಾದ ಕಾಮಗಾರಿಗಳನ್ನು ಪ್ಯಾಕೇಜ್‌ಗಳಲ್ಲಿ ಗುಂಪು ಮಾಡಬೇಕೆಂದು ಮತ್ತು ಪ್ರತಿ ಪ್ಯಾಕೇಜ್‌ನ ವೆಚ್ಚವು ₹ 100 ಲಕ್ಷಕ್ಕಿಂತ ಕಡಿಮೆ ಇರಬಾರದು ಎಂದು ತಿಳಿಸಿದೆ. ಅಲ್ಲದೆ, ಯೋಜನೆಯಡಿ ಪ್ರತಿ ಕಾಮಗಾರಿಯು ಕನಿಷ್ಠ ₹ 50 ಲಕ್ಷವಾಗಿರಬೇಕು.
2015-21ರಲ್ಲಿ, ಯೋಜನಾ ಮಾರ್ಗಸೂಚಿಗಳಿಗೆ ವಿರುದ್ಧವಾಗಿ, 227 ಪ್ಯಾಕೇಜ್‌ಗಳಲ್ಲಿ 32 (ಶೇ. 14) ಅನ್ನು ಪರೀಕ್ಷಾ-ತನಿಖೆಗೆ ಒಳಪಟ ಮ.ಪಾಗಳು ತೆಗೆದುಕೊಂಡಿದ್ದು, ಇದರ ಅಂದಾಜು ವೆಚ್ಚಗಳು ₹ 100 ಲಕ್ಷಕ್ಕಿಂತ ಕಡಿಮೆ ಇತ್ತು. ಇದಲ್ಲದೆ, ಈ ಮ.ಪಾಗಳಲ್ಲಿನ 643 ಕಾಮಗಾರಿಗಳ ಪೈಕಿ 452 (ಶೇ 70)ರ ಕನಿಷ್ಠ ವೆಚ್ಚವು ₹ 50 ಲಕ್ಷಕ್ಕಿಂತ ಕಡಿಮೆಯಾಗಿದೆ. ವಿವರಗಳನ್ನು **ಅನುಬಂಧ 3.8** ರಲ್ಲಿ ನೀಡಲಾಗಿದೆ.

ಹೀಗಾಗಿ, ನಿಗದಿತ ಕನಿಷ್ಠ ಹಣಕಾಸಿನ ವೆಚ್ಚಕ್ಕಿಂತ ಕಡಿಮೆ ಇರುವ ಹೆಚ್ಚಿನ ಕಾಮಗಾರಿಗಳ ಕಾರ್ಯಗತಗೊಳಿಸುವಿಕೆಯು ಯೋಜನೆಯಡಿಯಲ್ಲಿ ಕಲ್ಪಿಸಿದಂತೆ ಮ.ಪಾಗಳಿಗೆ ಸ್ಪಷ್ಟವಾದ ಪ್ರಯೋಜನವನ್ನು ಒದಗಿಸದೆ ಸಂಪನ್ಮೂಲಗಳನ್ನು ತೆಳುವಾಗಿ ಹರಡಿದೆ.
ರಾಜ್ಯ ಸರ್ಕಾರವು ಭವಿಷ್ಯದಲ್ಲಿ ಮಾರ್ಗಸೂಚಿಗಳನ್ನು ಅನುಸರಿಸಲು ಸಮ್ಮತಿಸುತ್ತಾ, ಸೆಪ್ಟೆಂಬರ್ 2013 ರಲ್ಲಿ ನೀಡಲಾದ ಸರ್ಕಾರದ ಸೂಚನೆಗಳ ಪ್ರಕಾರ ಯೋಜನೆಯ ಅನುಷ್ಠಾನಕ್ಕೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲಾಗಿದೆ ಮತ್ತು ಇದು ಕಾಮಗಾರಿಗಳ ಕನಿಷ್ಠ ಮೌಲ್ಯವನ್ನು ₹ 25 ಲಕ್ಷಕ್ಕೆ ಅವಕಾಶ ಮಾಡಿಕೊಟ್ಟಿದೆ ಎಂದು ಹೇಳಿದೆ (ಏಪ್ರಿಲ್ 2022). ಮೇ 2014 ರಲ್ಲಿ ಸರ್ಕಾರವು ಹೊರಡಿಸಿದ ವಿವರವಾದ ಮಾರ್ಗಸೂಚಿಗಳ ಆಧಾರದ ಮೇಲೆ ಕ್ರಿಯಾ ಯೋಜನೆಗಳನ್ನು ಪರಿಷ್ಕರಿಸಬೇಕಾಗಿರುವುದರಿಂದ ಉತ್ತರವು ಸ್ವೀಕಾರಾರ್ಹವಲ್ಲ.

### 3.8 ಕಾರ್ಯಗತಗೊಳಿಸದಿರುವುದು ಮತ್ತು ಕಾಮಗಾರಿಗಳ ಅನುಷ್ಠಾನದಲ್ಲಿ ವಿಳಂಬ

ಯೋಜನಾ ಮಾರ್ಗಸೂಚಿಗಳ ಕಂಡಿಕೆ 23 ಕ್ರಿಯಾ ಯೋಜನೆಯು ಸ್ಥಳಗಳ ಲಭ್ಯವಿಲ್ಲದ ಕಾಮಗಾರಿಗಳನ್ನು ಒಳಗೊಂಡಿರಬಾರದು ಎಂದು ಕಡ್ಡಾಯಗೊಳಿಸಿದೆ.

ಮೂರು ಮ.ಪಾಗಳಲ್ಲಿ (ಬಳ್ಳಾರಿ, ಮೈಸೂರು ಮತ್ತು ತುಮಕೂರು) 43 ಪರೀಕ್ಷಾ-ತನಿಖೆಗೆ ಒಳಪಟ ಪ್ಯಾಕೇಜ್‌ಗಳ ಲೆಕ್ಕಪರಿಶೋಧನೆ ಪರಿಶೀಲನೆ (ಆಗಸ್ಟ್‌ನಿಂದ ನವೆಂಬರ್ 2021) ಏಳು ಪ್ಯಾಕೇಜ್‌ಗಳ (₹ 8.53 ಕೋಟಿ ವೆಚ್ಚ) 16 ಕಾಮಗಾರಿಗಳಲ್ಲಿನ 11 (ಶೇ 69) ಕಮಾಗಾರಿಗಳ ಸ್ಥಳಗಳ ಅಲಭ್ಯತೆಯಿಂದ ಕಾರ್ಯಗತಗೊಂಡಿಲ್ಲ ಎಂದು ತೋರಿಸಿತು. ಇದು, ಮ.ಪಾ.ಗಳು ಕಮಾಗಾರಿಗಳನ್ನು ಕ್ರಿಯಾಯೋಜನೆಗಳಲ್ಲಿ ಸೇರಿಸುವಾಗ ಸ್ಥಳ ವೀಕ್ಷಣೆ ಮಾಡಿಲ್ಲವೆಂದು ತೋರಿಸುತ್ತದೆ. ಇವುಗಳಲ್ಲಿ, ಮೈಸೂರಿನಲ್ಲಿ ಒ.ಹೆಚ್.ಟಿಗಳ ನಿರ್ಮಾಣಕ್ಕಾಗಿ ನಾಲ್ಕು ಕಾಮಗಾರಿಗಳಲ್ಲಿ ಕಾಮಗಾರಿಯ ಸ್ಥಳಗಳನ್ನು ಬದಲಾಯಿಸಲಾಯಿತು. ಕೆಳಗೆ ವಿವರಿಸಿದ ಪ್ಯಾಕೇಜ್‌ಗಳಿಗೆ ಸಂಬಂಧಿಸಿದಂತೆ, ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿಲ್ಲ ಅಥವಾ ಭಾಗಶಃ ಪೂರ್ಣಗೊಳಿಸಿದ ಕಾರಣಗಳನ್ನು ಲೆಕ್ಕಪರಿಶೋಧನೆ ಮಾಡಲು ಒದಗಿಸಲಾಗಿಲ್ಲ:

i) ಬಳ್ಳಾರಿಯಲ್ಲಿ ಪರೀಕ್ಷಾ-ತನಿಖೆಗೆ ಒಳಪಟ್ಟ ಪ್ಯಾಕೇಜ್‌ಗಳಲ್ಲಿ (ಸಂ. 36, 38 ಮತ್ತು 50) ಇಂಟರ್‌ಲಾಕಿಂಗ್ ಕಲ್ಲುಗಳನ್ನು ಹಾಕುವ ಎರಡು ಕಾಮಗಾರಿಗಳು (₹ 31 ಲಕ್ಷ ವೆಚ್ಚ) ಮತ್ತು ಒಂದು ಮಳೆನೀರು ಕೊಯ್ಲು ಕಾಮಗಾರಿಯು (₹ 2.32 ಲಕ್ಷ ವೆಚ್ಚ) ಕಾರ್ಯಗತವಾಗಿಲ್ಲ.

ii) ಅದೇ ರೀತಿ, ವಿಜಯಪುರದಲ್ಲಿ ಪ್ಯಾಕೇಜ್ 35 ರಲ್ಲಿನ ಮೂರು ಕಾಮಗಾರಿಗಳಲ್ಲಿ, ಯಾವುದೇ ಕಾಮಗಾರಿಗಳು ಪೂರ್ಣಗೊಂಡಿಲ್ಲ ಮತ್ತು ₹ 123.40 ಲಕ್ಷ ಅಂದಾಜು ವೆಚ್ಚದಲ್ಲಿ ಕೇವಲ ₹ 43.84 ಲಕ್ಷ ವೆಚ್ಚವಾಗಿದೆ.

ಬಳ್ಳಾರಿ, ಮೈಸೂರು ಮತ್ತು ತುಮಕೂರು ಮ.ಪಾಗಳಲ್ಲಿ 43 ಪ್ಯಾಕೇಜ್‌ಗಳ ಪೈಕಿ ಎಂಟನ್ನು (ಶೇ 19) ಪೂರ್ಣಗೊಳ್ಳುವಲ್ಲಿ 75 ದಿನಗಳಿಂದ 547 ದಿನಗಳವರೆಗೆ ವಿಳಂಬವಾಗಿದೆ ಎಂದು ಪರಿಶೀಲನೆಯು ತೋರಿಸಿದೆ. ಈ ಎಂಟು ಪ್ಯಾಕೇಜ್‌ಗಳಿಗೆ ಮಾಡಿದ ವೆಚ್ಚ ₹ 9.93 ಕೋಟಿ. ಕಾಮಗಾರಿಗಳನ್ನು ವಹಿಸಿಕೊಡುವ ಮುನ್ನವೇ ಯುಜಿಡಿ ಕಾಮಗಾರಿಗಳು ಪೂರ್ಣಗೊಳ್ಳದಿರುವುದು, ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸದಿರುವುದು ಇತ್ಯಾದಿ ವಿಳಂಬಕ್ಕೆ ಕಾರಣವಾಗಿದೆ. ಮ.ಪಾ–ವಾರು ವಿವರಗಳನ್ನು **ಅನುಬಂಧ 3.9** ರಲ್ಲಿ ನೀಡಲಾಗಿದೆ.

ಮ.ಪಾ, ವಿಜಯಪುರ ಅಗತ್ಯ ಮಾಹಿತಿಯನ್ನು ಒದಗಿಸದ (ಡಿಸೆಂಬರ್ 2021) ಕಾರಣ ವಿಜಯಪುರದಲ್ಲಿ ಮೇಲಿನ ಸಮಸ್ಯೆಗಳನ್ನು ಪರಿಶೀಲಿಸಲು ಲೆಕ್ಕಪರಿಶೋಧನೆಗೆ ಸಾಧ್ಯವಾಗಲಿಲ್ಲ.

## 3.9 ಕಾಮಗಾರಿಗಳ ಅನಿಯಮಿತ ಕಾರ್ಯಗತಗೊಳಿಸುವಿಕೆ

ಟೆಂಡರ್ ದಾಖಲೆಗಳು ಮತ್ತು ಕೆಪಿಡಬ್ಲ್ಯೂಡಿ ಕೋಡ್‌ನ ಪ್ರಕಾರ, ಒಪ್ಪಂದಗಳಲ್ಲಿ ಒದಗಿಸಿದ ದರಕ್ಕಿಂತ ಹೆಚ್ಚಿನ ದರದಲ್ಲಿ ಗುತ್ತಿಗೆದಾರರಿಗೆ ಪಾವತಿಸಬಾರದು. ಪಾವತಿಗಳನ್ನು ಮಾಡಿದ ಪ್ರತಿ ಐಟಂನ ಪ್ರಮಾಣಗಳು, ದರ ಮತ್ತು ಮೊತ್ತದ ವಿವರಗಳನ್ನು ಸಂಬಂಧಿತ ಅಳತೆ ಪುಸ್ತಕದಲ್ಲಿ ಸ್ಪಷ್ಟವಾಗಿ ಪತ್ತೆಹಚುವಂತಿರಬೇಕು.

ಪರಿಶೀಲನೆಯು (ಆಗಸ್ಟ್‌ನಿಂದ ಡಿಸೆಂಬರ್ 2021), ಪರೀಕ್ಷಾ–ತನಿಖೆಗೆ ಒಳಪಟ್ಟ ಮ.ಪಾಗಳಲ್ಲಿ ₹ 68.95 ಲಕ್ಷ ವೆಚ್ಚವು ಸ್ವೀಕಾರಾರ್ಹವಲ್ಲ/ಅನಿಯಮಿತವಾಗಿದೆ ಎಂದು ತೋರಿಸಿದೆ. ಇವುಗಳನ್ನು ಮುಂದಿನ ಕಂಡಿಕೆಗಳಲ್ಲಿ ವಿವರಿಸಲಾಗಿದೆ:

### *3.9.1 ತಪ್ಪಾದ ದರಗಳ ಅಳವಡಿಕೆ*

ಕೆ.ಪಿ.ಡಬ್ಲ್ಯೂ.ಡಿ ಕೋಡ್‌ನ ಕಂಡಿಕೆ 151 ರ ಪ್ರಕಾರ, ಪ್ರತಿ ಐಟಂಗೆ ಗುತ್ತಿಗೆದಾರರು ಉಲ್ಲೇಖಿಸಿದ ದರಗಳಲ್ಲಿ ಕಾರ್ಯಗತಗೊಳಿಸಿದ ಕೆಲಸದ ನೈಜ ಪ್ರಮಾಣಗಳಿಗೆ ಐಟಂ ದರದಲ್ಲಿ ಪಾವತಿಯನ್ನು ಮಾಡಬೇಕಾಗಿತ್ತು.

ಎರಡು ಮ.ಪಾಗಳ (ಮೈಸೂರು ಮತ್ತು ತುಮಕೂರು) 34 ಪ್ಯಾಕೇಜ್‌ಗಳಲ್ಲಿ ಕೆಳಗಿನ ಐದರಲ್ಲಿ (ಶೇಕಡಾ 15) ಪಾವತಿಗಳನ್ನು ತಪ್ಪಾದ ದರಗಳಲ್ಲಿ ಮಾಡಲಾಗಿದೆ ಎಂದು ಲೆಕ್ಕಪರಿಶೋಧನೆಯು ಗಮನಿಸಿದೆ (ಆಗಸ್ಟ್‌ನಿಂದ ಅಕ್ಟೋಬರ್ 2021):

(i) **ಮೈಸೂರು**

ಅ) ಪ್ಯಾಕೇಜ್ 1: ಮಳೆ ನೀರು ಚರಂಡಿಯ ಗೋಡೆ (218.90 ಸಿಯುಎಂ) ಗೆ ಪಿ.ಸಿ.ಸಿ/ಆರ್.ಸಿಸಿ ಯನ್ನು ಒದಗಿಸಲು ಮತ್ತು ಹಾಕಲು ಆರ್.ಸಿ.ಸಿ ಎಂ25 ಗ್ರೇಡ್ ಅನ್ನು ಬಳಸುವ ಬದಲು ಆರ್.ಸಿ.ಸಿ ಎಂ20 ಗ್ರೇಡ್ (₹ 5,953.35/ ಸಿ.ಯು.ಎಂ) ಅನ್ನು ಬಳಸಲಾಗಿದೆ, ಆದರೆ ಆರ್.ಸಿ.ಸಿ ಎಂ25 ದರ್ಜೆಯ ದರದಲ್ಲಿ ಪಾವತಿಸಲಾಗಿದೆ (₹ 7,506/ಸಿ.ಯು.ಎಂ). ಅಲ್ಲದೆ, ಅಸ್ತಿತ್ವದಲ್ಲಿರುವ ಬಿಟುಮಿನಸ್ ಮೇಲ್ಮೈಯನ್ನು (2,476.30 ಚದರ ಮೀಟರ್(ಚ.ಮಿ)) ಸ್ಕೇರಿಫೈ ಮಾಡುವುದಕ್ಕೆ ₹ 81.38/ಚ.ಮಿ (ಕಲ್ಲಿನ ಲೋಹದ ಪದರ)ದಲ್ಲಿ ಪಾವತಿಸಿದ್ದರೂ ₹ 2.62/ಚ.ಮಿ (ಬಿಟುಮಿನಸ್ ಮೇಲ್ಮೈ)ದಲ್ಲಿ ಪಾವತಿಸಬೇಕಿತ್ತು. ಇದರಿಂದಾಗಿ ₹ 5.35 ಲಕ್ಷ ಸ್ವೀಕಾರಾರ್ಹವಲ್ಲದ ಪಾವತಿಯಾಗಿದೆ.

ಆ)ಪ್ಯಾಕೇಜ್ 3: ಸಾಮಾನ್ಯ ಮಣ್ಣಿನಲ್ಲಿ ಮಣ್ಣಿನ ಉತ್ಖನನಕ್ಕೆ (3,000.43 ಸಿಯುಎಂ), ₹ 63.45/ಪ್ರತಿ.ಸಿ.ಯು.ಎಂ ದರದಲ್ಲಿ ಪಾವತಿಸಬೇಕಾಗಿತ್ತು ಆದರೆ ಗಟ್ಟಿಯಾದ ಮಣ್ಣಿನ ಉತ್ಖನನಕ್ಕೆ (523.60 ಸಿಯುಎಂ ₹ 88.83/ಸಿ.ಯು.ಎಂ) ಮತ್ತು ಮಣ್ಣಿನ ಉತ್ಖನನ ಮತ್ತು ಕಟ್ಟೆ ರಚನೆಗೆ (2,476.83 ಸಿ.ಯು.ಎಂ ₹ 81.58/ಸಿ.ಯು.ಎಂ) ಅನ್ವಯಿಸುವ ದರದಲ್ಲಿ ಅದನ್ನು ತಪ್ಪಾಗಿ ಪಾವತಿಸಲಾಗಿದೆ. ಇದರ ಪರಿಣಾಮವಾಗಿ ₹ 0.58 ಲಕ್ಷವನ್ನು ಸ್ವೀಕಾರಾರ್ಹವಲ್ಲದ ಪಾವತಿ ಮಾಡಲಾಗಿದೆ.

ಇ)ಪ್ಯಾಕೇಜ್ 13: ರಸ್ತೆ ಕಾಮಗಾರಿಗೆ ಸಾಮಾನ್ಯ ಮಣ್ಣಿನ ಉತ್ಖನನಕ್ಕೆ (327.75 ಸಿಯುಎಂ ₹ 66.73/ ಸಿಯುಎಂ) ಬದಲು ಗಟ್ಟಿಯಾದ ಮಣ್ಣಿನ ಮೇಲ್ಮೈ ಉತ್ಖನನದಲ್ಲಿ (₹ 165/ ಸಿ.ಯು.ಎಂ) ಹೆಚ್ಚಿನ ಅನ್ವಯಿಸುವ ದರದಲ್ಲಿ ತಪ್ಪಾಗಿ ಪಾವತಿಸಲಾಗಿದೆ. ಹೀಗಾಗಿ, ತಪ್ಪಾದ ದರ ಅಳವಡಿಸಿಕೊಂಡಿದ್ದರಿಂದ ₹ 0.32 ಲಕ್ಷ ಹೆಚ್ಚುವರಿ ಪಾವತಿಯಾಗಿದೆ.

**(ii) ತುಮಕೂರು**

ಅ)ಪ್ಯಾಕೇಜ್ 5: ಹೆಚ್ಚುವರಿ ಐಟಂ ಅನ್ನು ₹ 1,262.10 ರಂತೆ ಪಾವತಿಸುವ ಬದಲು ₹ 1,324.05 ರಂತೆ ಪಾವತಿಸಲಾಗಿದೆ. ಹೀಗಾಗಿ, ಕಾರ್ಯಗತಗೊಳಿಸಿದ 780.13 ಸಿಯುಎಂನ ಪ್ರಮಾಣಕ್ಕೆ ₹ 0.48 ಲಕ್ಷ ಹೆಚ್ಚುವರಿ ಪಾವತಿಯಾಗಿದೆ.

ಆ)ಪ್ಯಾಕೇಜ್ 34:, ಅಸ್ತಿತ್ವದಲ್ಲಿರುವ ಮೇಲ್ಮೈಯನ್ನು ಸ್ಕೇರಿಫೈ ಮಾಡಲು ₹ 2.71/**ಚ.ಮಿ** (ಬಿಟುಮಿನಸ್ ಮೇಲ್ಮೈ)ನಂತೆ ಪಾವತಿಸಬೇಕಾಗಿದ್ದರೂ ಸಹ ₹ 15/ಚ.ಮಿ (ಗ್ರ್ಯಾನ್ಯುಲರ್ ಮೇಲ್ಮೈ)ರಂತೆ ಪಾವತಿಸಲಾಗಿದೆ. ಹೀಗಾಗಿ, 9,505.46 ಚದರ ಮೀಟರ್‌ನ ಕಾರ್ಯಗತಗೊಳಿಸಿದ ಪ್ರಮಾಣಕ್ಕೆ ₹ 1.17 ಲಕ್ಷ ಹೆಚ್ಚುವರಿ ಪಾವತಿಯಾಗಿದೆ.

ರಾಜ್ಯ ಸರ್ಕಾರವು, ಕಾಮಗಾರಿಗಳ ಅನುಷ್ಠಾನದ ಸಮಯದಲ್ಲಿ ಪ್ರಚಲಿತದಲ್ಲಿರುವ ಸ್ಥಳ ಪರಿಸ್ಥಿತಿಗಳ ಆಧಾರದ ಮೇಲೆ ಹೆಚ್ಚುವರಿ ಕಾಮಗಾರಿಗಳನ್ನು ನಡೆಸಿದ್ದರಿಂದ ಹೆಚ್ಚುವರಿ ಪಾವತಿಗಳನ್ನು ಮಾಡಲಾಗಿದೆ ಎಂದು ಉತ್ತರಿಸಿತು (ಏಪ್ರಿಲ್ 2022). ಬದಲಾವಣೆಗಳನ್ನು ಅಗತ್ಯಪಡಿಸುವ ಪರೀಕ್ಷಾ ವರದಿಗಳಂತಹ ಸಾಕ್ಷ್ಯವನ್ನು ಲೆಕ್ಕಪರಿಶೋಧನೆಗೆ ಕೊಡದಿರುವ ಕಾರಣ ಪ್ರತ್ಯುತ್ತರವು ಸ್ವೀಕಾರಾರ್ಹವಲ್ಲ. ಇದಲ್ಲದೆ, ಪಾವತಿಸಿದ ಹೆಚ್ಚುವರಿ ದರಳನ್ನು ಗುತ್ತಿಗೆದಾರರಿಂದ ಇನ್ನೂ ವಸೂಲಾತಿಗಳನ್ನು ಮಾಡಬೇಕಾಗಿದೆ (ಏಪ್ರಿಲ್ 2022).

### *3.9.2 ಗುತ್ತಿಗೆದಾರರಿಗೆ ಮಾಡಿದ ಅನಿಯಮಿತ ಪಾವತಿಗಳು*

ಪರಿಶೀಲನೆಯು (ಆಗಸ್ಟ್‌ನಿಂದ ಡಿಸೆಂಬರ್ 2021) ನಿಗದಿತ ಅಳತೆಗಳು, ಈಗಾಗಲೇ ಪಾವತಿಸಿದ ಪ್ರಮಾಣ ಇತ್ಯಾದಿಗಳನ್ನು ಕಡೆಗಣಿಸಿ ಕಾರ್ಯಗತಗೊಳಿಸಿದ ಐಟಂಗೆ ಪರೀಕ್ಷಾ-ಪರಿಶೀಲಿಸಲಾದ ಮ.ಪಾಗಳು ಗುತ್ತಿಗೆದಾರರಿಗೆ ಪಾವತಿಗಳನ್ನು ಮಾಡಿದೆ ಎಂದು ತೋರಿಸಿದೆ. 31 ಪರೀಕ್ಷಾ-ತನಿಖೆಗೆ ಒಳಪಟ್ಟ ಪ್ಯಾಕೇಜ್‌ಗಳ ಪೈಯಕಿ ಮೂರರಲ್ಲಿ (ಶೇ.10 ರಲ್ಲಿ) ₹ 40.45 ಲಕ್ಷವನ್ನು ಅನಿಯಮಿತವಾಗಿ ಪಾವತಿಸಿರುವುದನ್ನು ಕೆಳಗೆ ವಿವರಿಸಲಾಗಿದೆ:

**(i) ಮೈಸೂರು**

ಪ್ಯಾಕೇಜ್ 3: ಎಸ್.ಜೆ.ಹಚ್ ರಸ್ತೆಗೆ (ಚೈನೇಜ್ 0 ರಿಂದ 194.60 ಮೀ ಮತ್ತು 202.20 ರಿಂದ 387.50 ಮೀ) ಅರೆ ದಟ್ಟವಾದ ಬಿಟುಮಿನಸ್ ಕಾಂಕ್ರೀಟ್ (ಎಸ್.ಡಿ.ಬಿ.ಸಿ) ಹಾಕಲಾಯಿತು. ವೀಣಾ ಪ್ರಾವಿಷನ್ ಸ್ಟೋರ್ ಎದುರು (ಚೈನ್ 312.20 ರಿಂದ 367.20 ಮೀ) 20.60 ಮೀ. ಉದ್ದದ ಮೇಲಿನ ಚೈನೇಜ್ಗೆ ಎರಡು ಬಾರಿ ಪಾವತಿ ಮಾಡಿರುವುದನ್ನು ಲೆಕ್ಕಪರಿಶೋಧನೆ ಗಮನಿಸಿದೆ. ಹೆಚ್ಚುವರಿ ಪಾವತಿ ಮೊತ್ತ ₹ 0.29 ಲಕ್ಷವಾಗಿದೆ (3.66 ಸಿಯುಎಂ @ ₹

8,030.70). ಹಾಗೆಯೇ ಅದೇ ರಸ್ತೆಯ ಅಗೆಯುವಿಕೆಗೆ ಒಂದಕ್ಕಿಂತ ಹೆಚ್ಚು ಬಾರಿ ಪಾವತಿಸಲಾಗಿದೆ (**ಅನುಬಂಧ 3.10**) ಮತ್ತು ಒಳಗೊಂಡಿರುವ ಮೊತ್ತ ₹ 3.94 ಲಕ್ಷ.

**(ii) ವಿಜಯಪುರ**

(ಅ)ಪ್ಯಾಕೇಜ್ 53/4: ಅಂದಾಜಿನಲ್ಲಿ ಒದಗಿಸಲಾದ ಅಳತೆಗಳ ಪ್ರಕಾರ 250 ಶಾಶ್ವತ ಮಾದರಿಯ ಬ್ಯಾರಿಕೇಡ್‌ಗಳ ಸ್ಥಾಪನೆಯನ್ನು ಕೆಲಸ ಒಳಗೊಂಡಿದೆ. ಆದರೆ, 235 ಬ್ಯಾರಿಕೇಡ್‌ಗಳನ್ನು ಅಳವಡಿಸಲು ಗುತ್ತಿಗೆದಾರರಿಗೆ ಮ.ಪಾ ₹ 12.46 ಲಕ್ಷ (ಒಂದಕ್ಕೆ ₹ 5,300ರಂತೆ) ಪಾವತಿಸಿದ್ದಾರೆ. ಕಾಮಗಾರಿಗಳ ದಾಖಲೆಗೆ ಲಗತ್ತಿಸಲಾದ ಛಾಯಾಚಿತ್ರಗಳು ಮತ್ತು ಜೆ.ಪಿ.ವಿ (ಡಿಸೆಂಬರ್ 2021) ಕೈಗೊಂಡ ಸಮಯದಲ್ಲಿ ವಾಸ್ತವ ಕಾಮಗಾರಿಗಳನ್ನು ನೋಡಿದಾಗ, ಅನುಮೋದಿತ ಅಂದಾಜು ಮತ್ತು ಅಳತೆಗಳಿಗೂ ಮತ್ತು ವಾಸ್ತವಕ್ಕೂ ಸಂಪೂರ್ಣವಾಗಿ ವ್ಯತ್ಯಾಸವಾಗಿರುವುದನ್ನು ಗಮನಿಸಬಹುದು (**ಪ್ರದರ್ಶಿಕೆ 3.1**).

**ಪ್ರದರ್ಶಿಕೆ 3.1: ವಿಜಯಪುರದ ಮ.ಪಾಯಲ್ಲಿ ವಾಸ್ತವವಾಗಿ ಅಳವಡಿಸಬೇಕಾದ ಮತ್ತು ಅಳವಡಿಸಲಾಗಿರುವ ಬ್ಯಾರಿಕೇಡ್‌ಗಳು.**

| | |
|---|---|
|  | <br> |
| ಅಳವಡಿಸಬೇಕಾಗಿತ್ತು: ಉಕ್ಕಿನ ಘಟಕಗಳಿಂದ ಮಾಡಿದ ಬ್ಯಾರಿಕೇಡ್‌ಗಳು, ರಸ್ತೆ ಮಟ್ಟದಿಂದ 1.5 ಮೀಟರ್ ಎತ್ತರ, 3 ಸಮತಲ ಹಳಿಗಳನ್ನು 200 ಮಿಮೀ ಅಗಲ ಮತ್ತು 4 ಮೀಟರ್ ಉದ್ದದ 50 × 50 × 5 ಮಿಮೀ ಕೋನ ಕಬ್ಬಿಣದ ಲಂಬವಾದ ಬೆಂಬಲದ ಮೇಲೆ ಅಳವಡಿಸಲು, ಹಳದಿ ಮತ್ತು ಬಿಳಿ ಪಟ್ಟಿಗಳಿಂದ ಚಿತ್ರಿಸಲು, 45 ಡಿಗ್ರಿ ಕೋನದಲ್ಲಿ 150 ಮಿ.ಮೀ ಅಗಲ, ಐ.ಆರ್.ಸಿ ಪ್ರಕಾರ ಪೂರ್ಣ: ಎಸ್.ಪಿ:55–2001 | ವಾಸ್ತವವಾಗಿ ಅಳವಡಿಸಲಾದ: 50ಮೀಮೀ × 25ಮೀಮೀ ಉಕ್ಕಿನ ಆಯತಾಕಾರದ ಪೈಪ್‌ಗಳನ್ನು ಲಂಬವಾಗಿ ಇರಿಸಲಾಗಿದೆ ಮತ್ತು ಒಂದೇ ಆಯಾಮಕ್ಕಾಗಿ ಒಂದು ಪೈಪ್ ಅನ್ನು ಮೇಲಿನ ಮತ್ತು ಕೆಳಭಾಗದಲ್ಲಿ ಅಡ್ಡಲಾಗಿ 2 ಮೀಟರ್ ಉದ್ದ. ಎರಡು 75 ಮೀಮೀ × 35 ಮೀಮೀ ಆಯತಾಕಾರದ ಉಕ್ಕಿನ ಕೊಳವೆಗಳನ್ನು ಒಂದೇ ಘಟಕದ ಎರಡೂ ತುದಿಗಳಲ್ಲಿ ಲಂಬವಾಗಿ ಇರಿಸಲಾಗಿದೆ.<br>ಕೆಲವು ಸ್ಥಳಗಳಲ್ಲಿ ಮೂರು 25 ಮೀ.ಮೀ ಸಿಲಿಂಡರಾಕಾರದ ಪೈಪ್‌ಗಳನ್ನು ಅಡಕಾರವಾಗಿ ಒಂದು ತುದಿಯಿಂದ ಇನ್ನೊಂದು ತುದಿಗೆ, ಎರಡು ಮೀಟರ್ ದೂರದಲ್ಲಿ ರಂಧ್ರದ ಮೂಲಕ ಲಂಬವಾಗಿ ಎಂಎಸ್ ರೇಲಿಂಗ್‌ಗಳ ಮೂಲಕ ಬ್ಯಾರಿಕೇಡ್‌ಗಳನ್ನು ನಿರ್ಮಿಸಲಾಗಿದೆ. |

ಆಧಾರ: ಕೆಲಸದ ದಾಖಲೆಗಳಲ್ಲಿ ಲಭ್ಯವಿರುವಂತೆ ಅನುಮೋದಿತ ಅಂದಾಜುಗಳು ಮತ್ತು ಛಾಯಾಚಿತ್ರಗಳು

(ಆ)ಪ್ಯಾಕೇಜ್ 28: ಅಳತೆ ಪುಸ್ತಕದ (ಎಂಬಿ) ಪ್ರಕಾರ, ನವೆಂಬರ್ ಮತ್ತು ಡಿಸೆಂಬರ್ 2017 ತಿಂಗಳುಗಳಲ್ಲಿ ಮೂರನೇ ಮತ್ತು ಭಾಗದ ಬಿಲ್‌ಗಾಗಿ ಅಳತೆಗಳನ್ನು ದಾಖಲಿಸಲಾಗಿದೆ. ಆದಾಗ್ಯೂ, ಮಾಪನಗಳ ಮೊದಲೆ ಮಾರ್ಚ್ 2017 ರಲ್ಲಿ ₹ 23.76 ಲಕ್ಷ ಪಾವತಿಯನ್ನು ಮಾಡಲಾಗಿದೆ.

ರಾಜ್ಯ ಸರ್ಕಾರವು, ಕಾಮಗಾರಿಗಳ ಅನುಷ್ಠಾನದ ಸಮಯದಲ್ಲಿ ಪ್ರಚಲಿತದಲ್ಲಿರುವ ಸ್ಥಳದ ಪರಿಸ್ಥಿತಿಗಳ ಕಾರಣದಿಂದಾಗಿ ಅಳತೆಗಳಲ್ಲಿ ವ್ಯತ್ಯಾಸಗಳು/ಬದಲಾವಣೆ ಅಗತ್ಯವಾಗಿದೆ ಎಂದು ಉತ್ತರಿಸಿತು (ಏಪ್ರಿಲ್ 2022). ಬದಲಾವಣೆಗಳನ್ನು ಅಗತ್ಯಪಡಿಸುವ ಪರೀಕ್ಷಾ ವರದಿಗಳಂತಹ ಸಾಕ್ಷ್ಯಗಳನ್ನು ಲೆಕ್ಕಪರಿಶೋಧನೆಗೆ ಪರಿಶೀಲನೆಗಾಗಿ ನೀಡದ ಕಾರಣ ಉತ್ತರವು ಸ್ವೀಕಾರಾರ್ಹವಲ್ಲ.

### *3.9.3 ಗುತ್ತಿಗೆದಾರರಿಗೆ ಎರಡು ಬಾರಿ ಪಾವತಿಗಳು*

ಕೆ.ಪಿಡಬ್ಲ್ಯೂಡಿ ಕೋಡ್, 2014 ರ ಕಂಡಿಕೆ 8, ರಸ್ತೆಗಳ ವಿನ್ಯಾಸ, ನಿರ್ಮಾಣ ಮತ್ತು ನಿರ್ವಹಣೆಯು ಕಾಲಕಾಲಕ್ಕೆ ತಿದ್ದುಪಡಿ ಮಾಡಿದಂತೆ ಎಂ.ಓಆರ್.ಟಿ.ಹೆಚ್ ಮತ್ತು ಐ.ಆರ್.ಸಿ ಮಾನದಂಡಗಳಿಗೆ ಅನುಗುಣವಾಗಿರಬೇಕು ಎಂದು ನಿರ್ದಿಷ್ಟಪಡಿಸಿದೆ. ಎಂ.ಓಆರ್.ಟಿ.ಹೆಚ್ 5 ನೇ ಪರಿಷ್ಕರಣೆಯ ಷರತ್ತು 504.8 ರ ಪ್ರಕಾರ, ಬಿಟುಮಿನಸ್ ಮೆಕಾಡಮ್‌ನ ಒಪ್ಪಂದದ ಘಟಕ ದರವು ಮೇಲ್ಮೈಯನ್ನು ಸ್ವಚ್ಛಗೊಳಿಸುವ ವೆಚ್ಚವನ್ನು ಒಳಗೊಂಡಿರುತ್ತದೆ. ಅಂತೆಯೇ, ಷರತ್ತು 507.9 ರ ಪ್ರಕಾರ, ಎಸ್.ಡಿ.ಬಿ.ಸಿಯ ಒಪ್ಪಂದದ ಘಟಕ ದರವು ಮೇಲ್ಮೈಯನ್ನು ಸ್ವಚ್ಛಗೊಳಿಸುವ ವೆಚ್ಚವನ್ನು ಒಳಗೊಂಡಿರುತ್ತದೆ.

ಲೆಕ್ಕಪರಿಶೋಧನೆಯು (ಆಗಸ್ಟ್‌ನಿಂದ ಅಕ್ಟೋಬರ್ 2021), 34 ಪರೀಕ್ಷಾ-ತನಿಖೆಗೆ ಒಳಪಟ್ಟ ಪ್ಯಾಕೇಜ್‌ಗಳಲ್ಲಿ ನಾಲ್ಕರಲ್ಲಿ (ಶೇ 12) ಮೇಲ್ಮೈಯನ್ನು ಸ್ವಚ್ಛಗೊಳಿಸುವ ಐಟಂಗಳಿಗೆ ಎರಡು ಮ.ಪಾಗಳು (ಮೈಸೂರು ಮತ್ತು ತುಮಕೂರು) ಪ್ರತ್ಯೇಕವಾಗಿ ಪಾವತಿಸಿವೆ ಎಂದು ತೋರಿಸಿದೆ. ಇದು ಅಸಮರ್ಥನೀಯ ವೆಚ್ಚವಾದ ₹ 2.15 ಲಕ್ಷಕ್ಕೆ ಕಾರಣವಾಗಿದೆ.

ಅಲ್ಲದೆ, ಎಸ್.ಆರ್ ಪ್ರಕಾರ, ಸೇವೆಗೆ ಬಾರದ ಮಣ್ಣನ್ನು ತೆಗೆದುಹಾಕುವ ಐಟಂ (ಐಟಂ 19.20), ಉತ್ಖನನ, ಹೇರುವಿಕೆ ಮತ್ತು ವಿಲೇವಾರಿ ವೆಚ್ಚ ಒಳಗೊಂಡಿದೆ.

ಬಳ್ಳಾರಿಯಲ್ಲಿ ಪರೀಕ್ಷಾ-ತನಿಖೆಗೆ ಒಳಪಟ್ಟ ಒಂಬತ್ತು ಪ್ಯಾಕೇಜ್‌ಗಳಲ್ಲಿ ಮೂರು (ಶೇಕಡಾ 33) ಅಂದಾಜುಗಳು ಉತ್ಖನನ, ಲೋಡಿಂಗ್ ಮತ್ತು ವಿಲೇವಾರಿ ಒಳಗೊಂಡಿರುವ ಉಪಯುಕ್ತವಲ್ಲದ ಮಣ್ಣನ್ನು ತೆಗೆಯುವ ಐಟಂ ಅನ್ನು ಸಹ ಒಳಗೊಂಡಿವೆ ಎಂದು ಲೆಕ್ಕಪರಿಶೋಧನೆಯು ಗಮನಿಸಿದೆ. ಹೀಗಿದ್ದರೂ ಯಾಂತ್ರಿಕವಾಗಿ ಮಣ್ಣು ಅಗೆಯಲು ಗುತ್ತಿಗೆದಾರರಿಗೆ ಪ್ರತ್ಯೇಕವಾಗಿ ಹಣ ಪಾವತಿಸಿದ್ದರಿಂದ ಅಸಮರ್ದನೀಯ ವೆಚ್ಚವಾದ ₹ 3.99 ಲಕ್ಷಕ್ಕೆ ಕಾರಣವಾಯಿತ್ತು. ಪ್ಯಾಕೇಜ್-ವಾರು ವಿವರಗಳನ್ನು **ಅನುಬಂಧ 3.11** ರಲ್ಲಿ ನೀಡಲಾಗಿದೆ.

ರಾಜ್ಯ ಸರ್ಕಾರವು, ರಸ್ತೆಯಲ್ಲಿ ಮುರುಕಲು ಚೂರುಗಳರಾಶಿಗಳು ಮತ್ತು ಇತರ ಉಪಯುಕ್ತವಲ್ಲದ ವಸ್ತುಗಳ ಸಂಗ್ರಹವಾಗಿದ್ದು ಮಟ್ಟ ರಚನೆಗಾಗಿ ಇವುಗಳನ್ನು ತೆಗೆಯಲಾಯಿತು ಎಂದು ಉತ್ತರಿಸಿದೆ (ಏಪ್ರಿಲ್ 2022). ಉತ್ತರವನ್ನು ಬೆಂಬಲಿಸಲು ಯಾವುದೇ ಸಾಕ್ಷ್ಯವನ್ನು ಲೆಕ್ಕಪರಿಶೋಧನೆಗೆ ಒದಗಿಸದ ಕಾರಣ ಉತ್ತರವು ಸ್ವೀಕಾರಾರ್ಹವಲ್ಲ.

### *3.9.4 ಹೆಚ್ಚಿನ ದರಗಳಲ್ಲಿ ಭೂಮಿಯ ಉತ್ಖನನಕ್ಕಾಗಿ ಪಾವತಿ*

ಎಸ್.ಆರ್, ಯಾಂತ್ರಿಕ ಮತ್ತು ಹಸ್ತಚಾಲಿತ ವಿಧಾನಗಳಿಂದ ಉತ್ಖನನಕ್ಕೆ ಪ್ರತ್ಯೇಕ ದರಗಳನ್ನು ಒದಗಿಸುತ್ತದೆ ಮತ್ತು ಹಸ್ತಚಾಲಿತ ವಿಧಾನದ ಉತ್ಖನನಕ್ಕೆ ಹೋಲಿಸಿದರೆ ಯಾಂತ್ರಿಕ ವಿಧಾನಗಳಿಂದ ಉತ್ಖನನದ ವೆಚ್ಚ ಕಡಿಮೆಯಾಗುತ್ತದೆ.

ಲೆಕ್ಕಪರಿಶೋಧನೆಯಲ್ಲಿ (ಆಗಸ್ಟ್‌ನಿಂದ ನವೆಂಬರ್ 2021), ಮೂರು ಮ.ಪಾಗಳು (ಬಳ್ಳಾರಿ, ಮೈಸೂರು ಮತ್ತು ತುಮಕೂರು) 43 ಪ್ಯಾಕೇಜ್‌ಗಳ ಪೈಕಿ ಏಳರಲ್ಲಿ(ಶೇ 16) ಹಸ್ತಚಾಲಿತ ವಿಧಾನಗಳ ಮೂಲಕ ಉತ್ಖನನವನ್ನು ಅಂದಾಜು ಪಟ್ಟಿಯಲ್ಲಿ ಸೇರಿಸಿದೆ ಮತ್ತು ಅದಕ್ಕೆ ಅನುಗುಣವಾಗಿ ಪಾವತಿಗಳನ್ನು ಮಾಡಲಾಗಿದೆ ಎಂದು ತಿಳಿದುಬಂದಿದೆ. ಆದಾಗ್ಯೂ, ಕೆಲಸದ ಕಡತಗಳಿಗೆ ಲಗತ್ತಿಸಲಾದ

ಛಾಯಾಚಿತ್ರಗಳಿಂದ ಯಂತ್ರೋಪಕರಣಗಳನ್ನು ಬಳಸಿಕೊಂಡು ಯಾಂತ್ರಿಕ ವಿಧಾನಗಳಿಂದ ಉತ್ಖನನವನ್ನು ನಡೆಸಿದೆ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿದೆ. ಹೀಗಾಗಿ, ಉತ್ಖನನಕ್ಕೆ ಯಾಂತ್ರಿಕ ವಿಧಾನಗಳನ್ನು ಬಳಸಲು ಅನುಮತಿ ನೀಡುವಾಗ ಹಸ್ತಚಾಲಿತ ದರದಲ್ಲಿ ಉತ್ಖನನಕ್ಕೆ ಪಾವತಿ ಮಾಡುವುದರಿಂದ ಗುತ್ತಿಗೆದಾರರಿಗೆ ₹ 14.46[40] ಲಕ್ಷ ಅನಗತ್ಯ ಲಾಭವಾಗಿದೆ.

ರಾಜ್ಯ ಸರ್ಕಾರವು ಕಾಮಗಾರಿಗಳನ್ನು ಕಾರ್ಯಗತಗೊಳಿಸುವಾಗ ಗಟ್ಟಿಯಾದ ಮಣ್ಣು, ಮೃದುವಾದ ಬಂಡೆಗಳು, ಮರದ ಬೇರುಗಳು ಇತ್ಯಾದಿಗಳು ಎದುರಾದ ಸ್ಥಳಗಳಲ್ಲಿ ಮಾತ್ರ ಯಾಂತ್ರಿಕ ವಿಧಾನಗಳನ್ನು ಬಳಸಲಾಗಿದೆ ಎಂದು ಉತ್ತರಿಸಿದೆ (ಏಪ್ರಿಲ್ 2022). ಇಲಾಖೆಯು ಪ್ರತ್ಯುತ್ತರವನ್ನು ಬೆಂಬಲಿಸಲು ಸಾಕ್ಷ್ಯವನ್ನು ಒದಗಿಸದ ಕಾರಣ ಉತ್ತರವನ್ನು ಸ್ವೀಕರಿಸಲಾಗುವುದಿಲ್ಲ ಮತ್ತು ಈ ಐಟಂನ ಸಂಪೂರ್ಣ ಪಾವತಿಯನ್ನು ಹಸ್ತಚಾಲಿತ ವಿಧಾನದ ದರಗಳಲ್ಲಿ ಮಾಡಲಾಗಿದೆ.

### 3.10 ಕೋಡಲ್ ನಿಬಂಧನೆಗಳನ್ನು ಕಡೆಗಣಿಸಿ ಕಾಮಗಾರಿಗಳ ಕಾರ್ಯಗತಗೊಳಿಸುವಿಕೆ

ಕೆ.ಪಿ.ಡಬ್ಲ್ಯೂ.ಡಿ ಕೋಡ್, 2014 ರ ಕಂಡಿಕೆ 8, ರಸ್ತೆಗಳ ವಿನ್ಯಾಸ, ನಿರ್ಮಾಣ ಮತ್ತು ನಿರ್ವಹಣೆಯು ಕಾಲಕಾಲಕ್ಕೆ ತಿದ್ದುಪಡಿ ಮಾಡಿದಂತೆ ಎಂ.ಓಆರ್.ಟಿ.ಹೆಚ್ ಮತ್ತು ಐ.ಆರ್.ಸಿ ಮಾನದಂಡಗಳಿಗೆ ಅನುಗುಣವಾಗಿರಬೇಕು ಎಂದು ನಿರ್ದಿಷ್ಟಪಡಿಸಿದೆ. ಎಂ.ಓಆರ್.ಟಿ.ಹೆಚ್ 5 ನೇ ಪರಿಷ್ಕರಣೆಯ ಷರತ್ತು 501.8.3.2 (ಅಸ್ತಿತ್ವದಲ್ಲಿರುವ ಬಿಟುಮಿನಸ್ ಮೇಲ್ಮೈಯನ್ನು ಸ್ಕೇರಿಫೈ ಮಾಡುವುದು)ರಂತೆ ಬಿಟುಮಿನಸ್ ಕೋರ್ಸ್ ಅನ್ನು ಹಾಕುವ ಮೊದಲು, ಅಸ್ತಿತ್ವದಲ್ಲಿರುವ ಬಿಟುಮಿನಸ್ ಪದರವು ಯಾವುದಾದರೂ ಇದ್ದರೆ, ಎಚ್ಚರಿಕೆಯಿಂದ ತೆಗೆದುಹಾಕಬೇಕು ಮತ್ತು ಆಧಾರವಾಗಿರುವ ಪದರಗಳಿಗೆ ಅನಗತ್ಯ ಅಡಚಣೆಯನ್ನು ಉಂಟುಮಾಡ ಬಾರದು. ಆಧಾರವಾಗಿರುವ ಪದರಗಳು ತೊಂದರೆಗೊಳಗಾದರೆ ಸೂಕ್ತವಾಗಿ ಮರುನಿರ್ಮಾಣ ಮಾಡಬೇಕು ಮತ್ತು ಒತ್ತಾಗಿ ಸೇರುಸಿ ಮಟ್ಟ ಮಾಡಬೇಕು. ಅಲ್ಲದೆ, ಅಸ್ತಿತ್ವದಲ್ಲಿರುವ ಗುಂಡಿಗಳು ಮತ್ತು ಬಿರುಕುಗಳನ್ನು ಸರಿಪಡಿಸಬೇಕು ಮತ್ತು ಮುಚ್ಚಬೇಕು ಮತ್ತು ಟ್ಯಾಕ್ ಕೋಟ್ ಅನ್ನು ಹಚ್ಚಿದ ನಂತರ, ಬಿಟುಮಿನಸ್ ಪ್ರೊಫೈಲ್ ಸರಿಪಡಿಸುವ ಕೋರ್ಸ್ ಅನ್ನು ಹಾಕಬೇಕು (ಷರತ್ತುಗಳು 501.8.3.3 ಮತ್ತು 501.8.3.4).

ಮೂರು ಮ.ಪಾಗಳಲ್ಲಿ (ಮೈಸೂರು, ತುಮಕೂರು ಮತ್ತು ವಿಜಯಪುರ) 43 ಪರೀಕ್ಷಾ–ತನಿಖೆಗೆ ಒಳಪಟ್ಟ ಪ್ಯಾಕೇಜ್‌ಗಳ ಪೈಕಿ ಎಂಟರಲ್ಲಿ (19 ಪ್ರತಿಶತ) ಅಂದಾಜುಗಳು ಅಸ್ತಿತ್ವದಲ್ಲಿರುವ ಬಿಟುಮಿನಸ್ ಮೇಲ್ಮೈಯನ್ನು ಸ್ಕೇರಿಫೈ ಮಾಡುವ ಐಟಂ ಅನ್ನು ಒಳಗೊಂಡಿವೆ ಎಂದು ಲೆಕ್ಕಪರಿಶೋಧನೆ ಗಮನಿಸಿದೆ (ಆಗಸ್ಟ್‌ನಿಂದ ಡಿಸೆಂಬರ್ 2021). ಎಂ.ಓ.ಆರ್.ಟಿ.ಹೆಚ್ ಮಾನದಂಡಗಳಿಗೆ ವಿರುದ್ಧವಾಗಿ, ಆಧಾರವಾಗಿರುವ ಪದರಗಳನ್ನು ಸಹ ತೆಗೆದುಹಾಕಿ ಮರು–ಹಾಕಲಾಗಿದೆ. ಇದು ₹ 312.32[41] ಲಕ್ಷ ತಪ್ಪಿಸಬಹುದಾದ ವೆಚ್ಚದಲ್ಲಿ ಪರಿಣಮಿಸಿತು..

ಮೂರು ಪರೀಕ್ಷಾ–ತನಿಖೆಗೆ ಒಳಪಟ್ಟ ಮ.ಪಾಗಳು (ಬಳ್ಳಾರಿ, ಮೈಸೂರು ಮತ್ತು ತುಮಕೂರು) 43 ಪ್ಯಾಕೇಜ್‌ಗಳ ಪೈಕಿ ಆರರಲ್ಲಿ (ಶೇ 14) ₹ 38.23 ಲಕ್ಷ ಹೆಚ್ಚುವರಿ ವೆಚ್ಚವನ್ನು ಮಾಡಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿದೆ, ಇದನ್ನು ಕೆಳಗೆ ವಿವರಿಸಿದ ಕಾರಣಗಳಿಗಾಗಿ ಸಮರ್ಥಿಸಲಾಗುವುದಿಲ್ಲ:

---

[40] ಬಳ್ಳಾರಿ – ಪ್ಯಾಕೇಜ್ 4 (₹ 0.10 ಲಕ್ಷ) ಮತ್ತು ಪ್ಯಾಕೇಜ್ 32ಎ (₹ 9.05 ಲಕ್ಷ); ಮೈಸೂರು – ಪ್ಯಾಕೇಜ್ 17 (₹ 1.04 ಲಕ್ಷ) ಮತ್ತು ಪ್ಯಾಕೇಜ್ 29 (₹ 0.89 ಲಕ್ಷ); ತುಮಕೂರು – ಪ್ಯಾಕೇಜ್ 5 (₹ 1.73 ಲಕ್ಷ), ಪ್ಯಾಕೇಜ್ 9 (₹ 0.75 ಲಕ್ಷ) ಮತ್ತು ಪ್ಯಾಕೇಜ್ 34 (₹ 0.90 ಲಕ್ಷ).

[41] ಮೈಸೂರು – ಪ್ಯಾಕೇಜ್ 1 (₹ 5.20 ಲಕ್ಷ), ಪ್ಯಾಕೇಜ್ 3 (₹ 1.58 ಲಕ್ಷ), ಪ್ಯಾಕೇಜ್ 13 (₹ 13.78 ಲಕ್ಷ) ಮತ್ತು ಪ್ಯಾಕೇಜ್ 29 (₹ 35.06 ಲಕ್ಷ); ತುಮಕೂರು – ಪ್ಯಾಕೇಜ್ 34 (₹ 36.32 ಲಕ್ಷ); ವಿಜಯಪುರ – ಪ್ಯಾಕೇಜ್ 37 (₹ 108.37 ಲಕ್ಷ), ಪ್ಯಾಕೇಜ್ 64 (₹ 25.93 ಲಕ್ಷ) ಮತ್ತು ಪ್ಯಾಕೇಜ್ 65 (₹ 86.08 ಲಕ್ಷ)

**(i) ಬಳ್ಳಾರಿ**

(ಅ)ಪ್ಯಾಕೇಜ್ 10: ಐ.ಆರ್.ಸಿ 36 ರ ಷರತ್ತು 7.2ರ ಪ್ರಕಾರ ಪ್ರಯೋಗಾಲಯದ ಗರಿಷ್ಠ ಒಣ ಸಾಂದ್ರತೆ (ಎಂ.ಡಿ.ಡಿ) ಪ್ರತಿ ಘನ ಸೆಂಟಿಮೀಟರ್‌ಗೆ 1.44 ಗ್ರಾಂಗಿಂತ ಕಡಿಮೆಯಿರುವ ಮಣ್ಣುಗಳನ್ನು ಸಾಮಾನ್ಯವಾಗಿ ಸೂಕ್ತವಲ್ಲವೆಂದು ಪರಿಗಣಿಸಲಾಗಿದೆ ಮತ್ತು ಕಟ್ಟೆಗಳಲ್ಲಿ ಇದರ ಬಳಕೆಯನ್ನು ತಪ್ಪಿಸಬೇಕು. ವ್ಯತಿರಿಕ್ತವಾಗಿ, ಪ್ರತಿ ಘನ ಸೆಂಟಿಮೀಟರ್‌ಗೆ 1.548 ಗ್ರಾಂ ಎಂ.ಡಿ.ಡಿ ಹೊಂದಿರುವ ಮಣ್ಣನ್ನು ಸಹ ಸೂಕ್ತವಲ್ಲವೆಂದು ಪರಿಗಣಿಸಲಾಗಿದೆ ಮತ್ತು ಅನಗತ್ಯವಾಗಿ ಮಣ್ಣು ತೆಗೆದು ಸಬ್ ಗ್ರೇಡ್ ನಿರ್ಮಿಸಿ ₹ 16.51 ಲಕ್ಷ ವೆಚ್ಚ ಮಾಡಲಾಗಿದೆ.

(ಆ)ಪ್ಯಾಕೇಜುಗಳು 36 ಮತ್ತು 38: ಐ.ಆರ್.ಸಿ 63 ರ ಷರತ್ತು 4.3 ಅನ್ನು ಕಡೆಗಣಿಸಿ, 60 ಮೀ.ಮೀ ಬದಲಿಗೆ 75 ಮೀ.ಮೀ ದಪ್ಪದ ಇಂಟರ್ಲಾಕಿಂಗ್ ಕಲ್ಲುಗಳನ್ನು ಬಳಸಲಾಗಿದೆ. ಇದು ₹ 3.54 ಲಕ್ಷ ತಪ್ಪಿಸಬಹುದಾದ ವೆಚ್ಚದಲ್ಲಿ ಪರಿಣನಿಸಿತು.

**(ii)ಮೈಸೂರು**

(ಅ)ಪ್ಯಾಕೇಜ್ 3: ಎಂ.ಓಆರ್.ಟಿ.ಹೆಚ್ (ಷರತ್ತು 504.5) ಪ್ರಕಾರ, ಬಿ.ಎಂ ಪದರವನ್ನು ಮುಂದಿನ ರಸ್ತೆ ಮಾರ್ಗ ಅಥವಾ ವೇರಿಂಗ್ ಕೋರ್ಸ್‌ನಿಂದ ಮುಚ್ಚಬೇಕು. ಇದರ ಹೊರತಾಗಿಯೂ, ಬಿ.ಎಂ ಮೇಲ್ಮೈಯನ್ನು ಟ್ಯಾಕ್ ಕೋಟ್‌ನಿಂದ ಮುಚ್ಚಲು ₹ 0.81 ಲಕ್ಷದ ತಪ್ಪಿಸಬಹುದಾದ ವೆಚ್ಚವನ್ನು ಭರಿಸಲಾಯಿತು.

(ಆ)ಪ್ಯಾಕೇಜ್ 82: ಉದ್ಯಾನವನಗಳ ನವೀಕರಣದ ಕೆಲಸದ ಅಡಿಯಲ್ಲಿ ಹೆವಿ ಡ್ಯೂಟಿ ಕೋಬಲ್ ಕಲ್ಲುಗಳನ್ನು ಒದಗಿಸುವ ಮತ್ತು ಕಿಟಕಿಗಳಿಗೆ ಎಂಎಸ್ ಗ್ರಿಲ್ ಅನ್ನು ಜೋಡಿಸುವ ವಸ್ತುಗಳನ್ನು ಅಂದಾಜು ಒಳಗೊಂಡಿದೆ. ಕೆಲಸದ ಅಂದಾಜುಗಳೊಂದಿಗೆ ಲಗತ್ತಿಸಲಾದ ಛಾಯಾಚಿತ್ರಗಳು ಮೇಲಿನ ವಸ್ತುಗಳನ್ನು ಉತ್ತಮ ಸ್ಥಿತಿಯಲ್ಲಿ ಸೂಚಿಸುತ್ತವೆ. ನವೀಕರಣವು ಅನಗತ್ಯವಾಗಿದ್ದು, ₹ 8.11 ಲಕ್ಷ ತಪ್ಪಿಸಬಹುದಾದ ವೆಚ್ಚದಲ್ಲಿ ಪರಿಣಮಿಸಿತು.

**(iii)ತುಮಕೂರು**

ಪ್ಯಾಕೇಜ್ 5: ಹೆಚ್ಚಿನ ಶಕ್ತಿ, ದೀರ್ಘಬಾಳಿಕೆ, ಉತ್ತಮ ಮುಕ್ತಾಯ ಮತ್ತು ಭಾರೀ ಟ್ರಾಫಿಕ್ ಸನ್ನಿವೇಶಗಳಿಗೆ ಸೂಕ್ತವಾದ ವೇಗದ ಕೆಲಸವನ್ನು ಸಾಧಿಸಲು ನಿರ್ವಾತ ನಿರ್ಜಲೀಕರಣವನ್ನು (ವ್ಯಾಕ್ಯುಂ ಡೀ–ವಾಟರಿಂಗ್) ಬಳಸಲಾಯಿತು. ಆದರೆ, ಅನಿವಾರ್ಯವಲ್ಲದ ಅಡ್ಡರಸ್ತೆಗಳಿಗೆ ನಿರ್ವಾತ ನಿರ್ಜಲೀಕರಣದ ಐಟಂಗೆ ₹ 9.26 ಲಕ್ಷ ಮೊತ್ತವನ್ನು ಪಾವತಿಸಲಾಗಿದೆ.

ರಾಜ್ಯ ಸರ್ಕಾರವು, ಕಾಮಗಾರಿಗನ್ನು ಕಾರ್ಯಗತಗೊಳಿಸುವ ಸಮಯದಲ್ಲಿ ರಸ್ತೆಗಳ ಸ್ಥಿತಿಯು ಹದಗೆಟ್ಟಿತ್ತು ಮತ್ತು ಆದ್ದರಿಂದ ಮ.ಪಾಗಳು ಬೇಸ್ ಅನ್ನು ಬಲಪಡಿಸಲು ಮತ್ತು ರಸ್ತೆಗಳನ್ನು ಹೆಚ್ಚು ಬಾಳಿಕೆ ಬರುವಂತೆ ಮಾಡಲು ಹೆಚ್ಚುವರಿ ಸಿದ್ಧತೆಗಳನ್ನು ಮಾಡಿದೆ ಎಂದು ಉತ್ತರಿಸಿದೆ(ಏಪ್ರಿಲ್ 2022). ಉತ್ತರವು ಸ್ವೀಕಾರಾರ್ಹವಲ್ಲ ಏಕೆಂದರೆ, ರಸ್ತೆಯ ಸ್ಥಿತಿಯನ್ನು ಸೂಚಿಸಲು ಯಾವುದೇ ದಾಖಲೆ ಪುರಾವೆಗಳನ್ನು ಒದಗಿಸಲಾಗಿಲ್ಲ ಮತ್ತು ಕಾಮಗಾರಿಗಳು ಕೋಡಲ್ ನಿಬಂಧನೆಗಳಿಗೆ ವಿರುದ್ಧವಾಗಿವೆ.

## 3.11 ಅನುಮೋದನೆಯಿಲ್ಲದೆ ಕಾಮಗಾರಿಗಳ ಕಾರ್ಯಗತಗೊಳಿಸುವಿಕೆ

ಕೆ.ಪಿ.ಡಬ್ಲ್ಯೂ.ಡಿ ಕೋಡ್‌ನ ಕಂಡಿಕೆ 137, ಯಾವುದೇ ನಿಜವಾದ ಉಳಿತಾಯವನ್ನು ಉಪಯೋಗಿಸಲು ಅನುಮತಿಸುವುದಿಲ್ಲ, ಇದು ಕೆಲಸದ ಒಂದು ಭಾಗವನ್ನು ಕೈಬಿಡುವ ಕಾರಣದಿಂದಾಗಿ ಅಥವಾ ಕಡಿಮೆ

ಟೆಂಡರ್ ದರಗಳನ್ನು ಪಡೆದ ಕಾರಣ, ಸಕ್ಷಮ ಪ್ರಾಧಿಕಾರದ ಮಂಜೂರಾತಿ ಇಲ್ಲದೆ ಮೂಲ ಅಂದಾಜಿನಲ್ಲಿ ಪರಿಗಣಿಸದ ಹೆಚ್ಚುವರಿ ಕೆಲಸವನ್ನು ಕೈಗೊಳ್ಳಲು ಅನುಮತಿಸಲಾಗುವುದಿಲ್ಲ.

ಇದಕ್ಕೆ ವಿರುದ್ಧವಾಗಿ, ಎರಡು ಮ.ಪಾನಿಗಳು (ಬಳ್ಳಾರಿ ಮತ್ತು ಮೈಸೂರು) 31 ಪ್ಯಾಕೇಜ್‌ಗಳ ಪೈಕಿ ಮೂರುರಲ್ಲಿ (ಶೇಕಡಾ 10) ₹ 74.69[42] ಲಕ್ಷ ಉಳಿತಾಯವನ್ನು ಡಿಎಂಎಯಿಂದ ಅನುಮೋದನೆಯಿಲ್ಲದೆ ಹೆಚ್ಚುವರಿ ಕೆಲಸಗಳನ್ನು ಕಾರ್ಯಗತಗೊಳಿಸಲು ಬಳಸಿಕೊಂಡಿವೆ.

ಸ್ಥಳೀಯ ಪ್ರತಿನಿಧಿಗಳ ಆದೇಶದ ಮೇರೆಗೆ ಹೆಚ್ಚುವರಿ ಕಾಮಗಾರಿಗಳನ್ನು ಕೈಗೊಳ್ಳಲು ಉಳಿತಾಯವನ್ನು ಬಳಸಿಕೊಳ್ಳಲಾಗಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಏಪ್ರಿಲ್ 2022). ಉಳಿತಾಯದಿಂದ ಹೆಚ್ಚುವರಿ ಕಾಮಗಾರಿಗಳನ್ನು ತೆಗೆದುಕೊಳ್ಳಲು ಕೆ.ಪಿ.ಡಬ್ಲ್ಯೂ.ಡಿ ಕೋಡ್‌ನಲ್ಲಿ ಸೂಚಿಸಲಾದ ಕಾರ್ಯವಿಧಾನವನ್ನು ಅನುಸರಿಸಲಾಗಿಲ್ಲದ ಕಾರಣ ಉತ್ತರವು ಸ್ವೀಕಾರಾರ್ಹವಲ್ಲ.

### 3.12 ಗುತ್ತಿಗೆದಾರರಿಗೆ ಸ್ವೀಕಾರಾರ್ಹವಲ್ಲದ ಪಾವತಿಗಳು

ಮೂರು ಪರೀಕ್ಷಾ–ತನಿಖೆಗೆ ಒಳಪಟ್ಟ ಮ.ಪಾಗಳು (ಬಳ್ಳಾರಿ, ತುಮಕೂರು ಮತ್ತು ವಿಜಯಪುರ) ಕಾರ್ಯಗತಗೊಳಿಸದ ಪ್ರಮಾಣಗಳಿಗಾಗಿ 30 ಪ್ಯಾಕೇಜ್‌ಗಳಲ್ಲಿ ಕೆಳಗಿನ ಆರರಲ್ಲಿ (ಶೇಕಡಾ 20) ₹ 104.54 ಲಕ್ಷ ಮೊತ್ತವನ್ನು ಗುತ್ತಿಗೆದಾರರಿಗೆ ಪಾವತಿಸಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಿದೆ (ಆಗಸ್ಟ್‌ನಿಂದ ಡಿಸೆಂಬರ್ 2021):

**(i) <u>ಬಳ್ಳಾರಿ</u>**

(ಅ)<u>ಪ್ಯಾಕೇಜ್ 4</u>: ಪಿ.ವಿ.ಸಿ ರಿಂಗ್‌ಟೈಟ್ ಪೈಪ್‌ಗಳನ್ನು ಪೂರೈಸಲು 1,030.45 ಆರ್.ಎಂ.ಟಿ ಗೆ ಗುತ್ತಿಗೆದಾರನಿಗೆ ₹ 3.50 ಲಕ್ಷವನ್ನು ಪಾವತಿಸಲಾಗಿದೆ, ಆದರೂ ಇ.ಎಂ.ಬಿ ನಲ್ಲಿ ಅಂತಹ ಯಾವುದೇ ನಮೂದು ಇಲ್ಲ. ಆದ್ದರಿಂದ, ಇದು ಸ್ವೀಕಾರಾರ್ಹವಲ್ಲ.

(ಆ)<u>ಪ್ಯಾಕೇಜ್ 44</u>: ಆರ್.ಎ ಬಿಲ್‌ಗಳಿಗೆ ಲಗತ್ತಿಸಲಾದ ಪರೀಕ್ಷಾ ವರದಿಗಳು 70 ಮೀ (ಚೈನೀಜ್ 195 ರಿಂದ 265 ಮೀ) ವರೆಗೆ ಕಟ್ಟೆ ನಿರ್ಮಿಸುವ ಕೆಲಸವನ್ನು ತೆಗೆದುಕೊಳ್ಳಲಾಗಿದೆ ಎಂದು ಹೇಳಲಾಗಿದೆ, ಆದರೆ ಪಾವತಿಯನ್ನು 100 ಮೀ.ಗೆ ಮಾಡಿರುವುದರಿಂದ, 30 ಮೀ.ಗೆ ಪಾವತಿಸಿದ ₹ 39.76 ಲಕ್ಷ ಮೊತ್ತ ಸ್ವೀಕಾರಾರ್ಹವಲ್ಲ.

**(ii) <u>ತುಮಕೂರು</u>**

<u>ಪ್ಯಾಕೇಜ್ 26/2</u>: 75 ಮೀ.ಮೀ ಬಿಎಂ ಎಸ್‌ಡಿಬಿಸಿಗೆ ಪಾವತಿ ಮಾಡಲಾಗಿದೆ ಆದರೆ 70 ಮೀ.ಮೀಗೆ ಕೆಲಸ ಮಾಡಲಾಗಿದೆ (ಪಿ.ಎಂ.ಸಿ ವರದಿಯ ಪ್ರಕಾರ). ಇದು ₹ 1.27 ಲಕ್ಷ ಸ್ವೀಕಾರಾರ್ಹವಲ್ಲದ ಪಾವತಿಯಲ್ಲಿ ಪರಿಣಮಿಸಿತು.

**(iii) <u>ವಿಜಯಪುರ</u>**

(ಅ)<u>ಪ್ಯಾಕೇಜ್ 53/4</u>: 10 ವಿವಿಧ ಸ್ಥಳಗಳಲ್ಲಿ ವಾಹನ ಸಂಚಾರ ದ್ವೀಪಗಳನ್ನು ಒದಗಿಸಲು ಗುತ್ತಿಗೆದಾರರಿಗೆ ₹ 3.75 ಲಕ್ಷ ಪಾವತಿಸಲಾಗಿದೆ. ಮ.ಪಾ ಮೂಲಕ ಒದಗಿಸಿದ ಮಾಹಿತಿ (ಜನವರಿ 2022) ಮತ್ತು ಇಲಾಖೆ ಅಧಿಕಾರಿಗಳೊಂದಿಗೆಯ ಲೆಕ್ಕಪರಿಶೋಧನೆಯ ತಂಡ ಜಂಟಿ

---

[42] ಬಳ್ಳಾರಿ – ಪ್ಯಾಕೇಜ್ 1 (₹ 31.08 ಲಕ್ಷ); ಮೈಸೂರು – ಪ್ಯಾಕೇಜ್ 14 (₹ 21.32 ಲಕ್ಷ) ಮತ್ತು ಪ್ಯಾಕೇಜ್ 41 (₹ 22.29 ಲಕ್ಷ).

ಭೌತಿಕ ಪರಿಶೀಲನೆ (ಡಿಸೆಂಬರ್ 2021) ಮಾಡಿದಾಗ ಮೂಲಕ ಐಟಂ ಅನ್ನು ಕಾರ್ಯಗತಗೊಳಿಸಲಾಗಿಲ್ಲ ಎಂದು ಕಂಡುಬಂದಿದೆ.

(ಆ)<u>ಪ್ಯಾಕೇಜ್ 56</u>: ಆರ್‌ಎ ಬಿಲ್ (2ನೇ ಮತ್ತು ಅಂತಿಮ) ಪ್ರಕಾರ, ವಾರ್ಡ್ ನಂ.17 ಮತ್ತು 22 ರಲ್ಲಿ 24 ಆರ್‌ಸಿಸಿ ಕಂಬಗಳು ಮತ್ತು 16 ಪಿಎಸ್‌ಸಿ ಕಂಬಗಳನ್ನು ಸ್ಥಾಪಿಸಲಾಗಿದೆ. ಜೆಪಿವಿ (ಡಿಸೆಂಬರ್ 2021), 14 ಪಿಎಸ್‌ಸಿ ಕಂಬಗಳನ್ನು ಮಾತ್ರ ಸ್ಥಾಪಿಸಲಾಗಿದೆ ಎಂದು ಬಹಿರಂಗಪಡಿಸಿದೆ. ಹೀಗಾಗಿ, 2 ಪಿಎಸ್‌ಸಿ ಕಂಬಗಳಿಗೆ (ತಲಾ ₹ 4,215 ರಂತೆ) ಮತ್ತು 24 ಆರ್‌ಸಿಸಿ ಕಂಬಗಳಿಗೆ (ತಲಾ ₹ 6,878ರಂತೆ) ₹ 1.74 ಲಕ್ಷವನ್ನು ಸ್ವೀಕಾರಾರ್ಹವಲ್ಲದ ಪಾವತಿ ಮಾಡಲಾಗಿದೆ.

(ಇ)<u>ಪ್ಯಾಕೇಜ್ 65</u>: ಪಿ.ಎಂ.ಸಿ ವರದಿಯ ಪ್ರಕಾರ ಸಬ್‌ಗ್ರೇಡ್ (732.93 ಸಿ.ಯು.ಎಂ), ಗ್ರ್ಯಾನ್ಯುಲರ್ ಸಬ್ ಬೇಸ್ (359.04 ಸಿ.ಯು.ಎಂ), ವೆಟ್ ಮಿಕ್ಸ್ ಮೆಕಾಡಮ್ (694.57 ಸಿ.ಯು.ಎಂ) ಮತ್ತು ಬಿಟುಮಿನಸ್ ಮಕಾಡಮ್ (312.51 ಸಿ.ಯು.ಎಂ) ಕಾರ್ಯಗತಗೊಳಿಸಿದ ಪ್ರಮಾಣಗಳ ವಿರುದ್ಧ, 2,700.34 ಸಿ.ಯು.ಎಂಗೆ ಪಾವತಿಗಳನ್ನು , 1,440.69 ಸಿ.ಯು.ಎಂ, 1,417.87 ಸಿ.ಯು.ಎಂ ಮತ್ತು 464.86 ಸಿ.ಯು.ಎಂ. ಪ್ರಮಾಣಗಳಿಗೆ ಅದೇ ಕ್ರಮದಲ್ಲಿ ಅನ್ವಯಿಸುವಂತೆ ಪಾವತಿ ಮಾಡಲಾಗಿದೆ, ಇದರಿಂದ ₹ 54.52 ಲಕ್ಷ ಮೊತ್ತವನ್ನು ಸ್ವೀಕಾರಾರ್ಹವಲ್ಲದ ಪಾವತಿ ಮಾಡಲಾಗಿದೆ.

## 3.13 ಬಳಕೆಯಾಗದ ಸ್ವತ್ತುಗಳ ಮೇಲೆ ವ್ಯರ್ಥ ಖರ್ಚು

### *3.13.1 ತುಮಕೂರು ಮಹಾನಗರ ಪಾಲಿಕೆಯಲ್ಲಿ ಡೀಸೆಲ್ ಜನರೇಟರ್ ಸೆಟ್‌ಗಳ ಖರೀದಿ*

ಮ.ಪಾ, ತುಮಕೂರು ಸಿಎಂಸಿ ಮತ್ತು ವಿದ್ಯಾನಗರದಲ್ಲಿರುವ ಪಂಪ್ ಹೌಸ್‌ಗಳಿಗೆ ಎರಡು 500 ಕೆವಿಎ ಡೀಸೆಲ್ ಜನರೇಟರ್ (ಡಿಜಿ) ಸೆಟ್‌ಗಳನ್ನು ಖರೀದಿಸಲು ಮತ್ತು ರಸ್ತೆ/ಸಿಸಿ ಮೋರಿಗಳನ್ನು ನಿರ್ಮಿಸಲು ಅಂದಾಜು ₹ 1.47 ಕೋಟಿ ವೆಚ್ಚದಲ್ಲಿ (ಪ್ಯಾಕೇಜ್ 38) ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ (ಡಿಸೆಂಬರ್ 2016). ಕೆಯುಡಬ್ಲ್ಯುಎಸ್‌ಡಿಬಿ ಜಾರಿಗೊಳಿಸಿದ 24×7 ನೀರು ಸರಬರಾಜು ಯೋಜನೆಗಳಿಗೆ ನಿರಂತರ ವಿದ್ಯುತ್ ಸರಬರಾಜು ಮಾಡಲು ಡಿಜಿ ಸೆಟ್‌ಗಳನ್ನು ಖರೀದಿಸಲಾಗಿದೆ. ಟೆಂಡರ್ ದಾಖಲೆಗಳ ಪ್ರಕಾರ, ಕಾಮಗಾರಿಯನ್ನು ಪೂರ್ಣಗೊಳಿಸಲು ಮೂರು ತಿಂಗಳ ಗಡುವು ನೀಡಲಾಗಿತ್ತು. ಇದಕ್ಕೆ ವ್ಯತಿರಿಕ್ತವಾಗಿ, ಮ.ಪಾ ಕಾಮಗಾರಿಗಳನ್ನು ಎಲ್1 ಬಿಡ್‌ದಾರರಿಗೆ 18 ತಿಂಗಳೊಳಗೆ ಅಂದರೆ 14 ಜನವರಿ 2019 ರೊಳಗೆ ಪೂರ್ಣಗೊಳಿಸಲು ಸೂಚನೆ ನೀಡಲಾಯಿತು (ಜುಲೈ 2017). ಕಾಮಗಾರಿಯನ್ನು ನೀಡಿದ ನಂತರ ಟೆಂಡರ್ ಷರತ್ತುಗಳನ್ನು ಮಾರ್ಪಾಡು ಮಾಡುವುದು ಗುತ್ತಿಗೆದಾರರಿಗೆ ಅನುಚಿತವಾದ ಸಹಾಯ ಮಾಡುವುದಲ್ಲದೆ ಟೆಂಡರ್‌ನಲ್ಲಿ ಭಾಗವಹಿಸಿದ ಇತರ ಬಿಡ್‌ದಾರರಿಗೆ ಸ್ಪರ್ಧೆಯಲ್ಲಿ ನ್ಯಾಯಸಮ್ಮತತೆಯನ್ನು ನಿರಾಕರಿಸಿದೆ.

ಗುತ್ತಿಗೆದಾರರು ರಸ್ತೆಗಳು/ಸಿಸಿ ಮೋರಿಗಳ ನಿರ್ಮಾಣ ಕಾರ್ಯವನ್ನು ನಿರ್ವಹಿಸದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿದೆ (ಸೆಪ್ಟೆಂಬರ್ 2021). ಎರಡು ಡಿಜಿ ಸೆಟ್‌ಗಳ ಸ್ಥಾಪನೆ ಮಾತ್ರ ಪೂರ್ಣಗೊಂಡಿದೆ (ಮೇ 2019) ಮತ್ತು ಇದಕ್ಕಾಗಿ ಅವರಿಗೆ ₹ 0.90 ಕೋಟಿ ಪಾವತಿಸಲಾಗಿದೆ. ಸಿ.ಎಂ.ಸಿ ಮತ್ತು ವಿದ್ಯಾನಗರ ಪಂಪ್‌ಹೌಸ್‌ನಲ್ಲಿನ ಡಿ.ಜಿ ಸೆಟ್‌ಗಳ ಸಂಬಂಧಪಟ್ಟ ಲಾಗ್‌ಬುಕ್‌ಗಳ ಪರಿಶೀಲನೆಯು ಅವುಗಳ ಒಟ್ಟು ಓಡಿದ ಸಮಯ ಕ್ರಮವಾಗಿ 21 ಮತ್ತು 13 ಗಂಟೆಗಳು ಎಂದು ತೋರಿಸಿದೆ (08 ಸೆಪ್ಟೆಂಬರ್ 2021 ವರೆಗೆ). ಇವುಗಳನ್ನು ಕೊನೆಯ ಬಾರಿಗೆ ಅಕ್ಟೋಬರ್–ಡಿಸೆಂಬರ್ 2019 ರಲ್ಲಿ ನಿರ್ವಹಿಸಲಾಗಿದೆ. ಮ.ಪಾ ಅಧಿಕಾರಿಗಳೊಂದಿಗೆ ಲೆಕ್ಕಪರಿಶೋಧನೆಯ ತಂಡ ನಡೆಸಿದ (ಸೆಪ್ಟೆಂಬರ್ 2021) ಜೆ.ಪಿ.ವಿಯಲ್ಲಿ ಎರಡೂ ಡಿ.ಜಿ ಸೆಟ್‌ಗಳು ಸಂಪೂರ್ಣವಾಗಿ ಉಪಯೋಗಿಸದೆ

ತುಕ್ಕು ಹಿಡಿದಿದ್ದನ್ನು ಕಂಡವು. ಇದಲ್ಲದೆ, ವಿದ್ಯಾನಗರ ಪಂಪ್ ಹೌಸ್‌ನಲ್ಲಿರುವ ಡಿ.ಜಿ ಸೆಟ್ ಕಾರ್ಯನಿರ್ವಹಿಸುವ ಸ್ಥಿತಿಯಲ್ಲಿಲ್ಲ ಎಂದು ತಿಳಿದುಬಂದಿದೆ. ಕಾರ್ಯನಿರ್ವಹಿಸುತ್ತಿರುವ ಡಿಜಿ ಸೆಟ್‌ಗಳ ಅನುಪಸ್ಥಿತಿಯಲ್ಲಿ, ನೀರಿನ ಪಂಪ್‌ಗಳು ಯಾವುದೇ ವಿದ್ಯುತ್ ಬ್ಯಾಕ್‌ಅಪ್ ಇಲ್ಲದೆ ಕಾರ್ಯನಿರ್ವಹಿಸುತ್ತಿದ್ದವು ಮತ್ತು 24×7 ನೀರು ಸರಬರಾಜು ಯೋಜನೆಗಳಿಗೆ ನಿರಂತರ ವಿದ್ಯುತ್ ಸರಬರಾಜು ಮಾಡಲು ಡಿಜಿ ಸೆಟ್‌ಗಳನ್ನು ಖರೀದಿಸುವ ಉದ್ದೇಶವು ಈಡೇರದ ಪರಿಣಾಮವಾಗಿ ₹ 0.90 ಕೋಟಿ ನಿಷ್ಫಲವಾಯಿತು.

ಕೆಯುಡಬ್ಲ್ಯುಎಸ್‌ಡಿಬಿ ಜಾರಿಗೊಳಿಸಿದ 24 × 7 ನೀರು ಸರಬರಾಜು ಯೋಜನೆಗಳಿಗೆ ನಿರಂತರ ವಿದ್ಯುತ್ ಸರಬರಾಜು ಮಾಡುವ ಉದ್ದೇಶದಿಂದ ಡಿ.ಜಿ ಸೆಟ್‌ಗಳನ್ನು ಸ್ಥಾಪಿಸಲಾಗಿದೆ ಎಂದು ರಾಜ್ಯ ಸರ್ಕಾರವು ಉತ್ತರಿಸಿದೆ (ಏಪ್ರಿಲ್ 2022). ಈ ಯೋಜನೆಯನ್ನು ಕೆಯುಡಬ್ಲ್ಯುಎಸ್‌ಡಿಬಿ ಪೂರ್ಣಗೊಳಿಸದ ಕಾರಣ, ಡಿ.ಜಿ ಸೆಟ್‌ಗಳನ್ನು ಸಂಪೂರ್ಣವಾಗಿ ಬಳಸಲಾಗಿಲ್ಲ. ಕೆಯುಡಬ್ಲ್ಯುಎಸ್‌ಡಿಬಿಯಿಂದ ಕಾಮಗಾರಿಗಳನ್ನು ಪೂರ್ಣಗೊಳಿಸುವುದಕೂ ಮುಂಚಿತವಾಗಿಯೇ ಮ.ಪಾ ಡಿ.ಜಿ ಸೆಟ್ ಖರೀದಿ ಮಾಡಿರುವುದರಿಂದ ಉತ್ತರವು ಸ್ವೀಕಾರಾರ್ಹವಲ್ಲ. ನಿರ್ವಹಣೆಯ ಕೊರತೆ ಮತ್ತು ಡಿಜಿ ಸೆಟ್‌ಗಳ ಕಾರ್ಯನಿರ್ವಹಣೆಯ ಕೊರತೆಯ ಬಗ್ಗೆ ಉತ್ತರವು ಮೌನವಾಗಿತ್ತು.

### *3.13.2 ಬಸ್ ಟರ್ಮಿನಲ್ ನಿರ್ಮಿಸಲು ಸ್ಥಳದ ದೋಷಯುಕ್ತ ಆಯ್ಕೆ*

ಮ.ಪಾ, ಬಳ್ಳಾರಿ,'ಬಳ್ಳಾರಿ ನಗರದಲ್ಲಿ ಖಾಸಗಿ ಬಸ್ ಟರ್ಮಿನಲ್ ಮತ್ತು ವಾಣಿಜ್ಯ ಸಂಕೀರ್ಣದ ಮೇಲ್ದರ್ಜೆಗೆ' ₹ 3 ಕೋಟಿ ಅಂದಾಜು ವೆಚ್ಚದಲ್ಲಿ ಟೆಂಡರ್ ಕರೆಯಲಾಯಿತು (ಮಾರ್ಚ್ 2017) ಎಲ್ಲಾ ಖಾಸಗಿ ಮತ್ತು ಐಷಾರಾಮಿ ಬಸ್ಗಳ ಸೇವೆಯು ಒಂದೇ ಕಡೆಯಲ್ಲಿ ಸಿಗುವುದು ಈ ಕಾಮಗಾರಿಯ ಉದ್ದೇಶವಾಗಿತ್ತು. ಕಾಮಗಾರಿಯನ್ನು ಗುತ್ತಿಗೆದಾರರಿಗೆ ₹ 3.00 ಕೋಟಿ ಅಂದಾಜು ವೆಚ್ಚದಲ್ಲಿ ನೀಡಲಾಗಿದ್ದು (ಡಿಸೆಂಬರ್ 2017), ₹ 2.88 ಕೋಟಿ ವೆಚ್ಚದಲ್ಲಿ ಪೂರ್ಣಗೊಂಡಿದೆ (ಮಾರ್ಚ್ 2019).

ಕಾಮಗಾರಿಗಾಗಿ ಆಯ್ಕೆ ಮಾಡಲಾದ ಸ್ಥಳವು ರೈಲ್ವೆ ಕೆಳ ಸೇತುವೆಯ ಸಮೀಪದಲ್ಲಿದೆ ಎಂದು ಲೆಕ್ಕಪರಿಶೋಧನೆಯು ಗಮನಿಸಿದೆ (ನವೆಂಬರ್ 2021). ಖಾಸಗಿ ಬಸ್ ನಿಲ್ದಾಣದ ಬಳಕೆಗಾಗಿ ರೈಲ್ವೆ ಕೆಳ ಸೇತುವೆಯ ಎರಡೂ ಬದಿಗಳಲ್ಲಿ ಎತ್ತರದ ಅರೆಸ್ಟರ್ ಅನ್ನು ಅಳವಡಿಸಿದ್ದು, ಬಸ್‌ಗಳು ಅದರ ಮೂಲಕ ಹಾದುಹೋಗಲು ಅನುಮತಿಸದ ಕಾರಣ ಈ ಸ್ಥಳದ ಆಯ್ಕೆಯು ಅನುಚಿತವಾಗಿದೆ. ಅಲ್ಲದೆ ಮ.ಪಾ, ಬಳ್ಳಾರಿ ಖಾಸಗಿ ಬಸ್ ನಿಲ್ದಾಣಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸುವ ವ್ಯವಸ್ಥೆ ಮಾಡಿಲ್ಲ. ಹೊಸದಾಗಿ ಮೇಲ್ದರ್ಜೆಗೇರಿದ ಖಾಸಗಿ ಬಸ್ ಟರ್ಮಿನಲ್ ಕಾರ್ಯನಿರ್ವಹಿಸದ ಕಾರಣ, ಸಂಕೀರ್ಣದಲ್ಲಿ ನಿರ್ಮಿಸಲಾದ ಹನ್ನೊಂದು ಅಂಗಡಿಗಳನ್ನು ಬಾಡಿಗೆಗೆ ನೀಡಲು ಸಾಧ್ಯವಾಗಲಿಲ್ಲ. ಮ.ಪಾ ಅಧಿಕಾರಿಗಳೊಂದಿಗೆ ನಡೆಸಿದ ಜೆ.ಪಿ.ವಿ (ನವೆಂಬರ್ 2021) ಸಮಯದಲ್ಲಿ, ಕಾಂಪ್ಲೆಕ್ಸ್‌ನಲ್ಲಿನ ಶೌಚಾಲಯಗಳು, ಮೂತ್ರಾಲಯಗಳು, ವಾಶ್ ಬೇಸಿನ್‌ಗಳು ಮತ್ತು ನೀರಿನ ಟ್ಯಾಪ್‌ಗಳು ಕಾರ್ಯನಿರ್ವಹಿಸದಿರುವುದು ಮತ್ತು ಅನೈರ್ಮಲ್ಯದಿಂದ ಕೂಡಿರುವುದು ಕಂಡುಬಂದಿರುವುದನ್ನು ಲೆಕ್ಕಪರಿಶೋಧನೆ ಗಮನಿಸಿದೆ (**ಪ್ರದರ್ಶಿಕೆ 3.2**). ಹೀಗಾಗಿ, ನಿವೇಶನದ ದೋಷಪೂರಿತ ಆಯ್ಕೆಯಿಂದ ಬಸ್ ಟರ್ಮಿನಲ್ ಮತ್ತು ವಾಣಿಜ್ಯ ಸಂಕೀರ್ಣ ನಿರ್ಮಾಣಕ್ಕೆ ಮಾಡಿದ ₹ 2.88 ಕೋಟಿ ವೆಚ್ಚವು ಫಲಪ್ರದವಾಗಿಲ್ಲ.

**ಪ್ರದರ್ಶಿಕೆ 3.2: ಬಳ್ಳಾರಿಯಲ್ಲಿ ನಿರ್ಮಿಸಲಾದ ಖಾಸಗಿ ಬಸ್ ಟರ್ಮಿನಲ್ ಸ್ಥಿತಿ**



| | |
|---|---|
| ಜೆ.ಪಿ.ವಿ (09.11.2021) ಸಮಯದಲ್ಲಿ ಖಾಸಗಿ ಬಸ್ ನಿಲ್ದಾಣವು ಕಾರ್ಯನಿರ್ವಹಿಸದೇ ಇರುವುದು ಕಂಡುಬಂದಿದೆ. | ಜೆ.ಪಿ.ವಿ (09.11.2021) ಸಮಯದಲ್ಲಿ ನೋಡಿದಂತೆ ಶೌಚಾಲಯಗಳು ಮತ್ತು ಮೂತ್ರಾಲಯಗಳ ಸ್ಥಿತಿ |

ಎತ್ತರದ ತಡೆಯ ಸಮಸ್ಯೆ ಬಗೆಹರಿಸಲು ರೈಲ್ವೆ ಅಧಿಕಾರಿಗಳಿಗೆ ಪ್ರಸ್ತಾವನೆ ಕಳುಹಿಸಲಾಗುವುದು ಮತ್ತು ನಿರ್ಮಿಸಿದ ಅಂಗಡಿಗಳನ್ನು ಹರಾಜು ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ರಾಜ್ಯ ಸರ್ಕಾರವು ಉತ್ತರಿಸಿತು (ಏಪ್ರಿಲ್ 2022). ಆದರೆ, ಎಲ್ಲಾರೀತಿಯ ಬಸುಗಳ ಸೇವೆಯು ಒಂದೇ ಕಡೆಯಲ್ಲಿ ಸಿಗಲು ಕಾರ್ಯಗತಗೊಳಿಸಿದ ಕಾಮಗಾರಿಯ ಉದ್ದೇಶವು ಮೂರು ವರ್ಷವಾದರು ಈಡೇರಿಲ್ಲ.

### 3.14 ಏಕರೂಪ ದರಪಟ್ಟಿಯನ್ನು ಪರಿಷ್ಕರಿಸದ ಕಾರಣ ಬೊಕ್ಕಸಕ್ಕೆ ನಷ್ಟ.

ಪರೀಕ್ಷಾ-ತನಿಖೆಗೆ ಒಳಪಟ್ಟ ಮ.ಪಾಗಳು (ಬಳ್ಳಾರಿ ಹೊರತುಪಡಿಸಿ) ಎಲ್ಇಡಿ ಬೀದಿದೀಪಗಳು, ಅಧಿಕ ಒತ್ತಡದ ಲೋಹದ ಹಾಲೈಡ್ ಬೀದಿ/ಫ್ಲಡ್ ಲೈಟ್‌ಗಳು, ಅಲಂಕಾರಿಕ ಅಡ್ಡಲಾಗಿರುವ ಬೀದಿ ದೀಪಗಳು, ಅಧಿಕ ಒತ್ತಡದ ಸೋಡಿಯಂ ವೇಪರ್ ಬೀದಿ ದೀಪಗಳು ಇತ್ಯಾದಿಗಳ ಪೂರೈಕೆಯಂತಹ ವಿದ್ಯುತ್ ಕೆಲಸಗಳನ್ನು ಯೋಜನೆಯಡಿ ಕೈಗೆತ್ತಿಕೊಂಡಿವೆ. ಪಿ.ಡಬ್ಲ್ಯೂ.ಡಿ ಎಲೆಕ್ಟ್ರಿಕಲ್ ಎಸ್.ಆರ್ ಆಧಾರದ ಮೇಲೆ ಈ ಐಟಂಗಳಿಗೆ ಅಂದಾಜುಗಳನ್ನು ತಯಾರಿಸಲಾಗಿದೆ.

ಪಿ.ಡಬ್ಲ್ಯೂ.ಡಿ ಎಸ್.ಆರ್ ನಲ್ಲಿ ನಮೂದಿಸಲಾದ ದರಗಳ ಹೋಲಿಕೆಯು ಮಾರುಕಟ್ಟೆ ದರಗಳೊಂದಿಗೆ (ವಿದ್ಯುತ್ ವಸ್ತುಗಳ ಸರಕುಪಟ್ಟಿ ಪ್ರತಿಗಳ ಪ್ರಕಾರ) ಎಸ್.ಆರ್ ದರಗಳು ಚಾಲ್ತಿಯಲ್ಲಿರುವ ಮಾರುಕಟ್ಟೆ ದರಗಳಿಗಿಂತ ಹೆಚ್ಚು ಎಂದು ಸೂಚಿಸಿದೆ. ಈ ವೈಪರೀತ್ಯವು ಮೂರು **ಮ.ಪಾ**ಗಳಲ್ಲಿ ಐದು ಪರೀಕ್ಷಾ-ಪರಿಶೀಲಿಸಿದ ಪ್ಯಾಕೇಜ್‌ಗಳಲ್ಲಿ[43] ₹ 1.29 ಕೋಟಿಗಳಷ್ಟು ನಷ್ಟವನ್ನು ಸರ್ಕಾರಕ್ಕೆ ಉಂಟುಮಾಡಿದೆ. ವಿವರಗಳನ್ನು **ಅನುಬಂಧ 3.12** ರಲ್ಲಿ ನೀಡಲಾಗಿದೆ.

ಪಿ.ಡಬ್ಲ್ಯೂ.ಡಿ (2010-11 ಮತ್ತು 2014-15) ಚಾಲ್ತಿಯಲ್ಲಿರುವ ಎಲೆಕ್ಟ್ರಿಕಲ್ ಎಸ್.ಆರ್ ಅನ್ನು ಆಧರಿಸಿ ಅಂದಾಜುಗಳನ್ನು ಸಿದ್ಧಪಡಿಸಲಾಗಿದೆ ಎಂದು ರಾಜ್ಯ ಸರ್ಕಾರವು ಉತ್ತರಿಸಿದೆ(ಏಪ್ರಿಲ್ 2022). ಎಲೆಕ್ಟ್ರಿಕಲ್ ಎಸ್.ಆರ್‌ನಲ್ಲಿ ಹೆಚ್ಚುವರಿ ದರದ ಮಾಹಿತಿ ಅರಿತು, ಮಾರುಕಟ್ಟೆ ದರಗಳಿಗೆ ಅನುಗುಣವಾಗಿ ಪಿ.ಡಬ್ಲ್ಯೂ.ಡಿ ಎಲೆಕ್ಟ್ರಿಕಲ್ ಎಸ್ಆರ್ 2019-20 ಅನ್ನು ಅಳವಡಿಸಿಕೊಳ್ಳುವಂತೆ ಸರ್ಕಾರವು ಎಲ್ಲಾ

[43] ಮೈಸೂರು – ಪ್ಯಾಕೇಜ್ 83 (₹ 13.77 ಲಕ್ಷ) ಮತ್ತು ಪ್ಯಾಕೇಜ್ 82 (₹ 0.77 ಲಕ್ಷ); ತುಮಕೂರು – ಪ್ಯಾಕೇಜ್ 59 ಮತ್ತು 60 (₹ 97.95 ಲಕ್ಷ), ವಿಜಯಪುರ – ಪ್ಯಾಕೇಜ್ 56 (₹ 16.88 ಲಕ್ಷ).

ಯು.ಎಲ್.ಬಿಗಳಿಗೆ ಸೂಚನೆ ನೀಡಿತು (ಆಗಸ್ಟ್ 2018). ಆದಾಗ್ಯೂ, ಹಿಂದಿನ ವರ್ಷಗಳ ಎಲೆಕ್ಟ್ರಿಕಲ್ ಎಸ್.ಆರ್‌ಗಳಲ್ಲಿನ ಹೆಚ್ಚುವರಿ ದರಗಳಿಂದಾಗಿ ಸರ್ಕಾರದ ಬೊಕ್ಕಸಕ್ಕೆ ₹ 1.29 ಕೋಟಿ ನಷ್ಟ ಉಂಟಾಗಿದೆ ಎಂಬುದು ಸತ್ಯ.

### 3.15 ಹೆಚ್ಚುವರಿ ಐಟಂಗಳಿಗೆ ಪೂರಕ ಒಪ್ಪಂದಗಳನ್ನು ಕಾರ್ಯಗತಗೊಳಿಸದಿರುವುದು

ಕೆ.ಪಿ.ಡಬ್ಲ್ಯೂ.ಡಿ ಕೋಡ್‌ನ ಕಂಡಿಕೆ 184(9) ಮತ್ತು 184(14) ರ ಪ್ರಕಾರ, ಮೂಲ ಅಂದಾಜನ್ನು ಅನುಮೋದಿಸಿದ ಪ್ರಾಧಿಕಾರದ ಅನುಮೋದನೆಯ ನಂತರವೇ ಹೆಚ್ಚುವರಿ ಐಟಂಗಳನ್ನು ಕಾರ್ಯಗತಗೊಳಿಸಬೇಕು ಮತ್ತು ಹೆಚ್ಚುವರಿ ವಸ್ತುಗಳಿಗೆ ದರಗಳು ಮತ್ತು ಪಾವತಿಗಳು ಗುತ್ತಿಗೆದಾರರೊಂದಿಗೆ ಅವನ ಒಪ್ಪಿಗೆಯ ನಂತರ ಪೂರಕ ಒಪ್ಪಂದವನ್ನು ಮಾಡಿಕೊಳ್ಳಬೇಕು.

ಈ ನಿಬಂಧನೆಗೆ ವಿರುದ್ಧವಾಗಿ, ಪರೀಕ್ಷಾ-ಪರಿಶೀಲಿಸಿದ ಮ.ಪಾಗಳು ಗುತ್ತಿಗೆದಾರರೊಂದಿಗೆ ಪೂರಕ ಒಪ್ಪಂದಗಳನ್ನು ಮಾಡಿಕೊಳ್ಳದೆ 52 ಪ್ಯಾಕೇಜ್‌ಗಳಲ್ಲಿ 17ರಲ್ಲಿ (33 ಪ್ರತಿಶತ) 55[44] ಹೆಚ್ಚುವರಿ ವಸ್ತುಗಳನ್ನು ಕಾರ್ಯಗತಗೊಳಿಸಿದವು. ಈ ವಸ್ತುಗಳ ಮೇಲೆ ಪಾವತಿಸಿದ ಮೊತ್ತ ₹ 1.38 ಕೋಟಿ.

ರಾಜ್ಯ ಸರ್ಕಾರವು ತನ್ನ ಉತ್ತರದಲ್ಲಿ (ಏಪ್ರಿಲ್ 2022), ಪರಿಷ್ಕೃತ ಒಪ್ಪಂದದ ಮೊತ್ತವು ಮೂಲ ಒಪ್ಪಂದದ ಮೊತ್ತದೊಳಗೆ ಇರುವ ಸಂದರ್ಭಗಳಲ್ಲಿ ಪೂರಕ ಒಪ್ಪಂದದ ಅಗತ್ಯವಿಲ್ಲ ಎಂದು ಹೇಳಿದೆ. ಕೆಪಿಡಬ್ಲ್ಯೂ.ಡಿ ಕೋಡ್‌ನ ನಿಬಂಧನೆಗಳ ಪ್ರಕಾರ ಹೆಚ್ಚುವರಿ ಐಟಂಗಳಿಗೆ ಪೂರಕ ಒಪ್ಪಂದದ ಕಾರ್ಯಗತಗೊಳಿಸುವಿಕೆಯನ್ನು ಕಡ್ಡಾಯಗೊಳಿಸಿರುವುದರಿಂದ ಉತ್ತರವು ಸ್ವೀಕಾರಾರ್ಹವಲ್ಲ.

#### ತೀರ್ಮಾನ

ಮಹಾನಗರ ಪಾಲಿಕೆಗಳು ಯೋಜನೆಯಡಿಯಲ್ಲಿ ಮೂಲಭೂತ ದತ್ತಾಂಶವಿಲ್ಲದೆ ಮತ್ತು ನಿಗದಿತ ತನಿಖೆಗಳನ್ನು ನಡೆಸದೆ ಕಾಮಗಾರಿಗಳನ್ನು ಕೈಗೆತ್ತಿಕೊಂಡವು, ಇದು ಅವಾಸ್ತವಿಕ ಅಂದಾಜುಗಳನ್ನು ತಯಾರಿಸಲು ಕಾರಣವಾಯಿತು. ಬಹುತೇಕ ಕಾಮಗಾರಿಗಳ ವೆಚ್ಚವು ನಿಗದಿತ ₹ 50 ಲಕ್ಷಕ್ಕಿಂತ ಕಡಿಮೆಯಿರುವುದರಿಂದ ಮ.ಪಾಗಳು ಸ್ಪಷ್ಟವಾದ ಆಸ್ತಿಗಳನ್ನು ರಚಿಸಲು ವಿಫಲವಾಗಿವೆ. ಕಾಮಗಾರಿಗಳನ್ನು ಒಪ್ಪಿಸುವ ಮೊದಲು ಮ.ಪಾಗಳು ಸ್ಥಳಗಳ ಲಭ್ಯತೆಯನ್ನು ಖಾತ್ರಿಪಡಿಸಲಿಲ್ಲ, ಇದರ ಪರಿಣಾಮವಾಗಿ ಕಾಮಗಾರಿಗಳ ವಿಳಂಬ ಮತ್ತು ಕಾರ್ಯಗತಗೊಳಿಸದಿರುವುದು ಕಂಡುಬಂದಿತು.

ಟೆಂಡರ್ ಪ್ರಕ್ರಿಯೆಯಲ್ಲಿನ ದೋಷಗಳು ಹಣಕಾಸಿನ ವಹಿವಾಟು, ಅನುಭವ ಮತ್ತು ತಾಂತ್ರಿಕವಾಗಿ ಅರ್ಹವಾದ ಪ್ರಮುಖ ವೃತ್ತಿಪರರ ಲಭ್ಯತೆಯಂತಹ ತಾಂತ್ರಿಕ ಮಾನದಂಡಗಳನ್ನು ಪೂರೈಸದ ಪಿ.ಎಂ.ಸಿಗಳ ಆಯ್ಕೆಗೆ ಕಾರಣವಾಯಿತು.

ಏಕ ಬಿಡ್‌ಗಳ ಸ್ವೀಕಾರ, ತಾಂತ್ರಿಕವಾಗಿ ಸ್ಪಂದಿಸದ ಟೆಂಡರ್‌ದಾರರಿಗೆ ಕಾಮಗಾರಿಗಳ ಅನಿಯಮಿತ ನೀಡುವಿಕೆ, ಬಿಡ್‌ಗಳನ್ನು ಅಸಮರ್ಥನೀಯವಾಗಿ ತಿರಸ್ಕರಿಸುವುದು ಮತ್ತು ಬಿಡ್ ಸಿಂಧುತ್ವದ ಅವಧಿ ಮುಗಿದ ನಂತರವು ಕಾಮಗಾರಿಗಳನ್ನು ನೀಡುವುದರಿಂದ ಪರೀಕ್ಷಾ-ತನಿಖೆಗೆ ಒಳಪಟ್ಟ ಮ.ಪಾಗಳು ಮತ್ತು ಡಿಎಂಎಯ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯು ಪಾರದರ್ಶಕತೆ ಮತ್ತು ನ್ಯಾಯೋಚಿತತೆಯನ್ನು ಹೊಂದಿಲ್ಲವೆಂದು ಕಂಡುಬಂದಿದೆ.

[44] ಬಳ್ಳಾರಿ – 10 ವಸ್ತುಗಳು (₹ 40.41 ಲಕ್ಷ), ಮೈಸೂರು – 20 ವಸ್ತುಗಳು (₹ 77.46 ಲಕ್ಷ), ತುಮಕೂರು – 16 ವಸ್ತುಗಳು (₹ 13.84 ಲಕ್ಷ), ವಿಜಯಪುರ – 9 ವಸ್ತುಗಳು (₹ 6.62 ಲಕ್ಷ).

ನಿಗದಿತ ಮಾನದಂಡಗಳು ಮತ್ತು ಅಳತೆಗಳನ್ನು ನಿರ್ಲಕ್ಷಿಸಿ ಕಾಮಗಾರಿಗಳನ್ನು ನಿರ್ವಹಿಸುವುದು ಅನಿಯಮಿತ, ತಪ್ಪಿಸಬಹುದಾದ ಮತ್ತು ಹೆಚ್ಚುವರಿ ವೆಚ್ಚಗಳಿಗೆ ಕಾರಣವಾಯಿತು, ಇದರ ಪರಿಣಾಮವಾಗಿ ಗುತ್ತಿಗೆದಾರರಿಗೆ ಅನಗತ್ಯ ಲಾಭವಾಯಿತು. ಅಸಮರ್ಪಕ ಯೋಜನೆ ಮತ್ತು ಕಾರ್ಯಗತಗೊಳಿಸುವಿಕೆಯಿಂದಾಗಿ ಯೋಜನೆಯಡಿಯಲ್ಲಿ ರಚಿಸಲಾದ ಸ್ವತ್ತುಗಳು ಬಳಕೆಯಾಗದೆ ಉಳಿದಿರುವ ನಿದರ್ಶನಗಳೂ ಇವೆ.

**ಶಿಫಾರಸುಗಳು**

- ***ಅನರ್ಹ ಬಿಡ್ಡರ್‌ಗಳ ಆಯ್ಕೆಗೆ ಕಾರಣವಾಗುವ ಟೆಂಡರ್ ಪ್ರಕ್ರಿಯೆಯಲ್ಲಿನ ಅಕ್ರಮಗಳಿಗೆ ಜವಾಬ್ದಾರಿಯನ್ನು ನಿಗದಿಪಡಿಸಬೇಕಾಗಿದೆ.***

- ***ತಪ್ಪಿತಸ್ಥ ಅಧಿಕಾರಿಗಳ ಮೇಲೆ ಹೊಣೆಗಾರಿಕೆಯನ್ನು ನಿಗದಿಪಡಿಸುವುದರೊಂದಿಗೆ ಕಾಮಗಾರಿಗಳ ಅನುಷ್ಠಾನದಲ್ಲಿ ಉಂಟಾಗುವ ತಪ್ಪಿಸಬಹುದಾದ/ಹೆಚ್ಚುವರಿ ವೆಚ್ಚವನ್ನು ವಸೂಲಿ ಮಾಡಲು ಕ್ರಮ ಕೈಗೊಳ್ಳಬಹುದು.***

# ಅಧ್ಯಾಯ–IV

## ಮೇಲ್ವಿಚಾರಣೆ

ಮಾರ್ಗಸೂಚಿಗಳ ಕಂಡಿಕೆ 19, ಯೋಜನೆಯು ಡಿ.ಎಲ್.ಸಿ, ಡಿ.ಎಂ.ಎ ಮತ್ತು ಯುಡಿಡಿಯಿಂದ ಬಹು–ಹಂತದ ಮೇಲ್ವಿಚಾರಣೆಯನ್ನು ಕಲ್ಪಿಸಿದೆ. ಲೆಕ್ಕಪರಿಶೋಧನೆಯು (ಆಗಸ್ಟ್‌ನಿಂದ ಡಿಸೆಂಬರ್ 2021), ಆಂತರಿಕ ನಿಯಂತ್ರಣಗಳು ಮತ್ತು ಮೇಲ್ವಿಚಾರಣೆಯಲ್ಲಿನ ನ್ಯೂನತೆಗಳು ಪ್ರಗತಿ ವರದಿಗಳು/ಎಂಐಎಸ್ ಅನ್ನು ವಿಶ್ವಾಸಾರ್ಹವಲ್ಲವೆಂದೂ ಮತ್ತು ಯೋಜನೆಯಡಿಯಲ್ಲಿ ಟೆಂಡರ್ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಕೊರತೆ, ಸ್ವೀಕಾರಾರ್ಹವಲ್ಲದ/ಸಮರ್ಥನೆಯಿಲ್ಲದ ವೆಚ್ಚ ಇತ್ಯಾದಿಗಳಿಗೆ ಕಾರಣವಾಗಿವೆ ಎಂದು ಗಮನಿಸಿದೆ . ವಿವರವಾದ ಅಂಶಗಳನ್ನು ಮುಂದಿನ ಕಂಡಿಕೆಗಳಲ್ಲಿ ನೀಡಲಾಗಿದೆ.

### 4.1 ಡಿಎಂಎ/ಸರ್ಕಾರಿ ಮಟ್ಟದಲ್ಲಿ ಸಭೆಗಳು

ಯೋಜನಾ ಮಾರ್ಗಸೂಚಿಗಳು ಡಿಎಂಎ ಪ್ರತಿ ತಿಂಗಳು ಯೋಜನೆಯ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡಬೇಕು ಮತ್ತು ಯುಡಿಡಿ ಮೂರು ತಿಂಗಳಿಗೊಮ್ಮೆ ಅದನ್ನು ಪರಿಶೀಲಿಸಬೇಕು ಎಂದು ತಿಳಿಸಿದೆ.

2014–15 ರಿಂದ 2020–21 ರ ಅವಧಿಯಲ್ಲಿ ಡಿಎಂಎಯಲ್ಲಿ ನಡೆಯಬೇಕಿರುವ 84 ಸಭೆಗಳ ವಿರುದ್ಧ, 25 ಸಭೆಗಳನ್ನು ನಡೆಸಿತು. ಯುಡಿಡಿಯಲ್ಲಿ ನಡೆದ ಸಭೆಗಳ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲಿಲ್ಲ (ಏಪ್ರಿಲ್ 2022).

ರಾಜ್ಯ ಸರ್ಕಾರವು ಡಿಎಂಎ ಮತ್ತು ಯುಡಿಡಿಯಿಂದ ಮಾಸಿಕ ಸಭೆಗಳನ್ನು ನಡೆಸಲಾಗಿದೆ ಮತ್ತು ನಿಯಮಿತವಾಗಿ ಪರಿಶೀಲಿಸಲಾಗಿದೆ ಎಂದು ಹೇಳಿದೆ (ಏಪ್ರಿಲ್ 2022). ಕಡ್ಡಾಯ 84 ಸಭೆಗಳ ವಿರುದ್ಧ 2014–15 ರಿಂದ 2020–21 ರ ಅವಧಿಯಲ್ಲಿ ಡಿಎಂಎ ಕೇವಲ 25 ಸಭೆಗಳನ್ನು ನಡೆಸಿದೆ ಎಂದು ಈ ಹಿಂದೆ ಒದಗಿಸಿದ ಮಾಹಿತಿಗೆ ಉತ್ತರವು ವಿರುದ್ಧವಾಗಿದೆ.

### 4.2 ಜಿಲ್ಲಾ ಮಟ್ಟದ ಸಮಿತಿ ಸಭೆಗಳು

ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಎರಡು ತಿಂಗಳಿಗೊಮ್ಮೆ ಡಿಎಲ್‌ಸಿ ಸಭೆ ನಡೆಸಿ ಯೋಜನೆ ಅನುಷ್ಠಾನದ ಮೇಲ್ವಿಚಾರಣೆ ನಡೆಸಬೇಕಿತ್ತು .

2014–15 ರಿಂದ 2020–21 ರ ಅವಧಿಯಲ್ಲಿ ಕಡ್ಡಾಯ 42 ಸಭೆಗಳಿಗೆ (ಎರಡು ತಿಂಗಳಿಗೊಮ್ಮೆ) ವಿರುದ್ಧವಾಗಿ ಪರೀಕ್ಷಾ–ತನಿಖೆಗೆ ಒಳಪಟ್ಟ ನಾಲ್ಕು ಮ.ಪಾಗಳಲ್ಲಿನ ಡಿ.ಎಲ್.ಸಿಗಳು ಯೋಜನೆಯ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡಲು ಯಾವುದೇ ಸಭೆಯನ್ನು ನಡೆಸಲಿಲ್ಲ ಎಂದು ಲೆಕ್ಕಪರಿಶೋಧನೆ ಗಮನಿಸಿತು (ಆಗಸ್ಟ್‌ನಿಂದ ಡಿಸೆಂಬರ್ 2021). ಪರಿಣಾಮವಾಗಿ, ಜಿಲ್ಲಾ ಮಟ್ಟದಲ್ಲಿ ನಿರೀಕ್ಷಿತ ಮೇಲ್ವಿಚಾರಣೆ ಇಲ್ಲದಿರುವುದು ಯೋಜನೆಯ ಅನುಷ್ಠಾನದ ಮೇಲೆ ಪ್ರತಿಕೂಲ ಪರಿಣಾಮ ಬೀರಿತು.

ರಾಜ್ಯ ಅಭಿವೃದ್ಧಿ ಕಾರ್ಯಕ್ರಮಗಳ ಸಭೆಗಳಲ್ಲಿ ಯೋಜನೆಯ ಪ್ರಗತಿಯನ್ನು ಪರಿಶೀಲಿಸಲು ಡಿಸಿಗಳಿಗೆ ಸೂಚನೆಗಳನ್ನು ನೀಡಲಾಗುವುದು ಎಂದು ರಾಜ್ಯ ಸರ್ಕಾರವು ಉತ್ತರಿಸಿದೆ (ಏಪ್ರಿಲ್ 2022).

### 4.3 ಯೋಜನಾ ನಿರ್ವಹಣಾ ಸಲಹೆಗಾರರ ಗುಣಮಟ್ಟದ ತಪಾಸಣೆ ವರದಿಗಳಲ್ಲಿನ ಕೊರತೆಗಳು

ಯೋಜನೆಯ ಮಾರ್ಗಸೂಚಿಗಳ ಕಂಡಿಕೆ 12ರ ಪ್ರಕಾರ, ಪಿ.ಎಂ.ಸಿಗಳು ಮ.ಪಾ ಇಂಜಿನಿಯರ್‌ಗಳೊಂದಿಗೆ ಕಾಮಗಾರಿಗಳನ್ನು ಪರಿಶೀಲಿಸುವುದು/ಮೇಲ್ವಿಚಾರಣೆ ಮಾಡುವುದು, ಕಾಮಗಾರಿಗಳ ಪ್ರಗತಿಯನ್ನು ಮೇಲ್ವಿಚಾರಣೆ ಮಾಡುವುದು ಮತ್ತು ಮ.ಪಾ, ಡಿ.ಸಿ ಮತ್ತು ಡಿ.ಎಂ.ಎಗೆ ವರದಿಗಳನ್ನು ಸಲ್ಲಿಸುವುದು ಆಗಿರುತ್ತದೆ. ಇದಲ್ಲದೆ, ಪಿ.ಎಂ.ಸಿಗಳು ಸಲ್ಲಿಸಿದ ಗುಣಮಟ್ಟ ಪರಿಶೀಲನಾ ವರದಿಗಳ ಮೂಲಕ ಕಾಮಗಾರಿಗಳ ಗುಣಮಟ್ಟ ಕಾರ್ಯಗತಗೊಳಿಸುವಿಕೆಯನ್ನು ಡಿ.ಎಂ.ಎ ಖಚಿತಪಡಿಸಿಕೊಳ್ಳುವುದು.

ಪರೀಕ್ಷಾ–ತನಿಖೆಗೆ ಒಳಪಟ್ಟ ನಾಲ್ಕು ಮ.ಪಾಗಳಲ್ಲಿ ₹ 3.21 ಕೋಟಿ ಮೊತ್ತವನ್ನು ಪಿ.ಎಂ.ಸಿಗಳಿಗೆ ಪಾವತಿಸಲಾಗಿದೆ (ನವೆಂಬರ್ 2021). ಪರಿಶೀಲನೆಯು (ಆಗಸ್ಟ್–ಡಿಸೆಂಬರ್ 2021) ಪಿ.ಎಂ.ಸಿಗಳು ಸಲ್ಲಿಸಿದ ವರದಿಗಳಲ್ಲಿ ವ್ಯತ್ಯಾಸಗಳಿವೆ ಎಂದು ತೋರಿಸಿದೆ, ನಾಲ್ಕು ಮ.ಪಾಗಳಲ್ಲಿ ಪರೀಕ್ಷಿಸಲಾದ 52 ಪ್ಯಾಕೇಜ್‌ಗಳಲ್ಲಿ 42 (ಶೇ 81) ಪ್ಯಾಕೇಜ್‌ಗಳ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು ಅವುಗಳನ್ನು ವಿಶ್ವಾಸಾರ್ಹವಲ್ಲ ಎಂದು ತೋರಿಸಿದೆ. ಈ 42 ಪ್ಯಾಕೇಜ್‌ಗಳಿಗೆ ಮಾಡಿದ ವೆಚ್ಚವು ₹ 47.37 ಕೋಟಿ. ವಿವರಣಾತ್ಮಕ ಪ್ರಕರಣಗಳು ಹೀಗಿವೆ:

i) ಕಾರ್ಯಗತಗೊಳಿಸಿದ ಕಾರ್ಯಗಳ ದಿನಾಂಕಗಳು, ಪ್ರಮಾಣಗಳನ್ನು ನಮೂದಿಸಲಾಗಿಲ್ಲ;

ii) ಕಾಮಗಾರಿಗಳ ಗುಣಮಟ್ಟವನ್ನು ಪ್ರಮಾಣೀಕರಿಸಲಾಗಿಲ್ಲ;

iii) ಮಾದರಿಗಳನ್ನು ತೆಗೆದುಕೊಳ್ಳುವ ದಿನಾಂಕ ಮತ್ತು ಸ್ಥಳಗಳು ಇತ್ಯಾದಿಗಳನ್ನು ನಮೂದಿಸಲಾಗಿಲ್ಲ;

iv) ಪ್ಯಾಕೇಜ್ 26ಗೆ ಸಂಬಂಧಿಸಿದಂತೆ (ತುಮಕೂರು), ಎಲ್ಲಾ ಐದು ಕಾಮಗಾರಿಗಳು ಕಾರ್ಯಗತಗೊಳಿಸಲಾಗಿದೆ ಎಂದು ಪಿ.ಎಂ.ಸಿ, ಪ್ರಮಾಣೀಕರಿಸಿದೆ (ಸೆಪ್ಟೆಂಬರ್ 2017) ಆದರೆ ಕೇವಲ ಎರಡು ಕಾಮಗಾರಿಗಳು ಮಾತ್ರ ಪೂರ್ಣಗೊಂಡಿವೆ ಮತ್ತು ಮೂರು ಕಾಮಗಾರಿಗಳನ್ನು ಸ್ಥಳದ ಅಭಾವದಿಂದ ಕೈಗೆತ್ತಿಕೊಳ್ಳಲಾಗಲಿಲ್ಲ. ಅದರ ವರದಿಯು (ಸೆಪ್ಟೆಂಬರ್ 2015), ಸ್ಥಳದಲ್ಲಿ ಎಸ್.ಡಿ.ಬಿ.ಸಿ (ಗ್ರೇಡ್–II) ಗಾಗಿ ಮಿಶ್ರಣ ವಿನ್ಯಾಸದ ಮಾದರಿ ಪರೀಕ್ಷೆಯನ್ನು ಒಳಗೊಂಡಿದ್ದರೂ ಸಹ ಈ ಐಟಂ ಅನ್ನು ಕಾರ್ಯಗತಗೊಳಿಸಲಾಗಿಲ್ಲ;

v) ಎಂ.ಬಿಗಳೊಂದಿಗೆ ಹೋಲಿಸಿದಾಗ ಪಿ.ಎಂ.ಸಿ ವರದಿಗಳ ಬಿಲ್ ಸಲ್ಲಿಕೆ ದಿನಾಂಕಗಳಲ್ಲಿನ ವ್ಯತ್ಯಾಸಗಳು ಕಂಡುಬಂದವು.

ಮ.ಪಾವಾರು ವಿವರಗಳನ್ನು **ಅನುಬಂಧ 4.1** ರಲ್ಲಿ ನೀಡಲಾಗಿದೆ .

ರಾಜ್ಯ ಸರ್ಕಾರವು ಮುಂದಿನ ಕ್ರಮಕ್ಕಾಗಿ ಸಂಬಂಧಿಸಿದ ಅಧಿಕಾರಿಗಳು ಮತ್ತು ಪಿ.ಎಂ.ಸಿಗಳಿಗೆ ನೋಟಿಸ್ ನೀಡಲಾಗುವುದು ಎಂದು ಹೇಳಿದೆ (ಏಪ್ರಿಲ್ 2022).

### 4.4 ಹಣಕಾಸಿನ ಪ್ರಗತಿ ವರದಿಗಳಲ್ಲಿನ ವ್ಯತ್ಯಾಸಗಳು

ಕರ್ನಾಟಕ ಆಯ್ಯವ್ಯಯ ಕೈಪಿಡಿಯಂತೆ  ವಿತರಣಾ ಅಧಿಕಾರಿಯು ಪ್ರತಿ ವಿವರವಾದ ಖಾತೆಯ ಅಡಿಯಲ್ಲಿ ವೆಚ್ಚದ ವಹಿಯನ್ನು ನಿರ್ವಹಿಸಬೇಕು ಮತ್ತು ಖಜಾನೆ ವೋಚರ್ ಸಂಖ್ಯೆಗಳು ಮತ್ತು ದಿನಾಂಕಗಳನ್ನು ಒಳಗೊಂಡಿರುವ ವೆಚ್ಚದ ಮಾಸಿಕ ಹೇಳಿಕೆಯನ್ನು ನಿಯಂತ್ರಣ ಅಧಿಕಾರಿಗಳಿಗೆ ಸಲ್ಲಿಸಬೇಕು (ಕಂಡಿಕೆ 236

ಮತ್ತು 239). ಅಧೀನ ಅಧಿಕಾರಿಗಳು ವೆಚ್ಚದ ವಹಿಯನ್ನು ನಿರ್ವಹಿಸಬೇಕು ( ಕಂಡಿಕೆ 243). ಕೆ ಎಂ ಎ ಬಿ ಆರ್ ನ ನಿಬಂಧನೆಗಳು (ನಿಯಮ 79 ಮತ್ತು 87), ಮ.ಪಾಗಳು ಕೈಗೊಂಡ ಪ್ರತಿಯೊಂದು ಕೆಲಸಕ್ಕೂ ಲೆಕ್ಕವನ್ನು ಇಟ್ಟುಕೊಳ್ಳಬೇಕು ಮತ್ತು ಭೂಮಿ, ಕಟ್ಟಡಗಳು ಮತ್ತು ಎಲ್ಲಾ ಇತರ ಮೂಲಸೌಕರ್ಯ, ಸ್ಥಿರ ಮತ್ತು ಚರ ಆಸ್ತಿಗಳನ್ನು ಒಳಗೊಂಡಿರುವ ಸ್ಥಿರ ಆಸ್ತಿ ವಹಿಗಳನ್ನು ನಿರ್ವಹಿಸಬೇಕು ಎಂದು ಹೇಳಿದೆ.

ಯೋಜನೆಯ ಮಾರ್ಗಸೂಚಿಗಳ ಪ್ರಕಾರ, ಮ.ಪಾಗಳಿಂದ ಕಾಮಗಾರಿಗಳನ್ನು ಕೈಗೊಳ್ಳಬೇಕು ಮತ್ತು ಆಯಾ ಜಿಲ್ಲೆಗಳ ಡಿಸಿಗಳ ಮೂಲಕ ಬಿಡುಗಡೆ/ಪಾವತಿಗಳನ್ನು ಮಾಡಬೇಕಿತ್ತು. ಡಿಸಿಗಳು ಜಿಲ್ಲಾ ನಗರಾಭಿವೃದ್ಧಿ ಕೋಶಗಳ (ಡಿಯುಡಿಸಿ) ಮೂಲಕ ಅನುದಾನದ ಮೇಲ್ವಿಚಾರಣೆ ಮಾಡಬೇಕಾಗಿತ್ತು.

ಪರೀಕ್ಷಾ–ತನಿಖೆಗೆ ಒಳಪಟ್ಟ ಮ.ಪಾಗಳಲ್ಲಿ ಈ ಕೆಳಕಂಡ ಹಣಕಾಸಿನ ಅಕ್ರಮಗಳಾಗಿದೆ ಎಂದು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ (ಆಗಸ್ಟ್ ನಿಂದ ಡಿಸೆಂಬರ್ 2021):

i) ಡಿ.ಸಿಗಳು/ಡಿಯುಡಿಸಿಗಳು (ಮೈಸೂರು ಹೊರತುಪಡಿಸಿ) ವೋಚರ್–ವಾರು/ಕೆಲಸವಾರು ವಿವರಗಳನ್ನು ಒಳಗೊಂಡಿರುವ ಯಾವುದೇ ವೆಚ್ಚದ ರಿಜಿಸ್ಟರ್ ಅನ್ನು ಯೋಜನೆಯ ಅಡಿಯಲ್ಲಿ ನಿರ್ವಹಿಸಿಲ್ಲ. ಅಂತಹ ವಿವರಗಳ ನಿರ್ವಹಣೆ ಮತ್ತು ಸಲ್ಲಿಕೆಗೆ ಡಿಎಂಎ ಕೂಡ ಒತ್ತಾಯಿಸಲಿಲ್ಲ.

ii) ಡಿಯುಡಿಸಿ, ಬಳ್ಳಾರಿ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆ ಹೊಂದಿರಲ್ಲಿಲ್ಲ.

iii) ಮ.ಪಾಗಳು ವೆಚ್ಚದ ವಹಿಯನ್ನು ನಿರ್ವಹಿಸಿಲ್ಲ ಅಥವಾ ಕೈಗೆತ್ತಿಕೊಂಡ ಕಾಮಗಾರಿಗಳ ಲೆಕ್ಕವನ್ನು ಇಟ್ಟಿರಲಿಲ್ಲ.

iv) ಮ.ಪಾಗಳು ಯೋಜನೆಯ ಅಡಿಯಲ್ಲಿ ಯಾವುದೇ ಆಸ್ತಿ ನೋಂದಣಿ ವಹಿಯನ್ನು ನಿರ್ವಹಿಸಲಿಲ್ಲ.

v) ಹಣವನ್ನು ಮ.ಪಾಗಳ ಮೂಲಕ ರವಾನಿಸದ ಕಾರಣ, ಯೋಜನೆಯ ಅಡಿಯಲ್ಲಿ ರಚಿಸಲಾದ ಸ್ವತ್ತುಗಳನ್ನು ಮ.ಪಾಗಳ ಲೆಕ್ಕ ಪುಸ್ತಕಗಳಿಗೆ (ಪ್ರಮಾಣೀಕೃತ ಖಾತೆಗಳು) ತೆಗೆದುಕೊಳ್ಳಲಾಗಿಲ್ಲ.

vi) ನಿಯಮಿತ ಮಧ್ಯಂತರಗಳಲ್ಲಿ ಯುಸಿಗಳನ್ನು ಡಿಎಂಎಗೆ ಸಲ್ಲಿಸಲಾಯಿತು, ಆದರೆ ಇವುಗಳು ಕೆಲಸದ ವಿವರಗಳೊಂದಿಗೆ ಬೆಂಬಲಿತವಾಗಿಲ್ಲ. ಪರಿಣಾಮವಾಗಿ, ಕೆಲಸದ ಪ್ರಗತಿ ವರದಿಗಳೊಂದಿಗೆ ಹೋಲಿಸಿದಾಗ ಯುಸಿಗಳಲ್ಲಿ ಹೊಂದಾಣಿಕೆ ಇರಲಿಲ್ಲ.

vii) ಬಳ್ಳಾರಿ ಮ.ಪಾಗೆ ಸಂಬಂಧಿಸಿದಂತೆ ₹ 5.50 ಕೋಟಿಯನ್ನು ಯೋಜನೆಯಡಿ ಬಿಡುಗಡೆಯಾದ ಯುಸಿಗಳ ಪ್ರಕಾರ ಬಳಸಲಾಗಿದ್ದು ಮತ್ತು ಎಸ್‌ಬಿಐ ಖಾತೆಯಲ್ಲಿ ಶೂನ್ಯ ಬಾಕಿ ಇತ್ತು. ಇದು ತಪ್ಪಾಗಿದ್ದು, ಮತ್ತು ದಾರಿತಪ್ಪಿಸುವಂತಿದೆ ಏಕೆಂದರೆ ಗಳಿಸಿದ ಬಡ್ಡಿಯ ಮೊತ್ತ (₹ 0.44 ಕೋಟಿ) ಮತ್ತು ಮುಕ್ತಾಯ ಬಾಕಿ ₹ 0.42 ಕೋಟಿ (ಮಾರ್ಚ್ 2021), ಯುಸಿ ಗಳಲ್ಲಿ ತಿಳಿಸಲಾಗಿಲ್ಲ/ಸೇರಿಸಲಾಗಿಲ್ಲ.

viii) ಪ್ರಗತಿಯ ವರದಿಯಲ್ಲಿ ಅಂದಾಜು ವೆಚ್ಚವನ್ನು ಕೆಲಸದ ಪ್ರಕಾರವಾಗಿ ಸೂಚಿಸಲಾಗಿದೆ ಆದರೆ ವೆಚ್ಚವನ್ನು ಇಡೀ ಪ್ಯಾಕೇಜ್‌ಗೆ ಪ್ರದರ್ಶಿಸಲಾಗಿದೆ. ಅಲ್ಲದೆ, ಪ್ಯಾಕೇಜ್‌ನ ಅಂತಿಮ ವೆಚ್ಚವು ಅಂದಾಜು

ವೆಚ್ಚವನ್ನು ಮೀರಿದ ಸಂದರ್ಭಗಳಲ್ಲಿ, ಇತರ ಅನುದಾನಗಳು/ನಿಧಿಗಳಿಂದ ಬಾಕಿ ಮೊತ್ತವನ್ನು ಪೂರೈಸಲಾಗಿದೆ ಮತ್ತು ಅಂತಹ ಹೆಚ್ಚುವರಿ ವೆಚ್ಚವನ್ನು ಪ್ರಗತಿ ವರದಿಗಳಲ್ಲಿ ಪ್ರದರ್ಶಿಸಲಾಗಿಲ್ಲ. ಆದ್ದರಿಂದ, ಕೆಲಸದ-ವಾರು ವೆಚ್ಚವನ್ನು ಕಂಡುಹಿಡಿಯಲಾಗಲಿಲ್ಲ ಮತ್ತು ಅಂದಾಜು ವೆಚ್ಚದೊಂದಿಗೆ ವೆಚ್ಚವನ್ನು ಹೋಲಿಸುವುದು ಕಾರ್ಯಸಾಧ್ಯವಲ್ಲ.

ix) **ಕೋಷ್ಟಕ 4.1** ರಲ್ಲಿ ವಿವರಿಸಿದಂತೆ, ವಿವಿಧ ಕಛೇರಿಗಳಲ್ಲಿ ನಿರ್ವಹಿಸಲಾದ ದಾಖಲೆಗಳಲ್ಲಿ ಪ್ರದರ್ಶಿಸಲಾದ ಯೋಜನೆಯ ವೆಚ್ಚಕ್ಕೆ (ಮಾರ್ಚ್ 2021) ಸಂಬಂಧಿಸಿದಂತೆ ಯಾವುದೇ ಹೊಂದಾಣಿಕೆಯಿಲ್ಲದಿರುವುದು ಸಮನ್ವಯದ ಅನುಪಸ್ಥಿತಿಯನ್ನು ಸಾಬೀತುಪಡಿಸುತ್ತದೆ.

**ಕೋಷ್ಟಕ 4.1: ಪರೀಕ್ಷಾ-ತನಿಖೆಗೆ ಒಳಪಟ್ಟ ಮ.ಪಾಗಳ ವೆಚ್ಚದಲ್ಲಿ ವ್ಯತ್ಯಾಸಗಳು**

**(₹ ಕೋಟಿಯಲ್ಲಿ)**

| ಆಧಾರ | ಬಳ್ಳಾರಿ | ಮೈಸೂರು | ತುಮಕೂರು | ವಿಜಯಪುರ |
|---|---|---|---|---|
| ಡಿಎಂಎ | 76.03 | 82.80 | 97.74 | 95.38 |
| ಎಂಐಎಸ್ | 53.58 | 83.11 | 97.82 | 81.87 |
| ಡಿಯುಡಿಸಿ ಗಳು | ಲಭ್ಯವಿಲ್ಲ | 84.26 | 97.81 | 95.51 |
| ಮ.ಪಾಗಳ ಪ್ರಗತಿ ವರದಿಗಳು | 75.17 | 83.90 | 97.68 | 96.43 |
| ಬ್ಯಾಂಕ್ ಮತ್ತು ಖಜಾನೆ ದಾಖಲೆಗಳು | 75.26 | ಲಭ್ಯವಿಲ್ಲ | 98.89 | ಲಭ್ಯವಿಲ್ಲ |
| ಯುಸಿಗಳು | 75.17 | 82.80 | 97.77 | 95.38 |

ಆಧಾರ: ಡಿಎಂಎ ಮತ್ತು ಪರೀಕ್ಷಾ-ತನಿಖೆಗೆ ಒಳಪಟ್ಟ ಮ.ಪಾ/ಡಿಯುಡಿಸಿಗಳಿಂದ ಒದಗಿಸಲಾದ ಮಾಹಿತಿ

x) ಸಾಲದ ಖಾತೆಯಲ್ಲಿ ಗಳಿಸಿದ ಬಡ್ಡಿಯ ಲೆಕ್ಕಪತ್ರ ನಿರ್ವಹಣೆ ಮತ್ತು ಬಳಕೆಯ ಬಗ್ಗೆ ಯೋಜನೆಯ ಮಾರ್ಗಸೂಚಿಗಳು ಮೌನವಾಗಿವೆ . ಮಾರ್ಚ್ 2021 ರಂತೆ, ಸಾಲದ ಖಾತೆಯಲ್ಲಿನ ಬಡ್ಡಿ ಮೊತ್ತವು ಒಟ್ಟು ₹ 6.67 ಕೋಟಿ (ಸ್ವೀಪ್ ಖಾತೆಯಲ್ಲಿ ₹6.61 ಕೋಟಿ ಹಾಗೂ ಎಸ್‌ಬಿ ಖಾತೆಯಲ್ಲಿ ₹ 0.06 ಕೋಟಿ), ಇದಕ್ಕೆ ಯುಡಿಡಿ ಅಥವಾ ಡಿಎಂಎ ಯಾವುದೇ ಸೂಚನೆಗಳನ್ನು ನೀಡಿಲ್ಲ. ಲೆಕ್ಕಪರಿಶೋಧನೆಯು, ಡಿಎಂಎ ಪ್ರಕಾರ ಬಳಸಲಾದ (ಮಾರ್ಚ್ 2021) ಸಾಲದ ಮೊತ್ತದಲ್ಲಿ (₹432.90 ಕೋಟಿ) ಮತ್ತು ಕೆನರಾ ಬ್ಯಾಂಕ್ ಅಂಕಿಅಂಶಗಳಿಗೆ ಹೋಲಿಸಿದರೆ (₹ 432.74 ಕೋಟಿ) ₹ 0.16 ಕೋಟಿ ಗಳ ವ್ಯತ್ಯಾಸವನ್ನು ಗಮನಿಸಿದೆ.

ಅಗತ್ಯವಿರುವ ವಹಿಗಳನ್ನು ನಿರ್ವಹಿಸಲಾಗುವುದು ಮತ್ತು ಭವಿಷ್ಯದಲ್ಲಿ ಎಂಐಎಸ್ ಅನ್ನು ಮೇಲ್ದರ್ಜೆಗೆ ಏರಿಸಲಾಗುವುದು ಎಂದು ರಾಜ್ಯ ಸರ್ಕಾರವು ಉತ್ತರಿಸಿದೆ (ಏಪ್ರಿಲ್ 2022). ಉತ್ತರವು ವಿವಿಧ ದಾಖಲೆಗಳ ಪ್ರಕಾರ ಯೋಜನಾ ವೆಚ್ಚದಲ್ಲಿನ ಅಸಮಂಜಸತೆ, ತಪ್ಪಾದ ಯುಸಿಗಳ ಸಲ್ಲಿಕೆ, ನಿರ್ಮಾಣವಾದ ಸ್ವತ್ತುಗಳನ್ನು ಖಾತಾ ಪುಸ್ತಕಗಳಿಗೆ ತೆಗೆದುಕೊಳ್ಳದಿರುವುದು ಮತ್ತು ಸಾಲದ ಖಾತೆಯಲ್ಲಿ ಗಳಿಸಿದ ಬಡ್ಡಿಯ ಲೆಕ್ಕಪತ್ರ/ ಬಳಕೆಯ ಕುರಿತು ಲೆಕ್ಕಪರಿಶೋಧನೆಯ ಅಂಶಗಳನ್ನು ತಿಳಿಸಲಿಲ್ಲ.

## 4.5 ಮಾಹಿತಿ ನಿರ್ವಹಣೆ ವ್ಯವಸ್ಥೆಯಲ್ಲಿನ ಕೊರತೆಗಳು.

ದಾಖಲೆಗಳ ಪರಿಶೀಲನೆಯು (ಆಗಸ್ಟ್‌ನಿಂದ ಡಿಸೆಂಬರ್ 2021) ಯೋಜನೆಗೆ ಯಾವುದೇ ನಿರ್ದಿಷ್ಟ ನಿರ್ವಹಣಾ ಮಾಹಿತಿ ವ್ಯವಸ್ಥೆ (ಎಂಐಎಸ್) ಇಲ್ಲ ಎಂದು ತೋರಿಸಿದೆ. ಬದಲಿಗೆ, ಯುಎಲ್.ಬಿ ಯೋಜನೆಗಳನ್ನು ಮೇಲ್ವಿಚಾರಣೆ ಮಾಡಲು ಬಳಸಲಾಗುವ ಕರ್ನಾಟಕ ಮುನ್ಸಿಪಲ್ ಡೇಟಾ ಸೊಸೈಟಿಯ (ಕೆ.ಎಂ.ಡಿ.ಎಸ್) ಸಾಮಾನ್ಯ ಅಪ್ಲಿಕೇಶನ್ ಅನ್ನು ಈ ಯೋಜನೆಗೂ ಬಳಸಿಕೊಳ್ಳಲಾಗಿದೆ .

ಯೋಜನೆಯ ನಿಧಿಯ ಬಳಕೆಯಲ್ಲಿ ದಕ್ಷತೆ/ಪರಿಣಾಮಕಾರಿತ್ವವನ್ನು ಮೇಲ್ವಿಚಾರಣೆ ಮಾಡಲು ಮತ್ತು ಖಾತ್ರಿಪಡಿಸಿಕೊಳ್ಳಲು ಎಂ.ಐ.ಎಸ್.ನಲ್ಲಿ ವಿಶ್ವಾಸಾರ್ಹವಲ್ಲದಂತಹ ಈ ಕೆಳಗಿನ ಲೋಪಗಳಿವೆ ಎಂದು ಲೆಕ್ಕಪರಿಶೋಧನೆ ಗಮನಿಸಿದೆ :

i) ಮ.ಪಾಗಳಲ್ಲಿ ಲಭ್ಯವಿರುವ ದತ್ತಾಂಶದೊಂದಿಗೆ ಎಂ ಐ ಎಸ್ ದತ್ತಾಂಶವನ್ನು ತಾಳೆ ಮಾಡಲು ಮತ್ತು ಅದನ್ನು ಮೌಲ್ಯೀಕರಿಸಲು ಯಾವುದೇ ವ್ಯವಸ್ಥೆ ಇರಲಿಲ್ಲ. ಮ.ಪಾಗಳು ವರದಿ ಮಾಡಿದ ದತ್ತಾಂಶದ ನಿಖರತೆಯನ್ನು ಖಚಿತಪಡಿಸಿಕೊಳ್ಳಲು ಮಾದರಿ ಪರಿಶೀಲನೆಯ ಯಾವುದೇ ಕಾರ್ಯವಿಧಾನವೂ ಇರಲಿಲ್ಲ.

ii) ಎಂ.ಐ.ಎಸ್ ಇಂದಿನ ದಿನಾಂಕದ ಪ್ರಗತಿಯನ್ನು ಒದಗಿಸುತ್ತದೆ ಆದರೆ ಅದು ವರ್ಷವಾರು ವರದಿಗಳಿಗೆ ಅವಕಾಶವನ್ನು ಹೊಂದಿಲ್ಲ. ವಿವಿಧ ವರ್ಗದ ಬಳಕೆದಾರರಿಗೆ ಕಸ್ಟಮೈಸ್ ಮಾಡಿದ ವರದಿಗಳನ್ನು ರಚಿಸಲು ಮತ್ತು ಪ್ರಕ್ರಿಯೆಗೊಳಿಸಿದ ಮತ್ತು ನಿರ್ವಹಿಸಿದ ಎಲ್ಲಾ ವಹಿವಾಟುಗಳ ಆಡಿಟ್ ಟ್ರಯಲ್ ಅನ್ನು ಒದಗಿಸಲು ಯಾವುದೇ ಮಾರ್ಗ ಇರಲಿಲ್ಲ .

ರಾಜ್ಯ ಸರ್ಕಾರವು, ಪರಿಣಾಮಕಾರಿ ಮೇಲ್ವಿಚಾರಣೆಗಾಗಿ ಕೆ.ಎಂ.ಡಿ.ಎಸ್.ಮತ್ತು ಡಿ.ಯು.ಡಿ.ಸಿಗಳಿಗೆ ಸೂಚನೆಯನ್ನು ನೀಡಲಾಗುವುದು ಎಂದು ಹೇಳಿದೆ (ಏಪ್ರಿಲ್ 2022).

## 4.6 ಆಂತರಿಕ ನಿಯಂತ್ರಣ

ಯುಡಿಡಿ/ಡಿಎಂಎ ಅಥವಾ ಪರೀಕ್ಷಾ-ತನಿಖೆಗೆ ಒಳಪಟ್ಟ ಮ.ಪಾಗಳು ಯೋಜನೆಯ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡಲು ಆಂತರಿಕ ತಪಾಸಣೆ ಕಾರ್ಯವಿಧಾನವನ್ನು ಸ್ಥಾಪಿಸಿಲ್ಲ.

ರಾಜ್ಯ ಸರ್ಕಾರವು, ಆಂತರಿಕ ಲೆಕ್ಕ ಪರಿಶೋಧನಾ ವಿಭಾಗವನ್ನು ಈಗಾಗಲೇ ಮ.ಪಾ ಮಟ್ಟದಲ್ಲಿ ಸ್ಥಾಪಿಸಲಾಗಿದೆ ಮತ್ತು ಯುಡಿಡಿ/ಡಿಎಂಎ ಮಟ್ಟದಲ್ಲಿ ಪ್ರತ್ಯೇಕ ವಿಭಾಗವನ್ನು ಸ್ಥಾಪಿಸಲಾಗುವುದು ಎಂದು ಹೇಳಿದೆ (ಏಪ್ರಿಲ್ 2022). ಆದಾಗ್ಯೂ, ಪರೀಕ್ಷಾ-ತನಿಖೆಗೆ ಒಳಪಟ್ಟ ನಾಲ್ಕು ಮ.ಪಾ ಗಳಲ್ಲಿ ಯಾವುದೇ ಆಂತರಿಕ ಲೆಕ್ಕಪರಿಶೋಧನಾ ವಿಭಾಗವು ಕಾರ್ಯನಿರ್ವಹಿಸುತ್ತಿಲ್ಲ ಎಂದು ಲೆಕ್ಕಪರಿಶೋಧನೆ ಗಮನಿಸಿದೆ . ಹೀಗಾಗಿ, ಯೋಜನಾ ದಾಖಲೆಗಳಿಗೆ ಕೆಲವು ಪೂರ್ವಭಾವಿ ಪರಿಶೀಲನೆಗಳನ್ನು ಅನ್ವಯಿಸಲು ಮತ್ತು ಅಗತ್ಯವಿರುವಲ್ಲಿ ಸರಿಪಡಿಸುವ ಕ್ರಮವನ್ನು ಸೂಚಿಸಲು ಯಾವುದೇ ಕಾರ್ಯವಿಧಾನವಿರಲಿಲ್ಲ.

### 4.7 ಪರಿಣಾಮದ ಮೌಲ್ಯಮಾಪನದ ಅನುಪಸ್ಥಿತಿ ಮತ್ತು ಉತ್ತಮ ಕಾರ್ಯಕ್ಷಮತೆಗಾಗಿ ಪ್ರೋತ್ಸಾಹವನ್ನು ನೀಡದಿರುವುದು.

ಯೋಜನಾ ಮಾರ್ಗಸೂಚಿಗಳ ಕಂಡಿಕೆ 25ರ ಪ್ರಕಾರ, ಉತ್ತಮ ಗುಣಮಟ್ಟದ ಕೆಲಸಕ್ಕಾಗಿ ಮತ್ತು ಯೋಜನೆಯಡಿಯಲ್ಲಿ ಕೆಲಸಗಳನ್ನು ಸಕಾಲಿಕವಾಗಿ ಪೂರ್ಣಗೊಳಿಸಲು ಮ.ಪಾ ಗಳಿಗೆ ಪ್ರೋತ್ಸಾಹವನ್ನು ನೀಡಲಾಗುವುದು. ಈ ನಿಟ್ಟಿನಲ್ಲಿ, ಡಿಎಂಎ ಪ್ರತಿ ಹಣಕಾಸು ವರ್ಷದಲ್ಲಿ ಮ.ಪಾಗಳ ಹೆಸರನ್ನು ಶಿಫಾರಸು ಮಾಡಬೇಕಾಗಿತ್ತು ಮತ್ತು ಮೊತ್ತವನ್ನು ಎಸ್ಎಫ್‌ಸಿ (ಪ್ರೋತ್ಸಾಹ) ಅನುದಾನದಿಂದ ಪಾವತಿಸಬೇಕಾಗಿತ್ತು. ಮೂರು ವರ್ಷಗಳ (2014–15 ರಿಂದ 2016–17) ನಿಯೋಜಿತ ಯೋಜನಾ ಅವಧಿಯನ್ನು ಪೂರ್ಣಗೊಳಿಸಿದ ನಂತರ, ಮಾನ್ಯ ಮುಖ್ಯಮಂತ್ರಿಗಳು ಮೂರು ಅತ್ಯುತ್ತಮ ಮ.ಪಾಗಳಿಗೆ ಪ್ರಶಸ್ತಿಯನ್ನು ನೀಡಲಿದ್ದಾರೆ ಎಂದು ಮಾರ್ಗಸೂಚಿಗಳು ಷರತ್ತು ವಿಧಿಸಿವೆ.

ಯೋಜನೆಯಡಿ ಕೈಗೊಳ್ಳಲಾದ ಬಹುಪಾಲು ಕಾಮಗಾರಿಗಳನ್ನು ವಿಂಗಡಣೆ ಮಾಡಲಾಗಿದೆ ಮತ್ತು ನಿಗದಿತ ಹಣಕಾಸಿನ ಮಿತಿ ₹ 50 ಲಕ್ಷಕ್ಕಿಂತ ಕಡಿಮೆಯಾಗಿದೆ, ಆದ್ದರಿಂದ ನಗರ ಮೂಲಸೌಕರ್ಯಗಳ ಸಮಗ್ರ ಅಭಿವೃದ್ಧಿಯ ಮೌಲ್ಯಮಾಪನ ಕಾರ್ಯಸಾಧ್ಯವಾಗಿರಲಿಲ್ಲ. ಸರ್ಕಾರ/ಡಿಎಂಎ/ಮ.ಪಾ ಸಹ ಯೋಜನೆಯ ಯಾವುದೇ ಪರಿಣಾಮದ ಮೌಲ್ಯಮಾಪನವನ್ನು ನಡೆಸಿಲ್ಲ ಎಂದು ಲೆಕ್ಕಪರಿಶೋಧನೆಯು ಗಮನಿಸಿತು (ಆಗಸ್ಟ್‌ನಿಂದ ಡಿಸೆಂಬರ್ 2021). ಅವರು ಯೋಜನೆಯಡಿಯಲ್ಲಿ ಕೈಗೊಳ್ಳಬೇಕಾದ ಕಾಮಗಾರಿಗಳಿಂದ ನಗರದ ಬೆಳವಣಿಗೆಯನ್ನು ಸಾಧಿಸಲು ನಿರೀಕ್ಷಿತ ಯಾವುದೇ ಕನಿಷ್ಠ ಮಿತಿ ಅಳತೆಯನ್ನು ಗುರುತಿಸಲಿಲ್ಲ ಮತ್ತು ರಚಿಸಲಾದ ಸ್ವತ್ತುಗಳ ಬಳಕೆಯನ್ನು ನಿರ್ಣಯಿಸಲು ಯಾವುದೇ ವಿಧಾನವನ್ನು ಸೂಚಿಸಲಿಲ್ಲ. ಇದರ ಪರಿಣಾಮವಾಗಿ, ಯೋಜನೆಗೆ ಮಾಡಬೇಕಾದ ಸುಧಾರಣೆಗಳು/ಕೋರ್ಸ್ ತಿದ್ದುಪಡಿಗಳ ಬಗ್ಗೆ ನಿರ್ಧಾರಗಳನ್ನು ತೆಗೆದುಕೊಳ್ಳಲು ಸರ್ಕಾರವು ವಿಶ್ವಾಸಾರ್ಹ ಡೇಟಾವನ್ನು ಹೊಂದಿಲ್ಲ. ಇದರಿಂದ, 2014–15 ರಿಂದ 2020–21 ರ ಅವಧಿಯಲ್ಲಿ ಯಾವುದೇ ಮ.ಪಾಗೆ ಪ್ರೋತ್ಸಾಹಕ ಮೊತ್ತವನ್ನು ನೀಡಲಾಗಿಲ್ಲ. ಸ್ಪಷ್ಟವಾಗಿ, ಉತ್ತಮ ಕಾರ್ಯಕ್ಷಮತೆಯನ್ನು ಗುರುತಿಸುವ ಉದ್ದೇಶವನ್ನು ಸಾಧಿಸಲಾಗಿಲ್ಲ.

ಪರಿಣಾಮದ ಮೌಲ್ಯಮಾಪನವನ್ನು ಭವಿಷ್ಯದಲ್ಲಿ ನಡೆಸಲಾಗುವುದು ಎಂದು ರಾಜ್ಯ ಸರ್ಕಾರವು ಹೇಳಿದೆ (ಏಪ್ರಿಲ್ 2022). ಪರಿಣಾಮದ ಮೌಲ್ಯಮಾಪನವನ್ನು ಯಾವ ಅವಧಿಯೊಳಗೆ ನಡೆಸಲಾಗುವುದು ಎಂಬುದನ್ನು ಅದು ನಿರ್ದಿಷ್ಟಪಡಿಸದ ಕಾರಣ ಸರ್ಕಾರದ ಉತ್ತರವು ಬದ್ಧವಾಗಿಲ್ಲ.

#### ತೀರ್ಮಾನ

ಡಿ.ಎಲ್.ಸಿಗಳು ಮತ್ತು ಡಿಎಂಎ/ಸರ್ಕಾರಿ ಮಟ್ಟದಲ್ಲಿ ನಡೆಸಬೇಕಾದ ನಿಗದಿತ ಪರಿಶೀಲನಾ ಸಭೆಯಗಳ ಕೊರತೆಯಿಂದ ಮೇಲ್ವಿಚಾರಣೆ ಪರಿಣಾಮಕಾರಿಯಾಗಿಲ್ಲ.

ಪಿ.ಎಂ.ಸಿಗಳು ಸಲ್ಲಿಸಿದ ಗುಣಮಟ್ಟ ಪರಿಶೀಲನಾ ವರದಿಗಳಲ್ಲಿ ವ್ಯತ್ಯಾಸಗಳನ್ನು ಗಮನಿಸಲಾಗಿದೆ, ಉದಾಹರಣೆಗೆ ದಿನಾಂಕಗಳು / ಕಾರ್ಯಗತಗೊಳಿಸಿದ ಕಾಮಗಾರಿಗಳ ಪ್ರಮಾಣದಲ್ಲಿ ವ್ಯತ್ಯಾಸ, ಪರಿಶೀಲಿಸಿದ ಕಾಮಗಾರಿಗಳ ಗುಣಮಟ್ಟವನ್ನು ಪ್ರಮಾಣೀಕರಿಸದಿರುವುದು ಇತ್ಯಾದಿ .

ಅಸಮರ್ಪಕ ಲೆಕ್ಕಪತ್ರ ನಿರ್ವಹಣೆ, ದಾಖಲೆಗಳ ನಿರ್ವಹಣೆ ಮಾಡದಿರುವುದು ಮತ್ತು ಸಮನ್ವಯದ ಕೊರತೆ ಕಾರಣ ವಿವಿಧ ಮೂಲಗಳಲ್ಲಿ ಪ್ರದರ್ಶಿಸಲಾದ ವೆಚ್ಚದಲ್ಲಿ ಅಸಮಂಜಸತೆಗಳಂತಹ ವ್ಯತ್ಯಾಸಗಳಿಂದಾಗಿ ಹಣಕಾಸು ವರದಿಗಾರಿಕೆಯು ಸಹ ಕೊರತೆ ಕಂಡುಬಂದಿತ್ತು.

ದತ್ತಾಂಶ ಅಸಂಗತತೆಗಳಿಂದಾಗಿ ಯೋಜನೆಯ ಎಂ.ಐ.ಎಸ್ ವಿಶ್ವಾಸಾರ್ಹವಾಗಿಲ್ಲ. ಪರೀಕ್ಷಾ–ತನಿಖೆಗೆ ಒಳಪಟ್ಟ ಮ.ಪಾಗಳು ಮತ್ತು ಡಿಎಂಎಯ ಆಂತರಿಕ ಲೆಕ್ಕಪರಿಶೋಧನೆಯು ಕ್ರಿಯಾತ್ಮಕವಾಗಿಲ್ಲ.

ಸರ್ಕಾರ/ಡಿಎಂಎ ಅಳೆಯಬಹುದಾದ ಸೂಚ್ಯಂಕಗಳನ್ನು ಗುರುತಿಸುವ ಮೂಲಕ ಯೋಜನೆಯ ಪ್ರಭಾವದ ಮೌಲ್ಯಮಾಪನವನ್ನು ನಡೆಸಲಿಲ್ಲ ಮತ್ತು ಯೋಜನಾ ಮಾರ್ಗಸೂಚಿಗಳಲ್ಲಿ ಸೂಚಿಸಿದಂತೆ ಉತ್ತಮ ಕಾರ್ಯಕ್ಷಮತೆಯ ಮ.ಪಾಗಳನ್ನು ಪ್ರೋತ್ಸಾಹಿಸಲಿಲ್ಲ .

**ಶಿಫಾರಸುಗಳು**

- ***ಗುಣಮಟ್ಟದ ತಪಾಸಣಾ ವರದಿಗಳ ಮೂಲಕ ದೃಢವಾದ ವರದಿಯನ್ನು ಸ್ಥಾಪಿಸುವುದು, ವಿಶ್ವಾಸಾರ್ಹ ಎಂಐ.ಎಸ್ ಅನ್ನು ಸ್ಥಾಪಿಸುವುದು, ಆಂತರಿಕ ಲೆಕ್ಕಪರಿಶೋಧನೆಯನ್ನು ರಚಿಸುವುದು ಮತ್ತು ವಿವಿಧ ಹಂತಗಳಲ್ಲಿ ನಿಗದಿತ ಪರಿಶೀಲನಾ ಸಭೆಗಳನ್ನು ನಡೆಸುವ ಮೂಲಕ ಮೇಲ್ವಿಚಾರಣಾ ಕಾರ್ಯವಿಧಾನವನ್ನು ಬಲಪಡಿಸಬೇಕು.***

- ***ಮಹಾನಗರ ಪಾಲಿಕೆಗಳ ಕಾರ್ಯಕ್ಷಮತೆಯನ್ನು ನಿರ್ಣಯಿಸಲು ಸರ್ಕಾರವು ಅಳೆಯಬಹುದಾದ ಸೂಚ್ಯಂಕಗಳನ್ನು ಗುರುತಿಸಬೇಕು ಮತ್ತು ಯೋಜನೆಯ ಪ್ರಭಾವದ ಮೌಲ್ಯಮಾಪನವನ್ನು ನಡೆಸಬೇಕು.***



**ಬೆಂಗಳೂರು** — **(ಶಾಂತಿ ಪ್ರಿಯಾ ಎಸ್)**

**ದಿ** — **ಪ್ರಧಾನ ಮಹಾಲೇಖಪಾಲಕರು (ಆಡಿಟ್–II)**

**ಕರ್ನಾಟಕ**

**ಪ್ರತಿಸಹಿ**



**ನವ ದೆಹಲಿ** — **(ಗಿರೀಶ್ ಚಂದ್ರ ಮುರ್ಮು)**

**ದಿ** — **ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು**

# ಅನುಬಂಧಗಳು

**ಅನುಬಂಧ 1.1**

**(ಉಲ್ಲೇಖ: ಕಂಡಿಕೆ 1.1/ಪುಟ 2)**

**ಲೆಕ್ಕಪರಿಶೋಧನೆ ಆಕ್ಷೇಪಣೆಗಳ ಸಾರಾಂಶ ಮತ್ತು ಹಿಂದಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಸಮಿತಿಯ ಶಿಫಾರಸುಗಳು (*ನಗರೋತ್ಥಾನ* ಹಂತ–I)**

| ಕ್ರ. ನಂ. | ಕಂಡಿಕೆ ಸಂಖ್ಯೆ. | ಆಕ್ಷೇಪಣೆಗಳು ಸಂಕ್ಷಿಪ್ತವಾಗಿ | ಸಮಿತಿಯ ಶಿಫಾರಸುಗಳು |
|---|---|---|---|
| 1 | 4.2.8 | ಅನಧಿಕೃತ ಉದ್ದೇಶಗಳಿಗಾಗಿ ಬಡ್ಡಿಯ ಬಳಕೆ | ಅನಧಿಕೃತ ಉದ್ದೇಶಗಳಿಗೆ ಬಡ್ಡಿ ಬಳಸಿಕೊಂಡ ಡಿಸಿ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು . ಕ್ರಮ ಕೈಗೊಂಡಿರುವ ವರದಿಯನ್ನು ಸಮಿತಿಗೆ ಶೀಘ್ರವೇ ಸಲ್ಲಿಸುವಂತೆ ಮುಖ್ಯ ಕಾರ್ಯದರ್ಶಿಗೆ ಸೂಚಿಸಲಾಗಿದೆ. |
| 2 | 4.2.11 | ಕಾರ್ಯಗತಗೊಂಡ ರಸ್ತೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮೂಲ ಮಾಹಿತಿಯ ಅಲಭ್ಯತೆ | ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ಕಾಮಗಾರಿ ನಡೆಸಿರುವ ಎಲ್ಲಾ ಅಧಿಕಾರಿಗಳ ವಿರುದ್ಧ ತನಿಖೆ ನಡೆಸಬೇಕು. |
| 3 | 4.2.12 | ಕಾಮಗಾರಿಗಳ ವಿಭಜನೆ | ಉನ್ನತ ಅಧಿಕಾರಿಗಳ ಮಂಜೂರಾತಿ ತಪ್ಪಿಸಲು ಕಾಮಗಾರಿ ವಿಭಜನೆಗೆ ಕಾರಣರಾದವರ ವಿರುದ್ಧ ವಿಚಾರಣೆ ನಡೆಸಬೇಕು. |
| 4 | 4.2.13 | ಅಂದಾಜುಗಳ ತಯಾರಿಕೆಯಲ್ಲಿ ಇತರ ನ್ಯೂನತೆಗಳು | ಅಂದಾಜಿನ ತಯಾರಿಕೆಯಲ್ಲಿ ಲೋಪದೋಷಗಳಿಗೆ ಕಾರಣರಾದವರ ವಿರುದ್ಧ ವಿಚಾರಣೆ ಆರಂಭಿಸಬೇಕು. |
| 5 | 4.2.14 | ಅನಿರೀಕ್ಷಿತ ಮತ್ತು ವಿವಿಧ ವೆಚ್ಚಗಳಿಗೆ ಹೆಚ್ಚುವರಿ ನಿಬಂಧನೆ | ಸಂಬಂಧಪಟ್ಟವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಮತ್ತು ವೈಯಕ್ತಿಕ ಜವಾಬ್ದಾರಿಯನ್ನು ನಿಗದಿಪಡಿಸಬೇಕು. |
| 6 | 4.2.15 | ಕಾಮಗಾರಿಗಳ ನೀಡುವಿಕೆ | ಲೆಕ್ಕಪರಿಶೋಧನೆ ಕೈಗೊಂಡಾಗಲೆಲ್ಲ ಸಂಬಂಧಪಟ್ಟ ದಾಖಲೆಗಳನ್ನು ಲೆಕ್ಕಪರಿಶೋಧನಾ ಅಧಿಕಾರಿಗಳಿಗೆ ಲಭ್ಯವಾಗುವಂತೆ ಮಾಡಬೇಕು. ಕಾಮಗಾರಿ ನೀಡುವಲ್ಲಿ ನಿಯಮ ಉಲ್ಲಂಘಿಸಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. |
| 7 | 4.2.17 | ಗುತ್ತಿಗೆದಾರರ ಆಯ್ಕೆಯಲ್ಲಿ ಮಾನದಂಡಗಳ ಅನಿಯಮಿತ ಅಳವಡಿಕೆ | ಈ ಅಕ್ರಮಕ್ಕೆ ಕಾರಣರಾದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. |
| 8 | 4.2.21.6 | ಅಪೂರ್ಣ ರಸ್ತೆ ಕಾಮಗಾರಿ | ಲೋಪಕ್ಕೆ ಕಾರಣರಾದ ಅಧಿಕಾರಿಗಳಿಂದ ₹ 11.36 ಲಕ್ಷ ವಸೂಲಿ ಮಾಡಬೇಕು. |

**ಅನುಬಂಧ 1.1 (ಮುಕ್ತಾಯ)**

| ಕ್ರ. ಸಂ. | ಕಂಡಿಕೆ ಸಂಖ್ಯೆ. | ಆಕ್ಷೇಪಣೆಗಳು ಸಂಕ್ಷಿಪ್ತವಾಗಿ | ಸಮಿತಿಯ ಶಿಫಾರಸುಗಳು |
|---|---|---|---|
| 9 | 4.2.22.1 | ಮೂರನೇ ವ್ಯಕ್ತಿಯ ಸಲಹೆಗಾರರ ಆಯ್ಕೆಯಲ್ಲಿ ಅಕ್ರಮಗಳು | ಮೂರನೇ ವ್ಯಕ್ತಿಯ ಸಲಹೆಗಾರರನ್ನು ಆಯ್ಕೆಮಾಡಲು ಅಕ್ರಮಗಳು ನಡೆಯದಂತೆ ಸರಿಯಾದ ಕಾಳಜಿಯನ್ನು ವಹಿಸಿಬೇಕು. |
| 10 | 4.2.22.2 | ಮೂರನೇ ವ್ಯಕ್ತಿಯ ತಪಾಸಣೆಯ ಅನಿಯಮಿತ ನಿಗದಿಪಡಿಸುವಿಕ್ಕೆ. | |
| 11 | 4.2.23 | ಭದ್ರತಾ ಠೇವಣಿಯ ಅನಿಯಮಿತ ಮರುಪಾವತಿ | ಗುತ್ತಿಗೆ ಷರತ್ತನ್ನು ತಿದ್ದಲು ಕಾರಣರಾದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಹಾಗೂ ಎರಡನೇ ವರ್ಷದಿಂದ ತಗುಲಿದ ರಸ್ತೆ ನಿರ್ವಹಣೆ ವೆಚ್ಚವನ್ನು ಗುತ್ತಿಗೆದಾರರಿಂದ ವಸೂಲಿ ಮಾಡಬೇಕು. |
| 12 | 4.2.24 | ರಾಯಧನದ ಅಲ್ಪ ಸಂದಾಯ | ಈ ನಿಟ್ಟಿನಲ್ಲಿ ಅಧಿಕಾರಿಗಳ ವಿರುದ್ಧ ವೈಯಕ್ತಿಕ ಜವಾಬ್ದಾರಿಯನ್ನು ನಿಗದಿಪಡಿಸಬೇಕು ಮತ್ತು ರಾಯಧನದ ಶುಲ್ಕವನ್ನು ವಸೂಲಿ ಮಾಡಲು ಅಗತ್ಯ ಕ್ರಮವನ್ನು ಪ್ರಾರಂಭಿಸಬೇಕು. |
| 13 | 4.2.27 | ಸಕ್ಷಮ ಪ್ರಾಧಿಕಾರದ ಅನುಮೋದನೆ ಇಲ್ಲದೆ ಪಾವತಿ | ಅನಧಿಕೃತವಾಗಿ ಹಣ ಪಾವತಿ ಮಾಡಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಅಧಿಕಾರಿಗಳು ಮುಂದಿನ ದಿನಗಳಲ್ಲಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಸಮಿತಿ ಸೂಚಿಸಿದೆ. |
| 14 | 4.2.28 | ಪರಿಹಾರ ಹಾನಿಗಳನ್ನು ವಿಧಿಸದಿರುವುದು | |
| 15 | 4.2.29 | ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ | |

**ಆಧಾರ:** ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯ ಶೀಫಾರಸು.

**ಅನುಬಂಧ 1.2**

**(ಉಲ್ಲೇಖ: ಕಂಡಿಕೆ 1.5/ಪುಟ 4)**

**ಪರೀಕ್ಷಾ-ತನಿಖೆಗೆ ಒಳಪಟ್ಟ ಕಾಮಗಾರಿಗಳ ವರ್ಗವಾರು ಮತ್ತು ಮಹಾನಗರ ಪಾಲಿಕೆವಾರು ವಿವರಗಳು**

| ಕಾಮಗಾರಿಗಳ ವರ್ಗ | ಒಟ್ಟು | | | ಮಾದರಿ ಆಯ್ಕೆ ಮಾಡಲಾಗಿದ | | | ಪರೀಕ್ಷಾ-ತನಿಖೆಗೆ ಒಳಪಟ್ಟ ಶೇ. | | |
|---|---|---|---|---|---|---|---|---|---|
| | ಪ್ಯಾಕೇಜ್‌ಗಳ ಸಂಖ್ಯೆ | ಕಾಮಗಾರಿಗಳ ಸಂಖ್ಯೆ | ವೆಚ್ಚ (₹ ಲಕ್ಷದಲ್ಲಿ) | ಪ್ಯಾಕೇಜ್‌ಗಳ ಸಂಖ್ಯೆ | ಕಾಮಗಾರಿಗಳ ಸಂಖ್ಯೆ | ವೆಚ್ಚ (₹ ಲಕ್ಷದಲ್ಲಿ) | ಪ್ಯಾಕೇಜುಗಳು | ಕಾಮಗಾರಿಗಳು | ವೆಚ್ಚ |
| **ಬಳ್ಳಾರಿ** | | | | | | | | | |
| I | 34 | 84 | 3,017 | 6 | 21 | 603 | 18 | 25 | 20 |
| II | 4 | 4 | 75 | 1 | 1 | 75 | 25 | 25 | 100 |
| III | 0 | 0 | 0 | 0 | 0 | 0 | – | – | – |
| IV | 0 | 0 | 0 | 0 | 0 | 0 | – | – | – |
| V | 9 | 24 | 874 | 2 | 3 | 409 | 22 | 13 | 47 |
| **ಒಟ್ಟು (ಬಳ್ಳಾರಿ)** | 47 | 112 | 3,966 | 9 | 25 | 1,087 | 19 | 22 | 27 |
| **ಮೈಸೂರು** | | | | | | | | | |
| I | 48 | 124 | 5,320 | 8 | 19 | 991 | 17 | 15 | 19 |
| II | 10 | 10 | 936 | 8 | 8 | 663 | 80 | 80 | 71 |
| III | 13 | 55 | 1,397 | 3 | 16 | 348 | 23 | 29 | 25 |
| IV | 0 | 0 | 0 | 0 | 0 | 0 | – | – | – |
| V | 7 | 23 | 737 | 3 | 11 | 237 | 43 | 48 | 32 |
| **ಒಟ್ಟು (ಮೈಸೂರು)** | 78 | 212 | 8,390 | 22 | 54 | 2,239 | 28 | 25 | 27 |
| **ತುಮಕೂರು** | | | | | | | | | |
| I | 40 | 159 | 5,719 | 9 | 32 | 1,383 | 23 | 20 | 24 |
| II | 2 | 6 | 213 | 1 | 3 | 90 | 50 | 50 | 42 |
| III | 0 | 0 | 0 | 0 | 0 | 0 | – | – | – |
| IV | 0 | 0 | 0 | 0 | 0 | 0 | – | – | – |
| V | 4 | 19 | 690 | 2 | 8 | 200 | 50 | 42 | 29 |
| **ಒಟ್ಟು (ತುಮಕೂರು)** | 46 | 184 | 6,622 | 12 | 43 | 1,673 | 26 | 23 | 25 |

**ಅನುಬಂಧ 1.2 (ಮುಕ್ತಾಯ)**

| ಕಾಮಗಾರಿಗಳ ವರ್ಗ | ಒಟ್ಟು | | | ಮಾದರಿ ಆಯ್ಕೆ ಮಾಡಲಾಗಿದ | | | ಪರೀಕ್ಷಾ-ತನಿಖೆಗೆ ಒಳಪಟ್ಟ ಶೇ. | | |
|---|---|---|---|---|---|---|---|---|---|
| | ಪ್ಯಾಕೇಜ್‌ಗಳ ಸಂಖ್ಯೆ | ಕಾಮಗಾರಿಗಳ ಸಂಖ್ಯೆ | ವೆಚ್ಚ (₹ ಲಕ್ಷದಲ್ಲಿ) | ಪ್ಯಾಕೇಜ್‌ಗಳ ಸಂಖ್ಯೆ | ಕಾಮಗಾರಿಗಳ ಸಂಖ್ಯೆ | ವೆಚ್ಚ (₹ ಲಕ್ಷದಲ್ಲಿ) | ಪ್ಯಾಕೇಜುಗಳು | ಕಾಮಗಾರಿಗಳು | ವೆಚ್ಚ |
| **ವಿಜಯಪುರ** | | | | | | | | | |
| I | 39 | 100 | 4,438 | 4 | 8 | 697 | 10 | 8 | 16 |
| II | 0 | 0 | 0 | 0 | 0 | 0 | – | – | – |
| III | 5 | 10 | 235 | 1 | 3 | 25 | 20 | 30 | 11 |
| IV | 6 | 6 | 423 | 2 | 5 | 151 | 33 | 83 | 36 |
| V | 6 | 19 | 369 | 2 | 7 | 124 | 33 | 37 | 34 |
| ಒಟ್ಟು (ವಿಜಯಪುರ) | 56 | 135 | 5,465 | 9 | 23 | 997 | 16 | 17 | 18 |
| **ಒಟ್ಟು ಮೊತ್ತ** | **227** | **643** | **24,443** | **52** | **145** | **5,996** | **23** | **23** | **25** |

ಆಧಾರ: ಪರೀಕ್ಷಾ-ತನಿಖೆಗೆ ಒಳಪಟ್ಟ ಮ.ಪಾಗಳ ಪ್ರಗತಿ ವರದಿಗಳು

**ಅನುಬಂಧ 2.1**

**(ಉಲ್ಲೇಖ: ಕಂಡಿಕೆ 2.1/ಪುಟ 8)**

**ಪರೀಕ್ಷಾ–ತನಿಖೆಗೆ ಒಳಪಟ್ಟ ಮ.ಪಾಗಳಲ್ಲಿ ಕ್ರಿಯಾ ಯೋಜನೆಗಳ ಸಲ್ಲಿಕೆ ವಿವರಗಳನ್ನು ತೋರಿಸುವ ಹೇಳಿಕೆ**

| ಕ್ರ. ಸಂ. | ಮ.ನಗರ ಪಾಲಿಕೆಗಳು | ಡಿಎಲ್‌ಸಿಯಿಂದ ಅನುಮೋದನೆಯ ದಿನಾಂಕ | ಡಿಎಂಎಗೆ ಕಳಿಸುವ ದಿನಾಂಕ | ಯುಡಿಡಿಗೆ ಕಳಿಸುವ ದಿನಾಂಕ | ಯುಡಿಡಿಯಿಂದ ಅನುಮೋದನೆಯ ದಿನಾಂಕ |
|---|---|---|---|---|---|
| 1. | ಬಳ್ಳಾರಿ | 18.10.2013 | 28–11–2013 | 27–12–2013 | 14–02–2014 |
| 2. | ಮೈಸೂರು | 10–02–2014 | 30–04–2014 | 26–06–2014 | 18–07–2014 |
| 3. | ತುಮಕೂರು | 22–12–2013 | 28–12–2013 | 09–01–2014 | 25–02–2014 |
| 4. | ವಿಜಯಪುರ | 13–12–2013 | 06–01–2014 | 17–02–2014 | 15–11–2014 |

ಆಧಾರ: ಡಿಎಂಎ ಒದಗಿಸಿದ ಮಾಹಿತಿ

**ಅನುಬಂಧ 2.2**

**(ಉಲ್ಲೇಖ: ಕಂಡಿಕೆ 2.2/ಪುಟ 9)**

**ಪರೀಕ್ಷಾ-ತನಿಖೆಗೆ ಒಳಪಟ್ಟ ಮ.ಪಾಗಳಲ್ಲಿ ಮೂಲ ಕ್ರಿಯಾ ಯೋಜನೆಗಳಲ್ಲಿ ಸೇರಿಸಲಾದ ಆದರೆ ತೆಗೆದುಕೊಳ್ಳಲಾಗದ ಕಾಮಗಾರಿಗಳ ವರ್ಗವಾರು ವಿವರಗಳು**

**(₹ ಲಕ್ಷದಲ್ಲಿ )**

| ಕಾಮಗಾರಿಗಳ ವರ್ಗ | ಬಳ್ಳಾರಿ | | ಮೈಸೂರು | | ತುಮಕೂರು | | ವಿಜಯಪುರ | | ಒಟ್ಟು | |
|---|---|---|---|---|---|---|---|---|---|---|
| | ಕಾಮಗಾರಿಗಳ ಸಂಖ್ಯೆ | ಅಂದಾಜು ವೆಚ್ಚ | ಕಾಮಗಾರಿಗಳ ಸಂಖ್ಯೆ | ಅಂದಾಜು ವೆಚ್ಚ | ಕಾಮಗಾರಿಗಳ ಸಂಖ್ಯೆ | ಅಂದಾಜು ವೆಚ್ಚ | ಕಾಮಗಾರಿಗಳ ಸಂಖ್ಯೆ | ಅಂದಾಜು ವೆಚ್ಚ | ಕಾಮಗಾರಿಗಳ ಸಂಖ್ಯೆ | ಅಂದಾಜು ವೆಚ್ಚ |
| I | 10 | 813 | 2 | 70 | 2 | 74 | 3 | 286 | 17 | 1,243 |
| II | 3 | 640 | 14 | 1,124 | 49 | 1,500 | 12 | 1,082 | 78 | 4,346 |
| III | – | – | 7 | 207 | – | – | 7 | 1,289 | 14 | 1,496 |
| IV | 13 | 500 | 3 | 500 | 9 | 500 | – | – | 25 | 1,500 |
| V | 2 | 75 | 1 | 30 | 2 | 195 | 2 | 250 | 7 | 550 |
| **ಒಟ್ಟು** | **28** | **2,028** | **27** | **1,931** | **62** | **2,269** | **24** | **2,907** | **141** | **9,135** |

ಆಧಾರ: ಮ.ಪಾಗಳ ಮೂಲ ಕ್ರಿಯಾ ಯೋಜನೆಗಳು ಮತ್ತು ಪ್ರಗತಿ ವರದಿಗಳು

**ಅನುಬಂಧ 2.3**

**(ಉಲ್ಲೇಖ: ಕಂಡಿಕೆ 2.6/ಪುಟ 14)**

**ಇತರ ಯೋಜನೆಗಳು/ಕಮಗಾರಿಗಳಿಗಾಗಿ ಹಣವನ್ನು ತಿರುಗಿಸಲಾಗಿದೆ ಎಂದು ತೋರಿಸುವ ಹೇಳಿಕೆ**

**(₹ ಕೋಟಿಯಲ್ಲಿ)**

| ಕ್ರ. ಸಂ. | ಮ.ಪಾ ಹೆಸರು | ಕೆಲಸದ ಹೆಸರು | ಇತರೆ ಯೋಜನೆ/ಕಾಮಗಾರಿಗಳ ಹೆಸರು | ಮ.ಪಾ ಮೂಲಕ ಪಾವತಿಸಿದ ಮೊತ್ತ |
|---|---|---|---|---|
| 1 | ಬಳ್ಳಾರಿ | ಅಲ್ಲಿಪುರ ಪಂಪ್‌ಹೌಸ್‌ನಿಂದ ಅಲ್ಲಿಪುರ ಜಲಾಶಯಕ್ಕೆ ಚೈನ್ನೇಜ್ 2250 ರಿಂದ 2900 ವರೆಗೆ ಪೈಪ್‌ಲೈನ್ ಹಾಕುವುದು ಮತ್ತು 250 ಎಚ್‌ಪಿ ಮೋಟಾರ್‌ನ 3 ಸಂಖ್ಯೆ ಅನ್ನು ಅಳವಡಿಸುವುದು. | 13ನೇ /14ನೇ ಎಫ್.ಸಿ | 4.08 |
| 2 | | ಅಮೃತ್ ಯೋಜನೆಗೆ ಮ.ಪಾ ಕೊಡುಗೆ | ಅಮೃತ್ | 16.43 |
| 3 | | ಬಳ್ಳಾರಿ ನಗರದ ದೂರದ ಪ್ರದೇಶಗಳಿಗೆ ಯುಜಿಡಿ ವಿಸ್ತರಣೆ ಕಾಮಗಾರಿ | ಅಮೃತ್ | 15.00 |
| 4 | ತುಮಕೂರು | ಭದ್ರಮ್ಮ ವೃತ್ತದಿಂದ ಶೆಟ್ಟಿಹಳ್ಳಿ ರೈಲ್ವೆ ಗೇಟ್‌ವರೆಗೆ ಪಿಡಬ್ಲ್ಯುಡಿಯಿಂದ ತಲುಪುವ ರಸ್ತೆ ನಿರ್ಮಾಣ | ಠೇವಣಿ ಕೂಡಿಗೆ ಪಿಡಬ್ಲ್ಯೂಡಿ | 11.00 |
| 5 | | ಅಮೃತ್ ಯೋಜನೆಗೆ ಮ.ಪಾ ಕೊಡುಗೆ | ಅಮೃತ್ | 5.00 |
| 6 | | ನೀರಿನ ಪೂರೈಕೆಗಾಗಿ ಯುಐಡಿಎಸ್‌ಎಸ್‌ಎಂಟಿ ಯೋಜನೆ 24*7 ಕಡೆಗೆ ಠೇವಣಿ ಮೊತ್ತ | ಯುಐಡಿಎಸ್‌ಎಸ್‌ಎಂಟಿ | 12.28 |
| 7 | | ರಾಜೀವ್ ಗಾಂಧಿ ಆವಾಸ್ ಯೋಜನೆಯ (ಆರ್‌ಎವೈ) ಕಡೆಗೆ ಕೊಡಗೆ | ಆರ್‌ಎವೈ | 3.19 |
| 8 | ವಿಜಯಪುರ | ಮಾಸ್ಟರ್ ಪ್ಲಾನ್ ರಸ್ತೆಗಳಿಗೆ ಪರಿಹಾರ | ಮಾಸ್ಟರ್ ಪ್ಲಾನ್ 2006 | 19.86 |
| 9 | | ಅಮೃತ್ ಯೋಜನೆಗೆ ಮ.ಪಾ ಕೊಡುಗೆ | ಅಮೃತ್ | 10.82 |
| 10 | | ಮ.ಪಾಲಿಕೆಯ ಕಚೇರಿ ಕಟ್ಟಡ | ಕಲಬುರ್ಗಿ ಕ್ಯಾಬಿನೆಟ್ ಅನುದಾನಗಳು | 4.14 |
| 11 | | ಭೂತನಾಳ ಕೆರೆಯಲ್ಲಿ 10 ಎಂ.ಎಲ್.ಡಿ ನೀರು ಶುದ್ಧೀಕರಣ ಘಟಕದ ನಿರ್ಮಾಣ | ಕೆಯ್ಯುಡಬ್ಲ್ಯೂಎಸ್‌ಡಿಬಿ | 6.95 |
| | | **ಒಟ್ಟು** | | **108.75** |

ಆಧಾರ: ಮ.ಪಾಗಳು ಒದಗಿಸಿದ ಮಾಹಿತಿ

**ಅನುಬಂಧ 2.4**

**(ಉಲ್ಲೇಖ: ಕಂಡಿಕೆ 2.9.1/ಪುಟ 16)**

**ಬಜೆಟ್ ಅಂದಾಜುಗಳು ಮತ್ತು ಸಾಲ ಮರುಪಾವತಿಗಾಗಿ ಬಿಡುಗಡೆಯಾದ ಮೊತ್ತದ ವಿವರಗಳು**

**(₹ ಕೋಟಿಯಲ್ಲಿ)**

| ಹಣಕಾಸು ವರ್ಷ | ನಗರೋತ್ಥಾನ ಹಂತ–III ಕ್ಕೆ ಬಜೆಟ್ ಹಂಚಿಕೆ | ನಗರೋತ್ಥಾನ ಹಂತ–III ಕ್ಕಾಗಿ ಯುಡಿಡಿ ಬಿಡುಗಡೆ ಮಾಡಿದ ಮೊತ್ತ | ಬಜೆಟ್ ಮೇಲೆ ಹೆಚ್ಚುವರಿ (+) / ಉಳಿತಾಯ (–). | ಶೇಕಡಾ |
|---|---|---|---|---|
| 2016–17 | 5.35 | 0 | (–) 5.35 | (–) 100 |
| 2017–18 | 29.94 | 7.36 | (–) 22.58 | (–) 75 |
| 2018–19 | 34.72 | 20.68 | (–) 14.04 | (–) 40 |
| 2019–20 | 95.57 | 59.18 | (–) 36.39 | (–) 38 |
| 2020–21 | 73.47 | 89.01 | (+) 15.54 | (+) 21 |
| **ಒಟ್ಟು** | **239.05** | **176.23** | (–) **62.82** | (–) **26** |

ಆಧಾರ: ಯುಡಿಡಿ ಮತ್ತು ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿ ಒದಗಿಸಿದ ಮಾಹಿತಿ

**ಅನುಬಂಧ 2.5**

**(ಉಲ್ಲೇಖ: ಕಂಡಿಕೆ 2.9.2/ಪುಟ 17)**

**ಹಂತ–III ರಿಂದ ಹಂತ–II ಕ್ಕೆ ಮೊತ್ತವನ್ನು ಮರುಪೂರಣ ಮಾಡದ ಕಾರಣ ತಪ್ಪಿಸಬಹುದಾದ ಬಡ್ಡಿ ಹೊಣೆಗಾರಿಕೆಯನ್ನು ತೋರಿಸುವ ಹೇಳಿಕೆ (ಮಾರ್ಚ್ 2021)**

**( ₹ ಕೋಟಿಯಲ್ಲಿ)**

| ಕ್ರ. ಸಂ. | ಮರುಪೂರಣ ಮಾಡಬೇಕಾದ ಮೊತ್ತ | ಮರುಪೂರಣದ ವಿವರಗಳು | | | ಬಡ್ಡಿಯ ತಪ್ಪಿಸಬಹುದಾದ ಹೊಣೆಗಾರಿಕೆ | | |
|---|---|---|---|---|---|---|---|
| | | ಮೊತ್ತ | ತಿಂಗಳು | ಬಾಕ್ಕಿ | ತಿಂಗಳುಗಳಲ್ಲಿ ಅವಧಿ | ಬಡ್ಡಿಯ ದರ | ಮೊತ್ತ |
| 1 | 100.00 | 0.00 | – | 100.00 | 3 (ಏಪ್ರಿಲ್ 2017 ರಿಂದ ಜೂನ್ 2017) | 1.70 | 0.43 |
| 2 | 100.00 | 15.00 | ಜುಲೈ 2017 | 85.00 | 9 (ಜುಲೈ 2017 ರಿಂದ ಮಾರ್ಚ್ 2018) | 1.70 | 1.08 |
| 3 | 85.00 | 12.00 | ಏಪ್ರಿಲ್ 2018 | 73.00 | 20 (ಏಪ್ರಿಲ್ 2018 ರಿಂದ ನವೆಂಬರ್ 2019) | 1.70 | 2.07 |
| 4 | 73.00 | 6.20 | ಡಿಸೆಂಬರ್ 2019 | 66.80 | 16 (ಡಿಸೆಂಬರ್ 2019 ರಿಂದ ಮಾರ್ಚ್ 2021) | 1.70 | 1.51 |
| | **ಒಟ್ಟು** | **33.20** | | | | | **5.09** |

ಆಧಾರ: ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿ ಒದಗಿಸಿದ ಮಾಹಿತಿ

ಸೂಚನೆ: ಸಿಂಡಿಕೇಟ್ ಬ್ಯಾಂಕ್ ಮತ್ತು ಬ್ಯಾಂಕ್ ಆಫ್ ಇಂಡಿಯಾದ ಬಡ್ಡಿ ದರದ ವಾರ್ಷಿಕ ಮರುಹೊಂದಿಸುವಿಕೆಯ ವಿವರಗಳ ಅನುಪಸ್ಥಿತಿಯಲ್ಲಿ, ಸಾಲವನ್ನು ತಿರುಗಿಸುವ ದಿನಾಂಕದಂದು ಅನ್ವಯಿಸುವ ದರಗಳಲ್ಲಿ ಬಡ್ಡಿ ಹೊಣೆಗಾರಿಕೆಯನ್ನು ಲೆಕ್ಕಹಾಕಲಾಗುತ್ತದೆ. (9.95–8.25= *ಶೇಕಡಾ* 1.70)

**ಅನುಬಂಧ 2.6**

**(ಉಲ್ಲೇಖ: ಕಂಡಿಕೆ 2.9.4/ಪುಟ 19)**

**ಹೆಚ್ಚಿನ ಬಡ್ಡಿ ದರದಲ್ಲಿ ಪಡೆದ ಸಾಲದ ವಿವರಗಳು**

| ಕ್ರ. ಸಂ. | ದಿನಾಂಕ | ಅಗತ್ಯವಿರುವ ಮೊತ್ತ (₹ ಕೋಟಿಯಲ್ಲಿ) | ಸಾಲದ ಕಂತುಗಳನ್ನು ಪಡೆದ ವಿವರ | | ನಿಧಿಯ ಅವಶ್ಯಕತೆಯ ದಿನಾಂಕದಂದು ಲಭ್ಯವಿರುವ ಬಡ್ಡಿ ದರ | | ಬಡ್ಡಿಯ ತಪ್ಪಿಸಬಹುದಾದ ಹೊಣೆಗಾರಿಕೆ | | |
|---|---|---|---|---|---|---|---|---|---|
| | | | ಇಂದ | ಬಡ್ಡಿ ದರ | ಎಸ್.ಬಿ.ಐ | ಐಸಿಐಸಿಐ | ಹೆಚ್ಚುವರಿ ಬಡ್ಡಿ ದರ | ಮಾರ್ಚ್ 2021 ರವರೆಗಿನ ತಿಂಗಳುಗಳ ಸಂಖ್ಯೆ | ₹ ಕೋಟಿಯಲ್ಲಿ |
| 1 | 27.04.2018 | 12.00 | ಎಸ್.ಬಿ.ಐ | 8.40 | 8.40 | **8.24** | 0.16 | 35 | 0.06 |
| 2 | 27.09.2018 | 26.50 | ಎಸ್.ಬಿ.ಐ | 8.40 | 8.40 | **8.24** | 0.16 | 30 | 0.10 |
| 3 | 29.09.2018 | 40.00 | ಎಸ್.ಬಿ.ಐ | 8.40 | 8.40 | **8.24** | 0.16 | 30 | 0.16 |
| 4 | 17.01.2019 | 6.50 | ಎಸ್.ಬಿ.ಐ | 8.40 | 8.40 | **8.24** | 0.16 | 26 | 0.02 |
| | **ಒಟ್ಟು** | **85.00** | | | | | | | **0.34** |

ಆಧಾರ: ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿ ಒದಗಿಸಿದ ಮಾಹಿತಿ

**ಅನುಬಂಧ 2.7**

**(ಉಲ್ಲೇಖ: ಕಂಡಿಕೆ 2.9.5/ಪುಟ 20)**

**ಎಸ್‌ಬಿಐ ಸಾಲದ ಕಂತುಗಳನ್ನು ಮರುಪಾವತಿ ಮಾಡುವಲ್ಲಿ ವಿಳಂಬವಾದುದರಿಂದ ತಪ್ಪಿಸಬಹುದಾದ ಬಡ್ಡಿ (ಮಾರ್ಚ್ 2021 ರಂತೆ)**

| ಕಂತು | ಮೊತ್ತ (₹ ) | ರಂದು ಬಾಕಿ | ಪಾವತಿಸಲಾಗಿದೆ | ದಿನಗಳಲ್ಲಿ ವಿಳಂಬ | ಬಡ್ಡಿ ದರ | ತಪ್ಪಿಸಬಹುದಾದ ಬಡ್ಡಿ ಪಾವತಿ (₹ ) |
|---|---|---|---|---|---|---|
| 1 | 8,18,00,000 | 07.04.2019 | 18-06-2019 | 72 | 8.80 | 14,19,958 |
| 2 | 8,34,00,000 | 07.07.2019 | 27-09-2019 | 82 | 8.80 | 16,48,807 |
| 3 | 8,34,00,000 | 07.10.2019 | 24-12-2019 | 78 | 8.80 | 15,68,377 |
| 4 | 8,34,00,000 | 07.01.2020 | 18-03-2020 | 71 | 8.80 | 14,27,625 |
| 5 | 8,34,00,000 | 07.04.2020 | 26-06-2020 | 80 | 8.00 | 14,62,356 |
| 6 | 8,34,00,000 | 07.07.2020 | 28-09-2020 | 83 | 8.00 | 15,17,195 |
| 7 | 8,34,00,000 | 07.10.2020 | 30-12-2020 | 84 | 8.00 | 15,35,474 |
| 8 | 8,34,00,000 | 07.01.2021 | 23-03-2021 | 75 | 8.00 | 13,70,959 |
| | **ಒಟ್ಟು** | | | | | **1,19,50,751** |

ಆಧಾರ: ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿ ಒದಗಿಸಿದ ಮಾಹಿತಿ

**ಅನುಬಂಧ 2.8**

**(ಉಲ್ಲೇಖ: ಕಂಡಿಕೆ 2.9.5/ಪುಟ 20)**

**ಐಸಿಐಸಿಐ ಸಾಲದ ಕಂತುಗಳನ್ನು ಮರುಪಾವತಿ ಮಾಡುವಲ್ಲಿ ವಿಳಂಬವಾದುದರಿಂದ ತಪ್ಪಿಸಬಹುದಾದ ಬಡ್ಡಿ (ಮಾರ್ಚ್ 2021 ರಂತೆ)**

| ಕಂತು | ಮೊತ್ತ (₹ ) | ರಂದು ಬಾಕಿ | ಪಾವತಿಸಲಾಗಿದೆ | ದಿನಗಳಲ್ಲಿ ವಿಳಂಬ | ಬಡ್ಡಿ ದರ | ತಪ್ಪಿಸಬಹುದಾದ ಬಡ್ಡಿ ಪಾವತಿ (₹ ) |
|---|---|---|---|---|---|---|
| 1 | 6,42,00,000 | 02.02.2020 | 23.03.2020 | 50 | 8.24 | 7,24,668 |
| 2 | 6,40,41,666 | 01.04.2020 | 02.07.2020 | 92 | 8.24 | 13,30,102 |
| 3 | 7,08,59,849 | 01.07.2020 | 29.09.2020 | 90 | 8.24 | 14,39,717 |
| 4 | 7,08,59,848 | 01.10.2020 | 01.01.2021 | 92 | 8.24 | 14,71,711 |
| 5 | 7,08,59,848 | 01.01.2021 | 02.02.2021 | 32 | 8.24 | 5,11,899 |
| | 7,08,59,848 | 02.02.2021 | 23.03.2021 | 49 | 7.34 | 6,98,232 |
| | **ಒಟ್ಟು** | | | | | **61,76,329** |

ಆಧಾರ: ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿ ಒದಗಿಸಿದ ಮಾಹಿತಿ

## ಅನುಬಂಧ 2.9

(ಉಲ್ಲೇಖಕಂಡಿಕೆ2.9.6/ಪುಟ 22)

### ಸಾಲ ಮರುಪಾವತಿಗಾಗಿ ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿಯಿಂದ ಹೆಚ್ಚುವರಿಯಾಗಿ ಬೇಡಿಕೆಯಿರುವ ಮೊತ್ತದ ತಿಂಗಳವಾರು ವಿವರಗಳು (ಎಸ್.ಬಿ.ಐ)

(₹ ಲಕ್ಷದಲ್ಲಿ)

| ತಿಂಗಳು | ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿ ಮೂಲಕ ಬ್ಯಾಂಕ್‌ಗೆ ಪಾವತಿಸಿದ ಮೊತ್ತ | | | | ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿನಿಂದ ಬೇಡಿಕೆಯಿರುವ ಮೊತ್ತ/ ಯುಡಿಡಿ ಬಿಡುಗಡೆ ಮಾಡಿದ ಮೊತ್ತ | | | | ಹೆಚ್ಚುವರಿ ಬೇಡಿಕೆ/ ಬಿಡುಗಡೆ |
|---|---|---|---|---|---|---|---|---|---|
| | ಬಾಕಿ ಸಾಲ | ಅನ್ವಯಿಸುವ ಬಡ್ಡಿ ದರ | ಪಾವತಿಸಿದ ಮೊತ್ತ | ಪಾವತಿಯ ದಿನಾಂಕ | ಪರಿಗಣಿಸಲಾದ ಬಾಕಿ ಇರುವ ಸಾಲ | ಬಡ್ಡಿ ದರ | ಮೊತ್ತದ ಬೇಡಿಕೆ | ಯುಡಿಡಿ ಯಿಂದ ಸ್ವೀಕೃತಿಯ ದಿನಾಂಕ | |
| **2018–19 ನೇ ಸಾಲಿಗೆ** | | | | | | | | | |
| ಜನವರಿ–19 | 19,350.00 | 8.40 | 138.05 | 25.01.2019 | 19,350.00 | 8.40 | 138.05 | 11.02.2019 | |
| | 650.00 | 8.40 | 2.24 | | 6,500.00 | 8.40 | 22.44 | 18.10.2019 | |
| **ಉಪ–ಒಟ್ಟು** | | | **140.29** | | | | **160.49** | | **20.20** |
| ಫೆಬ್ರವರಿ–19 | 19,350.00 | 8.40 | 124.69 | 25.02.2019 | 19,350.00 | 8.40 | 124.69 | 18.02.2019 | |
| | 650.00 | 8.40 | 4.19 | | 6,500.00 | 8.40 | 41.88 | 18.10.2019 | |
| **ಉಪ–ಒಟ್ಟು** | | | **128.88** | | | | **166.57** | | **37.69** |
| ಮಾರ್ಚ್–19 | 19,350.00 | 8.40 | 138.05 | 25.03.2019 | 19,350.00 | 8.40 | 138.05 | 08.03.2019 | |
| | 650.00 | 8.40 | 4.63 | | 6,500.00 | 8.40 | 46.37 | 18.10.2019 | |
| **ಉಪ–ಒಟ್ಟು** | | | **142.68** | | | | **184.42** | | **41.74** |
| **ಒಟ್ಟು (2018–19)** | | | **411.85** | | | | **511.48** | | **99.63** |

**ಅನುಬಂಧ 2.9 (ಮುಕ್ತಾಯ)**

| ತಿಂಗಳು | ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿ ಮೂಲಕ ಬ್ಯಾಂಕ್‌ಗೆ ಪಾವತಿಸಿದ ಮೊತ್ತ | | | | ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿನಿಂದ ಬೇಡಿಕೆಯಿರುವ ಮೊತ್ತ/ ಯುಡಿಡಿ ಬಿಡುಗಡೆ ಮಾಡಿದ ಮೊತ್ತ | | | | ಹೆಚ್ಚುವರಿ ಬೇಡಿಕೆ/ ಬಿಡುಗಡೆ |
|---|---|---|---|---|---|---|---|---|---|
| | ಬಾಕಿ ಸಾಲ | ಅನ್ವಯಿಸುವ ಬಡ್ಡಿ ದರ | ಪಾವತಿಸಿದ ಮೊತ್ತ | ಪಾವತಿಯ ದಿನಾಂಕ | ಪರಿಗಣಿಸಲಾದ ಬಾಕಿ ಇರುವ ಸಾಲ | ಬಡ್ಡಿ ದರ | ಮೊತ್ತದ ಬೇಡಿಕೆ | ಯುಡಿಡಿ ಯಿಂದ ಸ್ವೀಕೃತಿಯ ದಿನಾಂಕ | |
| **2019–20 ನೇ ಸಾಲಿಗೆ** | | | | | | | | | |
| ಜೂನ್–19 | | | 152.16 | 18.06.2019 | 20,000.00 | 8.40 | 138.08 | 01.07.2019 | |
| ಏಪ್ರಿಲ್–ಜೂನ್ 19ರ ಬಾಕಿ | | | | | 20,000.00 | 0.40 | 19.92 | 01.08.2019 | |
| **ಒಟ್ಟು (2019–20)** | | | **152.16** | | | | **158.00** | | **5.84** |
| **2020–21 ವರ್ಷಕ್ಕೆ** | | | | | | | | | |
| ಜೂನ್–20 | 17,498.00 | 8.00 | 115.06 | 25.06.2020 | 17,498.00 | 8.80 | 126.56 | 24.06.2020 | 11.51 |
| ಜುಲೈ–20 | | | 103.08 | 27.07.2020 | 15,835.71 | 8.00 | 107.60 | 19.08.2020 | 4.52 |
| **ಒಟ್ಟು (2020–21)** | | | **218.14** | | | | **234.16** | | **16.02** |

ಆಧಾರ: ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿ ಒದಗಿಸಿದ ಮಾಹಿತಿ

**ಅನುಬಂಧ 2.10**

**(ಉಲ್ಲೇಖ: ಕಂಡಿಕೆ 2.9.6/ಪುಟ 22)**

**ಸಾಲ ಮರುಪಾವತಿಗಾಗಿ ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿಯಿಂದ ಹೆಚ್ಚುವರಿಯಾಗಿ ಬೇಡಿಕೆಯಿರುವ ಮೊತ್ತದ ಮಾಸಿಕ ವಿವರಗಳು (ಐಸಿಐಸಿಐ ಬ್ಯಾಂಕ್)**

(₹ ಲಕ್ಷದಲ್ಲಿ )

| ತಿಂಗಳು | ಕೆಡಬ್ಲ್ಯೂಎಸ್.ಪಿ.ಎಫ್.ಟಿ ಮೂಲಕ ಬ್ಯಾಂಕ್‌ಗೆ ಪಾವತಿಸಿದ ಮೊತ್ತ | | | | ಕೆಡಬ್ಲ್ಯೂಎಸ್.ಪಿ.ಎಫ್.ಟಿಯಿಂದ ಬೇಡಿಕೆಯಿರುವ ಮೊತ್ತ/ ಯುಡಿಡಿ ಬಿಡುಗಡೆ ಮಾಡಿದ ಮೊತ್ತ | | | | ಹೆಚ್ಚುವರಿ ಬೇಡಿಕೆ/ ಬಿಡುಗಡೆ |
|---|---|---|---|---|---|---|---|---|---|
| | ಬಾಕಿ ಸಾಲ | ಅನ್ವಯಿಸುವಬಡ್ಡಿ ದರ | ಪಾವತಿಸಿದ ಮೊತ್ತ | ಪಾವತಿಯ ದಿನಾಂಕ | ಪರಿಗಣಿಸಲಾದ ಬಾಕಿ ಇರುವ ಸಾಲ | ಬಡ್ಡಿ ದರ | ಮೊತ್ತದ ಬೇಡಿಕೆ | ಯುಡಿಡಿ ಯಿಂದ ಸ್ವೀಕೃತಿಯ ದಿನಾಂಕ | |
| **2018–19 ನೇ ಸಾಲಿಗೆ** | | | | | | | | | |
| ಜನವರಿ–19 | 6,400.00 | 8.34 | 45.33 | 25.01.2019 | 16,400.00 | 8.34 | 116.17 | 11.02.2019 | |
| | 1,350.00 | 8.34 | 4.01 | | 1,350.00 | 8.84 | 4.25 | 16.05.2019 | |
| **ಉಪ–ಒಟ್ಟು** | | | **49.34** | | | | **120.42** | | **71.08** |
| ಫೆಬ್ರವರಿ–19 | 6,400.00 | 8.34 | 40.95 | 25.02.2019 | 16,400.00 | 8.34 | 104.92 | 18.02.2019 | |
| | 1,350.00 | 8.34 | 8.64 | | 1,350.00 | 8.84 | 9.15 | 16.05.2019 | |
| **ಉಪ–ಒಟ್ಟು** | | | **49.59** | | | | **114.08** | | **64.48** |
| ಮಾರ್ಚ್–19 | 6,400.00 | 8.84 | 48.05 | 25.03.2019 | 16,400.00 | 8.34 | 116.17 | 08.03.2019 | |
| | 1,350.00 | 8.84 | 10.14 | | 1,350.00 | 8.84 | 10.14 | 16.05.2019 | |
| | | | 0.27 | | | | | | |
| **ಉಪ–ಒಟ್ಟು** | | | **58.46** | | | | **126.31** | | **67.85** |
| **ಒಟ್ಟು (2018–19)** | | | **157.39** | | | | **360.80** | | **203.41** |

## ಅನುಬಂಧ 2.10(ಮುಕ್ತಾಯ)

| ತಿಂಗಳು | ಕೆಡಬ್ಲ್ಯೂಎಸ್.ಪಿ.ಎಫ್.ಟಿ ಮೂಲಕ ಬ್ಯಾಂಕ್‌ಗೆ ಪಾವತಿಸಿದ ಮೊತ್ತ | | | | ಕೆಡಬ್ಲ್ಯೂಎಸ್.ಪಿ.ಎಫ್.ಟಿಯಿಂದ ಬೇಡಿಕೆಯಿರುವ ಮೊತ್ತ/ ಯುಡಿಡಿ ಬಿಡುಗಡೆ ಮಾಡಿದ ಮೊತ್ತ | | | | ಹೆಚ್ಚುವರಿ ಬೇಡಿಕೆ/ ಬಿಡುಗಡೆ |
|---|---|---|---|---|---|---|---|---|---|
| | ಬಾಕಿ ಸಾಲ | ಬಡ್ಡಿ ದರ ಅನ್ವಯಿಸುತ್ತದೆ | ಪಾವತಿಸಿದ ಮೊತ್ತ | ಪಾವತಿಯ ದಿನಾಂಕ | ಬಾಕಿ ಇರುವ ಸಾಲವನ್ನು ಪರಿಗಣಿಸಲಾಗಿದೆ | ಬಡ್ಡಿ ದರ | ಮೊತ್ತದ ಬೇಡಿಕೆ | ಯುಡಿಡಿ ಯಿಂದ ಸ್ವೀಕೃತಿಯ ದಿನಾಂಕ | |
| **2019–20 ನೇ ಸಾಲಿಗೆ** | | | | | | | | | |
| ಜನವರಿ–20 | 12,870.00 | 8.84 | 96.63 | 22.01.2020 | 12,870.00 | 8.84 | 96.63 | 25.02.2020 | |
| | | | | | 500.00 | 8.84 | 0.24 | 13.05.2020 | |
| ಉಪ–ಒಟ್ಟು | | | **96.63** | | | | **96.87** | | **0.24** |
| ಫೆಬ್ರವರಿ–20 | | | 83.85 | 20.02.2020 | 12,870.00 | 8.84 | 90.39 | 25.02.2020 | |
| | | | 3.38 | 24.02.2020 | 500.00 | 8.84 | 3.51 | 13.05.2020 | |
| | 500.00 | 8.24 | 2.71 | 26.02.2020 | 2,000.00 | 8.84 | 13.08 | 13.05.2020 | |
| **ಉಪ–ಒಟ್ಟು** | | | **89.94** | | | | **106.98** | | **17.04** |
| ಮಾರ್ಚ್–20 | 12,870.00 | 8.24 | 90.07 | 18.03.2020 | 12,870.00 | 8.84 | 96.63 | 11.03.2020 | |
| | 500.00 | 8.24 | 3.50 | | 500.00 | 8.84 | 3.75 | 13.05.2020 | |
| | 2,000.00 | 8.24 | 14.00 | | 2,000.00 | 8.84 | 15.02 | 13.05.2020 | |
| | ಅಸಲು | | 642.00 | 23.03.2020 | | | 640.42 | 13.05.2020 | |
| **ಉಪ–ಒಟ್ಟು** | | | **749.57** | | | | **755.82** | | **6.25** |
| **ಒಟ್ಟು (2019–20)** | | | **936.14** | | | | **959.67** | | **23.53** |

ಆಧಾರ: ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿ ಒದಗಿಸಿದ ಮಾಹಿತಿ.

**ಅನುಬಂಧ 2.11**

**(ಉಲ್ಲೇಖ: ಕಂಡಿಕೆ 2.9.6/ಪುಟ 22)**

**ಯುಡಿಡಿಯಿಂದ ಪಡೆದ ಹೆಚ್ಚುವರಿ ಮೊತ್ತವನ್ನು ಜಮಾ ಮಾಡದ ಕಾರಣ ತಪ್ಪಿಸಬಹುದಾದ ಬಡ್ಡಿ ಹೊಣೆಗಾರಿಕೆ**

(₹ ಲಕ್ಷದಲ್ಲಿ )

| ಬ್ಯಾಂಕ್ | ಹೆಚ್ಚುವರಿ ಮೊತ್ತ | ಯುಡಿಡಿ ಯಿಂದ ಸ್ವೀಕೃತಿಯಾದ ದಿನಾಂಕ | ಸ್ವೀಕೃತಿಯ ತಿಂಗಳಿನಿಂದ ಮಾರ್ಚ್ 2021 ರವರೆಗಿನ ತಿಂಗಳುಗಳ ಸಂಖ್ಯೆ | ತಪ್ಪಿಸಬಹುದಾದ ಬಡ್ಡಿ ಹೊಣೆಗಾರಿಕೆಯ ಲೆಕ್ಕಾಚಾರ | |
|---|---|---|---|---|---|
| | | | | ತಿಂಗಳುಗಳು ಮತ್ತು ಅನ್ವಯವಾಗುವ ಬಡ್ಡಿ ದರ | ಮೊತ್ತ |
| ಎಸ್.ಬಿ.ಐ | 99.63 | 18.10.2019 | 17 | 8.80 % ನಲ್ಲಿ 5 ತಿಂಗಳುಗಳು ಮತ್ತು 8.00 % ನಲ್ಲಿ 12 ತಿಂಗಳುಗಳು | 11.63 |
| ಎಸ್.ಬಿ.ಐ | 5.84 | 01.08.2019 | 20 | 8.80 % ನಲ್ಲಿ 8 ತಿಂಗಳುಗಳು ಮತ್ತು 8.00 % ನಲ್ಲಿ 12 ತಿಂಗಳುಗಳು | 0.81 |
| ಎಸ್.ಬಿ.ಐ | 11.51 | 24.06.2020 | 9 | 8.00% ನಲ್ಲಿ 9 ತಿಂಗಳುಗಳು | 0.69 |
| | 4.52 | 19.08.2020 | 7 | 8.00 % ನಲ್ಲಿ 7 ತಿಂಗಳುಗಳು | 0.21 |
| ಐಸಿಐಸಿಐ | 203.41 | 11.02.2019 ರಿಂದ 08.03.2019 | 24 | 10 ತಿಂಗಳುಗಳು 8.84 %, 12 ತಿಂಗಳುಗಳು 8.24 % ಮತ್ತು 2 ತಿಂಗಳುಗಳು 7.34% | 34.23 |
| ಐಸಿಐಸಿಐ | 23.54 | 13.05.2020 | 10 | 8.24% ನಲ್ಲಿ 8 ತಿಂಗಳುಗಳು ಮತ್ತು 7.34% ನಲ್ಲಿ 2 ತಿಂಗಳುಗಳು | 1.58 |
| | | **ಒಟ್ಟು** | | | **49.15** |

ಆಧಾರ: ಕೆ.ಡಬ್ಲ್ಯೂ.ಎಸ್.ಪಿ.ಎಫ್.ಟಿ ಮತ್ತು ಯುಡಿಡಿ ಒದಗಿಸಿದ ಮಾಹಿತಿ

## ಅನುಬಂಧ 2.12

(ಉಲ್ಲೇಖ: ಕಂಡಿಕೆ 2.10.1/ಪುಟ 23)

### 30.11.2017 ರಂದು ವಿಜಯಪುರದ ಮ.ಪಾಯವರು ಪಾವತಿಸಿದ ಭೂ ಪರಿಹಾರದ ಮೇಲಿನ ತಪ್ಪಿಸಬಹುದಾದ ಬಡ್ಡಿಯ ವಿವರಗಳು

(₹ ನಲ್ಲಿ ಮೊತ್ತ)

| ಕ್ರ. ಸಂ. | ಸಿಟಿಎಸ್ ಸಂ. | ಭೂಮಾಲೀಕರ ಹೆಸರು (ಶ್ರೀ/ಶ್ರೀ ಮತಿ) | ಭೂಮಿಯ ಮೌಲ್ಯ | ಭೂಮಿಯ ಮೌಲ್ಯದ ಮೇಲೆ 24% ಬಡ್ಡಿ | ಭೂಮಿಯ ಮೌಲ್ಯದ ಮೇಲಿನ 24% ಬಡ್ಡಿಯ 70% | 70% ಮೊತ್ತದ ನಿಜವಾದ ವಿಳಂಬವಾದ ದಿನಗಳವರೆಗೆ 15% ರಂತೆ ವಾರ್ಷಿಕ ಬಡ್ಡಿ |
|---|---|---|---|---|---|---|
| 1 | 413/ಬಿ | ಪ್ರೇಮಾ ಶೆಟ್ಟಿ ಮತ್ತು 7 ಇತರರು | 26,33,945 | 6,32,147 | 4,42,503 | 6,38,237 |
| 2 | 410/ಬಿ | ಜಾಬಿರ್ ನಿಹಾಲ್ ವಾಟಿ ಅಲ್ಲಾ | 25,54,200 | 6,13,008 | 4,29,106 | 7,63,190 |
| 3 | 410/A | ವತಿ ಮೊಹಮ್ಮದ್ ಸಯೀದ್ ವತಿ ಅಲ್ತಾಫ್ ಮೊಹಮ್ಮದ್ | 15,30,788 | 3,67,389 | 2,57,172 | 9,08,130 |
| 4 | 99 | ಸದಾಶಿವ ಶಿವರಾಂ ಕೆಂಭಾವಿ ಮತ್ತು ಸುರೇಂದ್ರ | 17,56,645 | 4,21,595 | 2,95,116 | 4,84,134 |
| 5 | 100 ಎ | ಸಂಭಾಜಿ ಎಸ್ ಲಂಗೋಟಿ ಮತ್ತು ಇತರರು | 11,15,728 | 2,67,775 | 1,87,442 | 2,67,569 |
| 6 | 120 ಎ | ಸಂಜಯ್ ಎಸ್ ಜಾಧವ್ ಮತ್ತು ಪರಶುರಾಮ್ ಶಿವಾಜಿ | 10,01,728 | 2,40,415 | 1,68,290 | 2,80,376 |
| 7 | 120 ಬಿ | ಇಂದುಮತಿ ಅರ್ಜುನ್ ಮತ್ತು ಇತರರು | 9,63,918 | 2,31,340 | 1,61,938 | 3,25,704 |
| 8 | 121 ಎ | ಶಂಜಯ್ ಶಿವಾಜಿ ಜಾಧವ್ ಮತ್ತು ಪರಶುರಾಮ್ ಶಿವಾಜಿ | 5,31,525 | 1,27,566 | 89,296 | 1,35,918 |
| 9 | 121 ಬಿ | ಇಂದುಮತಿ ಅರ್ಜುನ್ ಮತ್ತು ಇತರರು | 5,45,823 | 1,30,997 | 91,698 | 1,59,555 |
| 10 | 216 | ಮೋಹನ ವೆಂಕಟೇಶ ಕುಲಕರ್ಣಿ | 37,810 | 9,074 | 6,352 | 19,551 |
| 11 | 217 | ಮೋಹನ ವೆಂಕಟೇಶ ಕುಲಕರ್ಣಿ | 11,11,120 | 2,66,669 | 1,86,668 | 3,06,552 |
| 12 | 231/C4 | ಅನಿತಾ ಮಲ್ಲಪ್ಪ ನಿಡೋಣಿ | 34,51,445 | 8,28,347 | 5,79,843 | 8,36,442 |
| 13 | 241/C1 | ರಾಜಾಕ್ಷಹೇಬ , ಬಾದಶಹ ರಾಜೇಸಾಬ್ ಸಾಂಗ್ಲಿಕರ್ | 9,87,430 | 2,36,983 | 1,65,888 | 2,82,744 |
| 14 | 241/C1/A | ರಾಜಾಕ್ಷಹೇಬ್ , ರಾಜೇಸಾಬ್ ಮತ್ತು ಇತರರು | 16,74,328 | 4,01,839 | 2,81,287 | 3,87,084 |
| 15 | 1454 | ಅಂಬಲಪಾಡಿ ಮಹಾಬಲ್ ರಾಮಣ್ಣ ಶೆಟ್ಟಿ | 21,93,598 | 5,26,463 | 3,68,524 | 6,21,201 |
